ಸಂವಾದ

ಡಿಸೆಂಬರ್ ೨೦೦೩ ರೂ. ೨೦/- ಮಾಸ ಪತ್ರಿಕೆ



ಡಾ|| ಕೆ.ಆರ್.ನಾರಾಯಣನ್ ಭಾಷಣ

ಆರಾಮ ಕುರ್ಚಿ ಏರಿದ ಜಾತಿಪ್ರಶ್ನೆ?

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೨
ಡಿಸೆಂಬರ್ ೨೦೦೩

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮ
ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ
ಕೆ.ಪಿ. ದೊಡ್ಡಿ ಶಿವರಾಂ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
ದೂರವಾಣಿ: ೩೨೮೭೯೩೨ / ೩೨೮೧೬೬೭

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
PHONE : 3287932, 3281667

EDITOR :
INDUDHARA HONNAPURA

ಒಳಪುಟಗಳಲ್ಲಿ...



- ಪತ್ರಗಳು ೩
- ಮೇರಾ ಭಾರತ್ ಮಹಾನ್ ೪
- ಅಂತರಂಗ ೫
- ಸಮಾನತೆಯ ಸಾವಯವ ಸಂಬಂಧ ೬
  - ಹುಲಿಕುಂಟೆ ಮೂರ್ತಿ
- ಬುದ್ಧಿಮತ್ತೆಯ ಏಕಸ್ವಾಮ್ಯ ಭಾರತದ ಅಧೋಗತಿಗೆ ಕಾರಣ ೧೦
  - ಡಾ|| ಕೆ.ಆರ್. ನಾರಾಯಣನ್
- ಸಂವಿಧಾನ ಮತ್ತು ಮೀಸಲಾತಿ ೧೨
  - ಪಿ.ಬಿ. ಸಾವಂತ್
- ಏಕರೂಪ ನಾಗರಿಕ ಸಂಹಿತೆ ೧೪
  - ನಾ. ದಿವಾಕರ
- ಅರಾಮ ಕುರ್ಚಿ ಏರಿದ ಜಾತಿ ಪ್ರಶ್ನೆ ೧೮
  - ಸಿರಿಯಾವನ್ ಆನಂದ್
- ಅಂಬೇಡ್ಕರ್ ಚಿಂತನೆ ನೆಲೆಯಲ್ಲಿ ಸಾಮಾಜಿಕ ನ್ಯಾಯ, ಆರ್ಥಿಕ ಹಕ್ಕು ೨೨
  - ಬಿ.ವಿ. ವೀರಭದ್ರಪ್ಪ



- ಬದಲಾಗುತ್ತಿರುವ ಭಾರತೀಯ ಸಮಾಜದಲ್ಲಿ ಮಹಿಳೆ ೨೬
  - ರಂಜಾನ್ ದರ್ಗಾ
- ಬಸವ ಚಳವಳಿಯೊಳಗಿನ ದಲಿತ ಚಳವಳಿ ೩೦
  - ಡಾ|| ಬಸವರಾಜ ಸಬರದ
- ಧರ್ಮಗಳ ಮೂಲ ಹುಡುಕುತ್ತಾ... ೩೪
  - ಸ್ವಾಮಿ ವಿವೇಕಾನಂದ
- ದಲಿತ್ ಡೈರಿ: ಕವಲು ದಾರಿಯಲ್ಲಿ ಬಿಎಸ್‌ಪಿ ೩೬
  - ಚಂದ್ರಭಾನ್ ಪ್ರಸಾದ್
- ಮನುಷ್ಯನ ಹುಟ್ಟು ಪುನರ್ಜನ್ಮ ಇತ್ಯಾದಿ ೪೨

ಕವನಗಳು :
- ತೀರದ ಆಟ ೭
- ನೋಟುಗಳು ಮಾತಾಡುತ್ತವೆ ೧೭
- ಯಾರು ನೀವು? ೪೧

ಮುಖಪುಟ ಕಲೆ: ಜಾನ್ ದೇವರಾಜ್, ವಿನ್ಯಾಸ: ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಮೂಕನಾಯಕ 'ಸಂವಾದ'

ಮಾನ್ಯ ಸ್ವಾಭಿಮಾನಿ ಇಂದೂಧರ ರವರೆ,

'ಸಂವಾದ' ಪತ್ರಿಕೆಯ ಎಲ್ಲಾ ಪ್ರತಿಗಳನ್ನೂ ಗಮನಿಸಿದೆ. ಅದರಲ್ಲಿ ನನಗೆ ಕಂಡದ್ದು ಡಾ|| ಬಿ. ಆರ್. ಅಂಬೇಡ್ಕರ್‌ರವರ 'ಮೂಕ ನಾಯಕ್' ಎಂಬ ಸ್ವಾಭಿಮಾನದ ಪತ್ರಿಕೆಯ ಗಟ್ಟಿತನದ ಬರವಣಿಗೆ, ಶೋಷಿತ ಜನಾಂಗಕ್ಕೆ ಬೆಳಕು ಚೆಲ್ಲುವ ಚಿಂತನೆ ಮತ್ತು ಸಾಮಾಜಿಕ ಕಳಕಳಿಯನ್ನು ಹೊತ್ತ ಪ್ರಥಮ ಪತ್ರಿಕೆ ಎಂದು ನಾನು ಭಾವಿಸಿದ್ದೇನೆ.

ಈ ನನ್ನ ಭಾವನೆಯ 'ಸಂವಾದ' ಪತ್ರಿಕೆ ಇಂದು ಒಂದು ಮಹತ್ವದ ಕೆಲಸ ಮಾಡಬೇಕಾಗಿದೆ ಅದುವೇ ದಲಿತ ಸಂಘಟನೆಯ ಒಗ್ಗೂಡಿಸುವಿಕೆ. ಡಾ|| ಅಂಬೇಡ್ಕರ್ ಮೂಲಕ ದಲಿತ ಸಮುದಾಯಕ್ಕೆ ಸ್ವಾಭಿಮಾನದ ಕಿಚ್ಚು, ತಮ್ಮ ಹಕ್ಕುಗಳ ಬಗೆಗಿನ ಅರಿವು ಲಭಿಸಿರುವುದು ಸಾಮಾಜಿಕ ಸ್ಫೂರ್ತಿ ಮತ್ತು ನವಚೇತನಕ್ಕೆ ಕಾರಣವಾಗಿದೆ.

ಇತ್ತೀಚಿಗೆ, ಕೆಟ್ಟ ರಾಜಕೀಯ ಸಹವಾಸದಿಂದ ಈ ಸಂಘಟನೆಯ ಕೆಲವು ಮುಖಂಡರು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮರೆತು ದಲಿತರಲ್ಲೇ ತತ್ವಜ್ಞಾನಿ ಭಯೋತ್ಪಾದಕರಾಗುತ್ತಿರುವುದು ಸಂಘಟನೆಯ ದುರಂತ. ಏಕೆಂದರೆ, ತಮ್ಮ ವೈಯಕ್ತಿಕ ದ್ವೇಷ ಹಾಗೂ ಏಕಪಕ್ಷೀಯ ನಿರ್ಧಾರದಿಂದ ದಲಿತ ಸಂಘಟನೆಯನ್ನು ಒಗ್ಗೂಡಿಸಲಾರದಷ್ಟು ಒಡೆದು ಬಿಟ್ಟಿದ್ದಾರೆ. ದಲಿತ ಸಂಘಟನೆ ಎಂಬುದು ತಮ್ಮ ಸ್ವಂತ ಆಸ್ತಿ ಎಂಬ ಭಾವನೆ ಹಲವಾರು ಮುಖಂಡರಲ್ಲಿ ಮನೆಮಾಡಿ ಕೊಂಡಿದೆ.

ಇಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಒಡೆದು ಹೋಳಾಗಿರುವ ದಲಿತ ಸಂಘಟನೆಗಳ ಮುಖಂಡರುಗಳಿಗೆ ತಿಳುವಳಿಕೆಯನ್ನು ನೀಡುವ ಮೂಲಕ ನಿಜವಾದ ಡಾ|| ಅಂಬೇಡ್ಕರ್ ಅವರ ಸ್ವಾಭಿಮಾನ, ತತ್ವ ಹಾಗೂ ಮಾನವೀಯ ಮೌಲ್ಯಗಳಂಥ ಸಂದೇಶವನ್ನು ಮುಟ್ಟಿಸಿ, ಎಲ್ಲರನ್ನು ಒಟ್ಟುಗೂಡಿಸಿ ಒಂದು ಸುಭದ್ರ ಸಂಘಟನೆಯನ್ನು ನಿರ್ಮಾಣ ಮಾಡಿ, ಈ ದೇಶವನ್ನಾಳುವ ಡಾ|| ಬಾಬಾಸಾಹೇಬ ಅಂಬೇಡ್ಕರ್‌ರವರ ಕನಸು ನನಸು ಮಾಡುವುದರಲ್ಲಿ ಈ ಪತ್ರಿಕೆ ಸಾಗುವುದು ಎಂಬ ಪ್ರಾಮಾಣಿಕ ನಂಬಿಕೆ ನನ್ನದಾಗಿದೆ.

ಡಾ|| ರಾಜೇಂದ್ರ ಭ್ರಿ. ದೊಡ್ಡಮನಿ, ಗುಲ್ಬರ್ಗಾ ಜಿಲ್ಲೆ

'ಸಂವಾದ' ದೀಪದಿಂದ ದೀಪ ಬೆಳಗಿಸಲಿ

ಆತ್ಮೀಯ ಇಂದೂಧರ ಹೊನ್ನಾಪುರರವರಿಗೆ ವಂದನೆಗಳು,

ಗಂಭೀರ ವಿಚಾರಗಳನ್ನೊಳಗೊಂಡ ಬರಹಗಳಿಂದ ನಾಡಿನ ಜನರ ಗಮನ ಸೆಳೆದ 'ಸಂವಾದ' ಒಂದು ವರ್ಷ ಮುಗಿಸುತ್ತಿರುವುದು ಸಂತೋಷದ ಸಂಗತಿ.

'ಸಂವಾದ'ದ ಹುಟ್ಟು-ಬೆಳೆಗಿನ ಹುಟ್ಟು ವಾದ; ಸಂವಾದದಿಂದ ನಮ್ಮ ನಿಮ್ಮ 'ಸಂವಾದ' ಬಾಳಿನ ಹೊಸ ಗಾದೆ ಕಟ್ಟುವುದರಲ್ಲಿ ನಿರತವಾಗಿದೆ. 'ಸಂವಾದ' ಬೆಳಗಲು ನೀವು ಬತ್ತಿಯಾಗಿ; ಗೆಳೆಯರು ತೈಲವಾಗಿ ಸಹಕರಿಸಿರುವಿರಿ.

ಸುಗಂಧ ಹಂಚುವವರು, ಹಂಚುತ್ತಲೆ ಹೋಗುವರು. ಅವರು ಎಲ್ಲೇ ಇರಲಿ, ಎಂತೇ ಇರಲಿ; ಹೂವಿನಂತೆ ಅರಳುತ್ತಲೇ ಈ ಶುಭ ಸಂದರ್ಭದಲ್ಲಿ 'ಸಂವಾದ' ದೀಪದಿಂದ ದೀಪ ಬೆಳಗಿಸಲಿ ಎಂದು ಹಾರೈಸುವೆ.

ಜಂಬಣ್ಣ ಅಮರಚಿಂತ, ರಾಯಚೂರು

ವರ್ಷ ತುಂಬಿದ 'ಪತ್ರಿಕೆ'ಗೆ ಶುಭಾಶಯಗಳು

ಮಾನ್ಯ ಇಂದೂಧರ ಹೊನ್ನಾಪುರ ಅವರಿಗೆ ನಮಸ್ಕಾರಗಳು,

ಕಳೆದ ಒಂದು ವರ್ಷಗಳಿಂದ 'ಸಂವಾದ'ದ ಸಂಚಿಕೆಗಳನ್ನು ಗಮನಿಸುತ್ತಿದ್ದೇನೆ. ಚೆನ್ನಾಗಿ, ಉಪಯುಕ್ತವಾಗಿ ಮೂಡಿಬರುತ್ತಿದೆ. ಪತ್ರಿಕೆ ಯಶಸ್ವಿಯಾಗಿ ಒಂದು ವರ್ಷ ಮುಗಿಸುತ್ತಿರುವ ಈ ಸಂತೋಷದ ಸಮಯದಲ್ಲಿ ಪತ್ರಿಕೆಗೆ ನನ್ನ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.

ತಾರಕೇಶ್ವರ್ ವಿ.ಬಿ. ಕನ್ನಡ ವಿವಿ, ಹಂಪಿ

ಸಾಮಾನ್ಯ ಓದುಗರನ್ನೂ ತಲುಪಲಿ

ಪ್ರಿಯ ಸಂಪಾದಕರೆ,

ನಾಡಿನ ಎಲ್ಲ ವರ್ಗದ ದುರ್ಬಲರು ಮತ್ತು ಅಸಹಾಯಕರ ದನಿಯಾಗುವ ಹಂಬಲ ಹೊತ್ತು ಹೊರ ಬರುತ್ತಿರುವ 'ಸಂವಾದ'ಕ್ಕೆ ಒಂದು ವರ್ಷ ಎಂದು, ಕಳೆದ ಸಂಚಿಕೆಯ ನಿಮ್ಮ ಸಂಪಾದಕೀಯ ನೋಡಿದ ಮೇಲೇ ನನ್ನ ಗಮನಕ್ಕೆ ಬಂದಿದ್ದು, ಪತ್ರಿಕೆಗೆ ನನ್ನ ಶುಭಾಶಯಗಳು.

ನಿಮ್ಮ ಆಶಯವೇನೋ ಸ್ವಾಗತಾರ್ಹವಾದುದೆ. ಆದರೆ, ಕಳೆದ ಸಂಚಿಕೆಯಲ್ಲಿರುವ ಕೆಲವು ಲೇಖನಗಳು ನಿಮ್ಮ ಆಶಯಕ್ಕೆ ಅಡ್ಡಿಯಾಗಬಹುದೇನೋ. ಇಂದು ಎಲ್ಲಾ ಸಣ್ಣ-ಸಣ್ಣ ಜಾತಿ-ವರ್ಗಗಳೂ ತಂತಮ್ಮ ಮಟ್ಟಿಗೆ ತಮ್ಮದೇ ಆದ ಆಚರಣೆಗಳು, ಶಾಸ್ತ್ರ ಮತ್ತು ಕಟ್ಟುಪಾಡುಗಳನ್ನು ಕಡ್ಡಾಯವಾಗಿ ಹೊಂದಿದ್ದು, ಅವುಗಳೆಲ್ಲವೂ ಕರ್ಮಠ ಬ್ರಾಹ್ಮಣರ ಆಚರಣೆಗಳಿಗಿಂತಲೂ ಅಸಹನೀಯವಾಗಿರುತ್ತವೆ.

'ಸಂವಾದ'ದಂತ ವಿಚಾರಪ್ರಚೋದಕ ಪತ್ರಿಕೆ ಇದೀಗ ಮುಟ್ಟುತ್ತಿರುವ ಪ್ರಜ್ಞಾವಂತ ವಲಯವನ್ನು ದಾಟಿ ಸರಳವಾದ ಭಾಷೆ ಮತ್ತು ಲೇಖನಗಳ ಆಯ್ಕೆಯೊಂದಿಗೆ, ಸಾಮಾನ್ಯ ಓದುಗರನ್ನೂ ತಲುಪುವಂತಾಗಲಿ ಎಂಬುದು ನನ್ನ ಕೋರಿಕೆ.

ಬಿ.ಎಂ.ಮೃತ್ಯುಂಜಯ, ಬೆಂಗಳೂರು

ವಿಚಾರ ಪ್ರಚೋದಕ ಪತ್ರಿಕೆ

ಶ್ರೀ ಇಂದೂಧರ ಹೊನ್ನಾಪುರಗೆ ನಮಸ್ಕಾರ,

'ಸಂವಾದ'ದ ಹೂರಣ ವಿಚಾರ ಪ್ರಚೋದಕವಾಗಿದೆ. ಅಂಚಿನಲ್ಲಿರುವವರ ದನಿಯಾಗಿ 'ಸಂವಾದ' ಪ್ರಕಟವಾಗಲಿ. ಪರ್ಯಾಯ ಪತ್ರಿಕೋದ್ಯಮಕ್ಕೆ ತನ್ನ ಕೊಡುಗೆಯನ್ನು 'ಸಂವಾದ' ನೀಡಲಿ.

ನಿಮ್ಮ ಈ ಪ್ರಯತ್ನಕ್ಕೆ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ. ಖಂಡಿತ, ನಾನು ನನ್ನ ಕೈಲಾದ ಸಹಾಯ, ಸಹಕಾರವನ್ನು 'ಸಂವಾದ'ಕ್ಕೆ ನೀಡುತ್ತೇನೆ.

ಮ.ಶ್ರೀ. ಮುರಳೀಕೃಷ್ಣ, ಬೆಂಗಳೂರು

ಸಂವಾದ
ಚಂದಾ ವಿವರ

ಬಿಡಿ ಪ್ರತಿರೂ. 20/-	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
1. ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರಿಗೆ	ರೂ. 100/-	ರೂ. 300/-	ರೂ. 500/-
2. ನೌಕರರು ಮತ್ತು ಇತರೆ ವೃತ್ತಿಪರರಿಗೆ	ರೂ. 200/-	ರೂ. 500/-	ರೂ. 800/-
3. ಸಂಘ-ಸಂಸ್ಥೆಗಳು, ಅಧಿಕಾರಿಗಳು ಹಾಗೂ ಉದ್ಯಮಿಗಳಿಗೆ	ರೂ. 2'0/-	ರೂ. 600/-	ರೂ. 1000/-
4. ವಿಶೇಷ ಹಿತೈಷಿ ಚಂದಾದಾರರಿಗೆ	ರೂ. 50(/-	ರೂ. 1500/-	ರೂ. 2500/-

ಆಜೀವ ಚಂದಾ ರೂ. 5,000/-, ಪೋಷಕ ಚಂದಾ ರೂ.10,000/-

ವಿ.ಸೂ.: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.ಅಂಚೆ ಮೂಲಕ ನೇರವಾಗಿ ಚಂದಾ ಕಳಿಸುವವರು ಎಂ.ಓ ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಎಂ. ಓ ಅಥವಾ ಡಿ.ಡಿ.ಯನ್ನು 'ಸಂಪಾದಕರು, ಸಂವಾದ' ಹೆಸರಿಗೆ ಮಾತ್ರ ಕಳುಹಿಸಬೇಕು. ಯಾವುದೇ ಕಾರಣಕ್ಕೂ ವೈಯಕಿಕ ಹೆಸರಿನಲ್ಲಿ ಕಳುಹಿಸಬಾರದು.

ಚಂದಾದಾರರಲ್ಲಿ ಮನವಿ

'ಸಂವಾದ'ವನ್ನು ಪ್ರತಿ ತಿಂಗಳ 13ರಂದು ಅಂಚೆಗೆ ಹಾಕಲಾಗುತ್ತದೆ. ಎಷ್ಟೇ ತಡವಾದರೂ ಆಯಾ ತಿಂಗಳ 20ನೇ ತಾರೀಖಿನ ಒಳಗೆ ಅದು ತಮಗೆ ತಲುಪುತ್ತದೆ.ಹಾಗೇನಾದರೂ 20ರ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ- ಸಾಧ್ಯವಾದರೆ ಪತ್ರಿಕೆ ತಲುಪದಿರುವ ಬಗೆಗೆ ಲಿಖಿತ ದೂರು ನೀಡಿ, ಪ್ರತಿಯೊಂದನ್ನು ನಮಗೆ ಕಳುಹಿಸಿ. ಅದರ ಆಧಾರದ ಮೇಲೆ ಇಲ್ಲಿನ ಅಂಚೆ ಕಚೇರಿಯಲ್ಲಿ ನಾವು ವಿಚಾರಿಸಿ, ಪತ್ರಿಕೆ ಸಕಾಲಕ್ಕೆ ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ. -ಸಂಪಾದಕ

ಅವಮಾನದಿಂದ ಪುರಸಭೆ ಅಧ್ಯಕ್ಷೆ ಆತ್ಮಹತ್ಯೆ

ಆನೇಕಲ್, ನ. ೫- ಸ್ಥಳೀಯ ಪುರಸಭೆ ಅಧ್ಯಕ್ಷೆ ಮಂಜುಳಾ ಆದಿಕೇಶವ ಇಂದು ಇಲ್ಲಿನ ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪುರಸಭೆಯ ಕಲಾಪ ಕಾಲದಲ್ಲಿ ತಾವು ಬಳಸಿದ ಶಬ್ದವೊಂದರ ಅಪಾರ್ಥದ ಹಿನ್ನೆಲೆಯಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪುರಸಭೆಯ ಕಲಾಪ ಇಂದು ಆರಂಭವಾಗುತ್ತಿದ್ದಂತೆ ನಾಮಕರಣ ಸದಸ್ಯರನ್ನು ನಾಮಕಾವಸ್ಥೆ ಸದಸ್ಯರು ಎಂದು ಅವರು ಬಾಯಿತಪ್ಪಿ ಹೇಳಿದ್ದೇ ಸದಸ್ಯರ ಆಕ್ರೋಶ ಹಾಗೂ ಗದ್ದಲಕ್ಕೆ ಕಾರಣವಾಯಿತು. ಈ ಶಬ್ದ ಬಳಕೆ ಮಾಡಿದ ತಪ್ಪನ್ನು ಒಪ್ಪಿಕೊಂಡು ಕ್ಷಮೆ ಕೇಳಬೇಕು ಎಂದು ಕೆಲವು ಸದಸ್ಯರು ಅಧ್ಯಕ್ಷೆಯನ್ನು ಒತ್ತಾಯಿಸಿದರು. ಇದೇ ಹಿನ್ನೆಲೆಯಲ್ಲಿ ಸಾಕಷ್ಟು ಗದ್ದಲ-ಕೋಲಾಹಲ ನಡೆದು ಸದಸ್ಯರಲ್ಲಿ ಕೆಲವರು ಹೊರನಡೆದು ಸಭೆ ತಾನಾಗಿಯೇ ರದ್ದಾಯಿತು.

ಬಳಿಕ ಅಧ್ಯಕ್ಷೆ ತಮ್ಮ ಕೊಠಡಿಯಲ್ಲಿ ಕುಳಿತಿದ್ದಾಗ ಅಲ್ಲಿಗೆ ಬಂದ ಮೂವರು ಸದಸ್ಯರು ಮಾತಿನ ಚಕಮಕಿ ನಡೆಸಿದರು. ಮನನೊಂದು ಅಳುತ್ತ ಕುಳಿತ ಅಧ್ಯಕ್ಷರನ್ನು ಇತರ ಕೆಲವು ಸದಸ್ಯರು ಸಮಾಧಾನಗೊಳಿಸಿ ಆಟೋದಲ್ಲಿ ಮನೆಗೆ ಕಳಿಸಿಕೊಟ್ಟರು. ಮನೆಗೆ ಹೋದ ಅಧ್ಯಕ್ಷೆ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಪತ್ರ ಬರೆದಿಟ್ಟು ಮಧ್ಯಾಹ್ನ ಸುಮಾರು ೧೨.೩೦ರಿಂದ ಒಂದು ಗಂಟೆಯ ನಡುವೆ ಆತ್ಮಹತ್ಯೆ ಮಾಡಿಕೊಂಡರು ಎಂದು ಪೊಲೀಸರು ತಿಳಿಸಿದ್ದಾರೆ.

'ಆನೇಕಲ್ ಶಾಸಕ ಎ. ನಾರಾಣಸ್ವಾಮಿ ಪುರಸಭೆ ಉಪಾಧ್ಯಕ್ಷ ಡಿ. ವೆಂಕಟೇಶ್, ಪುರಸಭೆ ಸದಸ್ಯರಾದ ರವಿ, ರಾಜು, ಸಿ.ಬಾಬು, ಶಂಕರ ಕುಮಾರ್ ಅವರು ಮಾಡಿರುವ ಅವಮಾನವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎಂದು ಜಿಲ್ಲಾಧಿಕಾರಿಗೆ ಬರೆದಿಟ್ಟಿರುವ ಪತ್ರದಲ್ಲಿ ತಿಳಿಸಿದ್ದಾರೆ.

'ಮತ್ತೆ ಯಾವ ಹೆಣ್ಣಿಗೂ ಹೀಗೆ ಅವಮಾನ ಮಾಡಲು ಸಾಧ್ಯವಾಗದ ರೀತಿ ಅವರಿಗೆ ಶಿಕ್ಷೆ ಕೊಡಬೇಕು' ಎಂದು ಮಂಜುಳಾ ಜಿಲ್ಲಾಧಿಕಾರಿಯನ್ನು ಕೋರಿದ್ದಾರೆ.

(ಪ್ರಜಾವಾಣಿ)

ಜಾತಿ ನಿಂದನೆ ಆರೋಪ

ಶಿವಮೊಗ್ಗ, ನ.೪- ಜಾತಿ ನಿಂದನೆ ಮಾಡಿ, ಬೆದರಿಕೆ ಹಾಕಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ಆರೋಪಿಸಿ ಜಿ.ಪಂ. ಸಾಗರ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿ.ಪಂ. ಸದಸ್ಯರೋರ್ವರ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ.

ಸೊರಬದಲ್ಲಿನ ತೆರೆದ ಬಾವಿಯೊಂದರ ಕಾಮಗಾರಿ ಸಂಬಂಧ ಜಿ.ಪಂ. ಸದಸ್ಯ ಎಚ್.ಬಿ.ಗಂಗಾಧರಪ್ಪ ಅವರು ಸಾಗರದಲ್ಲಿ ಜಿ.ಪಂ. ಉಪವಿಭಾಗದ ಕಾರ್ಯಪಾಲಕ ಅಭಿಯಂತರರ ಕಚೇರಿಗೆ ಬಂದ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರ ಸುಬ್ರಹ್ಮಣ್ಯ ಮತ್ತು ಸದಸ್ಯರ ನಡುವೆ ಮಾತಿಗೆ ಮಾತು ಬೆಳೆಯಿತು. ಬಳಿಕ ಕಾರ್ಯಪಾಲಕ ಅಭಿಯಂತರರು, ಜಿ.ಪಂ. ಸದಸ್ಯ ಗಂಗಾಧರಪ್ಪ ಅವರು ತಮ್ಮ ವಿರುದ್ಧ ಜಾತಿ ನಿಂದನೆ ಮಾಡಿದ್ದಾರಲ್ಲದೆ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

(ಉದಯವಾಣಿ)



ಶಂಖ ಗ್ರಾಮದಲ್ಲಿ ಘರ್ಷಣೆ: ೧೬ ಮನೆಗಳಿಗೆ ಹಾನಿ

ಹಾಸನ, ನ.೬- ಗೋವಿನ ಜೋಳ ಕೊಯ್ಯುವ ವಿಚಾರದಲ್ಲಿ ಶಂಖಕೊಪ್ಪಲು ಗ್ರಾಮದಲ್ಲಿ ದಲಿತರು ಮತ್ತು ಸವರ್ಣೀಯರ ನಡುವೆ ಗುಂಪು-ಘರ್ಷಣೆ ನಡೆದು ೧೫ ಜನರು ಗಾಯಗೊಂಡಿದ್ದು ೧೬ ಮನೆಗಳು ಜಖಂಗೊಂಡಿರುವ ಘಟನೆ ಬುಧವಾರ ರಾತ್ರಿ ನಡೆದಿದೆ.

ಶಂಖಕೊಪ್ಪಲಿನ ಕೆರೆಯ ಬದಿಯಲ್ಲಿ ವಿವಾದಾಸ್ಪದ ಭೂಮಿಯಲ್ಲಿ ಬೆಳೆದಿದ್ದ ಗೋವಿನ ಜೋಳವನ್ನು ಕೊಯ್ಯುವ ವಿಚಾರದಲ್ಲಿ ಶಂಖಕೊಪ್ಪಲಿನ ದಲಿತರು ಮತ್ತು ತೇಜೂರು ಗ್ರಾಮದ ಸವರ್ಣೀಯರ ನಡುವೆ ನಿನ್ನೆ ಮಧ್ಯಾಹ್ನ ಜಗಳ ನಡೆಯಿತೆನ್ನಲಾಗಿದೆ. ಈ ಸಂಬಂಧ ನಿನ್ನೆ ರಾತ್ರಿ ೮ ಘಂಟೆ ಸಮಯದಲ್ಲಿ ತೇಜೂರು ಗ್ರಾಮದ ಪುಟ್ಟಸ್ವಾಮಿ ಎಂಬುವರ ಮಕ್ಕಳು ಸೇರಿದಂತೆ ಸುಮಾರು ೫೦ ಜನರ ಗುಂಪು ಶಂಖಕೊಪ್ಪಲಿನ ದಲಿತರ ಕಾಲೋನಿಗೆ ನುಗ್ಗಿ ಮನೆಗಳ ಮೇಲೆ ಕಲ್ಲು ತೂರಿದ್ದರಿಂದ ೧೬ ಮನೆಗಳ ಹೆಂಚುಗಳು ಒಡೆದು ಜಖಂಗೊಂಡಿವೆ. ಘರ್ಷಣೆಯಲ್ಲಿ ೧೫ ಜನರು ಗಾಯಗೊಂಡಿದ್ದು ತೀವ್ರವಾಗಿ ಗಾಯಗೊಂಡಿರುವ ಹಾಲಮ್ಮ ಮತ್ತು ಚೆನ್ನಮ್ಮ ಎಂಬುವರು ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಈ ಸಂಬಂಧ ಕೃಷ್ಣಮೂರ್ತಿ ಎಂಬುವರು ನೀಡಿದ ದೂರಿನ ಮೇರೆಗೆ ಮೊಕದ್ದಮೆ ದಾಖಲಿಸಿಕೊಂಡಿರುವ ಹಾಸನ ಗ್ರಾಮಾಂತರ ಪೊಲೀಸರು ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಂಡಿದ್ದಾರೆ.

(ಉದಯವಾಣಿ)

ಅತ್ತಿಬೆಲೆಯಲ್ಲಿ ಘರ್ಷಣೆ: ವ್ಯಕ್ತಿ ಸಾವು

ಹೊಸಕೋಟೆ, ನ.೮- ನಂದಗುಡಿ ಪೊಲೀಸ್ ಠಾಣೆ ವ್ಯಾಪ್ತಿಯ ಅತ್ತಿಬೆಲೆ ಗ್ರಾಮದಲ್ಲಿ ಅಂಬೇಡ್ಕರ್ ಸಂಘ ಸ್ಥಾಪಿಸುವ ಬಗ್ಗೆ ಶುಕ್ರವಾರ ಸಂಭವಿಸಿದ ಘರ್ಷಣೆಯಲ್ಲಿ ನಾರಾಣಯಪ್ಪ(೪೫) ಎಂಬ ವ್ಯಕ್ತಿ ಮೃತಪಟ್ಟಿದ್ದಾರೆ.

ಗ್ರಾಮದ ಹರಿಜನರು ಸಂಘ ಸ್ಥಾಪಿಸುವ ಬಗ್ಗೆ ಕೆಲ ದಿನಗಳಿಂದ ಕಾರ್ಯೋನ್ಮುಖರಾಗಿದ್ದರು. ಸವರ್ಣೀಯರು ಇದನ್ನು ವಿರೋಧಿಸಿದರು. ಈ ಸಂಬಂಧ ನಡೆದ ಪಂಚಾಯತಿಗೆ ಹರಿಜನರು ಹೋಗಲಿಲ್ಲ ಎನ್ನಲಾಗಿದೆ. ಇದರಿಂದ ಕುಪಿತಗೊಂಡ ಮುನಿರಾಜು ಮತ್ತು ಸಂಗಡಿಗರು ಹರಿಜನ ಕಾಲೋನಿಗೆ ನುಗ್ಗಿ ನಾರಾಯಣಪ್ಪ ಮತ್ತು ಇತರರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದರು. ಈ ಕುರಿತು ನಂದಗುಡಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ರಾತ್ರಿಯೇ ದೌರ್ಜನ್ಯದ ಬಗ್ಗೆ ದೂರು ದಾಖಲಿಸಲಾಗಿತ್ತು. ತೀವ್ರವಾಗಿ ಗಾಯ ಗೊಂಡ ನಾರಾಯಣಪ್ಪ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಶನಿವಾರ ಬೆಳಿಗ್ಗೆ ಮೃತಪಟ್ಟ ಎಂದು ಪೊಲೀಸರು ತಿಳಿಸಿದ್ದಾರೆ.

(ವಿಜಯಕರ್ನಾಟಕ)

ಅಂತರ್ಜಾತಿ ವಿವಾಹಕ್ಕೆ ವಿರೋಧ: ಯುವ ಪ್ರೇಮಿಗಳ ಆತ್ಮಹತ್ಯೆ

ಬೆಂಗಳೂರು, ನ.೫- ಅಂತರ್ಜಾತಿ ವಿವಾಹವನ್ನು ಸಮಾಜ ಒಪ್ಪದು ಎಂದು ಬೇಸರಗೊಂಡ ಯುವ ಪ್ರೇಮಿಗಳಿಬ್ಬರು ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಸಾವಿಗೀಡಾದ ಘಟನೆ ನಂದಿನಿ ಬಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯ ಸರಸ್ವತಿಪುರಂನಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ.

ಸರಸ್ವತಿಪುರಂ ಐದನೆ ಕ್ರಾಸಿನ ಯಾಸ್ಮಿನ್(೧೭) ಮತ್ತು ನಾಗೇಶ್(೨೫) ಸಾವಿಗೆ ಶರಣಾದವರು.

ಬಹಳ ದಿನಗಳಿಂದ ಪರಸ್ಪರ ಪ್ರೀತಿಸುತ್ತಿದ್ದ ಇವರು ಮದುವೆಯಾಗಲು ನಿರ್ಧರಿಸಿದರು. ಅದನ್ನು ಮನೆಯ ಹಿರಿಯರ ಮುಂದೆ ಪ್ರಸ್ತಾಪಿಸಿದ್ದರು. ಆದರೆ ವಿರೋಧ ಎದುರಾದ ಕಾರಣ ಬೇಸರಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

(ಪ್ರಜಾವಾಣಿ)

ಸಾಲದ ಸುಳಿಯಲ್ಲಿ ಜೀತದ ಜೀವಗಳು

ಬೆಂಗಳೂರು, ನ. ೨೨ : ಮಗಳ ಮದುವೆಗಾಗಿ ಪಡೆದ ಸಾಲವೇ ಶೂಲವಾಗಿ ಜೀತಕ್ಕೆ ಸಿಲುಕಿದ ಕುಟುಂಬ ವೊಂದು ವಿಮುಕ್ತಿಗಾಗಿ ಹಳ್ಳಿಯಿಂದಲೇ ಪರಾರಿಯಾಗಿ ಬೆಂಗಳೂರಿನ ಪಾಲಾದ ಘಟನೆ ಬೆಳಕಿಗೆ ಬಂದಿದೆ.

ಕೊಳ್ಳೇಗಾಲ ತಾಲೂಕಿನ ಸಿಂಗಾನಲ್ಲೂರು ಗ್ರಾಮದ ಮಾದೇವ ಶೆಟ್ಟಿ, ಪತ್ನಿ ಪುಟ್ಟವೆಂಕಟಮ್ಮ ಮಕ್ಕಳಾದ ನಂಜುಂಡಸ್ವಾಮಿ ಮತ್ತು ನಾಗೇಂದ್ರ ಇವರೇ ಜೀತಕ್ಕೆ ಒಳಗಾಗಿದ್ದವರು. (ಕನ್ನಡಪ್ರಭ)

ಸಂಪಾದಕೀಯ

ಅಂತರಂಗ

ಕೊಲೆಗಡುಕ ಸರ್ಕಾರ



ಪಾರ್ವತಿ ಮತ್ತು ಹಾಜಿಮಾರನ್ನು ಸರ್ಕಾರ ಗುಂಡಿಕ್ಕಿ ಕೊಂದಿದೆ. ಕೊಲೆಯನ್ನು ಕಾನೂನು ಪಾಲನೆಯಲ್ಲಿನ ಸಣ್ಣ ಘಟನೆ ಎಂದು ಅದು ಹೇಳಿಕೊಂಡಿದೆ. ವಿಪರ್ಯಾಸವೆಂದರೆ, ಹತ್ಯೆಗೀಡಾಗಿರುವ ಪಾರ್ವತಿಯಾಗಲಿ, ಹಾಜಿಮಾ ಆಗಲಿ ಅದೇ ಸರ್ಕಾರದ ಪ್ರಕಾರ ಯಾವುದೇ ಅಪರಾಧ ಮಾಡಿದವರಲ್ಲ, ಅವರ ಮೇಲೆ ಯಾವುದೇ ಮೊಕದ್ದಮೆಗಳೂ ಇಲ್ಲ. ಕಾನೂನು ವ್ಯವಸ್ಥೆಗೆ ಧಕ್ಕೆ ತಂದ ಯಾವ ದೂರೂ ಅವರ ಮೇಲಿಲ್ಲ! ಆದರೂ ಅವರನ್ನು ಸರ್ಕಾರ ಕೊಲೆ ಮಾಡಿದೆ!

ಹಾಗಾದರೆ ಈ ಬರ್ಬರ ಹತ್ಯೆಗೆ ಕಾರಣವೇನು? ಲೂಟಿಕೋರರಿಂದ ಪಶ್ಚಿಮ ಘಟ್ಟಗಳನ್ನು ರಕ್ಷಿಸಲು ಹೊರಟದ್ದೇ? ಬಡಕೂಲಿ ಜನರನ್ನು ಭೂಮಾಲೀಕರು ಹಾಗೂ ಕಾಡುಗಳ್ಳರ ವಿರುದ್ಧ ಸಂಘಟಿತರಾಗುವಂತೆ ಪ್ರಯತ್ನಿಸಿದ್ದೇ? ಕೋಮುವಾದಿಗಳೂ-ನೆಲಗಳ್ಳರೂ-ಕಳ್ಳಸಾಗಣೆದಾರರೂ ಆಗಿರುವ ದೇಶದ್ರೋಹಿಗಳ ವಿರುದ್ಧ ಸೆಟೆದು ನಿಂತಿದ್ದೇ? ಇಂಥ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾದವರು ಯಾರು? ಸರ್ಕಾರ ಕಾನೂನು, ಶಾಂತಿಪಾಲನೆ ಹೆಸರಿನಲ್ಲಿ ನಡೆಸುತ್ತಿರುವ ಇಂಥ ಬರ್ಬರ ಹತ್ಯೆಗಳಿಗೆ ಉತ್ತರವೇ ಇಲ್ಲವೆ?

ಈ ವ್ಯವಸ್ಥೆಯೇ ಹೀಗೆ ಅನ್ನಿಸುತ್ತದೆ. ದೀನ-ದಲಿತರು, ಕೂಲಿ ಕಾರ್ಮಿಕರನ್ನು ಹಾಡೇಹಗಲು ಸುಟ್ಟು ಹಾಕಬಹುದು, ಬೀದಿ ಬೀದಿಗಳಲ್ಲಿ ಕೋಮುಗಲಭೆ ಹಬ್ಬಿಸಿ ಸಮಾಜದ ನೆಮ್ಮದಿಗೆ ಬೆಂಕಿ ಹಾಕಬಹುದು, ಮಹಿಳೆಯರ ಮೇಲೆ ಅತ್ಯಾಚಾರ-ಮಾನಭಂಗ ಮಾಡಬಹುದು, ಕಳ್ಳತನ ಮಾಡಿ ಬದುಕಬಹುದು, ಕೋಟಿ ಕೋಟಿ ಭ್ರಷ್ಟಾಚಾರ ಮಾಡಿ ಬದುಕಬಹುದು. ಪೊಲೀಸರ ಬಂದೂಕಗಳು ಅಲ್ಲಿ ಕೆಲಸ ಮಾಡುವುದಿಲ್ಲ. ಸರ್ಕಾರದ ಕಾನೂನು ಶಾಂತಿಪಾಲನೆ ಕಾಯಿದೆಗಳು ಅಡ್ಡಿಬರುವುದಿಲ್ಲ. ಅಷ್ಟೇ ಏಕೆ ಇಡೀ ಸಮೂಹ ಮಾಧ್ಯಮಗಳು ಅಂಥವರ ಪರವಾಗಿರುತ್ತವೆ. ಹೋರಾಟಗಾರರೂ ತೆಪ್ಪಗಿರುತ್ತಾರೆ. ಎಂಥಾ ವ್ಯಂಗ್ಯ !

ಕುದುರೆಮುಖ ಗಣಿಗಾರಿಕೆಗೆ ಮತ್ತೆ ಅವಕಾಶ ಕಲ್ಪಿಸುವುದರ ವಿರುದ್ಧದ ಹೋರಾಟ ಈಗ ನಕ್ಸಲೀಯ ಸಿದ್ಧಾಂತದ ಮಡಿಲಿಗೆ ಬಿದ್ದಿದೆ. ಜನಪರ ಪ್ರಜಾಸತ್ತಾತ್ಮಕ ಹೋರಾಟವೊಂದು ಸಶಸ್ತ್ರ ಹೋರಾಟವಾಗಿ ಮಾರ್ಪಡಲು ಕಾರಣಗಳೇನು? ಇದರಲ್ಲಿ ಸರ್ಕಾರದ ಪಾತ್ರ ಏನು ಎನ್ನುವುದನ್ನು ಪರಾಮರ್ಶಿಸದೆ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲಾಗುವುದಿಲ್ಲ.

ಪ್ರಜಾಸತ್ತಾತ್ಮಕ ಹೋರಾಟಗಳನ್ನು ಮನ್ನಿಸಿ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಮುಂದಾಗಿದ್ದಲ್ಲಿ ಇಂಥ ಸ್ಥಿತಿ ನಿರ್ಮಾಣವಾಗುತ್ತಲೇ ಇರಲಿಲ್ಲ. ಜನರ ಸಮಸ್ಯೆಗಳನ್ನು ಬಗೆಹರಿಸುವ ಬದಲಾಗಿ ಬಂಡವಾಳ ಶಾಹಿಗಳ ಏಜೆಂಟನಂತೆ ಸರ್ಕಾರ ವರ್ತಿಸತೊಡಗಿತು. ಪಶ್ಚಿಮ ಘಟ್ಟಗಳನ್ನು ಸಂಪೂರ್ಣ ಸುಲಿಗೆಗೆ ಮುಂದಾದ ಸರ್ಕಾರ, ಅದಕ್ಕಾಗಿ ಅಲ್ಲಿನ ಮೂಲನಿವಾಸಿಗಳನ್ನು ಒಕ್ಕಲೆಬ್ಬಿಸಲು ಮುಂದಾದದ್ದು ಹೋರಾಟಗಾರರನ್ನು ಕೆರಳಿಸಿತು.

ಮಲೆನಾಡಿನ ಬದುಕು ಅತ್ಯಂತ ಕ್ರೂರ. ಅಲ್ಲಿನ ಪ್ರಕೃತಿ ಎಷ್ಟು ಸುಂದರವೋ ಬಹುಜನರ ಬದುಕು ಅಷ್ಟೆ ಕುರೂಪ. ಅಸಮಾನತೆ ಎಂಬುದು ಕಣ್ಣಿಗೆ ಹೊಡೆದಂತೆ ಮಲೆನಾಡಿನಲ್ಲಿ ಕಾಣುತ್ತದೆ. ಬೆರಳಣಿಕೆಯಷ್ಟು ಮಂದಿ ಶ್ರೀಮಂತ ಭೂಮಾಲೀಕರು, ಕೃಷಿ ಕೂಲಿ ಕಾರ್ಮಿಕರನ್ನು ನಿರಂತರವಾಗಿ ಸುಲಿಯುತ್ತಲೇ ಇದ್ದಾರೆ. ಇಲ್ಲಿ ಕಾನೂನು ಕೇವಲ ಪುಸ್ತಕದ ಬದನೆಕಾಯಿ. ಇಲ್ಲಿನ ಕಾಫಿ ತೋಟಗಳಲ್ಲಿ ಅದೆಷ್ಟು ದಲಿತರು-ಕೂಲಿಕಾರ್ಮಿಕರು ಜೀವಂತ ಹೆಣಗಳಾಗಿದ್ದಾರೋ, ಎಷ್ಟು ಜನ ಹೆಂಗಸರು ಮಾನ ಕಳೆದುಕೊಂಡಿದ್ದಾರೋ ಲೆಕ್ಕವಿಲ್ಲ. ಅರಣ್ಯ ಸಂಪತ್ತೆಲ್ಲ ಇಲ್ಲಿ ಕಾಡುಗಳ್ಳರ ಪಾಲಾಗುತ್ತಿದೆ. ಕಾಡಿನ ನಿಜವಾದ ಒಡೆಯರಾದ ಮೂಲನಿವಾಸಿಗಳನ್ನು ಹೊರದಬ್ಬಲಾಗುತ್ತಿದೆ. ಅವರ ಬದುಕುವ ಹಕ್ಕನ್ನೂ ಕಿತ್ತುಕೊಳ್ಳಲಾಗುತ್ತಿದೆ. ಜನರನ್ನು ಸಂಘಟಿಸುತ್ತಿದ್ದವರ ಮೇಲಿನ ನಿರಂತರ ಕಿರುಕುಳ, ಜತೆಗೆ ಸರ್ಕಾರದ ನಿರ್ಲಕ್ಷ್ಯ ಮತ್ತು ಕಳ್ಳ ಸಾಗಣೆದಾರರ ಪರ ನಿಲುವು ಸಂಘಟಕರನ್ನು ನಕ್ಸಲೀಯರನ್ನಾಗಿಸಿದೆ.

ನಕ್ಸಲೀಯರು ಆಯ್ಕೆ ಮಾಡಿಕೊಂಡ ಹಾದಿ ಬಗೆಗೆ ಭಿನ್ನಾಭಿಪ್ರಾಯ ಇಲ್ಲದಿರಬಹುದು. ಆದರೆ ಅವರು ಎತ್ತಿರುವ ಪ್ರಶ್ನೆಗಳು ಬಹು ಪ್ರಮುಖವಾದವುಗಳು. ನಕ್ಸಲೀಯ ಚಳವಳಿಯನ್ನು ಇತರೆ ಚಳವಳಿಗಳಂತೆ ರಾಜಕೀಯ ದೃಷ್ಟಿಕೋನದಿಂದ ನೋಡಬೇಕೇ ಹೊರತು, ಕಾನೂನು ಪಾಲನೆ ದೃಷ್ಟಿಯಿಂದಲ್ಲ. ನಕ್ಸಲೀಯರ ಸಮಸ್ಯೆಗಳನ್ನು ಸರ್ಕಾರ ನೋಡುವ ದೃಷ್ಟಿ ಬದಲಾಗಬೇಕು. ಸರ್ಕಾರದ ನಿರ್ಲಕ್ಷ್ಯದಿಂದ ಹತಾಷೆಗೊಂಡ ಉತ್ಸಾಹಿ ಯುವಜನರು ಅನಿವಾರ್ಯವಾಗಿ ಸಶಸ್ತ್ರ ಹೋರಾಟಕ್ಕೆ ಮುಂದಾಗುತ್ತಾರೆಂಬ ಐತಿಹಾಸಿಕ ಸತ್ಯವನ್ನು ಮೊದಲು ಮನಗಾಣಬೇಕು.

ಚಳವಳಿಗಾರರನ್ನು ಕೊಲ್ಲುವುದರಿಂದ ಚಳವಳಿ ನಾಶವಾಗುತ್ತದೆಂಬ ಭ್ರಮೆ ಸರ್ಕಾರಕ್ಕಿದ್ದರೆ ಅದಕ್ಕಿಂತ ಮೂರ್ಖತನ ಬೇರೊಂದಿಲ್ಲ. ಸ್ವಾತಂತ್ರ್ಯ ಚಳವಳಿಯನ್ನು ಹತ್ತಿಕ್ಕಲು ಬ್ರಿಟೀಷರು ಎಷ್ಟೊಂದು ಜನರನ್ನು ಕೊಲ್ಲಲಿಲ್ಲ. ನಕ್ಸಲೀಯ ಚಳವಳಿಯನ್ನು ಹತ್ತಿಕ್ಕಲು ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ವಿವಿಧ ಸರ್ಕಾರಗಳು ಎಷ್ಟೊಂದು ಕಾರ್ಯಕರ್ತರನ್ನು ಕೊಂದಿಲ್ಲ. ಚಳವಳಿ ನಿಂತಿತೇ? ದಿನ ಕಳೆದಂತೆ ಅದು ವ್ಯಾಪಕವಾಗುತ್ತಿದೆಯೇ ಹೊರತು ಕಡಿಮೆ ಆಗುತ್ತಿಲ್ಲ. ಜನರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸದಿದ್ದರೆ, ಉಳ್ಳವರ ಏಜೆಂಟರಾಗಿ ಕೆಲಸ ಮಾಡುವುದನ್ನು ನಿಲ್ಲಿಸದಿದ್ದರೆ, ದೇಶದ ಪ್ರತಿಯೊಬ್ಬ ಸ್ವಾಭಿಮಾನಿಯೂ ನಕ್ಸಲೀಯನಾಗುವ ದಿನ ದೂರವೇನೂ ಇಲ್ಲ. ನಿರುದ್ಯೋಗ-ಬಡತನ-ಸುಲಿಗೆ ಮುಂದುವರೆದಷ್ಟೂ ದಿನ, ಜನಮನದ ಕಿಚ್ಚು ಆರುವುದೇ ಇಲ್ಲ.

ನಕ್ಸಲೀಯ ಸಿದ್ಧಾಂತದ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ಆದರೆ ನಕ್ಸಲೀಯರಾರೂ ದೇಶದ್ರೋಹಿಗಳಲ್ಲ, ಕೋಮುವಾದಿಗಳಲ್ಲ, ಭ್ರಷ್ಟಾಚಾರಿಗಳಲ್ಲ. ದೇಶದ ಒಳಿತಿಗೆ ತಮ್ಮ ಬದುಕನ್ನು ಇಡಿಯಾಗಿ ಧಾರೆ ಎರೆದು ಕೊಟ್ಟ ವೀರರು. ಅವರೊಂದಿಗೆ ಸರ್ಕಾರ ನಡೆದುಕೊಳ್ಳುತ್ತಿರುವ ರೀತಿ ಹೇಯ ಮತ್ತು ಖಂಡನೀಯ. ಮಾನವ ಹಕ್ಕುಗಳಿಗಾಗಿ, ನೆಮ್ಮದಿಯ ಬದುಕಿಗಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟಿರುವವರನ್ನು ಕೊಲ್ಲುವುದನ್ನು ಸರ್ಕಾರ ಕೂಡಲೇ ನಿಲ್ಲಿಸಬೇಕು. ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕ ಅವರ ಸಮಸ್ಯೆಗಳಿಗೆ ಸ್ಪಂದಿಸಿ, ಅವರನ್ನು ಮುಖ್ಯವಾಹಿನಿಗೆ ಕರೆತರಬೇಕು.

○ ಇಂದೂಧರ ಹೊನ್ನಾಪುರ
ಸಂಪಾದಕ

ಸಮಾನತೆಯ ಸಾವಯವ ಸಂಬಂಧವನ್ನು ಅರಸಿ...

ವೇದಿಕೆ

ಸಾಮಾಜಿಕವಾಗಿ-ಸಾಂಸ್ಕೃತಿಕವಾಗಿ ಒಂದೇ ರೀತಿಯ ತಲ್ಲಣಗಳನ್ನು ಎದುರಿಸುತ್ತಿರುವ ಹಿಂದುಳಿದವರು ಮತ್ತು ದಲಿತರು, ಮೇಲ್ವರ್ಗದವರ ಚಿತಾವಣೆಗೆ ಬಲಿಯಾಗಿ ಪರಸ್ಪರ ನಿಂದನೆ, ಅಪನಂಬಿಕೆಯಲ್ಲಿ ಬದುಕಬೇಕಾಗಿರುವುದು ದುರಂತ. ಪರಿಸ್ಥಿತಿ ಕೈಮೀರಿ ಹೋಗುವ ಮುನ್ನ ಈ ವರ್ಗದ ವಿದ್ಯಾವಂತರು, ಬುದ್ಧಿಜೀವಿ- ಚಿಂತಕರು ಎಚ್ಚೆತ್ತುಕೊಳ್ಳಬೇಕಾದ ಅನಿವಾರ್ಯತೆ ಕುರಿತು ಲೇಖಕರು ಗಮನ ಸೆಳೆದಿದ್ದಾರೆ.

○ ಹುಲಿಕುಂಟೆ ಮೂರ್ತಿ

ಬಂಧುಗಳೇ ತೀಕ್ಷ್ಣಸ್ವರೂಪದ ಜಾಗತಿಕ ವಿದ್ಯಮಾನಗಳ ಜೊತೆಜೊತೆಗೇ ಭಾರತದ ಸಮಾಜದಲ್ಲಿ ಉಂಟಾಗುತ್ತಿರುವ ಕೆಲವು ಸಾಮಾಜಿಕ-ಸಾಂಸ್ಕೃತಿಕ ರಾಜಕೀಯ ಪಲ್ಲಟಗಳನ್ನು ಗಮನಿಸಿದರೆ, ನಮ್ಮೆಲ್ಲರ ಭೌತಿಕ ಹಾಗೂ ಬೌದ್ಧಿಕ ಬೆಳವಣಿಗೆಗಳು ತಮ್ಮ ವೇಗವನ್ನು ಮತ್ತಷ್ಟು ಸೂಕ್ಷ್ಮಗೊಳಿಸಿಕೊಳ್ಳಬೇಕಾದ ಅನಿವಾರ್ಯತೆಯ ಅರಿವಾಗುತ್ತದೆ.

ಭಾರತದಾದ್ಯಂತ ಇದುವರೆಗೂ ಶೋಷಣೆಗೆ ಒಳಗಾದ ಸಾವಿರಾರು ಸಮುದಾಯಗಳು ಕಳೆದುಹೋದ ಬದುಕನ್ನು ಹುಡುಕುವ ಅಥವಾ ಹೊಸ ಬದುಕುಗಳನ್ನು ಕಂಡುಕೊಳ್ಳುವ ಸ್ಥಿತಿಯಲ್ಲಿದ್ದು, ಗರ್ಭಗುಡಿ ಸಂಸ್ಕೃತಿಯ ಲೆಕ್ಕಾಚಾರಗಳನ್ನು ಮೀರಿದ್ದರೆ, ಶೋಷಿಸುವುದೇ ತಮ್ಮ ಹಕ್ಕು ಎಂದುಕೊಂಡಿರುವ ಸಮುದಾಯಗಳವರು ಶೋಷಣೆಯ ಸ್ವರೂಪಗಳನ್ನೇ ಬದಲಿಸಲು ಹವಣಿಸುತ್ತಿದ್ದಾರೆ. ಏಕೆಂದರೆ ಅವರೇ ಸೃಷ್ಟಿಸಿದ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಕಳೆದುಹೋಗುವ ಹಾಗೆ ಮಾಡುತ್ತಿದೆ. ತಳ ಸಮುದಾಯಗಳು ಇಂದಿನ ಕಾಲಘಟ್ಟದ ಸೂಕ್ಷ್ಮ ಸಂವೇದಿ ವಾತಾವರಣಕ್ಕೆ ತಕ್ಕಂತೆ ತಮ್ಮ ವಿಸ್ತಾರತೆಯನ್ನು ಹೆಚ್ಚಿಸಿಕೊಂಡು ಎಲ್ಲಾ ರೀತಿಯ ವಿದ್ಯಮಾನಗಳನ್ನೂ ತಮ್ಮ ಬೆಳವಣಿಗೆಗಾಗಿ ಒಂದು ಹದಕ್ಕೆ ಬಳಸಿಕೊಂಡು ಬೆಳೆಯುತ್ತಿರುವುದರಿಂದ ಆಧುನಿಕೋತ್ತರ ಆಲೋಚನೆಗಳಿಗೂ ನಿಲುಕದೆ ತಳದ ಅರಿವಿದ್ದುಕೊಂಡೇ ಮೇಲಕ್ಕೋ ಅಥವಾ ಮೇಲಿನ ಅರಿವಿದ್ದುಕೊಂಡೇ ತಳಕ್ಕೋ ಸರಿಯತೊಡಗಿದೆ.

ಈ ನಿಟ್ಟಿನಲ್ಲಿ ದಲಿತ-ಶೂದ್ರರೊಳಗಿನ ಬದಲಾವಣೆಗಳನ್ನೇ ಲೆಕ್ಕಾಚಾರ ಹಾಕತೊಡಗಿದಾಗ ನಮಗೆ ಸಮಾಜದ ಸಮಷ್ಟಿ ಚಲನೆಯ ಹರವು ಒಂದಷ್ಟು ಮಟ್ಟಿಗೆ ಗೋಚರಿಸಬಹುದು.

ಭಾರತದಲ್ಲಿ ದಲಿತರಾಜಕಾರಣ ಇಡಿಯಾಗಿ ನಮ್ಮ ಅಳತೆಗೆ ಸಿಗದಿದ್ದರೂ, ದಲಿತರನ್ನು ಹೊರತುಪಡಿಸಿದ ರಾಜಕಾರಣ ಇಲ್ಲದಿರಲಾರದು. ಬಡತನವನ್ನು ಬಂಡವಾಳವಾಗಿಟ್ಟುಕೊಂಡು, ಇದುವರೆಗೂ ದೇಶ ಆಳಿದ ಕಾಂಗ್ರೆಸ್ಸಿನಿಂದ ಕಲಿತ ಮೊದಲ ಪಾಠಗಳಾಗಿಯೇ ಎಲ್ಲಾ ರಾಜಕೀಯ ಪಕ್ಷಗಳೂ 'ದಲಿತೋದ್ಧಾರ'ದ ಅಥವಾ ದಲಿತರನ್ನೇ ಮುಖ್ಯವಾಗಿಟ್ಟುಕೊಂಡು ಮಾತಾಡುವ, ಸಮಾನತೆಯ ಮಾತುಗಳನ್ನು ಬಳಸಿಕೊಂಡೇ ತಮ್ಮ ರಾಜಕೀಯದ ಮೊದಲ ದಾಳಗಳನ್ನು ಎಸೆಯುತ್ತಿದ್ದಾರೆ. ಇನ್ನು ಸಂಘಪರಿವಾರದವರನ್ನೂ ಒಳಗೊಂಡು ಪ್ರತಿಯೊಂದು ಸಂಘ-ಸಂಸ್ಥೆ-ಸಂಘಟನೆಗಳ ಅಜೆಂಡಾದಲ್ಲಿ ದಲಿತರ ಬಗೆಗಿನ ಕಾರ್ಯಕ್ರಮಗಳಿದ್ದೇ ಇರುತ್ತವೆ.

ಅಲ್ಲದೆ ಸಾಹಿತಿ-ಬುದ್ಧಿಜೀವಿ-ಚಿಂತಕರ ವಲಯಗಳಲ್ಲೂ 'ದಲಿತ' ಎನ್ನುವುದು ಚಿಂತನಾ ಕ್ರಮವೋ, ಸಾಹಿತ್ಯ ಪ್ರಕಾರವೋ ಆಗಿ ಹೋಗಿದೆ. ಹೀಗೆ ಆಗಿ ಹೋಗಿದ್ದು ಈ ಕಾಲಘಟ್ಟ ರೂಪಿಸಿದ ಇತಿಹಾಸ ಚಿಕಿತ್ಸಕ ಬೆಳವಣಿಗೆಯಂತೆ ಕಂಡರೂ, ದಲಿತ ಜಾಗೃತಿಯ ಅರಿವಿನ ಹರವು ತನ್ನ ದಾರಿಯಲ್ಲಿ ಎದುರಿಸಬೇಕಾದ ಹೊಸ ಬಿಕ್ಕಟ್ಟುಗಳು ಈ ಮೂಲಕ ಸೃಷ್ಟಿಯಾಗುತ್ತಿರುವುದನ್ನು ನಾವು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ.

ಈ ನಿಟ್ಟಿನಲ್ಲಿ ಕರ್ನಾಟಕದ ಮುಖ್ಯವಾಹಿನಿಯಲ್ಲಿ ಇತ್ತೀಚೆಗೆ ಘಟಿಸುತ್ತಿರುವ ದಲಿತ ಶೂದ್ರ ಅಥವಾ ತಳ ಸಮುದಾಯ ನಿಷ್ಠ ಮತ್ತು ಜಾತ್ಯಾತೀತ-ಪ್ರಗತಿಪರತೆಯ ನಡುವಿನ ಒಳಸಂಘರ್ಷಗಳನ್ನು ಸಮಾನ ಬದುಕಿನ ಆಶಯದ ದೃಷ್ಟಿಕೋನದಿಂದ ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ. ಹಾಗೂ ಇದರಿಂದ ಗೋಚರಿಸುವ ಕೆಲವು ಸತ್ಯಗಳನ್ನು ಒರೆಹಚ್ಚಿ ನೋಡಿ ಸಾಮಾಜಿಕ ನ್ಯಾಯದ, ಸಮಾನತೆಯ, ಚಾರಿತ್ರಿಕ ದ್ರೋಹವನ್ನು ಮರೆಮಾಚದ ಮೌಲ್ಯಗಳಿಗನುಗುಣವಾಗಿ ಪರಸ್ಪರ ಹಂಚಿಕೊಳ್ಳಬೇಕಿದೆ.

ಈ ದೃಷ್ಟಿಯಿಂದ ನನ್ನ ಸಾಮರ್ಥ್ಯಕ್ಕೆ ತಕ್ಕಂತೆ ನನಗೆ ಗೋಚರಿಸುವ ಸಮಕಾಲಿನ ಸತ್ಯಗಳನ್ನೋ ಅಥವಾ ಪ್ರಶ್ನೆಗಳನ್ನೋ ಈ ಮೂಲಕ ಮಂಡಿಸುವ ಪ್ರಯತ್ನ ಮಾಡುತ್ತೇನೆ.

ದಲಿತರೊಟ್ಟಿಗೆ ಬ್ರಾಹ್ಮಣ್ಯದಿಂದ ಸಮಾನವಾಗಿ ಶೋಷಿಸಲ್ಪಟ್ಟ ಶೂದ್ರ ಸಮುದಾಯಗಳು ಆ ನಂತರದಲ್ಲಿ ಬ್ರಾಹ್ಮಣ್ಯದ ಶೋಷಕ ಸಂಸ್ಕೃತಿಯನ್ನು ತಮ್ಮದಾಗಿಸಿಕೊಂಡು ದಲಿತರನ್ನು ವಂಚಿಸಿ, ಸಂಪತ್ತುಗಳಿಸಿ, ಅವರನ್ನು ತಮ್ಮ ಆಳುಗಳನ್ನಾಗಿಸಿಕೊಂಡು ಚಿತ್ರ ವಿಚಿತ್ರವಾಗಿ ಶೋಷಿಸಿ, ಸೋದರ ದ್ರೋಹವೆಸಗಿದ್ದು ಮತ್ತು ಈಗಲೂ ನಾಡಿನ ಹಳ್ಳಿ ಹಳ್ಳಿಗಳಲ್ಲಿ ಈ ರೀತಿಯ ಶೋಷಣೆಯ ಸ್ವರೂಪ ಭಿನ್ನ ಭಿನ್ನವಾಗಿ ವ್ಯಕ್ತವಾಗುತ್ತಿದೆ. ಇದಕ್ಕೆ ನೂರಾರು ಉದಾಹರಣೆಗಳನ್ನು ಕೊಡಬಹುದು.

(ಶೋಷಿತ ಪರವಾದ ಕಾಳಜಿಗಳನ್ನಿಟ್ಟುಕೊಂಡು ಸಮಾನತೆಗಾಗಿ ದುಡಿದ ಹತ್ತಾರು ಶೂದ್ರ ನಾಯಕರನ್ನು ನಾನು ಗೌರವಿಸುತ್ತೇನೆ.)

ಇತ್ತೀಚೆಗೆ ಶೂದ್ರ ಸಮುದಾಯದ ಕೆಲವು ಚಿಂತಕ ಬುದ್ಧಿಜೀವಿ-ಸಾಮಾಜಿಕ ಕಾರ್ಯಕರ್ತರೆನಿಸಿಕೊಂಡವರು ದಲಿತರ ಪರವಾಗಿ ಮಾತನಾಡುತ್ತಿರುವುದನ್ನು ಪ್ರತ್ಯಕ್ಷ-ಪರೋಕ್ಷವಾಗಿ ದಲಿತ ಪರ ಕಾರ್ಯಗಳಲ್ಲಿ ತೊಡಗಿರುವುದನ್ನು ಮತ್ತು ಮೇಲಿಂದಮೇಲೆ ಸಮಾನತೆಯನ್ನು ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಮಾತನಾಡುತ್ತಿರುವುದನ್ನು ಅವ್ಯಾಹತವಾಗಿ ಕಾಣಬಹುದಾಗಿದೆ.

ಈ ರೀತಿಯ ಬದಲಾವಣೆ ಶೋಷಕರ ಪಶ್ಚಾತ್ತಾಪಕ್ಕೋ ಶೋಷಿತರ ನೆಮ್ಮದಿಯ ನಿಟ್ಟುಸಿರಿಗೋ ಕಾರಣವಾಗ ಬಹುದಾದರೂ ಅದರೊಳಗಿನ ದ್ವಂದ್ವಗಳನ್ನು ಅಷ್ಟು ಸರಳವಾಗಿ ತಳ್ಳಿಹಾಕುವಂತಿಲ್ಲವೆಂಬುದು ನನ್ನ ಭಾವನೆ. ಇದಕ್ಕೆ ಪೂರಕವಾಗಿ ಕೆಲವು ಅಂಶಗಳನ್ನು ಚರ್ಚಿಸಬಹುದು.

ಬದಲಾವಣೆಗೊಳಪಟ್ಟ ಪ್ರಗತಿಪರ ಶೂದ್ರರು ಯಾವುದೋ ಕ್ಷೇತ್ರದಲ್ಲಿ ದಲಿತ ನಾಯಕತ್ವವನ್ನು ಒಪ್ಪಿಕೊಳ್ಳದಿರುವುದು ಅಥವಾ ಶಂಕಿಸುವುದು ಹಾಗೂ ಸಮಾಜಮುಖಿ ಚಿಂತನೆಗೆ ತೊಡಗಿಸಿಕೊಂಡಿರುವ ದಲಿತರನ್ನು ಸಮಾನವಾಗಿ ಕಾಣದೆ ದೂರವಿಡುವುದು. ಈ ರೀತಿಯ ಸಂಬಂಧಗಳು ಇಬ್ಬರ ನಡುವೆ ಸಾಕಷ್ಟು ಅಂತರವನ್ನು ಕಾಯ್ದುಕೊಳ್ಳುವಲ್ಲಿ ಸಾಮಾಜಿಕ ಬದಲಾವಣೆಯನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗುತ್ತವೆ.

ಇದಕ್ಕೆ ಸಂಬಂಧಿಸಿದಂತೆ ಪಾಶ್ಚಾತ್ಯ ವಿದ್ವಾಂಸ 'ಟ್ರಿಲ್ಲಿಂಗ್' ಎಂಬುವನು ಹೇಳಿರುವ ಒಂದು ಮಾತನ್ನು ಹಾಗೇ ಉಲ್ಲೇಖಿಸುತ್ತೇನೆ. ಇದನ್ನು ನಂತರದಲ್ಲಿ ವಿಸ್ತೃತ ಚರ್ಚೆಗೊಳಪಡಿಸಬಹುದು. 'ನಮ್ಮ ಸಹಜೀವಿಗಳು ಮೊದಲು ನಮ್ಮಲ್ಲಿ ಪ್ರಜ್ಞಾಪೂರ್ವ ಆಸಕ್ತಿಯ ವಸ್ತುಗಳಾಗುತ್ತಾರೆ. ಆಮೇಲೆ ನಮ್ಮ ಕರುಣೆಗೆ ಕಾರಣವಾಗುತ್ತಾರೆ. ಆದಾದ ಮೇಲೆ ನಮ್ಮ ತಿಳುವಳಿಕೆಯ ವಸ್ತುಗಳಾಗುತ್ತಾರೆ. ಕೊನೆಗೆ ನಮ್ಮ ಶೋಷಣೆಗೆ ಪಕ್ಕಾಗುತ್ತಾರೆ. ಇದು ಮನುಷ್ಯ ತಿಳಿದಿರುವ

ಭ್ರಷ್ಟತೆಗಳಲ್ಲಿಯೇ ಹೆಚ್ಚು ವ್ಯಂಗ್ಯ ಮತ್ತು ದುರಂತಗಳಿಂದ ಕೂಡಿದೆ..' ಆದರೆ ಇವನು ಈ ಭ್ರಷ್ಟತೆಯನ್ನು ತಡೆ ಹಿಡಿಯಲು ಕಾದಂಬರಿಯ ನೈತಿಕ ಕಲ್ಪನೆಯ ಮುಕ್ತ ಕ್ರಿಯೆಯಿಂದ ಮಾತ್ರ ಸಾಧ್ಯ ಎಂದು ಹೇಳಿ ತಪ್ಪಿಸಿಕೊಳ್ಳುತ್ತಾನೆ.

ನಮ್ಮ ನಡುವಿನ ಶೂದ್ರರಿಗೆ ಸಮಕಾಲೀನ ಬಿಕ್ಕಟ್ಟಿನ ಅರಿವಿದ್ದರೂ, ಆ ಬಿಕ್ಕಟ್ಟುಗಳ ಒತ್ತಡದೊಳಗೇ ವಿಮೋಚನಾಮುಖಿಯಾಗಿ ಹುಟ್ಟಿಕೊಳ್ಳುವ ದಲಿತ ಚಿಂತನೆ ಅಥವಾ ಆಲೋಚನೆಯನ್ನು ಮತ್ತು ಆ ನಿಟ್ಟಿನ ಸಾಮಾಜಿಕ-ಸಾಂಸ್ಕೃತಿಕ ಪಲ್ಲಟಗಳನ್ನು ಸರಳೀಕರಿಸಿ, ಎಳಸು ಚರ್ಚೆಗೊಳಪಡಿಸಿ ಗೌಣವಾಗಿಸಿಬಿಡುವ ಪ್ರಯತ್ನಗಳು ನಡೆಯುತ್ತಿದೆ.

ಇಂತಹ ಪ್ರಯತ್ನಗಳು ದಲಿತರೆದುರಿಗೆ ಪಾಳೆಗಾರಿಕೆಯ ಹೊಸ ವಿರಾಟ್ ಸ್ವರೂಪಗಳಂತೆ ಮೈದಾಳುವುದಲ್ಲದೆ, ಹೊಂದಿಕೊಂಡು ಬಾಳುವ ನಂಬಿಕೆಗಳನ್ನೇ ಮುರುಟಿ ಹಾಕಿಬಿಡುತ್ತವೆ.

ಈ ಭಾಗವನ್ನು ಕರ್ನಾಟಕದಲ್ಲಿ ಮೊಗಳ್ಳಿ ಗಣೇಶರ ಚಿಂತನೆಯ ಸುತ್ತ ಹುಟ್ಟಿಕೊಂಡಿರುವ (ಭಯದಿಂದ ಹುಟ್ಟಿಕೊಂಡಿರುವ) ಎಳಸು ಚರ್ಚೆಗಳು, ಜಾಗತೀಕರಣವನ್ನು ಎಳಸಾಗಿ, ಹೆಡ್ಡತನದಿಂದ ವಿಶ್ಲೇಷಿಸುವ ವಿಮರ್ಶಾ ಚರ್ಚೆಗಳು ಹಾಗೂ ಮೌಖಿಕ ಪರಂಪರೆಯ ಬಗೆಗಿನ ಅನುಮಾನಗಳನ್ನು ಬಿಡಿಸಿ ನೋಡುವ ಮುಖಾಂತರ ವಿಸ್ತರಿಸಬಹುದು.

ಮೊಗಳ್ಳಿ ಗಣೇಶ್ 'ದಲಿತರು ಮತ್ತು ಜಾಗತೀಕರಣ' ಬರೆದಾಗ ಇಡೀ ಕರ್ನಾಟಕದ ಪ್ರಗತಿಪರರು ಮೊಗಳ್ಳಿ ಜಾಗತೀಕರಣವನ್ನು ಸಮರ್ಥಿಸಿಕೊಂಡರೆಂದು ತಪ್ಪಾಗಿ ಅರ್ಥೈಸಿಕೊಂಡು ಅವರು ಜಾಗತೀಕರಣದ ಕ್ಷಿಪ್ರ ಚಲನೆಯೊಳಗೆ ಕಳೆದುಹೋಗುತ್ತಿದ್ದ ದಲಿತ ಸಮುದಾಯವನ್ನು ಎಚ್ಚರಿಸಿದ್ದನ್ನು ವ್ಯವಸ್ಥಿತವಾಗಿಯೋ, ಹೆಡ್ಡತನದಿಂದಲೋ ಮರೆಮಾಚಿಸಿಬಿಟ್ಟರು.

ಜಾಗತೀಕರಣದ ಮನೆಯೊಳಗೆ ನಿಂತು, ಅದು ದಲಿತರನ್ನು ಮೊದಲು ಬಲಿತೆಗೆದುಕೊಳ್ಳುತ್ತದೆ ಎಂದು ಹೇಳಿ, ಅವರನ್ನು ಒಳಗೆ ಬರಗೊಡದೆ ಬಾಗಿಲಲ್ಲೇ ತಡೆ ಹಿಡಿಯಲು ಯತ್ನಿಸಿದ್ದು, ದಲಿತರು ಎಚ್ಚರಗೊಳ್ಳದೆ ಜಾಗತೀಕರಣದಿಂದಲೂ, ಪ್ರಗತಿಪರರಿಂದಲೂ ಒಂದೇ ಬಾರಿಗೆ ಮೋಸಕ್ಕೊಳಪಡಲು ಕಾರಣವಾಯಿತು.

ಜಾಗತೀಕರಣವನ್ನು ಒಂದು ದೈತ್ಯ ವ್ಯಕ್ತಿಯಂತೆಯೋ, ವಸ್ತುವಂತೆಯೋ ಚಿತ್ರಿಸಿದ್ದರಿಂದ ಸಾಮಾಜಿಕ ಬದಲಾವಣೆಯೊಂದಿಗೆ ಬೆಸೆದುಕೊಂಡಿದ್ದ, ಒಂದು ಸಾಮಾಜಿಕ ಪ್ರಕ್ರಿಯೆಯಾದ ಜಾಗತೀಕರಣವನ್ನು ಅದರ ತಂತ್ರಗಳನ್ನು ಎಚ್ಚರಿಕೆಯಿಂದ ವಿಶ್ಲೇಷಿಸುವ ಅಥವಾ ಆ ಪ್ರಕ್ರಿಯೆಗೆ ಸಮಾನತೆಯ ಕಸುವನ್ನು ತುಂಬುವ ಪ್ರಯತ್ನಗಳಿಗೆ ಅಡ್ಡಿಪಡಿಸಿದಂತಾಯಿತು. (ಜಾಗತೀಕರಣವನ್ನು ಒಂದು ಸಾಮಾಜಿಕ ಪ್ರಕ್ರಿಯೆಯಾಗಿಸಿದ, ಜಾಗತಿಕ ಪರಿಸರಕ್ಕೆ ಅದನ್ನು ಆರೋಪಿಸಿದ ಹಿಂದಿನ ಹಿತಾಸಕ್ತಿಗಳ ಬಗ್ಗೆ ಬೇರೆಯೇ ಚರ್ಚಿಸಬೇಕಾಗುತ್ತದೆ.)

ಮೊಗಳ್ಳಿ ಒಬ್ಬ ದಲಿತರಾಗಿ, ಸಮಕಾಲೀನ ಕಾಲಘಟ್ಟದ ಸಮಷ್ಟಿಯ ಸಾಕ್ಷಿಪ್ರಜ್ಞೆಯಾಗಿ ಎತ್ತುವ ತಕರಾರುಗಳು ಅಥವಾ ಹೊಸ ಆಲೋಚನೆಗಳು ದಲಿತರೊಳಗಿನ ಬೌದ್ಧಿಕ ಹಂದರವನ್ನು ವಿಸ್ತರಿಸುತ್ತಿರುವಾಗಲೇ ಆ ಆಲೋಚನೆಗಳನ್ನು ಎಳಸೀಕರಿಸಿ, ಆ ಮೂಲಕ ಒಂದು ಸಾಮಾಜಿಕ ಚಲನೆಯನ್ನು ತಡೆಗಟ್ಟುವ ಪ್ರಯತ್ನಗಳು ನಡೆಯುತ್ತಿವೆ.

ಈ ರೀತಿಯ ಪ್ರಯತ್ನಗಳು ಒಂದು ಜನಾಂಗದ ಜೀವಕೋಶಗಳಿಗಿರುವ ಸಮಾಜಮುಖಿ ಚಿಂತನೆಗಳನ್ನು ಮತ್ತು ಆ ನಿಟ್ಟಿನ ಕಾರ್ಯತತ್ಪರತೆಯನ್ನು ಮುರುಟಿಹಾಕಿಬಿಡುತ್ತವೆ. ಹಾಗೆಯೇ ಈ ನೆಲದ ಸಮುದಾಯಗಳಿಗಿರುವ ಸಾವಯವ ಸಂಬಂಧವನ್ನು ಗುಮಾನಿಯಲ್ಲಿರಿಸಿ, ಇತಿಹಾಸ ಕಟ್ಟುವ ತಾಕತ್ತುಗಳನ್ನೇ ಅಡಗಿಸಿಬಿಡುತ್ತವೆ.

ಇದರಂತೆಯೇ ಮೌಖಿಕ ಪರಂಪರೆಯ ಜೀವನಪ್ರೀತಿಯ, ಇತಿಹಾಸ ಚಿಕಿತ್ಸಕ ಸಾಂಸ್ಕೃತಿಕ ಅರಿವುಗಳನ್ನು ಅನುಮಾನಸಿಬಿಟ್ಟರೇ ಮಾನವ ಸಂಬಂಧದ ಸಾವಯವ ಕೊಂಡಿಯನ್ನೇ ಕಡಿದುಹಾಕಿದಂತಾಗುತ್ತದೆ.

ಈ ನಿಟ್ಟಿನಲ್ಲಿ ನಮ್ಮ ಆಲೋಚನೆಗಳು ಪರಸ್ಪರ ಎಚ್ಚರವನ್ನು ಕಾಯ್ದುಕೊಂಡು, ಯಾವುದೇ ರೀತಿಯ ರೇಜಿಗೆಗೆ ಒಳಪಡದೆ, ಕಳಚಿಹೋಗುತ್ತಿರುವ ಕೊಂಡಿಗಳನ್ನು ಬೆಸೆಯುವ ಹೊಸದೊಂದು ಸಮಾಜವನ್ನು ಕಟ್ಟಿ ಬದುಕನ್ನು ಹದಗೊಳಿಸಿಕೊಳ್ಳುವ ಕೆಲಸಗಳು ಆಗಬೇಕಿದೆ.

ಆ ಕಾರಣಕ್ಕಾಗಿ ಈ ಚರ್ಚೆಗಳನ್ನು ಮುಂದುವರಿಸೋಣ.



ತೀರದ ಆತ್ಮ

ತೇಲಿದೆ ಪಯಣ
ಭುಮಿಯ ಸುತ್ತ
ತೆರೆ ಗುರಿಯತ್ತ.

ಏಳುತ್ತಾ.......
ಮುಗ್ಧ-ಸಂದಿಗ್ಧ
ಆಕಾರ-ವಿಕಾರ.

ಗಾಳಿಯ ಬೆರೆತು
ಮೂಲ ಮರೆತು
ವರ್ಣಪಟಲದತ್ತ.

ಸೂರ್ಯನ ಮುಟ್ಟಿ
ಚಂದ್ರನ ಮುತ್ತಿ
ನಕ್ಷತ್ರ ಹೆಕ್ಕಿ, ಕಕ್ಕಿ

ಮಿಂಚು ಚಾಚಲು-
ಕರಿದು ಸುರಿದು,
ಬಿಳುಪು ಉಳಿದು,
ಬೆಳ್ಳಿಗೆರೆ!

ಶುಭ್ರ ನೆಲದಿ-
ನದಿ ಹರಿದು,
ಓಡಿದೆ ಮೀನು....?

ಸಿ. ಅಶ್ವಿನಿ

Ever-rest

ಬಿಸಿಲು, ಮಳೆ, ಗಾಳಿ.
ಗಡುಸು, ಸ್ಪರ್ಶ ನುಣುಪು.

ಹತ್ತಿ, ಜಾರಿ-
ಕುದುರೆ ಏರಿ....
ಪರಾರಿ!

ತುದಿಯ ನುಡಿ
ಅರಿತಿದೆ ಬಾನಾಡಿ.

ಬುಡದಿ ಕೊರೆದ ಬಿಲ.

‘ಸಂವಾದ’ದೊಂದಿಗೆ ಸಂವಾದ

ಪ್ರತಿಕ್ರಿಯೆ

ಮೇಲುಜಾತಿಯ ದುರ್ಬಲ ವ್ಯಕ್ತಿ ತನ್ನೆಲ್ಲ ಹಿತಾಸಕ್ತಿಯನ್ನು ಬಿಟ್ಟುಕೊಟ್ಟು ತಾನು ಶೋಷಿತನಾಗಿ ಇತರರ ಉದ್ಧಾರ ಮಾಡ ಬೇಕೆಂಬುದು ಜೀವಿಯ ಸಹಜ ಸ್ವಭಾವಕ್ಕೆ ವಿರುದ್ಧವಾದವಾದ. ಇದಕ್ಕೆ ಉತ್ತರ ‘ಪೂರ್ವಜರು ಮಾಡಿದ ತಪ್ಪಿಗೆ ಬೆಲೆಕಟ್ಟ’ ಎನ್ನುವುದಲ್ಲ. ಅದರ ಅರ್ಥ ಮೇಲುಜಾತಿ ಜನರ ಪೂರ್ವಜರು ಕೆಳ ಜಾತಿಗಳಿಗೆ ಅನ್ಯಾಯ ಮಾಡಿಲ್ಲವೆಂದಲ್ಲ. ಒಂದೊಮ್ಮೆ ಪೂರ್ವಜರು ಮಾಡಿದ ಅನ್ಯಾಯಕ್ಕೆ ಬೆಲೆ ತೆರಬೇಕೆನ್ನುವುದು ಶತಸ್ಸಿದ್ಧವಾದರೆ ಕಾಶ್ಮೀರದಲ್ಲಿ ವಾಸಿಸುವ ಬಹಳ ಮಂದಿ ಮುಸಲ್ಮಾನರ ಪೂರ್ವಜರೆಲ್ಲ ಹಿಂದೂ ಮೇಲು ಜಾತಿಯವರು. ಅವರಿಗೂ ಈ ವಾದವನ್ನು ಅನ್ವಯಿಸಬೇಕಾಗುತ್ತದೆ. ಮತಾಂತರ ಆದ ತಕ್ಷಣ ಜವಾಬ್ದಾರಿ ಕಳೆದುಹೋಗುವುದಿಲ್ಲ.

○ಅರವಿಂದ ಚೊಕ್ಕಾಡಿ

ಈ ತಿಂಗಳು ‘ಸಂವಾದ’ಕ್ಕೆ ಬರೆಯುವುದು ಬೇಡವೆಂದು ಕುಳಿತಿದ್ದೆ. ಆದರೆ ನವೆಂಬರ್ ಸಂಚಿಕೆ ಓದಿದ ಬಳಿಕ ಬರೆಯದೆ ಇರಲು ಸಾಧ್ಯವಾಗಲಿಲ್ಲ. ‘ಬೇಡ’ ವೆಂದು ಕುಳಿತವನನ್ನೂ ಸಹ ‘ಸಂವಾದ’ಕ್ಕೆ ಎಳೆಯುವ ಶಕ್ತಿ ‘ಸಂವಾದ’ಕ್ಕಿದೆ. ಅಂತಲೇ ಬರೆಯುತ್ತಿದ್ದೇನೆ.

ಮೊದಲನೆಯದಾಗಿ, ನಾನು ಉಲ್ಲೇಖಿಸಬಯಸುವುದು ಇಂದೂಧರ ಹೊನ್ನಾಪುರ ಅವರು ಪ್ರಸ್ತಾಪಿಸಿರುವ ‘ವರ್ತಮಾನದ ಆಶಯವನ್ನು ಬಿಂಬಿಸಿ ಭವಿಷ್ಯ ರೂಪಿಸುವತ್ತ ಗಮನ ಹರಿಸುತ್ತಿಲ್ಲ’ ಎನ್ನುವ ಅಭಿಪ್ರಾಯವನ್ನು. ನಿಜಕ್ಕೂ ಇಂದೂಧರರರದು ಬಹು ದೊಡ್ಡ ಆಶಯ. ಆದರೆ ಇದಕ್ಕಿಂತ ಭಿನ್ನವಾಗಿ ಮೀಸಲಾತಿಯ ಕುರಿತು ಚರ್ಚೆ ಕೈಗೆತ್ತಿಕೊಂಡಿರುವ ಡಾ|| ಅಂಬಾರಾವ ಉಪಳಾಂವಕರ ಮತ್ತು ಪ್ರೊ. ಬಿ.ವಿ.ವೀರಭದ್ರಪ್ಪನವರ ಲೇಖನಗಳು ಗಮನ ಸೆಳೆಯುತ್ತವೆ. ಉಪಳಾಂವಕರ ಅವರು ಒಂದೆಡೆ ‘ಬ್ರಾಹ್ಮಣ ನಿರುದ್ಯೋಗಿಗಳ ಸಂಖ್ಯೆ ದೊಡ್ಡದಿದೆ’ ಎಂದರೆ ಇನ್ನೊಂದೆಡೆ ‘ಬ್ರಾಹ್ಮಣ ಯುವಕರು ನಿರುದ್ಯೋಗಿಗಳಾಗಿ ಅಲೆದಾಡಲಾರರು’ ಎನ್ನುತ್ತಾರೆ. ಗೊಂದಲ ಹುಟ್ಟಿಸುವ ವಿಚಾರ ಸರಣಿ ಇದು. ಹಾಗೆಯೇ ‘ರಾಜ್ಯಾಂಗವು ಆರ್ಥಿಕವಾಗಿ ಹಿಂದುಳಿದವರನ್ನು ಮುಂದಕ್ಕೆ ತರುವುದು ಸರಕಾರದ ಕರ್ತವ್ಯ ಎಂದು ಎಲ್ಲಿಯೂ ಹೇಳಿಲ್ಲ’ ಎನ್ನುತ್ತಾರೆ ಅವರು. ರಾಜ್ಯಾಂಗ ಹೇಳಿಲ್ಲ ಅಂದ ಮಾತ್ರಕ್ಕೆ ರಾಜ್ಯಾಂಗಕ್ಕೆ ತಿದ್ದುಪಡಿ ತರಬಾರದೆಂದೇನಿಲ್ಲ. ತನ್ನನ್ನು ತಾನು ತಿದ್ದುಪಡಿಗೊಳಿಸಿಕೊಳ್ಳುವುದಕ್ಕೆ ಬದ್ಧವಾಗಿರುವ ರಾಜ್ಯಾಂಗ ಆ ಅಧಿಕಾರವನ್ನು ಪರಮೋಚ್ಚ ಶಾಸನೀಯ ಸಂಸ್ಥೆಯಾದ ಸಂಸತ್ತಿಗೆ ಕೊಡ ಮಾಡಿದೆ. ವಾಜಪೇಯಿ ಪ್ರಸ್ತಾಪಿಸಿರುವುದು ‘ತಿದ್ದುಪಡಿ’ಯ ವಿಚಾರವಾಗಿದ್ದು ಅದನ್ನು ರಾಜ್ಯಾಂಗ ವಿರೋಧಿ ಎನ್ನಲು ಬರುವುದಿಲ್ಲ. ಆದರೆ ಇದರಿಂದ ರಾಜ್ಯಾಂಗದ ಮೂಲ ಆಶಯಕ್ಕೆ ಧಕ್ಕೆ ಬರುತ್ತದೆಂದು ಗಿಲ್ ಮಂಡಿಸಿದ ವಾದವನ್ನು ಪ್ರಸ್ತಾಪಿಸಿರುವ ಲೇಖಕರು ಅದು ಹೇಗೆ ಅಂತ ಹೇಳಿಲ್ಲ. ಬಹುಶಃ ರಾಜ್ಯಾಂಗದ ಪೀಠಿಕಾ ಬರಹ ಮತ್ತು ಆರ್ಟಿಕಲ್ ೧೪ನ್ನು ಉಲ್ಲೇಖಿಸಿ ಹೇಳುವುದಾದರೆ ಇದರಿಂದ ರಾಜ್ಯಾಂಗದ ಮೂಲ ಆಶಯಕ್ಕೆ ಯಾವ ತೊಂದರೆಯೂ ಇಲ್ಲ. ಅಂದರೆ ವಾಜಪೇಯಿ ಸರಕಾರ ಪ್ರಸ್ತಾಪಿಸಿರುವ ಮೇಲುಜಾತಿ ಮೀಸಲಾತಿಯನ್ನು ತಾತ್ವಿಕವಾಗಿ ವಿರೋಧಿಸಲು ಬರುವುದಿಲ್ಲ. ನಿಜಕ್ಕಾದರೆ ಬುದ್ಧದೇವ ಭಟ್ಟಾಚಾರ್ಯರ ಸರ್ಕಾರ ಮಾಡಬೇಕಾದ ಕೆಲಸವನ್ನು ವಾಜಪೇಯಿ ಸರ್ಕಾರ ಮಾಡತೊಡಗಿದೆ.

ಆದರೆ ಮೇಲುಜಾತಿಗೆ ಮೀಸಲಾತಿ ಎನ್ನುವ ವಾಜಪೇಯಿ ಪ್ರಸ್ತಾಪ ದುರದ್ದೇಶದಿಂದ ಕೂಡಿದ್ದು ಎನ್ನುವುದೂ ಸಹ ಅಷ್ಟೇ ಸತ್ಯ. ಬಹುರಾಷ್ಟ್ರೀಯ ಕಂಪೆನಿಗಳಿಗೆ ಈ ದೇಶವನ್ನು ಹರಾಜು ಹಾಕಿದ ಬಳಿಕ ವಾಜಪೇಯಿ ಪ್ರಸ್ತಾಪಿಸಿರುವ ಮೀಸಲಾತಿ ಶೋಷಿತ ಸಮುದಾಯಗಳನ್ನು ಒಡೆಯುವ ಕೆಲಸ ಮಾಡುವುದಲ್ಲದೆ ತನ್ನ ರಾಜಕೀಯ ಹಿತಾಸಕ್ತಿಯನ್ನು ಸಾಧಿಸಿಕೊಳ್ಳುವ ಉದ್ದೇಶ ಹೊಂದಿದೆ. ಜಾಗತೀಕರಣದ ಬಳಿಕ ಸರ್ಕಾರದ ಉದ್ಯೋಗ ಸೃಷ್ಟಿಯ ಪ್ರಮಾಣ ಶೇ. ೪೦ರಷ್ಟು ಕುಸಿದಿದೆ. ಅಂದ ಮೇಲೆ ಈ ಮೀಸಲಾತಿ ಅರ್ಥ ಕಳೆದುಕೊಳ್ಳುತ್ತದೆ. ಯಾಕೆಂದರೆ ಉದ್ಯೋಗ ಸೃಷ್ಟಿ ಹಿಂದಿನಂತೆಯೇ ಇದ್ದಿದ್ದರೆ ಮೀಸಲಾತಿ ಇಲ್ಲದೆಯೂ ಸಹ ಮೇಲುಜಾತಿಯ ದುರ್ಬಲ ವರ್ಗವೂ ಸೇರಿದಂತೆ ಎಲ್ಲ ಜಾತಿಗಳವರಿಗೂ ಉದ್ಯೋಗ ಪಡೆಯುವ ಸಾಧ್ಯತೆ ಅಧಿಕವಿತ್ತು. Of course ಬಹುರಾಷ್ಟ್ರೀಯ ಕಂಪೆನಿಗಳು ಉದ್ಯೋಗ ಕೊಡುತ್ತಿವೆ. ಯಾರಿಗೆ? ಅದು ಬಯಸುವ ತಾಂತ್ರಿಕ ಕೌಶಲ್ಯ ಉಳ್ಳವರಿಗೆ. ಆ ಕೌಶಲ್ಯವನ್ನು ಪಡೆಯಬಲ್ಲವರು ಶ್ರೀಮಂತ ವರ್ಗ. ಬಹುಮಟ್ಟಿಗೆ ಮೇಲುಜಾತಿಗಳಲ್ಲಿ ಶ್ರೀಮಂತರು ಅಧಿಕವಿರುವಾಗ ಖಾಸಗಿ ಉದ್ಯೋಗಗಳು ಅವರ ಪಾಲಾಗುತ್ತವೆ. ಆಗ ಉಳಿಯುವ ದುರ್ಬಲರಲ್ಲಿ ಮೇಲುಜಾತಿಯವರು ಹೆಚ್ಚು ಸಶಕ್ತರಾಗಿರುತ್ತಾರೆ. ಜಾತಿ ಎನ್ನುವ ಸೋಷಿಯಲ್ ರಿಯಾಲಿಟಿ ಅವರಿಗೆ ಕೊಟ್ಟಿರುವ ಸೌಲಭ್ಯ ಅದು. ಹಿಂದುಳಿದ ಜಾತಿಗಳ ದುರ್ಬಲರು ಹೆಚ್ಚು ತೊಂದರೆಗೊಳಗಾಗುತ್ತಾರೆ ಎನ್ನುವ ತಾಂತ್ರಿಕ ಕಾರಣಕ್ಕಾಗಿ ಮೇಲು ಜಾತಿಯ ಮೀಸಲಾತಿಯನ್ನು ವಿರೋಧಿಸಬೇಕೇ ವಿನಾ ಸಮಾನತೆಯನ್ನು ಎತ್ತಿ ಹಿಡಿಯುವ ತಾತ್ವಿಕ ಕಾರಣಕ್ಕಾಗಿ ಅಲ್ಲ.

ಇಲ್ಲಿ ಜಾತಿ ಮತ್ತು ಆರ್ಥಿಕತೆಗಳೆರಡೂ ಮಾನದಂಡಗಳಾಗಬೇಕಾಗುತ್ತದೆ. ಯಾಕೆಂದರೆ ಇವತ್ತು ಮೀಸಲಾತಿ ಬೇಕಿರುವುದು ನಮ್ಮ ಊರಿನ ಅಡಿಕೆ ತೆಗೆಯುವ ಪಕೀರನ ಮಕ್ಕಳಿಗೆ ಹೊರತು ಕೆ.ಆರ್.ನಾರಾಯಣನ್ ಅವರ ಮಕ್ಕಳಿಗಲ್ಲ. ಕೇವಲ ಜಾತಿ ಮಾನದಂಡವಾದಾಗ ಹಿಂದುಳಿದ ಜಾತಿಯ ಶ್ರೀಮಂತ ವರ್ಗ ಅದೇ ಜಾತಿಯ ದುರ್ಬಲ ವರ್ಗಕ್ಕೆ ಕೊಡುವ ಸ್ಪರ್ಧೆಯಲ್ಲಿ ದುರ್ಬಲರು ಸೋಲಬೇಕಾಗುತ್ತದೆ. ಆದರೆ ಒಟ್ಟಾಗಿ ಜಾತಿಯನ್ನು ಆಧರಿಸಿ ಮೀಸಲಾತಿ ಕೊಟ್ಟಾಗ ಮೇಲು ವರ್ಗಕ್ಕೆ ಸೇರಿದ ಕೆಳಜಾತಿಯ ಜನರು ಖಾಸಗಿ ಉದ್ಯೋಗಾವಕಾಶ ಸೃಷ್ಟಿಸಲು ತನ್ನ ಜಾತಿಯ ಕೆಳವರ್ಗಕ್ಕೆ ಉದ್ಯೋಗಾವಕಾಶ ಕೊಡಲು ಸಾಧ್ಯವಿದೆ. ಭಾರತದಲ್ಲಿ ಅದು ಆಗುತ್ತಿಲ್ಲ. ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರಡಾಲ್ ಹೇಳುವಂತೆ ‘ಭಾರತದ ಬುದ್ಧಿಜೀವಿಗಳು ಮೇಲು ವರ್ಗದಲ್ಲಿ ಗುರುತಿಸಿಕೊಳ್ಳ ಬಯಸುತ್ತಾರೆಯೇ ಹೊರತು ಕೆಳವರ್ಗದೊಂದಿಗಲ್ಲ’. ಕೆಳಜಾತಿಯಿಂದ ಬಂದು ಮೇಲುವರ್ಗಕ್ಕೆ ಸೇರ್ಪಡೆಯಾದ ಜನರೂ ಮಾಡುವುದು ಇದನ್ನೇ. ಮಾತಿನಲ್ಲಿ ಮಾತ್ರ ತಮ್ಮ ಜಾತಿಯ ಕೆಳವರ್ಗದ ಪರ ಇರುತ್ತಾರೆ ಅಷ್ಟೇ. ಇಂಥಲ್ಲಿ ಜಾತಿ ಮತ್ತು ಆರ್ಥಿಕತೆಗಳೆರಡರ ಮಾನದಂಡದಲ್ಲಿ ಮೀಸಲಾತಿ ಅಗತ್ಯವಿದೆ. ಮೇಲು ಜಾತಿಯ ದುರ್ಬಲ ವರ್ಗಕ್ಕಿರುವ ಸೋಷಿಯಲ್ ರಿಯಾಲಿಟಿ ಮುಖ್ಯವಾಗಿ ಮೀಸಲಾತಿಯನ್ನು ಅರ್ಥಹೀನಗೊಳಿಸುವ ಜಾಗತೀಕರಣವನ್ನು ಪ್ರತಿಭಟಿಸುವುದು ನಮ್ಮ ಮೊದಲ ಆದ್ಯತೆಯಾದಾಗ ಇಂದೂಧರರರ ಆಶಯಕ್ಕೆ ಬೆಲೆ ಬರುತ್ತದೆ.

ಆದರೆ ಜಾಗತೀಕರಣದ ವಿರೋಧಿ ಗುಂಪನ್ನು ಒಡೆಯುವಲ್ಲಿ ಕೂಡ ವಾಜಪೇಯಿ ಪ್ರಸ್ತಾಪ ಪ್ರಧಾನ ಪಾತ್ರ ವಹಿಸುತ್ತಿದೆ. ಹೇಗೆಂದರೆ ಬಹುಮಂದಿ ಪ್ರಗತಿಪರರು ಈ ಪ್ರಸ್ತಾಪವನ್ನು ತಾತ್ವಿಕವಾಗಿಯೇ ವಿರೋಧಿಸುತ್ತಿದ್ದಾರೆ. ತತ್ಪರಿಣಾಮ ಮೇಲು ಜಾತಿಯಲ್ಲಿನ ಶೋಷಿತ ಗುಂಪು ಇತರರಿಂದ ದೂರವಾಗುತ್ತಾ ಹೋಗುತ್ತದೆ. ಬೌದ್ಧಿಕ ವರ್ಗದ ಪ್ರಶ್ನೆ ತೆಗೆದುಕೊಳ್ಳೋಣ. ದುರ್ಬಲ ವರ್ಗ ದಿಂದ ಬಂದ ಮೇಲುಜಾತಿಯ ವ್ಯಕ್ತಿಯೊಬ್ಬ ಪ್ರಗತಿಪರರ ದಾಳಿಗೆ ಹೇಗೆ ಪ್ರತಿಕ್ರಿಯಿಸುತ್ತಾನೆ? ವ್ಯಕ್ತಪಡಿಸದೆ ಹೋದರೂ ಒಳಗೊಳಗೇ ಆತ ವಾಜಪೇಯಿ ಪರ ಆಗಿಬಿಡಲು ಸಾಧ್ಯವಿದೆ. ಯಾಕೆಂದರೆ ಪ್ರತಿಯೊಂದು ಜೀವಿಯಲ್ಲೂ ಸ್ವಹಿತಾಕಾಂಕ್ಷೆ ಇದೆ. ಒಂದು ನಾಯಿ ಕೂಡ ತನಗೆ ಸಿಕ್ಕ ತಿಂಡಿಯನ್ನು ತನಗೆ ಎಂದು ತೆಗೆದಿರಿಸಿಕೊಳ್ಳುತ್ತದೆ. ಹಾಗಿರುವಾಗ ಮೇಲುಜಾತಿಯ ದುರ್ಬಲ ವ್ಯಕ್ತಿ ತನ್ನೆಲ್ಲ ಹಿತಾಸಕ್ತಿಯನ್ನು ಬಿಟ್ಟುಕೊಟ್ಟು ತಾನು ಶೋಷಿತನಾಗಿ ಇತರರ ಉದ್ಧಾರ ಮಾಡಬೇಕೆಂಬುದು ಜೀವಿಯ ಸಹಜ ಸ್ವಭಾವಕ್ಕೆ ವಿರುದ್ಧವಾದ

ವಾದ. ಇದಕ್ಕೆ ಉತ್ತರ 'ಪೂರ್ವಜರು ಮಾಡಿದ ತಪ್ಪಿಗೆ ಬೆಲೆಕಟ್ಟಿ' ಎನ್ನುವುದಲ್ಲ. ಅದ್ದರ ಅರ್ಥ ಮೇಲುಜಾತಿ ಜನರ ಪೂರ್ವಜರು ಕೆಳ ಜಾತಿಗಳಿಗೆ ಅನ್ಯಾಯ ಮಾಡಿಲ್ಲವೆಂದಲ್ಲ. ಒಂದೊಮ್ಮೆ ಪೂರ್ವಜರು ಮಾಡಿದ ಅನ್ಯಾಯಕ್ಕೆ ಬೆಲೆ ತೆರಬೇಕೆನ್ನುವುದು ಶತಸ್ಸಿದ್ಧವಾದರೆ ಕಾಶ್ಮೀರದಲ್ಲಿ ವಾಸಿಸುವ ಬಹಳ ಮಂದಿ ಮುಸಲ್ಮಾನರ ಪೂರ್ವಜರೆಲ್ಲ ಹಿಂದೂ ಮೇಲು ಜಾತಿಯವರು. ಇವರಿಗೂ ಈ ವಾದವನ್ನು ಅನ್ವಯಿಸಬೇಕಾಗುತ್ತದೆ. ಮತಾಂತರ ಆದ ತಕ್ಷಣ ಜವಾಬ್ದಾರಿ ಕಳೆದು ಹೋಗುವುದಿಲ್ಲ. ಆದರೆ ಒಂದು ಕಡೆಯಿಂದ ಶುದ್ಧರಕ್ತ ಎನ್ನುವುದು ಮಿಥ್ಯೆ ಎನ್ನುತ್ತಲೇ ಇನ್ನೊಂದೆಡೆ ಯಿಂದ ಜಾತಿಯನ್ನಾಧರಿಸಿ ವ್ಯಾಖ್ಯಾನಿಸುತ್ತೇವೆ! ಇಂಥಲ್ಲಿ ಕೃಷ್ಣಮಾಚಾರಿಯಂಥವರು ಬಿಜೆಪಿ ಪರ ವಾದ ಮಂಡಿಸಿ ಬಿಡುತ್ತಾರೆ. ಎಸ್.ಎಲ್.ಭೈರಪ್ಪರಂಥವರು ಸಂಘ ಪರಿವಾರದ ಕಾರ್ಯಕರ್ತರಂತಾಗಿ ಬಿಡುತ್ತಾರೆ.

ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಸಂಗತಿ ಇದೆ. ಜಾತಿಯನ್ನು ಆಧರಿಸಿ ಮೇಲುಜಾತಿಯ ಜನರನ್ನು ಅಲ್ಲಗಳೆಯುತ್ತಾ ಹೋಗುವವರ ಮನೋಧರ್ಮ ಏನಿರುತ್ತದೆ? ಮೊದಲನೆಯದು, ಎಲ್ಲರಂತೆ ತಾನೂ ಆಗುವ ಮೂಲಕ ಪ್ರಗತಿಪರ ಎನಿಸಿಕೊಳ್ಳುವ ಸಾಧಾರಣ ಮನೋಧರ್ಮ. ಎರಡನೆಯದು, ಯಾರ್‍ಯಾರಿಗೋ ಬೈದು ತಾನು ಹೀರೋ ಆಗುವ ಕ್ರೇಜ್. ಮೂರನೆಯದು, ತನ್ನವರಿಗಾಗಿ ಏನಾದರೂ ಮಾಡಬೇಕೆಂಬ ತುಡಿತವಿದ್ದೂ ಏನೂ ಮಾಡಲಾರದ ಅಸಹಾಯಕತೆಯಲ್ಲಿ ಕಾಣಿಸುವ ಆಕ್ರೋಶ. ನಾಲ್ಕನೆಯದಕ್ಕೆ ಖಚಿತ ಉದ್ದೇಶವಿದೆ. ಮೇಲುಜಾತಿಯ ಮೇಲೆ ಹರಿಹಾಯುವ ಈ ಮಂದಿಗೆ ಮೇಲುಜಾತಿಯವರೆಲ್ಲ ದುಷ್ಟರಲ್ಲ ಎನ್ನುವುದು ಗೊತ್ತಿದೆ. ಆದರೆ ಬಲವಾದ ಹೊಡೆತ ಕೊಡದೆ ಮೇಲುಜಾತಿಯವರ ದೀನ ಮನೋಧರ್ಮವನ್ನು ಬದಲಾಯಿಸಲಾಗದೆಂದೂ ಗೊತ್ತಿರುತ್ತದೆ. ಅದಕ್ಕಾಗಿ ತೀವ್ರತರ ದಾಳಿ ಇಡುತ್ತಾರೆ. ಕೊನೆಯ ವರ್ಗ ಬಾಬುಜಗಜೀವನ್‌ರಾಂರಂಥವರು. ಎಲ್ಲವನ್ನೂ ಸಹನೀಯವಾಗಿ ನೋಡುವಂಥವರು. ಆದರೆ ಅವರ ಸಹನೆ ಎಷ್ಟು ಮಂದಿಗೆ ಅರ್ಥವಾದೀತು? ಅಂಥಲ್ಲಿ ಕೆಳಜಾತಿಯ ಜನರು ಬೌದ್ಧಿಕ ದಾಳಿ ಇಡದೆ ಅನ್ಯಮಾರ್ಗವಿಲ್ಲ. ಪ್ರತಿಯಾಗಿ ತಾವೂ ಪುರೋಹಿತಶಾಹಿವಾದ ಮುಂದಿಡುವುದಲ್ಲ. ಹಾಗಂತ ಸಮಗ್ರ ಹಿತಾಸಕ್ತಿಗೆ ಭಂಗವಾಗುವಂಥ ಮೊಗಳ್ಳಿ ಗಣೇಶ್‌ರು ಹೇಳುವ ರೀತಿ ಜಾಗತೀಕರಣದಿಂದ ದಲಿತರಿಗೆ ಒಳಿತಾಗುತ್ತದೆ ಎನ್ನುವುದನ್ನು ಸಹಿಸಬೇಕಾಗಿಲ್ಲ. ಯಾಕೆಂದರೆ ಅವರು ದೇಸೀ ಬ್ರಾಹ್ಮಣರನ್ನು ಖಂಡಿಸಿದರೆ ಸಹಿಸಿಕೊಳ್ಳಬೇಕಾದ ಅಗತ್ಯವಿರುವ ಹಾಗೆಯೇ ಅಂತರರಾಷ್ಟ್ರೀಯ ಬ್ರಾಹ್ಮಣರನ್ನು ಪುಷ್ಠೀಕರಿಸಿದಾಗ ಪ್ರತಿಭಟಿಸುವ ಅಗತ್ಯವೂ ಇದೆ. ಇದಕ್ಕೆ ಪ್ರತಿಯಾಗಿ ಒಬ್ಬ ವ್ಯಕ್ತಿ ಮೇಲುಜಾತಿಯವನು ಎನ್ನುವ ಕಾರಣಕ್ಕಾಗಿಯೇ ಆತನಿಗೆ ಅನ್ಯಾಯವಾಗುತ್ತಿದ್ದೆಯಾದರೆ ಅದನ್ನು ಪ್ರತಿಭಟಿಸುವುದು ಕೂಡ ಬಂಡಾಯವೇ ಎನ್ನುವುದನ್ನು ಕೆಳಜಾತಿಗಳಿಂದ ಬಂದ ಮಂದಿ ಅರ್ಥಮಾಡಿಕೊಳ್ಳಬೇಕಿದೆ. ಈ ನೆಲೆಯಲ್ಲಿ ವಾಜಪೇಯಿ ಸರಕಾರ ಹೂಡಿರುವ ತಂತ್ರಕ್ಕೆ ಪ್ರತಿ

ಜಾಗತೀಕರಣದ ಬಳಿಕ ಸರ್ಕಾರದ ಉದ್ಯೋಗ ಸೃಷ್ಟಿಯ ಪ್ರಮಾಣ ಶೇ. ೪೦ರಷ್ಟು ಕುಸಿದಿದೆ. ಅಂದ ಮೇಲೆ ಈ ಮೀಸಲಾತಿ ಅರ್ಥ ಕಳೆದುಕೊಳ್ಳುತ್ತದೆ. ಯಾಕೆಂದರೆ ಉದ್ಯೋಗ ಸೃಷ್ಟಿ ಹಿಂದಿನಂತೆಯೇ ಇದ್ದಿದ್ದರೆ ಮೀಸಲಾತಿ ಇಲ್ಲದೆಯೂ ಸಹ ಮೇಲುಜಾತಿಯ ದುರ್ಬಲ ವರ್ಗವೂ ಸೇರಿದಂತೆ ಎಲ್ಲ ಜಾತಿಗಳವರಿಗೂ ಉದ್ಯೋಗ ಪಡೆಯುವ ಸಾಧ್ಯತೆ ಅಧಿಕವಿತ್ತು. ಬಹುಮಟ್ಟಿಗೆ ಮೇಲುಜಾತಿಗಳಲ್ಲಿ ಶ್ರೀಮಂತರು ಅಧಿಕವಿರುವುದರಿಂದ ಖಾಸಗಿ ಉದ್ಯೋಗಗಳು ಅವರ ಪಾಲಾಗುತ್ತವೆ. ಆಗ ಉಳಿಯುವ ದುರ್ಬಲರಲ್ಲಿ ಮೇಲುಜಾತಿ ಯವರು ಹೆಚ್ಚು ಸಶಕ್ತರಾಗಿರುತ್ತಾರೆ.

ತಂತ್ರ ಮಾಡಬೇಕಾದ ಅಗತ್ಯವಿದೆ. ಎಷ್ಟೇ ಭಿನ್ನಾಭಿಪ್ರಾಯವಿದ್ದಾಗ್ಯೂ ಒಂದು ಖಚಿತ ಉದ್ದೇಶಕ್ಕಾಗಿ ಜಾತೀಯ ನೆಲೆಗಳನ್ನು ಬದಿಗಿಟ್ಟು ಸಮಾನ ಮನಸ್ಕರಾಗಬೇಕಿದೆ.

ಪ್ರೊ|| ಬಿ.ವಿ.ವೀರಭದ್ರಪ್ಪನವರು ವೈದಿಕ ಪರಂಪರೆಯನ್ನು ತೆಗೆದುಕೊಂಡಿರುವುದು ಅಸಹನೀಯ ವ್ಯವಸ್ಥೆಗೆ ಪ್ರತಿಭಟನೆಯ ಮಾಧ್ಯಮವಾಗಿ. ಆದರ ತುರ್ತು ಅಗತ್ಯವಿದೆ. ಆದಾಗ್ಯೂ ಅವರ ಅಭಿಮಾನಿಯಾಗಿದ್ದರೂ ಸಹ ಅವರ ಲೇಖನದ ಕುರಿತ ನನ್ನ ದೃಷ್ಟಿಕೋನವನ್ನು ಹೇಳಬೇಕಿದೆ. ಒಂದು ಕಡೆ ಅವರು ಸಮಾಜವಾದ, ಮಾನವತೆ, ಪ್ರಜಾಪ್ರಭುತ್ವ ಎಲ್ಲವನ್ನೂ ಧರ್ಮ ಎನ್ನುತ್ತಾರೆ. ಮತ್ತೊಂದೆಡೆ 'ಸೆಕ್ಯುಲರ್' ಎಂದರೆ ಧರ್ಮಾತೀತ ಎನ್ನುತ್ತಾರೆ. ಹಾಗಿದ್ದರೆ ರಾಜ್ಯಾಂಗ ಮಾನವತೆ, ಪ್ರಜಾಪ್ರಭುತ್ವ, ಸಮಾಜವಾದ ಎಲ್ಲಕ್ಕೂ ಅತೀತವಾದುದು ಎಂದು ಭಾವಿಸಬೇಕಾಗುತ್ತದೆ. ಆದರೆ ವೀರಭದ್ರಪ್ಪನವರ ಆಶಯ ಅದಲ್ಲ. ಅವರ ಆಶಯ ಸಮಾನತೆ ಎಂಬುದು ನನಗರ್ಥವಾಗುತ್ತದೆ. ಪ್ರಾಯಶಃ ವೀರಭದ್ರಪ್ಪನವರು 'ಸೆಕ್ಯುಲರ್' ಶಬ್ದದ ಅರ್ಥಗ್ರಹಿಕೆಯಲ್ಲಿ ಕೊಂಚ ಎಡವಿದ್ದಾರೇನೋ ಅನ್ನಿಸುತ್ತದೆ. ಅವರ ಈ ವ್ಯಾಖ್ಯಾನಕ್ಕೆ ಕಾರಣ ಅದೇ. ಸೆಕ್ಯುಲರ್ ಎನ್ನುವ ಪದದ ಮೂಲ ರೂಪ ಮಧ್ಯಯುಗೀನ ಲ್ಯಾಟಿನ್ ಭಾಷೆಯ 'ಸೆಕ್ಯುಲರ್' ಎಂಬ ಪದ. 'ಸೆಕ್ಯುಲರ್' ಎಂಬ ಪದ 'ಈ ಜಗತ್ತು' ಎನ್ನುವ ಅರ್ಥಮಾಡಿಕೊಡುತ್ತದೆ. ಅರ್ಥಾತ್ ರಾಜ್ಯಾಂಗವು ಐಹಿಕ ಪ್ರಧಾನ ರಾಷ್ಟ್ರವಾಗಿ ಭಾರತವನ್ನು ಘೋಷಿಸಿದೆ. ಲೌಕಿಕ ಜಗತ್ತನ್ನು ತೃಪ್ತಿಕರವಾಗಿ ರೂಪಿಸಲು ಸಾಧ್ಯವಾಗುವ ಎಲ್ಲ ಅಂಶಗಳನ್ನು ರಾಜ್ಯಾಂಗ ಒಪ್ಪಿಕೊಂಡಿದೆ ಎಂಬ ನೆಲೆಯಲ್ಲಿ 'ಸೆಕ್ಯುಲರ್' ಪದವನ್ನು ಸ್ವೀಕರಿಸಿದಾಗ ಪ್ರಚಲಿತ ಧರ್ಮ, ಸಂಪ್ರದಾಯ, ಪ್ರಜಾಪ್ರಭುತ್ವಗಳೆಲ್ಲವನ್ನೂ ಭಿನ್ನ ರೀತಿಯಲ್ಲಿ ಅರ್ಥೈಸಲು, ಅವೆಲ್ಲವನ್ನೂ ಸಹನೀಯ ಬದುಕಿಗೆ ಪೂರಕವಾಗಿ ಹೊಂದಿಸಲು ಸಾಧ್ಯವಿದೆ. ಆದರಿಂದ ಸಂಪ್ರದಾಯ ನಿಷ್ಠರನ್ನು ಕೂಡ ತಲುಪಲು ನಮಗೆ ಸಾಧ್ಯವಾದೀತೇನೋ? ಅವೆಲ್ಲವೂ ಇಂದೂಧರರ ಆಶಯದೆಡೆಗೆ ನಮ್ಮನ್ನು ಒಯ್ಯಬಲ್ಲವು.

ವೀರಭದ್ರಪ್ಪನವರ ಹಾಗೆಯೇ ಸಹನೀಯ ಬದುಕಿನ ಹುಡುಕಾಟಕ್ಕೆ ವೈದಿಕ ಪರಂಪರೆಯನ್ನು ಮಾಧ್ಯಮವಾಗಿ ತೆಗೆದುಕೊಂಡಿರುವ ಶ್ರೀಶ ಉಡುಪ ಅವರು ವೈದಿಕ ಪರಂಪರೆಯ ಮೇಲೆ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಇಂದೂಧರರ ಆಶಯವನ್ನು ಪ್ರಧಾನವಾಗಿ ಇರಿಸಿಕೊಂಡು ಹೇಳುವುದಾದರೆ, ಶ್ರೀಶರವರಿಗೆ ಕಟ್ಟಕಡೆಗೆ ಹೇಳಿರುವ ಮುರಳೀ ಮನೋಹರ ಜೋಷಿ ಪ್ರಸಂಗವನ್ನು ಮುಖ್ಯ ಸಂಗತಿಯಾಗಿ ತೆಗೆದುಕೊಂಡು ಅದಕ್ಕೆ ಪೂರಕವಾಗಿ ವೈದಿಕ ಪರಂಪರೆಯನ್ನು ಹೊಂದಿಸಿಕೊಳ್ಳಬಹುದಿತ್ತೇನೋ? ಅಂದರೆ ಲೇಖಕನ ಸ್ವಾತಂತ್ರ್ಯವನ್ನು ಅಲ್ಲಗಳೆಯುವ ಅಭಿಪ್ರಾಯವಲ್ಲ ಇದು. ಇಂದೂಧರರು ಹೇಳುವಂತೆ ಸಮಕಾಲೀನ ಸಂಗತಿಗೆ ಸ್ಪಂದಿಸುವುದೇ ಮುಖ್ಯ ಎನ್ನುವ ಅಭಿಪ್ರಾಯಕ್ಕೆ ನನ್ನ ಪೂರ್ಣ ಸಹಮತವಿರುವುದರಿಂದ ಈ ಅಭಿಪ್ರಾಯ ಹೇಳಿದ್ದೇನೆ ಅಷ್ಟೇ. ಜೊತೆಗೆ ಶ್ರೀಶ ಅವರು Tone down ಮಾಡಲು ಸಾಧ್ಯವಿತ್ತು. ನಮ್ಮ ಅಭಿಪ್ರಾಯವನ್ನು ಬಹುಮಂದಿಗೆ ತಲುಪಿಸುವ ನಿಟ್ಟಿನಲ್ಲಿ Tone down ಮಾಡುವುದು ಕೂಡ ಅಗತ್ಯವಾಗುತ್ತದೆ.

ಏನಿದ್ದರೂ ತನ್ನ ಉದ್ದೇಶ ಸಾಧನೆಯಲ್ಲಿ ಮಹತ್ತರವಾದ ಒಂದು ವರ್ಷವನ್ನು ಯಶಸ್ವಿಯಾಗಿ ಪೂರೈಸಿರುವ 'ಸಂವಾದ' ಮುಂದಿನ ದಿನಗಳಲ್ಲಿ ತನ್ನೆಲ್ಲ ಸಾಧ್ಯತೆಗಳನ್ನು ಆಗಸದೆತ್ತರಕ್ಕೆ ಹರಡಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಇಂದೂಧರ ಹೊನ್ನಾಪುರ ಮತ್ತವರ ಬಳಗದ ಪ್ರಾಮಾಣಿಕ ಬದ್ಧತೆಗಾಗಿ ಅವರನ್ನು ಆತ್ಮೀಯವಾಗಿ ಅಭಿನಂದಿಸುತ್ತೇನೆ.

ಆಶಯ

ಬುದ್ಧಿಮತ್ತೆಯ ಏಕಸ್ವಾಮ್ಯ ಭಾರತದ ಅಧೋಗತಿಗೆ ಕಾರಣ



ಐದು ದಶಕಗಳ ಗಣತಂತ್ರವ್ಯವಸ್ಥೆಯ ಇತಿಹಾಸ ಹೊಂದಿರುವ ಭಾರತದ ಅತ್ಯುನ್ನತ ಪದವಿಯಾದ 'ರಾಷ್ಟ್ರಪತಿ' ಹುದ್ದೆಯಲ್ಲಿ, ತಮ್ಮದೇ ಆದ ವಿಶೇಷ ವ್ಯಕ್ತಿತ್ವ ಮೆರೆದ ಮೇರು ವ್ಯಕ್ತಿ ಡಾ|| ಕೆ.ಆರ್.ನಾರಾಯಣನ್. ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ, ರಾಯಭಾರಿಗಳಾಗಿ, ಅಂಕಣಕಾರರಾಗಿ, ನಿಷ್ಠುರ ಆಡಳಿತಗಾರರಾಗಿ ಅಪಾರ ಅನುಭವ ಪಡೆದಿದ್ದ ನಿಷ್ಕಳಂಕ ವ್ಯಕ್ತಿತ್ವದ ಮೇಧಾವಿ ಡಾ||ನಾರಾಯಣನ್‌ರವರು ೫೨ನೇ ಗಣರಾಜ್ಯದಿನದ ಮುನ್ನಾ ದಿನ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣ ಇಲ್ಲಿದೆ.

ಕೆ.ಆರ್. ನಾರಾಯಣನ್

ನನ್ನ ಸಹಪ್ರಜೆಗಳೇ,

ನಮ್ಮ ಗಣತಂತ್ರ ರಾಷ್ಟ್ರದ ೫೨ನೇ ವಾರ್ಷಿಕ ದಿನಾಚರಣೆಯ ಮುನ್ನಾದಿನ ಭಾರತದ ಮಹನೀಯರು, ಮಹಿಳೆಯರು ಮತ್ತು ಮಕ್ಕಳಿಗೆ ಅತಿ ಸಂತೋಷದಿಂದ ನನ್ನ ಶುಭಾಶಯಗಳನ್ನು ಅರ್ಪಿಸುತ್ತಿದ್ದೇನೆ. ದೇಶದ ಸಂಪತ್ತನ್ನು ಉತ್ಪಾದಿಸುವ ಕೃಷಿ ಕ್ಷೇತ್ರಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ, ದೇಶದ ಯುವಜನರಿಗೆ, ಶಿಕ್ಷಣ ನೀಡುವ ಶಾಲಾ-ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಮತ್ತು ರಾಷ್ಟ್ರದ ಆಧಾರಭೂತ ಬುದ್ಧಿ ಸಂಪತ್ತನ್ನು ರೂಪಿಸುವ ವೈಜ್ಞಾನಿಕ ಪ್ರಯೋಗಾಲಯಗಳಲ್ಲಿ ಹಾಗೂ ತಂತ್ರಜ್ಞಾನ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ನನ್ನ ವಿಶೇಷ ಶುಭಕಾಮನೆಗಳನ್ನು ತಿಳಿಸುತ್ತಿದ್ದೇನೆ. ತಾಯ್ನಾಡಿನ ಸ್ವಾತಂತ್ರ್ಯ, ಏಕತೆ ಮತ್ತು ಸಮಗ್ರತೆಯನ್ನು ರಕ್ಷಿಸಲು ಅತ್ಯುನ್ನತ ತ್ಯಾಗ ಮಾಡುವುದಕ್ಕೂ ಸರ್ವದಾ ಸಿದ್ಧರಾಗಿ ನಮ್ಮ ಸುವಿಶಾಲ ದೇಶದ ದೂರದೂರದ ಹಾಗೂ ಅತಿಕಷ್ಟಕರವಾದ ಗಡಿಗಳಲ್ಲಿ ಕಾವಲು ಕಾಯುತ್ತಿರುವ ನಮ್ಮ ಶಸ್ತ್ರ ಬಲಗಳ ಮತ್ತು ಅರೆಸೇನಾ ಪಡೆಗಳ ಧೀರ ಯೋಧರಿಗೆ ನನ್ನ ವಿಶೇಷ ಹಾರ್ಯೆಕೆಗಳು.

ಭಾರತದ ಪ್ರಜಾಪ್ರಭುತ್ವದ ದೈವಸ್ಥಾನವೂ, ನಮ್ಮ ಪರಮಾಧಿಕಾರದ ಪ್ರತೀಕವೂ ಆದ ಸಂಸತ್ ಭವನವನ್ನು ಧ್ವಂಸ ಮಾಡ ಬಯಸಿದ್ದ ಭಯೋತ್ಪಾದಕರ ದಾಳಿಯನ್ನು ತಮ್ಮ ಜಾಗರೂಕತೆ, ಧೈರ್ಯ ಮತ್ತು ಸಕಾಲಿಕ ಕಾರ್ಯದಿಂದಾಗಿ ವಿರೋಧಿಸಿದ ಸಂಸತ್ತಿನ ಭದ್ರತಾಪಡೆ ಸಿಬ್ಬಂದಿಯನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸಿ, ಅವರಿಗೆ ಗೌರವಾಂಜಲಿ ಸಲ್ಲಿಸೋಣ. ಭಾರತವು ಸ್ವತಂತ್ರ ಸಾರ್ವಭೌಮ, ಗಣತಂತ್ರ ರಾಷ್ಟ್ರವಾಗುವ ನಿರ್ಧಾರದ ಮತ್ತು ನಮಗಾಗಿ ನಾವು ಹೊಂದಲು ಉದ್ದೇಶಿಸಿದ ಸಂವಿಧಾನದ ಪ್ರಜಾಸತ್ತಾತ್ಮಕ, ಜಾತ್ಯತೀತ ಹಾಗೂ ಸಾಮಾಜಿಕ ಮೂಲ ಲಕ್ಷಣಗಳ ವಿವರಣೆಯನ್ನು ಒಳಗೊಂಡ ಉದ್ದೇಶಗಳ ನಿರ್ಣಯವನ್ನು ಪಂಡಿತ್ ಜವಹರಲಾಲ್ ನೆಹರೂ ಅವರು ೧೯೪೬ರ ಡಿಸೆಂಬರ್ ೧೩ ರಂದು ರಾಜ್ಯಾಂಗ ರಚನಾ ಸಭೆಯಲ್ಲಿ ಮಂಡಿಸಿದರು. ಈಗಲೂ ಡಿಸೆಂಬರ್ ೧೩ ರಂದೇ ನಮ್ಮ ಸಂಸತ್ತಿನ ಮೇಲೆ ದಾಳಿ ನಡೆದದ್ದು ಕಾಕತಾಳೀಯವಲ್ಲದಿರಬಹುದು. ಭಯೋತ್ಪಾದಕರ ಹೀನ ಆಕ್ರಮಣದಿಂದ ನಮ್ಮ ಪ್ರಜಾಪ್ರಭುತ್ವದ ಪೀಠವನ್ನು, ಸಂಸತ್ ಭವನದ ಭದ್ರತಾಪಡೆಯ ಸಾಮಾನ್ಯ ಸಿಬ್ಬಂದಿಯ ಅಸಾಧಾರಣ ಧೈರ್ಯ ಸಾಹಸವೇ ಕಾಪಾಡಿತೆಂಬುದು ಗಮನಾರ್ಹ ಸಂಗತಿ. ಭದ್ರತಾ ಸಿಬ್ಬಂದಿಯ ಯಶಸ್ಸಿಗಾಗಿ ನಾವು ಸಂತೋಷಪಡುವಾಗ, ಅವರಂಥ ಸಾಮಾನ್ಯರನ್ನೇ ನಮ್ಮ ರಕ್ಷಣೆ ಹಾಗೂ ಕ್ಷೇಮ ಅವಲಂಬಿಸಿದೆ ಎಂಬುದೂ ನೆನಪಿನಲ್ಲಿಡೋಣ. ಅವರ ಹಿತಾಸಕ್ತಿ ಹಾಗೂ ಕ್ಷೇಮಕ್ಕಾಗಿ ನಾವು ನಮ್ಮ ಭವ್ಯ ಸಂಸತ್ತಿನಲ್ಲಿ ಮತ್ತು ಇತರ ಸರ್ಕಾರಿ ಭವನಗಳಲ್ಲಿ ಇದ್ದು ಶ್ರಮಿಸಬೇಕು.

ಸಹಪ್ರಜೆಗಳೇ, ಈ ದೊಡ್ಡ ದೇಶಕ್ಕಾಗಿ ಪ್ರಜಾಸತ್ತೆಯನ್ನೂ ಮತ್ತು ಸರ್ಕಾರದ ಸ್ಥಿರ ವ್ಯವಸ್ಥೆಯನ್ನೂ ನಿರ್ಮಿಸಿರುವುದು ಸ್ವಾತಂತ್ರ್ಯದ ನಂತರ ನಮ್ಮ ಬೃಹತ್ ಸಾಧನೆ ಎಂಬುದು ಸರ್ವಮಾನ್ಯವಾಗಿದೆ. ಆದರೆ ವಿಶ್ವದಲ್ಲಿ ಎಲ್ಲ ಮತ ಧರ್ಮಗಳಿಗೂ ಇರುವ ಮತ್ತು ಊಹಿಸಬಹುದಾದ ಎಲ್ಲ ರೀತಿಯ ವೈವಿಧ್ಯವೂ ಸೇರಿದ ನೂರು ಕೋಟಿ ಜನಸಂಖ್ಯೆಗಾಗಿ ಈ ಸಾಧನೆ ಎಂಥ ಬೃಹತ್ ಎಂಬುದನ್ನು ಜಗತ್ತೇನು, ನಾವೇ ಸಂಪೂರ್ಣವಾಗಿ ಅರಿತುಕೊಂಡಿಲ್ಲ. ಬಲಾತ್ಕಾರ ಅಥವಾ ಒತ್ತಾಯದಿಂದಲ್ಲದೆ, ರಕ್ತಪಾತ ಅಥವಾ ಲೋಹಕಾಠಿಣ್ಯವಿಲ್ಲದೆ, ಶಾಂತಿಯುತ ವಿಧಾನದಲ್ಲಿ ತಾಳ್ಮೆಯಿಂದ ವೈವಿಧ್ಯ ಮತ್ತು ಭಿನ್ನತೆಗಳನ್ನು ಒಪ್ಪಿ ಕೊಳ್ಳುವ ಮೂಲಕ, ಇದನ್ನು ಸಾಧಿಸಲಾಗಿದೆ. 'ಮಾನವ ಕುಲ ಒಂದೇ' ಹಾಗೂ 'ಇಡೀ ಜಗತ್ತೇ ಒಂದು ಗೂಡು' ಎನ್ನುವುದನ್ನು ನಮಗೆ ಬೋಧಿಸಿದ ಭಾರತದ ಪುರಾತನ ಸಂಸ್ಕೃತಿ ಮತ್ತು ದರ್ಶನದ ಫಲಿತವೇ ಈ ಸಾಧನೆ. ಆದರೆ ಇತಿಹಾಸದ ಮಾರ್ಪಾಡುಗಳು ಈ ಪ್ರಾಚೀನ ದರ್ಶನವನ್ನು ನಜ್ಜುಗುಜ್ಜು ಮಾಡಿದವೆಂಬುದೂ, ಸುದೀರ್ಘ ಅವಧಿಗಳಲ್ಲಿ ನಮ್ಮ ದೇಶ ಗುಲಾಮಗಿರಿ, ಅಪಮಾನ, ಅಜ್ಞಾನ ಹಾಗೂ ಮೂಢನಂಬಿಕೆಗಳಲ್ಲಿ ಬಿದ್ದುಹೋಯಿತೆಂಬುದೂ ನಮಗೆ ತಿಳಿದಿದೆ. ಆಧುನಿಕ ಯುಗದಲ್ಲಿ ಮಹಾತ್ಮಾ ಗಾಂಧೀಜಿಯವರ ನಾಯಕತ್ವದಲ್ಲಿ ಅಹಿಂಸಾತ್ಮಕ ಚಳವಳಿಯಿಂದ ಭಾರತದ ಪುನರುತ್ಥಾನವಾದದ್ದು ಐತಿಹಾಸಿಕ ಪ್ರಾಮುಖ್ಯ ಪಡೆದ ಘಟನೆ. ನಮ್ಮ ಪುರಾತನ ನಾಗರಿಕತೆ ಮತ್ತು ವಿಚಾರಧಾರೆಯನ್ನು ರೂಪಿಸಿಕೊಟ್ಟ ಧೀಮಂತರನ್ನೇ ಅಲ್ಲದೆ, ಆ ಪರಂಪರೆಯನ್ನು ಈ ಸಮಯದಲ್ಲೂ ಪುನಶ್ಚೇತನಗೊಳಿಸಿ ಅದನ್ನು ನಮ್ಮ ಆಧುನಿಕ ಪ್ರಗತಿಯ ಸಾರವನ್ನಾಗಿಸಿದ ಇತರರನ್ನೂ ಸಹ ಇಂದು ನಾವು ಕೃತಜ್ಞತೆಯಿಂದ ಸ್ಮರಿಸುವುದು ಉಚಿತವಾಗಿದೆ. ಅವೆರಡು ಮೂಲಗಳಿಂದಲೂ ನಾವು ಸ್ಫೂರ್ತಿಯನ್ನು ಪಡೆದು, ನಮ್ಮ ಅವನತಿ ಮತ್ತು ಹೀನತೆಯ ಕಾರಣಗಳನ್ನು ವಿಶ್ಲೇಷಿಸಿದವರಿಂದ ಇಂದಿಗೂ ಮತ್ತು ಮುಂದಕ್ಕೂ ಪಾಠಗಳನ್ನು ನಾವು ಕಲಿಯಬೇಕಾಗಿದೆ.

ನಾಡಿನ ಸಮಗ್ರ ಶಿಕ್ಷಣ ಮತ್ತು ಬುದ್ಧಿಮತ್ತೆಯು ಬೆರಳೆಣಿಕೆಯಷ್ಟು ಜನರಲ್ಲಿ ಏಕಸ್ವಾಮ್ಯವಾಗಿರುವುದೇ ಭಾರತದ ಅಧೋಗತಿಗೆ ಮುಖ್ಯ ಕಾರಣವೆಂದು ಸ್ವಾಮಿ ವಿವೇಕಾನಂದರು ಸಾರಿದ್ದರು. ಅವರು ಹೇಳಿದ್ದರು: 'ರಾಷ್ಟ್ರ ಕಳೆದುಕೊಂಡಿರುವ ವ್ಯಕ್ತಿತ್ವವನ್ನು ಅದಕ್ಕೆ ಮರಳಿಸಿ, ಸಾಮಾನ್ಯ ಜನತೆಯನ್ನು ಮೇಲೆತ್ತಬೇಕು. ಹಿಂದೂಗಳು, ಮುಸ್ಲಿಮರು ಮತ್ತು ಕ್ರೈಸ್ತರೆಲ್ಲರೂ ಅವರನ್ನು ತುಳಿದು ಹಾಕಿದ್ದಾರೆ'.

ನನ್ನ ಸಹಪ್ರಜೆಗಳೇ, ಅನೇಕ ಕೊರತೆಗಳು ಮತ್ತು ವೈಫಲ್ಯಗಳಿದ್ದರೂ, ಸ್ವಾತಂತ್ರ್ಯದ ನಂತರ ಸಾಮಾನ್ಯ ಜನರ ಸ್ಥಿತಿಯನ್ನು ಉತ್ತಮಪಡಿಸುವುದರಲ್ಲಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ನಾವು ಸಾಕಷ್ಟು ಸಾಧನೆ ತೋರಿದ್ದೇವೆ. ನಮ್ಮ ಜನರ ಸರಾಸರಿ ಆಯುಷ್ಯ ಸ್ವಾತಂತ್ರ್ಯ ಬಂದಾಗ ೨೭ ವರ್ಷಗಳಿದ್ದದ್ದು ಈಗ ೬೨ ವರ್ಷಗಳಾಗಿದೆ. ಸಾಕ್ಷರತೆ ೧೯೪೭ರಲ್ಲಿ ಶೇ.೧೫ರಷ್ಟು ಇದ್ದದ್ದು ೨೦೦೧ರಲ್ಲಿ ಶೇ. ೬೫ರಷ್ಟಾಗಿದೆ. ಪುರುಷರ ಮತ್ತು ಸ್ತ್ರೀಯರ ಸಾಕ್ಷರತೆ ಪ್ರಮಾಣದಲ್ಲಿನ ಅಂತರ ತಗ್ಗಿಸಲಾಗಿದೆ. ಆದರೂ ಪ್ರಪಂಚದ ಯಾವುದೇ ದೇಶಕ್ಕಿಂತ ಹೆಚ್ಚು ನಿರಕ್ಷರಿಗಳು ಭಾರತದಲ್ಲಿದ್ದಾರೆ. ಹಾಗಾಗಿ, ಆರು ವರ್ಷದಿಂದ ೧೪ ವರ್ಷ ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೂ ವಿದ್ಯಾಭ್ಯಾಸ ಒದಗಿಸಲು ಈಗ ಸಂಸತ್ತಿನ ಮುಂದಿರುವ ಮಸೂದೆಯನ್ನು ಪ್ರಗತಿಯ ದೊಡ್ಡ ಹೆಜ್ಜೆಯೆಂದು ಸ್ವಾಗತಿಸುತ್ತೇನೆ. ಇದೂ ಸಾಲದು. ನಿರಕ್ಷರತೆಯನ್ನು ನಾಡಿನಿಂದ ಹೊರ ದೂಡುವುದಕ್ಕಾಗಿ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಸೌಕರ್ಯವನ್ನು ೧೪ ವರ್ಷ ವಯಸ್ಸಿನವರೆಗಿನ ಇಡೀ ವಯೋವರ್ಗಕ್ಕೆ ವಿಸ್ತರಿಸುವುದು ಅವಶ್ಯಕ. ನಮ್ಮ ಈ ಉತ್ಸಾಹದ

ಕನಸನ್ನು ಈಡೇರಿಸಿಕೊಳ್ಳುವ ರೀತಿ- ವಿಧಾನಗಳನ್ನು ಹುಡುಕಲು ಒಂದು ರಾಷ್ಟ್ರವಾಗಿ ನಾವು ಬದ್ಧರಾಗಬೇಕು. ೨೦೧೫ನೇ ವರ್ಷದ ವೇಳೆಗೆ ಎಲ್ಲರಿಗೂ ವಿದ್ಯಾಭ್ಯಾಸ ಸಿಗುವಂತೆ ಮಾಡಲು ಭಾರತವೂ ಸೇರಿದಂತೆ ಜಗತ್ತಿನ ಎಲ್ಲ ಸರ್ಕಾರಗಳೂ, ೨೦೦೨ನೇ ಇಸವಿ ವೇಳೆಗೆ ರಾಷ್ಟ್ರೀಯ ಯೋಜನೆ ತಯಾರಿಸುವುದಾಗಿ ಕಳೆದ ವರ್ಷ ಢಾಕಾದಲ್ಲಿ ಪಣ ತೊಟ್ಟವು. ಈ ಗುರಿ ಸಾಧಿಸಲು ನಾವು ಪೂರ್ಣ ಮನಸ್ಸಿನಿಂದ ಶ್ರಮಿಸಿದರೆ ಅದು ಅಸಾಧ್ಯವಿಲ್ಲ.

ಸಮಾಜದ ಹಾಗೂ ದೇಶದ ಪ್ರಗತಿ ಮತ್ತು ಮಾನವ ಸಂಪನ್ಮೂಲದ ಅಭಿವೃದ್ಧಿಯ ಬೇರಿನಲ್ಲೇ ಮಕ್ಕಳ ಬೆಳವಣಿಗೆ ಮತ್ತು ಆಹಾರ ಪುಷ್ಟಿ ಸೇರಿವೆ. ಜಗತ್ತಿನಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಮಕ್ಕಳನ್ನು ಹೊಂದಿರುವ ಭಾರತ, ಮಾನವ ಸಂಪತ್ತಿನ ವಿಶಾಲ ಭಂಡಾರವನ್ನೂ ಹೊಂದಿದೆ. ಈ ಸಂಪತ್ತಿನ ಅಭಿವೃದ್ಧಿಯನ್ನೇ ಭಾರತದ ಭವಿಷ್ಯ ಅವಲಂಬಿಸಿದೆ. ಅದು ನಿಶ್ಚಯವಾಗಿಯೂ ನಮ್ಮ ಮಕ್ಕಳ ಆರೋಗ್ಯ ಕ್ಷೇಮವನ್ನು ಆಧರಿಸಿದೆ. ಮಕ್ಕಳ ಕ್ಷೇಮಾಭ್ಯುದಯದಲ್ಲಿ ನಾವು ಒಂದಷ್ಟು ಯಶಸ್ಸುಗಳಿಸಿರುವುದು ಪ್ರೋತ್ಸಾಹಕರವಾಗಿದೆ. ಮಕ್ಕಳಿಗೆ ಪುಷ್ಟಿಕರ ಆಹಾರ, ಆರೋಗ್ಯ ಮತ್ತು ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಜಗತ್ತಿನಲ್ಲೇ ಅತ್ಯಂತ ಭಾರಿಯಾದ ಸಮಗ್ರ ಶಿಶು ಅಭಿವೃದ್ಧಿ ಕಾರ್ಯಕ್ರಮವನ್ನು ಭಾರತ ಹೊಂದಿದೆ. ಈಗ ಇಡೀ ದೇಶವನ್ನು ವ್ಯಾಪಿಸಿರುವ ಪೋಲಿಯೋ ಹನಿ ಕಾರ್ಯಕ್ರಮ ಇದೆ. ರೋಗ ನಿರೋಧಕ ರಕ್ಷಣೆಯ ಸಾಮೂಹಿಕ ಕಾರ್ಯಕ್ರಮ ಗಮನಾರ್ಹ ಫಲಿತಾಂಶವನ್ನು ತಂದುಕೊಟ್ಟಿದೆ. ಮಕ್ಕಳ ಶಿಕ್ಷಣದ ಜೊತೆಗೆ ಇವೆಲ್ಲವೂ ಕಾರ್ಯಗತವಾದರೆ ನಮ್ಮ ಮಕ್ಕಳಿಗೂ ಹಾಗೂ ನಮ್ಮ ದೇಶಕ್ಕೂ ಉಜ್ವಲ ಭವಿಷ್ಯವನ್ನು ನಿರೀಕ್ಷಿಸಬಹುದು. 'ರಸ್ತೆ ಬದಿಯಲ್ಲಿ ಮಗು ಅತ್ತರೆ, ಬ್ರಹ್ಮಾಂಡದ ಸಾಮರಸ್ಯವೇ ಹಾಳು ಬೀಳುವುದು' ಎಂದು ಕವಿಯೊಬ್ಬರು ವರ್ಣಿಸಿದ್ದಾರೆ.

ಸಹಪ್ರಜೆಗಳೇ, ಸಮಾಜದಲ್ಲಿ ಮಹಿಳೆಗೆ ಇರುವ ಸ್ಥಾನ ಮತ್ತು ಅಂತಸ್ತು ಆ ಸಮಾಜದ ಅಭಿವೃದ್ಧಿಗೆ ಒಂದು ಸ್ಪಷ್ಟ ಸೂಚನೆ. ಮಹಿಳೆಯರ ಹಕ್ಕುಗಳು ಮಾನವ ಹಕ್ಕುಗಳೆಂದು ಮಾನ್ಯವಾಗಿದ್ದರೂ, ಅವರುಗಳು ಅಭಿವೃದ್ಧಿಯಲ್ಲಿ ಕೇಂದ್ರವ್ಯಕ್ತಿಗಳೆಂದು ಪರಿಗಣನೆ ಆಗಿದ್ದರೂ, ನಮ್ಮ ಸಮಾಜದಲ್ಲಿ ಅವರ ಸ್ಥಾನ ಹೀನಾಯವಾದುದಾಗಿದೆ. ಮಹಾತ್ಮಾ ಗಾಂಧೀಜಿಯವರು ನಮ್ಮ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಸಾಮಾನ್ಯ ಮಹಿಳೆಯರನ್ನು ಅತ್ಯಧಿಕ ಸಂಖ್ಯೆಯಲ್ಲಿ ಸೇರಿಸಿದ್ದರೆಂಬುದು ನಿಮಗೆಲ್ಲರಿಗೂ ತಿಳಿದಿದೆ. ಉಪ್ಪಿನ ಸತ್ಯಾಗ್ರಹದಲ್ಲಿ ೭೦ ಸಾವಿರ ಮಹಿಳೆಯರು ಭಾಗವಹಿಸಿದ್ದರು. ಮಹಿಳೆಯರ ಉನ್ನತಿಗಾಗಿಯೇ ಅಲ್ಲದೆ ಪುರೋಗಾಮಿಯಾದ ಸಾಮಾಜಿಕ ಪರಿವರ್ತನೆಗಾಗಿಯೂ ಮತ್ತು ಸ್ವಾತಂತ್ರ್ಯವನ್ನು ಸಾಧಿಸುವುದಕ್ಕಾಗಿಯೂ ಗಾಂಧೀಜಿಯವರು ತಮ್ಮ ರಚನಾತ್ಮಕ ಕಾರ್ಯಕ್ರಮದಲ್ಲಿ ಮಹಿಳೆಯರ ಪ್ರಗತಿಯನ್ನು ಸೇರಿಸಿದ್ದರು. ನಾವು ೨೦೦೧ನೇ ವರ್ಷವನ್ನು ಮಹಿಳೆಯರ ಸಶಕ್ತೀಕರಣ ವರ್ಷವೆಂದು ಆಚರಿಸಿದ್ದೇವೆ. ಮಹಿಳೆಯರನ್ನು ಅವರ ಸದ್ಯದ ಸ್ಥಿತಿಯಿಂದ ಉನ್ನತಿಗೆ ತರಲು ಅನೇಕ ಮುಖ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾಮಾನ್ಯ ಹಾಗೂ ಬಡ ಮಹಿಳೆಯರೇ ಚಳವಳಿ-ಆಂದೋಲನಗಳಲ್ಲಿ ಮತ್ತು ಮಾಹಿತಿ ಹಕ್ಕು, ನದಿಗಳ ಪುನರುದ್ದಾರ, ಮಳೆ ನೀರಿನ ಬಳಕೆ, ಜಲಾನಯನದ ನಿರ್ವಹಣೆಯಂಥ ರಚನಾತ್ಮಕ ಕಾರ್ಯಗಳಲ್ಲಿ ಭಾಗವಹಿಸುತ್ತಿರುವುದು ಸ್ತುತ್ಯರ್ಹವಾಗಿದೆ. ಸುಮಾರು ೧೦ ಲಕ್ಷಕ್ಕೂ ಹೆಚ್ಚು ಮಹಿಳೆಯರು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾಯಿತರಾಗಿರುವುದು ಮತ್ತು ಆ ಸಂಸ್ಥೆಗಳಲ್ಲಿ ಅವರು ಕೆಲಸ ಮಾಡುತ್ತಿರುವುದು ತಳಮಟ್ಟದ ಅನೇಕ ಅಭಿವೃದ್ಧಿ ಕಾರ್ಯಗಳಲ್ಲಿ ಆಯಕಟ್ಟಿನ ಪರಿವರ್ತನೆಯನ್ನು ತಂದಿದೆ. ಮಹಿಳಾ ಚಳವಳಿ ಬಲವನ್ನು ವರ್ಧಿಸಿಕೊಂಡು, ವೇಗ ಹೆಚ್ಚಿಸಿಕೊಂಡು ಒಂದಾದ ಮೇಲೊಂದರಂತೆ ಮೈಲಿಗಲ್ಲುಗಳನ್ನು ದಾಟುತ್ತಿರುವಾಗ, ಮಹಿಳೆಯರ ಬಗ್ಗೆ ದುರ್ವರ್ತನೆ ಮತ್ತು ಅವರ ಮೇಲಿನ ದೌರ್ಜನ್ಯಗಳ ಘಟನೆಗಳು ಕ್ರೂರ ರೀತಿಯಲ್ಲಿ ಒಂದೇ ಸಮನೆ ಮರುಕಳಿಸುತ್ತಿವೆ. ಇಂಥ ಘೋರ ಸಂಗತಿಗಳನ್ನು ಪತ್ರಿಕೆಗಳಲ್ಲಿ ಓದದೆ ಮತ್ತು ವಿದ್ಯುನ್ಮಾನ ಮಾಧ್ಯಮದಲ್ಲಿ ನೋಡದೇ ಒಂದು ದಿನವನ್ನೂ ಕಳೆಯಲಾಗುತ್ತಿಲ್ಲ.

> **ಖಾಸಗೀ ಕರಣದ ಯುಗದಲ್ಲಿ ಈ ದುರ್ಬಲ ವರ್ಗದವರಿಗಾಗಿ ಸರ್ಕಾರ ಹಾಗೂ ಅದರ ಸಂಸ್ಥೆಗಳಲ್ಲೇ ಅಲ್ಲದೆ ಸರ್ಕಾರದ ಸೌಕರ್ಯಗಳನ್ನು ಮತ್ತು ಧನ ಸಹಾಯವನ್ನು ಪಡೆಯುತ್ತಿರುವ ಖಾಸಗಿ ನಿಗಮಗಳಲ್ಲಿ ಹಾಗೂ ಉದ್ಯಮ ಗಳಲ್ಲೂ ಕೂಡ ಪ್ರಾತಿನಿಧ್ಯ ಒದಗಿಸುವುದರ ಪ್ರಾಮುಖ್ಯ ವನ್ನು ಭೋಪಾಲ್ ಘೋಷಣೆ ಒತ್ತಿ ಹೇಳಿದೆ. ಈ ದುರ್ಬಲ ವರ್ಗಗಳವರನ್ನು ಅವರ ನಿರ್ಗತಿಕ ಸ್ಥಿತಿ ಹಾಗೂ ಅಸಮಾನತೆಯಿಂದ ಮೇಲೆತ್ತಿ ನಾಗರಿಕ ಜನರಿಗೆ ಹಾಗೂ ಸಾಮಾನ್ಯ ಪ್ರಜೆಗಳಿಗೆ ಇರುವ ಹಕ್ಕುಗಳನ್ನು ಅವರಿಗೂ ಒದಗಿಸಲು, ಖಾಸಗಿ ಕ್ಷೇತ್ರವೂ ಕೂಡ ಪುರೋಗಾಮಿ ಯಾದ ಮತ್ತು ಸಮಾನತೆ ತರುವ ಸಾಮಾಜಿಕ ಧೋರಣೆ ಯನ್ನು ಅನುಸರಿಸುವುದು ಸದ್ಯದ ಹಾಗೂ ಭವಿಷ್ಯದ ಆರ್ಥಿಕ ಪದ್ಧತಿಯಲ್ಲಿ ಅಗತ್ಯವಾಗಿದೆ.**

ವರದಕ್ಷಿಣೆಯ ಪದ್ಧತಿಯು ನಮ್ಮ ಮಹಿಳೆಯರು ತುಂಬಾ ಕಡಿಮೆ ವಯಸ್ಸಿನಲ್ಲೇ ಪ್ರಾಣ ತೆರುವಂತೆ ಮಾಡುತ್ತಿರುವುದಲ್ಲದೆ, ದೇಶದಲ್ಲಿ ಹೆಚ್ಚು ಭ್ರೂಣಗಳ ಹತ್ಯೆ ಹೆಚ್ಚುತ್ತಿರುವುದಕ್ಕೂ ಮುಖ್ಯ ಕಾರಣವಾಗಿದೆ. ಅತ್ಯಾಚಾರ, ಮನೆ ಒಳಗಿನ ಹಿಂಸೆಗಳು, ಕೆಲಸದ ಸ್ಥಳಗಳಲ್ಲಿ ಲೈಂಗಿಕ ಪೀಡನೆ ಮತ್ತು ಸ್ತ್ರೀ ವಿಕ್ರಯದಂಥ ಘಟನೆಗಳು ಹಲವು ಪಾಲು ಹೆಚ್ಚಾಗಿವೆ. ಭಾರತದಲ್ಲಿ ಹತರಾಗುತ್ತಿರುವ ಹೆಂಗಸರಲ್ಲಿ ಅರ್ಧದಷ್ಟು ಜನ ಗೃಹಗಳಲ್ಲೇ ಸಾವನ್ನಪ್ಪುತ್ತಿದ್ದಾರೆ. ಲೈಂಗಿಕ ಪೀಡನೆಯ ಪ್ರಸಂಗಗಳಲ್ಲಿ ಶೇ.೪೦ರಷ್ಟು, ವರದಕ್ಷಿಣೆ ಸಾವುಗಳಲ್ಲಿ ಶೇ. ೧೫ರಷ್ಟು, ಹೆಣ್ಣುಮಕ್ಕಳ ಕಳ್ಳಸಾಗಣೆಯಲ್ಲಿ ಶೇ. ೮೭ ರಷ್ಟು ಹೆಚ್ಚಳ, ೧೯೯೮ರಲ್ಲಿ ಕಂಡು ಬಂದಿದೆ. ಇವು ಸ್ತ್ರೀಯರ ವೇದನಾಪೂರ್ಣ ಅಸ್ತಿತ್ವದ ಸಂಕೇತಗಳಾಗಿವೆ. ಮಹಿಳೆಗೆ ಯಾವ ಸ್ಥಳವೂ ಕೂಡ-ಆಕೆಯ ತಾಯ ಗರ್ಭವೂ ಕೂಡ ಸುರಕ್ಷಿತ ನೆಲೆಯಾಗಿಲ್ಲ. ಮಹಿಳೆ ಹುಟ್ಟುವ ಮುನ್ನವೇ ಸಾವಿಗೀಡಾಗುತ್ತಾಳೆ.

ಕೌರವರ ಆಸ್ಥಾನದಲ್ಲಿ ದ್ರೌಪದಿಗಾದ ಅನುಭವ ನಮ್ಮ ದೇಶದಲ್ಲಿ ಮಹಿಳೆಯರಿಗಿರುವ ದುರ್ವರ್ತನೆಗೆ ದ್ಯೋತಕವಾಗಿದೆ. ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ ಒಂದು ಕವನ ಉಲ್ಲೇಖಿಸುವುದಾದರೆ

ಒಂದೊಂದು
ಪಂಚಾಯತಿಯಲ್ಲೂ
ದ್ರೌಪದಿಯ
ಮಾನಭಂಗವಾಗುತ್ತಿದೆ

ಪಂಚಾಯತಿಗಳಲ್ಲಷ್ಟೇ ಅಲ್ಲದೆ ನಗರಗಳ ಸಾರಿಗೆ ವಾಹನಗಳಲ್ಲಿ, ರಸ್ತೆ ರಸ್ತೆಗಳಲ್ಲಿ, ಮನೆಯಲ್ಲೂ ಕೂಡ ಮಹಿಳೆಗೆ ಅವಮಾನವಾಗುತ್ತಿದೆ. ನಮ್ಮ ದೇಶದಲ್ಲಿ ಹೆಣ್ಣಿಗೆ ಅಗೌರವ, ಅಸಮಾನತೆಯನ್ನು ತಪ್ಪಿಸಬೇಕಾದ ಸಮಯ ಮಿಂಚಿ ಹೋಗುತ್ತಿದೆ. ಭಾರತದಲ್ಲಿ ತಳಮಟ್ಟದಲ್ಲಿ ನಡೆದಿರುವ ಮಹಿಳಾ ಚಳವಳಿಯ ಯಶಸ್ಸು ಈ ದೋಷಗಳನ್ನು ತಪ್ಪಿಸುವುದು ಸಾಧ್ಯವೆಂದು ತಿಳಿಸುತ್ತದೆ. ಭಾರತದಲ್ಲಿ ಹೆಣ್ಣಿಗಿರುವ ಸಮಸ್ಯೆಯು ಸಾಮಾನ್ಯವಾಗಿ ನಮ್ಮ ಸಮಾಜದಲ್ಲಿ ಕಾಣುವ ಅನ್ಯಾಯ ಮತ್ತು ಅಸಮತೆಯ ಪ್ರತೀಕವಾಗಿದೆ. ನಮ್ಮ ಪ್ರಜಾಸತ್ತೆಯು ರಾಜಕೀಯ ಯಶಸ್ಸನ್ನು ಸಾಧಿಸಿದ್ದರೂ ನಾವು ಸರ್ವಾಂಗೀಣ ಸಮಾಜವೆನಿಸಿಲ್ಲದಿರುವುದು ಇಂದಿಗೂ ಸೋಜಿಗವಾಗಿದೆ. ಸ್ತ್ರೀಯರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳವರು ಅನುಭವಿಸುತ್ತಿರುವ ತಾರತಮ್ಯವು ನಮ್ಮ ಸಂವಿಧಾನದಲ್ಲಿ ಸ್ಥಾಪಿತವಾಗಿರುವ ಪ್ರಜಾಸತ್ತೆಯ ಖಚಿತ ತಿರಸ್ಕಾರವಾಗಿದೆ.

ಇತ್ತೀಚೆಗೆ ದಲಿತ ಹಾಗೂ ಬುಡಕಟ್ಟುಗಳ ಕಾರ್ಯಕರ್ತರು ಹಾಗೂ ಬುದ್ಧಿಜೀವಿಗಳ ಸಮ್ಮೇಳನವೊಂದು ಭೋಪಾಲ್‌ನಲ್ಲಿ ನಡೆಯಿತು. ಅವರು 'ಭೋಪಾಲ್ ಘೋಷಣೆ' ಎನ್ನುವುದನ್ನು ಪ್ರಕಟಿಸಿದರು. ೨೧ನೇ ಶತಮಾನದಲ್ಲಿ ದಲಿತರು ಹಾಗೂ ಬುಡಕಟ್ಟು ಜನರಿಗಾಗಿ ನೂತನ ಪಥವೊಂದನ್ನು ಅದರಲ್ಲಿ ನಮೂದಿಸಲಾಗಿದೆ. ಈ ಜನರ ಅಭಿವ್ಯಕ್ತಿಗಾಗಿ ನಮ್ಮ ಸಂವಿಧಾನದಲ್ಲಿ ಅಡಕ ಮಾಡಲಾಗಿರುವ ಧೋರಣೆಗಳು ಕಾರ್ಯಗತವಾಗಬೇಕೆಂದು ಕೋರುವುದರ ಜೊತೆಗೆ, ಸದ್ಯದ ಖಾಸಗೀಕರಣದ ಯುಗದಲ್ಲಿ ಈ ದುರ್ಬಲ ವರ್ಗದವರಿಗಾಗಿ ಸರ್ಕಾರ ಹಾಗೂ ಅದರ ಸಂಸ್ಥೆಗಳಲ್ಲೇ ಅಲ್ಲದೆ ಸರ್ಕಾರದ ಸೌಕರ್ಯಗಳನ್ನು ಮತ್ತು ಧನ ಸಹಾಯವನ್ನು ಪಡೆಯುವ ಖಾಸಗಿ ನಿಗಮಗಳಲ್ಲಿ ಹಾಗೂ ಉದ್ಯಮಗಳಲ್ಲೂ ಕೂಡ ಪ್ರಾತಿನಿಧ್ಯ ಒದಗಿಸುವುದರ ಪ್ರಾಮುಖ್ಯವನ್ನು ಈ ಘೋಷಣೆ ಒತ್ತಿ ಹೇಳಿದೆ. ಈ

(೪೦ನೇ ಪುಟಕ್ಕೆ)

ಸಂವಿಧಾನ ಮತ್ತು ಮೀಸಲಾತಿ

ಅವಲೋಕನ

ಸಮಾನತೆಗಾಗಿ ತುಡಿಯುವ ನಮ್ಮಂತಹ ಅಸಮಾನ ಸಮಾಜದಲ್ಲಿ ಸಮಾನತೆಯ ತತ್ವವನ್ನು ಪರಿಣಾಮಕಾರಿ ಮಾಡಲು ಮೀಸಲಾತಿಯಂಥ ವಿಶೇಷತೆ ಕಡ್ಡಾಯವಾಗಿ ಬಿಡುತ್ತದೆ. ಸಮಾಜದ ಬೆಳವಣಿಗೆಯ ತಾಂತ್ರಿಕತೆಯ ಸಾಧನವನ್ನಾಗಿ, ಸಾಮಾಜಿಕ ನ್ಯಾಯವನ್ನಾಧರಿಸಿದ ಸಮಾಜವೊಂದನ್ನು ನಿರ್ಮಿಸಲು ಮೀಸಲಾತಿಯನ್ನು ಒಂದು ಸಾಧನವನ್ನಾಗಿ ಬಳಸಬಹುದಾಗಿದೆ. ಇಬ್ಬರು ಅಸಮಾನರನ್ನು ಸಮಾನರೆಂದು ಪರಿಗಣಿಸಿದಾಗ ಉಂಟಾಗುವ ಅನ್ಯಾಯ ಇಬ್ಬರು ಸಮಾನರನ್ನು ಅಸಮಾನರೆಂದು ಪರಿಗಣಿಸಿದಾಗಲೂ ಆಗುತ್ತದೆ. ಆದ್ದರಿಂದಲೇ, ಸಮಾನತೆಯ ನ್ಯಾಯಶಾಸ್ತ್ರ ಕೆಳಗಿರುವವರನ್ನು ಮೇಲಿನವರ ಸಮಕ್ಕೆ ತರಬೇಕೆಂದು ಬಯಸುತ್ತದೆ.

ಮೂಲ: **ಪಿ.ಬಿ.ಸಾವಂತ್**
ಅನು: **ಡಾ|| ಮಹಾದೇವ**

'**ಸ**ಮಾಜದ ವಾದವೊಂದಕ್ಕೆ ಆರ್ಥಿಕ ಆಧಾರದ ಮೇಲೆ ಮೀಸಲಾತಿ ನೀಡುವುದು ಸಂವಿಧಾನ ವಿರೋಧಿ ಯಾಗುತ್ತದೆ'.

ಸಮಾನತೆಯ ತತ್ವ ಭಾರತ ಸಂವಿಧಾನವನ್ನು ಆಧರಿಸಿದೆ. ಜಾತಿ, ಜನಾಂಗ, ಧರ್ಮ, ಲಿಂಗ, ಮನೆತನ, ಹುಟ್ಟಿದ ಸ್ಥಳ ಮತ್ತು ವಾಸ ಇದಾವುದನ್ನು ಲೆಕ್ಕಿಸದೆ ಎಲ್ಲಾ ನಾಗರೀಕರು ರಾಜ್ಯದಿಂದ ಸಮಾನವಾಗಿ ಪರಿಗಣಿಸಿಕೊಳ್ಳುವ ಹಕ್ಕು ಉಳ್ಳವರಾಗಿದ್ದಾರೆ. ಮೇಲೆ ಹೇಳಿದ ವಿಷಯಗಳನ್ನಾಧರಿಸಿ ರಾಜ್ಯ, ಯಾವ ನಾಗರೀಕನ ಮೇಲೂ ಪಕ್ಷಪಾತ ಮಾಡುವಂತಿಲ್ಲ. ಈ ತತ್ವಕ್ಕೆ ಹೊರತಾಗಿ ಮಹಿಳೆಯರಿಗೆ-ಮಕ್ಕಳಿಗೆ, ಹಿಂದುಳಿದ ವರ್ಗಗಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಾಗೂ ಅಲ್ಪಸಂಖ್ಯಾತರಿಗೆ ಕೆಲ ಅವಕಾಶಗಳನ್ನು ಸೃಷ್ಟಿಸಲಾಗಿದೆ.

ರಾಜ್ಯಾಂಗದ ಅಧಿ ನಿಯಮ ೧೫(೩)ರ ಅಡಿಯಲ್ಲಿ ಜಾತಿ ಮತ ತಿಳಿಸದೆ ಹೆಂಗಸರು ಮತ್ತು ಮಕ್ಕಳು ಎಲ್ಲಾ ರೀತಿಯ ಅಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ ವಿಶೇಷ ಅವಕಾಶಗಳನ್ನು ಪಡೆಯಬಹುದಾಗಿದೆ. ನಿಯಮ ೧೫(೪) ಅಡಿಯಲ್ಲಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ಯಾವುದೇ ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಬುಡಕಟ್ಟಿನ ಅಭಿವೃದ್ಧಿಗೆ ವಿಶೇಷ ಅವಕಾಶಗಳನ್ನು ಸೃಷ್ಟಿಸಬಹುದಾಗಿದೆ. 'ಅಭಿವೃದ್ಧಿ' ಅಂದರೆ ಯಾವುದೇ ರಂಗದಲ್ಲಿ ಎಂದು ಅರ್ಥ. ಅಧಿ ನಿಯಮ ೧೫ರ ಒಳನಿಯಮ (೪)ನ್ನು ೧೯೫೧ರಲ್ಲಿ ತಿದ್ದು ಪಡಿಯ ಮೂಲಕ ಸೇರ್ಪಡಿಸಲಾಯಿತು. ಸರ್ಕಾರದ ಪ್ರಕಾರ ಆದರ ಉದ್ಯೋಗಗಳಲ್ಲಿ ಒಂದು ಹಿಂದುಳಿದ ವರ್ಗ ಸಮರ್ಪಕವಾಗಿ ಪ್ರತಿನಿಧಿತವಾಗಿರದಿದ್ದರೆ ಅಧಿ ನಿಯಮ ೧೬(೪)ರ ಅಡಿಯಲ್ಲಿ ರಾಜ್ಯ, ಆ ಹಿಂದುಳಿದ ವರ್ಗಕ್ಕೆ ಉದ್ಯೋಗ ಮೀಸಲಾತಿ ಕಲ್ಪಿಸಬಹುದಾಗಿದೆ. ಈ ಉಪನಿಯಮದ ಹಿಂದುಳಿದ ವರ್ಗ ಶಬ್ದಗಳನ್ನು ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ ಎಂದು ಉಪನಿಯಮ(೪) ರಲ್ಲಿರುವಂತೆ ಸರ್ವೋನ್ನತ ನ್ಯಾಯಾಲಯ ವ್ಯಾಖ್ಯಾನಿಸಿದೆ. ಈ ಉಪನಿಯಮವನ್ನು ಕ್ರಮೇಣ ಅಧಿ ನಿಯಮ ೧೫ಕ್ಕೆ ಸೇರಿಸಲಾಯಿತು.

'ದುರ್ಬಲ ವರ್ಗದ ಜನರ' ಅದರಲ್ಲೂ ವಿಶೇಷವಾಗಿ ಪ.ಜಾತಿ ಮತ್ತು ಪ. ಪಂಗಡಗಳ ಆರ್ಥಿಕ ಮತ್ತು ಶೈಕ್ಷಣಿಕ ಹಿತಾಸಕ್ತಿಗಳತ್ತ ವಿಶೇಷ ಗಮನ ಹರಿಸಿ ಉತ್ತೇಜಿಸಬೇಕೆಂದು ಮತ್ತು ಸಾಮಾಜಿಕ ಅನ್ಯಾಯ ಮತ್ತು ಎಲ್ಲಾ ಬಗೆಯ ಶೋಷಣೆಯಿಂದ ರಕ್ಷಿಸಬೇಕೆಂದು ಅಧಿ ನಿಯಮ ೪೬ ರಾಜ್ಯಕ್ಕೆ ನಿರ್ದೇಶಿಸುತ್ತದೆ. ಆಡಳಿತದಲ್ಲಿನ ದಕ್ಷತೆ ಕಾಪಾಡಿಕೊಂಡು ಹೋಗುವ ವಿಷಯಕ್ಕೆ ಅನುಗುಣವಾಗಿ ಕೇಂದ್ರ ಮತ್ತು ರಾಜ್ಯದ ಆಡಳಿತ ವ್ಯವಸ್ಥೆಯ ಸ್ಥಾನಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಪ.ಜಾತಿ ಮತ್ತು ಪ. ಪಂಗಡಗಳ ಬೇಡಿಕೆಗಳನ್ನು ರಾಜ್ಯ ಪರಿಗಣಿಸಬೇಕೆಂದು ಅಧಿ ನಿಯಮ ೩೫೫ ರಾಜ್ಯವನ್ನು ನಿರ್ದೇಶಿಸುತ್ತದೆ.

ಕಾನೂನಿನ ದೃಷ್ಟಿಯಲ್ಲಿ ಎಲ್ಲಾ ನಾಗರೀಕರು ಸಮಾನ ಹಾಗೂ ಎಲ್ಲ ನಾಗರೀಕರಿಗೂ ಕಾನೂನಿನ ಸಮಾನ ರಕ್ಷಣೆ, ಅಧಿನಿಯಮ ೧೪ರ ಅನ್ವಯ ಇದೆ ಎಂಬ ಅಭಿಪ್ರಾಯಕ್ಕೆ ಮೀಸಲಾತಿ ಹೊರತಾಗಿದೆ ಎಂದು ಮೊದಲ ನೋಟದಲ್ಲೇ ಕಂಡು ಬಂದರೂ, ಆಳವಾಗಿ ಪರಿಗಣಿಸಿದಾಗ ಮೀಸಲಾತಿ ವಾಸ್ತವವಾಗಿ ಬಹುತೇಕರಿಗೆ ಅಂದರೆ ಜನಸಂಖ್ಯೆಯ ಸುಮಾರು ೮೫ ಭಾಗವಿರುವ ಹಿಂದುಳಿದ ವರ್ಗಗಳು, ಪ.ಜಾತಿ ಮತ್ತು ಪ. ಪಂಗಡಗಳಿಗೆ ಸಮಾನತೆಯ ಹಕ್ಕನ್ನು ದೊರಕಿಸಿಕೊಡುವ ದಿಸೆಯಲ್ಲಿ ರಾಜ್ಯಕ್ಕೆ ಸಹಕಾರಿಯಾಗಿದೆ. ಸೌಲಭ್ಯಗಳನ್ನು ಸಮಾನವಾಗಿ ಪಡೆದುಕೊಳ್ಳುವ ಶಕ್ತಿ ಮತ್ತು ಸಾಧನಗಳಿಲ್ಲದ ಸಮಾನತೆಯ ಹಕ್ಕು, ದುರ್ಬಲ ವರ್ಗದವರ ಮೇಲೆ ಮಾಡಿದ ಕೆಟ್ಟ ವ್ಯಂಗ್ಯವಾಗಿಬಿಡುತ್ತದೆ. ದುರ್ಬಲರು ಸವಲತ್ತುಗಳನ್ನು ಪಡೆದುಕೊಳ್ಳುವಂತೆ ಮೀಸಲಾತಿಯಂಥ ವಿಶೇಷತೆಗಳಿಂದ ರಾಜ್ಯ ಅನುಕೂಲ ಕಲ್ಪಿಸಿಕೊಡುವ್ತೆ. ಹೀಗಾಗದಿದ್ದರೆ ಅವರು ಸವಲತ್ತುಗಳನ್ನು ಅನುಭವಿಸಲು ಸಾಧ್ಯವಿಲ್ಲ. ಸಮಾನತೆಗಾಗಿ ತುಡಿಯುವ ನಮ್ಮಂತಹ ಅಸಮಾನ ಸಮಾಜದಲ್ಲಿ ಸಮಾನತೆಯ ತತ್ವವನ್ನು ಪರಿಣಾಮಕಾರಿ ಮಾಡಲು ಮೀಸಲಾತಿಯಂಥ ವಿಶೇಷತೆ ಕಡ್ಡಾಯವಾಗಿ ಬಿಡುತ್ತದೆ. ಸಮಾನತೆಯು ತತ್ವ ಸಿದ್ಧಾಂತವಲ್ಲ, ಸಮಾಜದ ಬೆಳವಣಿಗೆಯನ್ನು ತಾಂತ್ರಿಕತೆಯ ಸಾಧನವನ್ನಾಗಿ, ಸಾಮಾಜಿಕ ನ್ಯಾಯವನ್ನಾಧರಿಸಿದ ಸಮಾಜವೊಂದನ್ನು ನಿರ್ಮಿಸಲು ಮೀಸಲಾತಿಯನ್ನು ಒಂದು ಸಾಧನವನ್ನಾಗಿ ಬಳಸಬಹುದಾಗಿದೆ. ಇಬ್ಬರು ಅಸಮಾನರನ್ನು ಸಮಾನರೆಂದು ಪರಿಗಣಿಸಿದಾಗ ಉಂಟಾಗುವ ಅನ್ಯಾಯ ಇಬ್ಬರು ಸಮಾನರನ್ನು ಅಸಮಾನರೆಂದು ಪರಿಗಣಿಸಿದಾಗಲೂ ಆಗುತ್ತದೆ. ಆದ್ದರಿಂದಲೇ, ಸಮಾನತೆಯ ನ್ಯಾಯಶಾಸ್ತ್ರ ಕೆಳಗಿರುವವರನ್ನು ಮೇಲಿನವರ ಸಮಕ್ಕೆ ತರಬೇಕೆಂದು ಬಯಸುತ್ತದೆ.

ಕೆಲವು ಗೊತ್ತಾದ ಕಾರಣಗಳಿಗಾಗಿ ಸಂವಿಧಾನದಲ್ಲಿ ಮಾಡಿರುವ ಮೀಸಲಾತಿಯು ವಿಧಿಸಲಾದ ಷರತ್ತುಗಳಿಗನುಗುಣವಾಗಿ, ಸಂವಿಧಾನವು ನಾಲ್ಕು ವರ್ಗಗಳ ಪರವಾಗಿದೆ.

೧) ಸಾಮಾನ್ಯವಾಗಿ ಮಹಿಳೆ ಮತ್ತು ಮಕ್ಕಳು ಅಂದರೆ, ಸಮಾಜದ ಎಲ್ಲಾ ಪಂಗಡಗಳ ಮತ್ತು ವರ್ಗ, ಜಾತಿ, ಜನಾಂಗ, ಧರ್ಮ ಇತ್ಯಾದಿಗಳ ಹೊರತಾಗಿ (ಅಧಿ ನಿಯಮ ೧೫(೩)), ಕಲ್ಯಾಣ ಮತ್ತು ಅಭಿವೃದ್ಧಿಗಾಗಿ,

೨) ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ (ಅವರ ಪುರೋಭಿವೃದ್ಧಿಗಾಗಿ, ಅಧಿ ನಿಯಮ ೧೫(೪)), ೩) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗಳಿಗೆ, ೪) ದುರ್ಬಲ ವರ್ಗದವರಿಗೆ, ವಿಶೇಷವಾಗಿ ಪ.ಜಾತಿ ಮತ್ತು ಪ. ಪಂಗಡಗಳಿಗೆ, ಅವರ ಆರ್ಥಿಕ ಮತ್ತು ಶೈಕ್ಷಣಿಕ ಹಿತಾಸಕ್ತಿಯನ್ನು ಪ್ರೋತ್ಸಾಹಿಸಲು ಮತ್ತು ಎಲ್ಲಾ ಬಗೆಯ ಸಾಮಾಜಿಕ ಅನ್ಯಾಯ ಮತ್ತು ಪೋಷಣೆಯಿಂದ ರಕ್ಷಣೆ ಕೊಡುವುದು (ಅಧಿ ನಿಯಮ ೪೬).

ಅಧಿ ನಿಯಮ ೪೬ರಲ್ಲಿ ಹೇಳಲಾಗಿರುವ 'ದುರ್ಬಲ ವರ್ಗದವರು' ಈ ನಾಲ್ಕನೆ ವರ್ಗ ಯಾವುದು? ಈ ಅಧಿ ನಿಯಮದಲ್ಲಿ ಪ್ರತ್ಯೇಕವಾಗಿ ಅವರ ಬಗ್ಗೆ ಹೇಳಿರುವುದರಿಂದ, ಸ್ಥಿತಿಗತಿಗಳಲ್ಲಿ ಪ.ಜಾತಿ ಮತ್ತು ಪ. ಪಂಗಡದವರನ್ನು ಹೋಲುವ ಬೇರೆ ವರ್ಗದವರು ಎಂಬುದು ಸುಸ್ಪಷ್ಟ. ಅರ್ಹರಾಗುವುದೆಂದರೆ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕೆಂಬುದೂ ಕೂಡ ಸ್ಪಷ್ಟವಾಗಿದೆ. ಈ ವರ್ಗದ ಜನರು ಈ ಮುಂದಿನ ಜನರನ್ನೊಳಗೊಂಡಿರಬೇಕು- ಅ) ವಿಶೇಷ ಆದ್ಯತೆಯ ಮೇರೆಗೆ ಇವರ ಆರ್ಥಿಕ ಮತ್ತು ಶೈಕ್ಷಣಿಕ ಹಿತಾಸಕ್ತಿಯನ್ನು ಪ್ರೋತ್ಸಾಹಿಸಬೇಕಾದವರು ಆ) ಸಾಮಾಜಿಕ ಅನ್ಯಾಯ ಹಾಗೂ ಎಲ್ಲಾ ಬಗೆಯ ಶೋಷಣೆಗಳಿಂದ ಸಂರಕ್ಷಿಸಬೇಕಾದವರು.

ಪ.ಜಾತಿ ಮತ್ತು ಪ. ಪಂಗಡದವರನ್ನು ಒಳಗೊಂಡಂತೆ ಎಲ್ಲಾ ದುರ್ಬಲ ವರ್ಗದವರು ಎಂದು ಅಧಿ ನಿಯಮ ೧೬(೪)ರಲ್ಲಿರು

ವಂತೆ 'ದುರ್ಬಲ ವರ್ಗ'ದವರು ಎಂಬುದರ ಬದಲಾಗಿ 'ಹಿಂದುಳಿದ ವರ್ಗ'ದವರು ಎಂದಿದ್ದರೆ ಉದ್ದೇಶ ಈಡೇರುತ್ತಿರಲಿಲ್ಲವೆ? ಅಧಿ ನಿಯಮ ೧೫ ಉಪನಿಯಮ(೪)ರ ಮೂಲದಲ್ಲಿ ಇರಲಿಲ್ಲ, ಇದನ್ನು ತಿದ್ದುಪಡಿಯ ಮೂಲಕ ಸೇರಿಸಲಾಯಿತು ಮತ್ತು 'ಹಿಂದುಳಿದ ವರ್ಗ'ದವರು ಎಂಬ ಹೇಳಿಕೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ (ಹಿಂದುಳಿದ ವರ್ಗಗಳು) ಮತ್ತು ಕೇವಲ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯಲ್ಲದೆ ಎರಡು ವಿಷಯಗಳಲ್ಲೂ ಹಿಂದುಳಿದಿರುವುದು. ಎರಡನೆಯದಾಗಿ, ಹಿಂದುಳಿದ ವರ್ಗಗಳು, ಇತರೆ ಹಿಂ.ವರ್ಗಗಳು ಮತ್ತು ಪ.ಜಾತಿ ಮತ್ತು ಪ. ಪಂಗಡಗಳ ಮಧ್ಯೆ ವ್ಯತ್ಯಾಸ ಕಲ್ಪಿಸಲು ಪ.ಜಾತಿ ಮತ್ತು ಪ.ಪಂಗಡಗಳನ್ನು ಬೇರೆ ಮಾಡಲಾಗಿದೆ. ಅಧಿನಿಯಮ ೪೬ ವ್ಯತ್ಯಾಸವನ್ನು ಕಾಪಾಡಿಕೊಳ್ಳಲು ಈ ಪ್ರಯತ್ನ ಎಂದು ಭಾವಿಸಲಾಗಿದೆ.

ಸಂಧರ್ಭೋಚಿತವಾಗಿ ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ಸರ್ವೋನ್ನತ ನ್ಯಾಯಾಲಯ ತನ್ನೆಲ್ಲ ತೀರ್ಪುಗಳಲ್ಲಿ ಅಧಿನಿಯಮ ೧೬(೪)ರ 'ಹಿಂದುಳಿದ ವರ್ಗ'ಗಳು ಎಂಬ ಪದಗಳನ್ನು 'ಸಾಮಾಜಿಕ ಮತ್ತು ಶೈಕ್ಷಣಿಕ'ವಾದ ಹಿಂದುಳಿದಿರುವಿಕೆ ಎಂದು ಅರ್ಥ ಬರುವಂತೆ ವ್ಯಾಖ್ಯಾನಿಸಿದೆ. ಅಧಿನಿಯಮ ೪೬ 'ದುರ್ಬಲ ವರ್ಗ'ಗಳು ಎಂಬ ಪದಗಳನ್ನು ಈ ಮೊದಲೇ ಹೇಳಿರುವಂತೆ, ಬೇರೆ ಮಾತುಗಳಿಂದ ಮತ್ತು ಹೆಚ್ಚು ಪ್ರತ್ಯೇಕವಾದ ಪದಗಳಿಂದ ಅದನ್ನು ವ್ಯಾಖ್ಯಾನಿಸುತ್ತದೆ. ಅಧಿನಿಯಮ ೪೬ ದುರ್ಬಲವರ್ಗಗಳ 'ಆರ್ಥಿಕ' ಹಿತಾಸಕ್ತಿಯನ್ನು ಅಭಿವೃದ್ಧಿ ಪಡಿಸುವುದರ ಜತೆಗೆ ವಿಶೇಷ ಗಮನಹರಿಸಿ 'ಶೈಕ್ಷಣಿಕ' ಹಿತಾಸಕ್ತಿಯನ್ನೂ ಕೂಡ ಅಭಿವೃದ್ಧಿ ಪಡಿಸಬೇಕು ಎಂದು ಹೇಳಿದರೂ, ಅದು ಮತ್ತೆ ಎಲ್ಲಾ ಬಗೆಯ 'ಸಾಮಾಜಿಕ ಅನ್ಯಾಯಗಳು ಮತ್ತು ಶೋಷಣೆ'ಯಿಂದ 'ಕಾಪಾಡ'ಬೇಕು ಎಂದು ಕೂಡ ಹೇಳುತ್ತದೆ. ಆದ್ದರಿಂದ, ಅಧಿನಿಯಮ ೪೬ ಸೂಚಿಸುವ 'ದುರ್ಬಲ ವರ್ಗ'ಗಳು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಮತ್ತು ಸಾಮಾಜಿಕ ಮತ್ತು ಎಲ್ಲಾ ಬಗೆಯ ಶೋಷಣೆಯಿಂದ ಕಾಪಾಡಬೇಕಾಗಿದೆ. ಪ.ಜಾತಿ ಮತ್ತು ಪ. ಪಂಗಡಗಳಿಂದ ಹೊರತಾದವು ಎಂಬುದು ಸುಸ್ಪಷ್ಟ ಕೇವಲ ಆರ್ಥಿಕವಾಗಿ ದುರ್ಬಲ ಅಥವಾ ಹಿಂದುಳಿದ ವರ್ಗದವರು, ಈ ಅಧಿನಿಯಮದಡಿ ಅವರ ಹಿತಾಸಕ್ತಿಗಳ ಅಭಿವೃದ್ಧಿಗೆ ಅರ್ಹರಾಗುವುದಿಲ್ಲ.

ಪ್ರಸಕ್ತ ಮೀಸಲಾತಿ ಪದ್ಧತಿ 'ವರ್ಗಗಳು' ಇದರ ಪರವಾಗಿದೆ, ಆದರೆ ವ್ಯಕ್ತಿಗಳಿಗಲ್ಲ. ವ್ಯಕ್ತಿಗಳು ಅರ್ಹರಾಗಬೇಕಾದರೆ, ಆ ವರ್ಗಗಳಿಗೆ ಅವರು ಸೇರಿರಬೇಕು. ಆರ್ಥಿಕವಾಗಿ ಹಿಂದುಳಿದಿರುವ ಯಾವುದೇ ಒಂದು ಗೊತ್ತಾದ 'ವರ್ಗ' ಇರುವುದಿಲ್ಲ, ಎಲ್ಲಾ ವರ್ಗಗಳು ಮತ್ತು ಸಾಮಾಜಿಕ ಗುಂಪುಗಳು, ಆರ್ಥಿಕವಾಗಿ ದುರ್ಬಲವಾಗಿರುವ ವ್ಯಕ್ತಿಗಳನ್ನು ಹೊಂದಿದೆ. ಈ ಒಂದೇ ವಿಷಯದ ಆಧಾರದ ಮೇಲೆ, ಒಂದು ಗುಂಪು ಹಿಂದುಳಿದ ವರ್ಗ ಎಂದು ಕರೆಯಿಸಿಕೊಳ್ಳಲು ಅರ್ಹವಾಗುವುದಿಲ್ಲ.



ಮೇಲ್ಜಾತಿಗಳು ಸಾಮಾಜಿಕ ಗುಂಪುಗಳಲ್ಲ, ಆದರೆ ಮೀಸಲಾತಿ ಸಿಗಬೇಕಾದ ಗುಂಪುಗಳ ಜನರು ಎಂದು ವಾದ ಮಂಡಿಸಲಾಗುತ್ತಿದೆ. ಈಗಾಗಲೆ ಹೇಳಲಾಗಿರುವಂತೆ, 'ವರ್ಗಗಳಿಗೆ' ಸಂವಿಧಾನದಲ್ಲಿ ಮೀಸಲಾತಿ ಒದಗಿಸಲಾಗಿದೆ ವ್ಯಕ್ತಿಗಳಿಗಲ್ಲ. ವ್ಯಕ್ತಿಗಳಿಗೆ ಅಧಿಕಾರದ ಆಧಾರದ ಮೇಲೆ ಮೀಸಲಾತಿ ಒದಗಿಸಬೇಕಾದರೆ, ಈ ನಿಯಮ ಪೂರೈಸುವ ಎಲ್ಲಾ ಜಾತಿ, ಜನಾಂಗದವರು ಅರ್ಹರಾಗುತ್ತಾರೆ. ಅಲ್ಲದೆ ಯಾವುದೇ ವ್ಯತ್ಯಾಸವಿಲ್ಲದೆ ಪ.ಜಾತಿ ಮತ್ತು ಪ.ಪಂಗಡದವರು, ಹಿಂದುಳಿದ ವರ್ಗಗಳು ಎಲ್ಲರೂ ಇದಕ್ಕೆ ಒಳಪಡುತ್ತಾರೆ. ಏಕೆಂದರೆ, ಈ ರೀತಿಯ ಮೀಸಲಾತಿ ಸಾಮಾನ್ಯ ಗುಂಪಿಗೆ ಸೇರುತ್ತದೆ ಅಲ್ಲದೆ ಬೇರೆ ರೀತಿಯ ಮೀಸಲಾತಿ ಇದ್ದರೂ, ಇಲ್ಲದಿದ್ದರೂ ಎಲ್ಲರೂ ಈ ಮೀಸಲಾತಿಗೆ ಅರ್ಹರಾಗುತ್ತಾರೆ. ಒಂದು ವೇಳೆ, ವರ್ಗ ಮೀಸಲಾತಿಯಲ್ಲಿ ಸ್ಥಳಾವಕಾಶ ದೊರೆಯದಿದ್ದರೆ, ತನ್ನ ವರ್ಗಕ್ಕೆ ಮಾಡಿರುವ ಮೀಸಲಾತಿಯ ಬದಲಾಗಿ ಹಿಂದುಳಿದ ವರ್ಗದ ವ್ಯಕ್ತಿಯ ಹಿಂದುಳಿದಿರುವಿಕೆಯ ಆಧಾರದ ಮೇಲೆ ಈ ಮೀಸಲಾತಿ ಪಡೆಯಲು ಅರ್ಜಿ ಸಲ್ಲಿಸಬಹುದು. ಒಂದು ವೇಳೆ ಅವನು ಉದ್ಯೋಗಿಯಾದರೆ, ಅದನ್ನು ಅವನಿಗೆ ತಿರಸ್ಕರಿಸಲಾಗುವುದಿಲ್ಲ.

ಇನ್ನೊಂದೆಡೆ, ಅತಿ ಬಡವರು ಇದಕ್ಕೆ ಹಕ್ಕುದಾರರಾದರೆ ಅಂತಹವರು ಇದಕ್ಕೆ ಉತ್ತಮವಾಗಿ ಅರ್ಹರಾಗುತ್ತಾರೆ. ಆರ್ಥಿಕ ನಿಯಮ, ಅದೇನೆ ಆಗಿದ್ದರೂ, ಎಲ್ಲಾ ಸಾಮಾಜಿಕ ಗುಂಪುಗಳಿಗೂ ಅನ್ವಯಿಸುತ್ತದೆ. ಸಮಾನತೆಯ ಹಕ್ಕಿಗೆ ವಿರುದ್ಧವಾಗುತ್ತದೆ. ಯಾವುದೇ ಗುಂಪಿಗೆ ಅಥವಾ ಗುಂಪುಗಳಿಗೆ ಅವರನ್ನು ಸೀಮಿತಗೊಳಿಸಲಾಗದಿರುವುದರಿಂದ ಸಂವಿಧಾನಾತ್ಮಕವಾಗುವುದಿಲ್ಲ. ಮೀಸಲಾತಿ ಕುರಿತ ಸಮಸ್ಯೆಗೆ ತಮ್ಮ ಪ್ರತಿಷ್ಠಿತ ಧೋರಣೆಯಲ್ಲಿ ಬಹುತೇಕರು ಮರೆತು ಹೋಗುವ, ಪ್ರಸಕ್ತ ಮೀಸಲಾತಿ ನೀತಿಯಲ್ಲಿ ಗಮನಿಸಬೇಕಾದ ಕೆಲವು ಗುಣಗಳು. ತನ್ನ ದೃಷ್ಟಿಯಲ್ಲಿ ರಾಜ್ಯದ ಉದ್ಯೋಗಗಳಲ್ಲಿ 'ಸಮರ್ಪಕವಾಗಿ ಪ್ರತಿನಿಧಿತ'ವಾಗದ ಹಿಂದುಳಿದ ವರ್ಗಗಳ ಪರವಾಗಿ ಅಧಿನಿಯಮ ೧೬(೪)ರಲ್ಲಿ ಉದ್ಯೋಗ ಮೀಸಲಾತಿ ಕಲ್ಪಿಸಲಾಗಿದೆ. ಇದರಿಂದ ಈ 'ವರ್ಗ'ಗಳಿಗೆ ರಾಜ್ಯದ ಆಡಳಿತದಲ್ಲಿ ಸಮರ್ಪಕವಾದ ಪ್ರಾತಿನಿಧ್ಯ ನೀಡಲಿಕ್ಕಾಗಿ ಮೀಸಲಾತಿ ವ್ಯವಸ್ಥೆ ಮಾಡಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಪೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಏಕರೂಪ ನಾಗರಿಕ ಸಂಹಿತೆಗೆ ಭಾರತ ಸಿದ್ದವಾಗಿದೆಯೇ?

ವಿಶ್ಲೇಷಣೆ

ವಿವಿಧ ಭಾಷೆ-ಜನಾಂಗ, ಧರ್ಮ-ಸಂಸ್ಕೃತಿ ಮತ್ತು ಆಚರಣೆಗಳಿರುವ ಭಾರತದಲ್ಲಿ, ಸಾವಿರಾರು ವರ್ಷಗಳಿಂದಲೂ ಪರಸ್ಪರ ಸಹಿಷ್ಣುತೆ, ಉತ್ತಮ ಬಾಂಧವ್ಯಗಳಿರುವುದನ್ನು ಕಾಣುತ್ತೇವೆ. ಆದ್ದರಿಂದಲೇ ಭಾರತವನ್ನು ವಿವಿಧತೆಯಲ್ಲಿ ಏಕತೆ ಮೆರೆದ ರಾಷ್ಟ್ರ ಎನ್ನಲಾಗುತ್ತದೆ. ಆದರೆ ಇದೀಗ ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಹಿಡಿದಿರುವ ಎನ್‌ಡಿಎ ಸರ್ಕಾರ, ಜನಾಂಗ, ಜಾತಿ-ಧರ್ಮಗಳ ಮೇಲೆ ತನ್ನ ಹಿಂದೂವಾದಿ ಅಮಾನವೀಯ ನೀತಿಗಳನ್ನು ಹೇರಲು ಮುಂದಾಗಿದೆ. ಅವುಗಳಲ್ಲಿ ಏಕರೂಪ ನಾಗರಿಕ ಸಂಹಿತೆಯೂ ಒಂದು. ಈ ಏಕರೂಪ ನಾಗರಿಕ ಸಂಹಿತೆ ಯಿಂದಾಗುವ ಅನಾಹುತಗಳ ಕುರಿತ ಚರ್ಚೆ ಇಲ್ಲಿದೆ.

○ ನಾ. ದಿವಾಕರ

ಲೋಕಸಭಾ ಚುನಾವಣೆಯ ಕಾವು ಆರಂಭವಾಗುತ್ತಿರುವಂತೆಯೇ ನಮ್ಮ ರಾಜಕೀಯ ಪಕ್ಷಗಳು ಒಂದಲ್ಲ ಒಂದು ವಿವಾದಾತ್ಮಕ ವಿಷಯಗಳನ್ನು ಹುಟ್ಟು ಹಾಕುತ್ತಿರುತ್ತವೆ ಅಥವಾ ಕೆದಕುತ್ತಿರುತ್ತವೆ. ತನ್ನ ೫ ವರ್ಷಗಳ ಅವಧಿಯಲ್ಲಿ ಸಾಧನೆ ಶೂನ್ಯವಾಗಿರುವ ಭಾಜಪ ಈ ವಿವಾದಗಳಿಗಾಗಿ ತಡಕಾಡುತ್ತಿದೆ. ಸೋನಿಯಾರ ವಿದೇಶೀ ಅನನ್ಯತೆ, ಗೋಹತ್ಯೆ, ರಾಮ ಮಂದಿರ, ಲಾಹೋರ್ ಬಸ್ ಮತ್ತು ಸರ್ವೋಚ್ಚ ನ್ಯಾಯಾಲಯದ ದಯೆಯಿಂದ ಏಕರೂಪ ನಾಗರಿಕ ಸಂಹಿತೆ(ಏ.ನಾ.ಸಂ) ಈಗ ದೇಶದಾದ್ಯಂತ ಚರ್ಚೆಯ ವಿಷಯವಾಗಿದೆ. ಸಾಮಾನ್ಯ ಜನತೆಗೆ ತಮ್ಮ ದೈನಂದಿನ ಜೀವನದ ಜಂಜಾಟದಲ್ಲಿ ಕಿಂಚಿತ್ತು ಪ್ರಭಾವ ಬೀರದ ಈ ವಿವಾದಗಳು ರಾಜಕೀಯ ರಂಗದಲ್ಲಿ ಬಿರುಗಾಳಿ ಎಬ್ಬಿಸುತ್ತವೆ. ಈ ಬಿರುಗಾಳಿಗೆ ಸಿಲುಕಿ ಜನತೆಯ ಮುಖ್ಯ ಸಮಸ್ಯೆಗಳು ಎಲ್ಲೋ ಕಣ್ಮರೆಯಾಗಿಬಿಡುತ್ತವೆ. ಈ ಪ್ರಕ್ರಿಯೆಗೆ ಸ್ವಾಭಾವಿಕವಾಗಿ ರಾಜಕಾರಣಿಗಳು ನಾಂದಿ ಹಾಡಬೇಕಾದರೂ, ಈ ಬಾರಿ ನ್ಯಾಯಾಂಗವು ಬುನಾದಿ ಹಾಕಿದೆ.

ಭಾರತೀಯ ಉತ್ತರಾಧಿಕಾರ ಕಾಯ್ದೆಯಡಿ ಕ್ರೈಸ್ತ ಜನಾಂಗಕ್ಕೆ ಸೇರಿದವರು ತಮ್ಮ ಆಸ್ತಿಯನ್ನು ಯಾವುದೇ ಧಾರ್ಮಿಕ ಸೇವಾ ದತ್ತಿಗಳಿಗೆ ಬಿಟ್ಟುಕೊಡಲು ಅಸ್ಪದವಿರಲಿಲ್ಲ. ಈ ಕಾಯ್ದೆಯಲ್ಲಿನ ಕೆಲವು ನ್ಯೂನತೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ನ್ಯಾಯಮೂರ್ತಿ ವಿ.ಎನ್.ಖರೆ ಮತ್ತಿತರ ನ್ಯಾಯಮೂರ್ತಿಗಳು, ಪುನಃ 'ಏನಾಸಂ'ಯ ವಿವಾದವನ್ನು ಜೀವಂತಗೊಳಿಸಿದ್ದಾರೆ. ರಾಷ್ಟ್ರೀಯ ಏಕತೆ, ಅಖಂಡತೆಯ ದೃಷ್ಟಿಯಿಂದ, ಭಾರತೀಯ ಸಂವಿಧಾನದ ವಿಧಿ ೪೪ರ ನಿರ್ದೇಶಕ ತತ್ವಗಳಲ್ಲಿ ಹೇಳಿರುವಂತೆ, ಏಕರೂಪ ನಾಗರಿಕ ಸಂಹಿತೆ, ಜಾರಿಯಲ್ಲಿದೆ ಎಂಬ ಅಂಶವನ್ನು ಮನಗಾಣಬೇಕಾಗಿದೆ. ನಾಗರಿಕ ಕಾನೂನುಗಳ ನಿಬಂಧನೆ (Codification) ಎಂದರೆ, ಪ್ರಜೆಗಳ ನಡುವೆ ಖಾಸಗಿ ಜೀವನದಲ್ಲಿನ ಸಂಬಂಧಗಳನ್ನು ನಿಯಂತ್ರಿಸುವ ಒಂದು ಸಂಹಿತೆ. ಈ ದೃಷ್ಟಿಯಿಂದ ನೋಡಿದರೆ ಭಾರತದಲ್ಲಿ ಈಗಾಗಲೇ ಅನೇಕ ಕಾಯ್ದೆಗಳು ಜಾರಿಯಲ್ಲಿವೆ. ೧೮೭೨ರ ಕಾಂಟ್ರಾಕ್ಟ್ ಕಾಯ್ದೆ, ಆಸ್ತಿ ವರ್ಗಾವಣಾ ಕಾಯಿದೆ, ೧೮೮೨ರ ದತ್ತಿ ಕಾಯ್ದೆ, ೧೯೦೮ರ ನಾಗರಿಕ ನಿಯಮ ಸಂಹಿತೆ, ೧೯೫೬ರ ಕಂಪನೀಸ್ ಕಾಯ್ದೆ ಇತ್ಯಾದಿಗಳು ಉದಾಹರಣೆಗಳಷ್ಟೆ.

ಸಮಾನ ನಾಗರಿಕ ಸಂಹಿತೆ ಇಲ್ಲದ ಕಾರಣ ರಾಷ್ಟ್ರೀಯ ಏಕತೆಗೆ ಕುಂದುಬರುತ್ತಿದೆ ಎಂಬ ನ್ಯಾಯಾಲಯದ ಹೇಳಿಕೆ ಬಾಲಿಶ ಎನಿಸುತ್ತದೆ. ವಿವಿಧ ಧಾರ್ಮಿಕ ಜನತೆಗೆ ವಿವಿಧ ವೈಯಕ್ತಿಕ ಕಾನೂನುಗಳಿದ್ದಲ್ಲಿ ರಾಷ್ಟ್ರೀಯ ಏಕತೆಗೆ ಹೇಗೆ ಭಂಗ ಉಂಟಾಗುತ್ತದೆ ಎಂಬ ಅಂಶವನ್ನು ನ್ಯಾಯಾಲಯವು ವಿಶ್ಲೇಷಿಸಬೇಕಾಗುತ್ತದೆ. ವೈಯಕ್ತಿಕ ಕಾನೂನುಗಳಿಂದ ಪ್ರತ್ಯೇಕತಾ ಭಾವನೆ ಉಂಟಾಗುತ್ತದೆ ಎಂಬ ವಾದವೂ ಹುರುಳಿಲ್ಲದ್ದಾಗಿದೆ. ಭಾಷಾ ಅನನ್ಯತೆಯಿಂದ, ಭಾಷಾವಾರು ಪ್ರಾಂತ್ಯಗಳಿಂದ ರಾಷ್ಟ್ರೀಯ ಏಕತೆಗೆ ಎಷ್ಟರ ಮಟ್ಟಿಗೆ ಭಂಗ ಉಂಟಾಗಿದೆ? ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ಈ ದೃಷ್ಟಿಯಿಂದ ವಿಶ್ಲೇಷಿಸಬೇಕಾಗಿದೆ.

ನಮಗಿಂದು 'ಏನಾಸಂ'ಯ ಅವಶ್ಯಕತೆ ಇದೆಯೇ ಎಂಬುದೇ ಪ್ರಮುಖ ಪ್ರಶ್ನೆಯಾಗಿದೆ. ಸಂವಿಧಾನವೂ ಸಹ ಇದು ಅವಶ್ಯ ಎಂದು ಹೇಳುತ್ತದೆ. ಆದರೆ ಇದು ನಿರ್ದೇಶಕ ತತ್ವಗಳಲ್ಲಿ ಮಾತ್ರ ಉಲ್ಲೇಖಿತವಾಗಿದೆ. ಸಂವಿಧಾನದ ವಿಧಿ ೪೪ರ ನಿರ್ದೇಶಕ ತತ್ವಗಳಲ್ಲಿ ಈ ಅಂಶಮಾತ್ರವಲ್ಲದೆ 'ನೌಕರಿಯ ಹಕ್ಕು', 'ಶಿಕ್ಷಣದ ಹಕ್ಕು', 'ಮಕ್ಕಳಿಗೆ ಉಚಿತ ಖಡ್ಡಾಯ ಶಿಕ್ಷಣದ ಹಕ್ಕು' ಮುಂತಾದವು ಇವೆ. ಈ ಅಂಶಗಳೊಂದಿಗೆ, ಸರ್ಕಾರವು ದೇಶದಾದ್ಯಂತ ಜನತೆಗೆ ಅನ್ವಯಿಸುವಂತೆ ಸಮಾನ ನಾಗರಿಕ ಸಂಹಿತೆಯನ್ನು ರೂಪಿಸಲು ಪ್ರಯತ್ನಿಸಬೇಕು. ಎಂದು ಹೇಳಲಾಗಿದೆ. ಪ್ರಸ್ತುತ ತೀರ್ಪಿನಲ್ಲಿ ನ್ಯಾಯಮೂರ್ತಿ ವಿ.ಎನ್.ಖರ್‌ರವರು ಧಾರ್ಮಿಕ ಸಿದ್ಧಾಂತಗಳನ್ನು ಆಧರಿಸಿದ ವಿರೋಧಾಭಾಸಗಳನ್ನು ಹೋಗಲಾಡಿಸಲು ಏನಾಸಂ ಅಗತ್ಯ ಎಂದು ಹೇಳಿದ್ದಾರೆ. ಹಲವು ವರ್ಷಗಳ ಹಿಂದೆ ಶಾಹಬಾನೋ ಮೊಕದ್ದಮೆಯಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.



ಇದಾದ ಒಂದು ದಶಕದ ನಂತರ ನ್ಯಾಯಮೂರ್ತಿಗಳಾದ ಕುಲದೀಪಸಿಂಗ್ ಮತ್ತು ಆರ್.ಎಂ. ಸಹಾಯ್‌ಗವರುಗಳು ಸಂವಿಧಾನದ ಈ ತತ್ವವನ್ನು ಅನಷ್ಠಾನಗೊಳಿಸದಿರುವುದಕ್ಕೆ ನರಸಿಂಹ ರಾವ್ ಸರ್ಕಾರವನ್ನು ಹೀಯಾಳಿಸಿದ್ದರು. ಇಸ್ಲಾಂಗೆ ಮತಾಂತರ ಹೊಂದಿದ್ದ ನಾಲ್ವರು ಹಿಂದುಗಳ ಪರಿತ್ಯಕ್ತ ಪತ್ನಿಯರ ಬಗ್ಗೆ ಸಮಂಜಸವಾದ, ನ್ಯಾಯಯುತವಾದ ತೀರ್ಪು ನೀಡುವಾಗ ಈ ನ್ಯಾಯಮೂರ್ತಿಗಳು ಮಂಡಿಸಿದ ವಾದವನ್ನು ಅಂದು ಬಹುಪಾಲು ಪತ್ರಿಕೆಗಳು ಹಾಡಿ ಹೊಗಳಿದ್ದವು. ತದನಂತರವೇ 'ಏನಾಸಂ' ಮತ್ತು ರಾಷ್ಟ್ರೀಯ ಏಕತೆಗಳು ಸಮೀಕರಿಸಲ್ಪಟ್ಟವು. ಸಂವಿಧಾನ ಪರಾಮರ್ಶೆಯ ವರದಿಯಲ್ಲೂ ಇದು ಉಲ್ಲೇಖವಾಗಿತ್ತು. ಇದರಿಂದ ವ್ಯಕ್ತವಾಗುವ ಅಂಶವೆಂದರೆ ಏನಾಸಂ ಬಗ್ಗೆ ಎಲ್ಲೋ ಒಂದೆಡೆ, ಸಮಾನಾಭಿಪ್ರಾಯ ಸ್ಪಷ್ಟವಾಗುತ್ತಿದೆ. ಕುತೂಹಲಕಾರಿ ಅಂಶವೆಂದರೆ, ಸಂವಿಧಾನದ ವಿಧಿ ೪೪ನ್ನು ರಚಿಸುವ ಸಮಯದಲ್ಲೂ ಸಹ, ಇದೇ ರೀತಿಯ ಸಾಮಾಜಿಕ ರಾಜಕೀಯ ಪರಿಸ್ಥಿತಿ ಉಂಟಾಗಿತ್ತು. ಏನಾಸಂ ರೂಪು ಗೊಂಡ ರೀತಿ ಮತ್ತು ಅದನ್ನು ಕೈಬಿಟ್ಟದ್ದರ ಹಿಂದಿನ ಇತಿಹಾಸದ ಅವಲೋಕನ ಮಾಡಿದಲ್ಲಿ ಈಗಲೂ ಈ ವಿಷಯ ಏಕಿಷ್ಟು ಗೊಂದಲಮಯ, ವಿವಾದಾತ್ಮಾಕವಾಗಿದೆ ಎಂಬುದನ್ನು ಅರಿಯಬಹುದು.

ಸಂವಿಧಾನ ರಚನಾ ಸಮಿತಿ ಸಭೆ (Constituent Assembly)ಯಲ್ಲಿ ನಡೆದ ಚರ್ಚೆಗಳನ್ನು ಗಮನಿಸಿದಲ್ಲಿ, ಅಂದಿನ ಮುಸ್ಲಿಂ ಸದಸ್ಯರಲ್ಲಿ ವಿಧಿ ೪೪. (ಆಗ ವಿಧಿ ೩೫) ನಿರ್ದೇಶಕತತ್ವವನ್ನಾಗಿ ಅನುಷ್ಠಾನಗೊಳಿಸಲು ಒಪ್ಪಿಗೆಯಿರಲಿಲ್ಲ. ಆದರಿಂದ ಅವರ ಸಮುದಾಯದ ಪ್ರಜಾತಾಂತ್ರಿಕ ಹಕ್ಕು ಚ್ಯುತಿಯಾಗುವುದೆಂಬ ಭೀತಿ ಆವರಿಸಿತ್ತು. ವೈಯಕ್ತಿಕ ಕಾನೂನುಗಳು ಧಾರ್ಮಿಕ ಆಚರಣೆಗಳಿಗೆ

ಸಂಬಂಧಿಸಿರುವುದರಿಂದ ಏನಾಸಂ ಜಾರಿಗೆ ಬಂದರೆ ಈ ಕಾನೂನುಗಳು ಶಿಥಿಲವಾಗುತ್ತದೆ ಎಂಬ ವಾದವನ್ನು ಅಂದು ಮುಸ್ಲಿಂ ಸದಸ್ಯರು ಮಂಡಿಸಿದ್ದರು. ಅದಾಗ್ಯೂ ಸಹ ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ 'ಭಾರತದಲ್ಲಿ ಮಾನವ ಸಂಬಂಧಗಳನ್ನು ನಿರ್ಧರಿಸಿರುವ ಎಲ್ಲಾ ವಿಷಯಗಳಲ್ಲೂ ಏಕರೂಪ ನಾಗರಿಕ ಸಂಹಿತೆ ಜಾರಿಯಲ್ಲಿದೆ. ಆದರೆ ವಿವಾಹ ಮತ್ತು ಉತ್ತರಾಧಿಕಾರದ ಬಗ್ಗೆ ಮಾತ್ರ ಈ ಸಂಹಿತೆ ಪ್ರವೇಶಿಸಿಲ್ಲ ಈ ಬದಲಾವಣೆಯನ್ನು ತರುವುದೇ ವಿಧಿ ೩೫(೪೪)ರ ಉದ್ದೇಶವಾಗಿದೆ. ಅಂಬೇಡ್ಕರ್‌ರವರ ಚಿಂತನೆಯ ಹಿಂದೆ, ವೈಯಕ್ತಿಕ ಕಾನೂನುಗಳಿಗೂ ಧಾರ್ಮಿಕತೆಗೂ ಯಾವುದೇ ಸಂಬಂಧವಿಲ್ಲ ಎಂಬ ಅರ್ಥ ಕಂಡುಬರುತ್ತದೆ. ಒಂದು ಆಧುನಿಕ ಸೆಕ್ಯುಲರ್ ಸಮಾಜದಲ್ಲಿ ಈ ಸಂಬಂಧ ಇರಬಾರದೆಂದು ವ್ಯಕ್ತವಾಗುತ್ತದೆ. ವಿಶಾಲ ದೃಷ್ಟಿಕೋನದಿಂದ ನೋಡಿದರೆ ಅಂದಿನ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಏಕತೆ- ಅಖಂಡತೆಯನ್ನು ಕಾಪಾಡಲೆಂದೇ ಈ ಅಂಶವನ್ನು ನಿರ್ದೇಶಕ ತತ್ವಗಳಲ್ಲಿ ಸೇರಿಸಲಾಯಿತೆಂದು ಹೇಳಬಹುದು.

ಸ್ವಾತಂತ್ರ್ಯ ಪೂರ್ವದ ಅಥವಾ ಸ್ವಾತಂತ್ರ್ಯ ನಂತರದ ಅವಧಿಯಲ್ಲಿದ್ದ ರಾಜಕೀಯ ಸಾಮಾಜಿಕ ಪರಿಸ್ಥಿತಿ ಇಂದು ಇಲ್ಲ. ದೇಶದ ಅಲ್ಪಸಂಖ್ಯಾತರು ಇಂದು ಹೆಚ್ಚು ಪರಾಧೀನತೆಯನ್ನು ಎದುರಿಸುತ್ತಿದ್ದಾರೆ. ಹಾಗಾಗಿ ಸಂವಿಧಾನ ಶಿಲ್ಪಿಗಳ ಅಂದಿನ ಸೆಕ್ಯುಲರ್ ಅಭಿಪ್ರಾಯ ಚಿಂತನೆಗಳು ಏನೇ ಇದ್ದರೂ ಇಂದು ಏನಾಸಂಯ ಪ್ರಸ್ತುತತೆ ಬಗ್ಗೆ ವಸ್ತುನಿಷ್ಠವಾಗಿಯೇ ವಿಶ್ಲೇಷಿಸಬೇಕಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಏನಾಸಂ ಮತ್ತು ರಾಷ್ಟ್ರೀಯ ಏಕತೆಯನ್ನು ಸಮೀಕರಿಸಹೊರಟರೆ, ವೈಯಕ್ತಿಕ ಕಾನೂನಿನ ಪರವಾಗಿ ಮಾತನಾಡುವ ಪ್ರತಿಯೊಬ್ಬ ಅಲ್ಪಸಂಖ್ಯಾತನೂ ಸಂಶಯಾಸ್ಪದ ವ್ಯಕ್ತಿಯಾಗುತ್ತಾನೆ. ಸಂಘಪರಿವಾದ ದೃಷ್ಟಿಯಲ್ಲಿ ದೇಶದ್ರೋಹಿಯೇ ಆಗಿಬಿಡುತ್ತಾನೆ. ಏಕೆಂದರೆ ಯಾವುದೇ ರೀತಿಯ ವಿಭಿನ್ನತೆಗಳು, ಭಿನ್ನಾಭಿಪ್ರಾಯಗಳು, ಪ್ರತ್ಯೇಕತೆಗಳು, ರಾಷ್ಟ್ರೀಯ ಏಕತೆಗೆ ಭಂಗ ತರುವುದಿಲ್ಲ.

ಪ್ರಸ್ತುತ ಪರಿಸ್ಥಿತಿಯಲ್ಲಿ ಏನಾಸಂ ಅವಶ್ಯಕವಿಲ್ಲ, ಪ್ರಸ್ತುತವೂ ಅಲ್ಲ. ಏಕೆಂದರೆ, ಇಂದು ಹಿಂದೂ ಮೂಲಭೂತವಾದ, ಹಿಂದೂ ಭಯೋತ್ಪಾದಕತೆ ತನ್ನ ಪರಾಕಾಷ್ಠೆ ತಲುಪಿದೆ. ಇನ್ನೊಂದೆಡೆ ಅಲ್ಪಸಂಖ್ಯಾತರ ಮೇಲೆ ಈ ರೀತಿ ಪ್ರಹಾರವಾಗುತ್ತಿರುವಾಗ ಸಮುದಾಯಗಳ ನಡುವೆ ನಂಬಿಕೆಯ ಭಾವನೆ ಇಲ್ಲದಿರುವಾಗ, ಏನಾಸಂಯನ್ನು ಅನುಷ್ಠಾನಗೊಳಿಸುವುದು ಪ್ರಜಾತಾಂತ್ರಿಕ ದೃಷ್ಟಿಯಿಂದ ಒಳಿತಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಲವು ಗುಂಪುಗಳು ಸಾಮುದಾಯಿಕ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಗೋಜಿಗೆ ಹೋಗಿಲ್ಲ. ಇದರಿಂದ ಉಂಟಾಗಿರುವ ಪ್ರತಿಕೂಲ ಪರಿಣಾಮವೆಂದರೆ, ವೈಯಕ್ತಿಕ ಕಾನೂನುಗಳನ್ನು ತಮ್ಮ ಅನನ್ಯತೆಯನ್ನು ಕಾಪಾಡುತ್ತಿವೆ ಎಂದು ಭಾವಿಸಿರುವ ಮುಸ್ಲಿಂ ಸಮುದಾಯದ ಜನರೆ ಹೆಚ್ಚು ಹಿನ್ನಡೆ ನಷ್ಟ ಅನುಭವಿಸುತ್ತಿದ್ದಾರೆ. ಅಲ್ಪಸಂಖ್ಯಾತರ ಸಮುದಾಯ, ಬಹುಸಂಖ್ಯಾತರ

ಯಾವುದೇ ಸಂಹಿತೆ ಅದರ ವ್ಯಾಖ್ಯಾನದ ಮೇಲೆ ಅವಲಂಬಿತವಾಗುತ್ತದೆ. ನ್ಯಾಯವಾದಿಗಳು ಸಂಹಿತೆಗಳನ್ನು ಹೇಗೆ ಬೇಕಾದರೂ ಅರ್ಥೈಸುತ್ತಾರೆ. ಇಲ್ಲಿ ಭಾರತೀಯ ಸಂದರ್ಭದಲ್ಲಿ ಏನಾಸಂಯ ಬಗ್ಗೆ ವಿಶ್ಲೇಷಿಸುವಾಗ ಎರಡು ಮುಖ್ಯ ಅಂಶಗಳನ್ನು ಗ್ರಹಿಸಬಹುದು. ಒಂದು ನಕಾರಾತ್ಮಕ ಅಂಶ ವೆಂದರೆ, ವಿವಾಹ ಆಸ್ತಿ ಮುಂತಾದವುಗಳನ್ನು ಕುರಿತಂತೆ ಅನೇಕ ವೈಯಕ್ತಿಕ ಕಾನೂನುಗಳು ಮಹಿಳಾ ವಿರೋಧಿ ಆಗಿವೆ. ಇನ್ನೊಂದು ಅಂಶವೆಂದರೆ 'ಏನಾಸಂ'ಗೆ ಆಗ್ರಹ ಪಡಿಸುವುದು ಶುದ್ಧ ರಾಜಕೀಯ ತಂತ್ರವಾಗಿದೆ. ಹಿಂದೂ ಗಳಿಗೆ ಒಂದು ಸಂಹಿತೆ ಇದೆ, ಮುಸ್ಲಿಮರಿಗೂ ಹಾಗೇ ಇರಬೇಕು ಎಂಬುದು ಈ ವಾದ ಮಂಡಿಸುವವರ ಅಭಿ ಪ್ರಾಯ.

ಅಕ್ರಮಣದ ನೆಪ ಒಡ್ಡಿ ಯಾವುದೇ ರೀತಿಯ ಸುಧಾರಣಾ ಕ್ರಮಗಳ ಬಗ್ಗೆ ಚರ್ಚೆಗಳಿಗೆ ಅಸ್ಪದ ನೀಡುತ್ತಿಲ್ಲ. ಇದರಿಂದ ಬಹುಸಂಖ್ಯಾತರ ಕೋಮುವಾದಕ್ಕೆ ಪುಷ್ಟಿ ನೀಡಿದಂತಾಗುತ್ತದೆ. ಈ ಚರ್ಚೆಗಳು ಹೀಗೆ ಮುಂದೂಡಲ್ಪಡುತ್ತಾ ಹೋದಲ್ಲಿ, ಮುಸ್ಲಿಂ ಧಾರ್ಮಿಕ ರಾಜಕೀಯ ನಾಯಕರು ಸುಧಾರಣಾ ಕ್ರಮಗಳ ಬಗ್ಗೆ ಗಂಭೀರ ಚಿಂತನೆ ನಡೆಸದೆ ಹೋದಲ್ಲಿ, ಅಲ್ಪಸಂಖ್ಯಾತರು ಇನ್ನು ಹೆಚ್ಚು ಪರಾಧೀನತೆಯನ್ನು ಅನುಭವಿಸಬೇಕಾಗುತ್ತದೆ. ಭಾರತೀಯ ಕಾನೂನಿನಲ್ಲಿ ಯಾವುದೇ ರೀತಿಯ ನ್ಯೂನತೆಗಳಿದ್ದರೂ ಸಾಮುದಾಯಿಕ, ಸಾಮಾಜಿಕ ಸುಧಾರಣೆಗಳಿಗೆ ಪ್ರಭುತ್ವದ ನೆರವು ಅಗತ್ಯವಿರುವುದಿಲ್ಲ.

ಈಗಿನ ವಾದ ವಿವಾದಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ವೈಯಕ್ತಿಕ ಕಾನೂನು ಅಲ್ಪಸಂಖ್ಯಾತರಿಗೆ ಮಾತ್ರ ಸಂಬಂಧಿಸಿದ್ದು ಮತ್ತು ಹಿಂದೂ ಸಂಹಿತೆ ಮಸೂದೆ ನ್ಯಾಯಯುತವಾಗಿದೆ ಎಂಬ ಅಭಿಪ್ರಾಯ ಕಂಡುಬರುತ್ತದೆ. ಈ ಎರಡೂ ವಾದಗಳೂ ಹುರುಳಿಲ್ಲದವುಗಳೆಂದು ಹೇಳಬಹುದು. ಆಸ್ತಿಯ ವಿಚಾರದಲ್ಲಿ ಈಗಲೂ ಎಲ್ಲಾ ಧರ್ಮಗಳಲ್ಲಿ ಧಾರ್ಮಿಕ ಅನನ್ಯತೆಯ ಪ್ರಶ್ನೆಯೇ ಆಗಿದೆ. ಅದೂ ಅಲ್ಲದೆ ಹಿಂದೂ ಸಂಹಿತೆಯ ಮಸೂದೆಯು ಹಿಂದೂ ಕಾನೂನನ್ನು ಸೆಕ್ಯುಲಾರ್ ಕಾನೂನು ಆಗುವಂತೆ ಮಾಡಿದ್ದೂ ಅಲ್ಲದೆ ಏಕೀಕೃತ ಹಿಂದೂ ಅನನ್ಯತೆಯನ್ನು ಸೃಷ್ಠಿ ಮಾಡಿತು. ಹಿಂದೂ ಸಂಹಿತೆಗಳಲ್ಲಿ ಸುಧಾರಣೆಗಳನ್ನು ಸಂಸತ್ತಿನಲ್ಲಿನ ಹಿಂದೂ ಪ್ರತಿನಿಧಿಗಳೇ ಅಂಗೀಕರಿಸಿದ್ದರೆಂಬುದು ಗಮನಾರ್ಹ ಅಂಶ. ಆದ್ದರಿಂದ ಅಲ್ಪಸಂಖ್ಯಾತರಿಗೂ ಸಹ ಅವರ ವೈಯಕ್ತಿಕ ಧಾರ್ಮಿಕ ಕಾನೂನಿನಲ್ಲಿ ಬದಲಾವಣೆ ತರಲು ಅವರಲ್ಲೇ ಚರ್ಚೆಗೆ ಅವಕಾಶ ಒದಗಿಸಬೇಕು. ಪ್ರಜಾತಾಂತ್ರಿಕ ದೃಷ್ಟಿಯಿಂದ ಇದು ಅವಶ್ಯಕ.

ಇನ್ನೊಂದೆಡೆ ವೈಯಕ್ತಿಕ ಕಾನೂನುಗಳು ಧಾರ್ಮಿಕ ಅನನ್ಯತೆಗಳಿಗೆ ಸಂಬಂಧಿಸಿದ್ದೆಂದು ಹೇಳಲಾಗುತ್ತದೆ. ಈ ವಾದ ಕೊಂಚ ಮಟ್ಟಿಗೆ ನಿಜವಾದರೂ ವೈಯಕ್ತಿಕ ಕಾನೂನುಗಳು ಬಹಳ ಸಂಕೀರ್ಣವಾದ ವಿಷಯ ಎಂಬ ಅಂಶವನ್ನು ಮನಗಾಣಬೇಕು. ಸಂಪ್ರದಾಯ-ಪರಂಪರೆ-ಪ್ರಭುತ್ವಗಳ ನಡುವಿನ ಪರಸ್ಪರ ಕ್ರಿಯೆಯಲ್ಲಿ ವೈಯಕ್ತಿಕ ಕಾನೂನುಗಳು ಹುಟ್ಟಿಕೊಳ್ಳುತ್ತವೆ. ವೈಯಕ್ತಿಕ ಕಾನೂನುಗಳು ಪ್ರಮುಖವಾಗಿ ವಿವಾಹ ಹಾಗೂ ಆಸ್ತಿ ವಿಷಯದಲ್ಲಿ ಸಮುದಾಯಗಳನ್ನು ನಿಯಂತ್ರಿಸುತ್ತವೆ. ಈ ಎರಡೂ ಕ್ಷೇತ್ರಗಳಲ್ಲಿ ಪುರುಷ ಪ್ರಾಧಾನ್ಯತೆಯೇ ಮುಖ್ಯ ಅಂಶವಾಗಿರುವುದರಿಂದ, ಈ ನಿಟ್ಟಿನಲ್ಲಿ ಯಾವುದೇ ಸುಧಾರಣೆ ತರಲು ಪುರುಷಪ್ರಧಾನ ಸಮಾಜ ಒಪ್ಪುವುದಿಲ್ಲ. ವೈಯಕ್ತಿಕ ಕಾನೂನನ್ನು ಸಮರ್ಥಿಸುವವರು ಅವರ ಸಮುದಾಯದ ಭಾವನೆಗಳು ಯಾವುದೇ ಸುಧಾರಣೆಗೆ ಸಿದ್ಧರಾಗಿಲ್ಲ ಎಂಬ ವಾದವನ್ನು ಮಂಡಿಸುತ್ತಾರೆ. ಈ ಅಂಶ ಬಹಳ ಕ್ಲಿಷ್ಟವಾದದ್ದೆಂದು ಹೇಳಬಹುದು. ಏಕೆಂದರೆ ಅಲ್ಪಸಂಖ್ಯಾತರಲ್ಲಿ ಸಮುದಾಯದ ಭಾವನೆಗಳನ್ನು ನಿರ್ಧರಿಸುವವರು ಪ್ರತಿಗಾಮಿ ಪುರೋಹಿತಶಾಹಿ, ಸಂಪ್ರದಾಯವಾದಿಗಳೇ ಆಗಿರುತ್ತಾರೆ. ಹಾಗಾಗಿಯೇ ಪ್ರತಿಯೊಂದು ಸಮುದಾಯದಲ್ಲೂ ಸಹ ಕೆಲವು ಜನ ವೈಯಕ್ತಿಕ ಕಾನೂನುಗಳಲ್ಲಿ ತೀವ್ರ ಸುಧಾರಣೆಗಳನ್ನು ಬಯಸಿ, ನ್ಯಾಯಾಲಯದ ಮೊರೆ ಹೋಗುತ್ತಾರೆ.

ಈ ಹಿನ್ನೆಲೆಯಿಂದ ನೋಡಿದಾಗ 'ಏನಾಸಂ' ವಿವಾದವನ್ನೇ ಪುನರ್ ಪರಿಶೀಲಿಸುವುದು ಅಗತ್ಯವಾಗುತ್ತದೆ. ಕೇವಲ ಒಂದು ಸಂಹಿತೆಯನ್ನು ರೂಪಿಸುವುದರಿಂದ ಕೆಟ್ಟ ಕಾನೂನುಗಳು ಹೊರಹೊಮ್ಮಬಹುದೇ ಹೊರತು ಮತ್ತೇನೂ ಆಗಲಾರದು. ಏಕೆಂದರೆ ಯಾವುದೇ ಸಂಹಿತೆ ಅದರ ವ್ಯಾಖ್ಯಾನದ ಮೇಲೆ ಅವಲಂಬಿತವಾಗುತ್ತದೆ. ನ್ಯಾಯವಾದಿಗಳು ಸಂಹಿತೆಗಳನ್ನು ಹೇಗೆ ಬೇಕಾದರೂ ಅರ್ಥೈಸುತ್ತಾರೆ. ಇಲ್ಲಿ ಭಾರತೀಯ ಸಂದರ್ಭದಲ್ಲಿ ಏನಾಸಂಯ ಬಗ್ಗೆ ವಿಶ್ಲೇಷಿಸುವಾಗ ಎರಡು ಮುಖ್ಯ ಅಂಶಗಳನ್ನು ಗ್ರಹಿಸಬಹುದು. ಒಂದು ನಕಾರಾತ್ಮಕ ಅಂಶವೆಂದರೆ, ವಿವಾಹ ಆಸ್ತಿ ಮುಂತಾದವುಗಳನ್ನು ಕುರಿತಂತೆ ಅನೇಕ ವೈಯಕ್ತಿಕ ಕಾನೂನುಗಳು ಮಹಿಳಾ ವಿರೋಧಿ ಆಗಿವೆ. ಇನ್ನೊಂದು ಅಂಶವೆಂದರೆ

'ಏನಾಸಂ'ಗೆ ಆಗ್ರಹಪಡಿಸುವುದು ಶುದ್ಧ ರಾಜಕೀಯ ತಂತ್ರವಾಗಿದೆ. ಹಿಂದೂಗಳಿಗೆ ಒಂದು ಸಂಹಿತೆ ಇದೆ, ಮುಸ್ಲಿಮರಿಗೂ ಹಾಗೇ ಇರಬೇಕು ಎಂಬುದು ಈ ವಾದ ಮಂಡಿಸುವವರ ಅಭಿಪ್ರಾಯ. ಆದರೆ ಹಿಂದೂಗಳು ಅವಿಭಕ್ತ ಕುಟುಂಬಗಳ ಆಸ್ತಿಯ ಕಾನೂನನ್ನು ಸಂಹಿತೆಯಾಗಿ ಮಾಡಲಿಲ್ಲ ಎಂಬ ಅಂಶವಂತೂ ಸತ್ಯ. ಈ ರೀತಿಯ ಕೆಲವು ಕಾನೂನುಗಳು ಹೀಗಿವೆ.

ಹಿಂದೂ, ಸಿಖ್, ಜೈನ ಸಮುದಾಯಗಳು ಹಿಂದೂ ವಿವಾಹ ಕಾಯ್ದೆ ೧೯೫೫ ಹಿಂದೂ ಉತ್ತರಾಧಿಕಾರ ಕಾಯ್ದೆ ೧೯೫೬ಕ್ಕೆ ಒಳಪಟ್ಟಿರುತ್ತಾರೆ. ಈ ಕಾನೂನುಗಳು ದ್ವಿಪತ್ನಿತ್ವವನ್ನು ನಿಷೇಧಿಸಿದ್ದರೂ ಹಿಂದೂ ಪುರುಷರು ಈ ಪರಂಪರೆಯನ್ನು ಪಾಲಿಸಿಕೊಂಡೇ ಬಂದಿದ್ದಾರೆ. ದ್ವಿಪತ್ನಿತ್ವದ ಆಧಾರದ ಮೇಲೆ ಹಿಂದೂ ಮಹಿಳೆಯು ವಿಚ್ಛೇದನ ಪರಿಹಾರ ಕೇಳಿದಲ್ಲಿ ಆತ ತನ್ನ ಪತಿ ಎರಡನೆ ವಿವಾಹವಾಗಿರುವುದನ್ನು ಆಧಾರ ಸಹಿತ ನಿರೂಪಿಸಬೇಕಾಗುತ್ತದೆ. ಹಿಂದೂ ವಿವಾಹ ಕಾಯ್ದೆಯಡಿಯಲ್ಲಿ ವಿವಾಹಗಳ ನೊಂದಣಿ ಆಗುವುದಿಲ್ಲವಾದ್ದರಿಂದ ಇದನ್ನು ನಿರೂಪಿಸಲು ಅಸಾಧ್ಯವಾಗುತ್ತದೆ.

ಹಿಂದೂ ಉತ್ತರಾಧಿಕಾರ ಕಾಯ್ದೆಯಡಿಯಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಉಯಿಲು ಬರೆಯದೆ ಇದ್ದಲ್ಲಿ ಮಹಿಳೆಯರಿಗೆ ಸಮಾನ ಪಾಲು ಇರುತ್ತದೆ. ಆದರೆ ಅನೇಕ ನ್ಯಾಯವಾದಿಗಳ ಅಭಿಪ್ರಾಯದಲ್ಲಿ ಬಹುತೇಕ ಹೆಣ್ಣುಮಕ್ಕಳು ವರದಕ್ಷಿಣೆಗೆ ಬದಲಾಗಿ ತಮ್ಮ ಪಾಲಿನ ಆಸ್ತಿಯನ್ನು ಬಿಟ್ಟುಕೊಡುತ್ತಾರೆ. ಕೌಟುಂಬಿಕ ಸಂಬಂಧಗಳನ್ನು ಉಳಿಸಿಕೊಳ್ಳಲು ಅನೇಕ ಸಂದರ್ಭಗಳಲ್ಲಿ ಆಸ್ತಿಯಲ್ಲಿ ಪಾಲು ಕೇಳುವ ಗೋಜಿಗೇ ಹೋಗುವುದಿಲ್ಲ.

ಹಿಂದೂ ಉತ್ತರಾಧಿಕಾರ ಕಾಯ್ದೆಯಡಿಯಲ್ಲಿ ಹಿಂದೂ ಅವಿಭಕ್ತ ಕುಟುಂಬದಲ್ಲಿ ಎಲ್ಲಾ ಆಸ್ತಿಯೂ ಪುರುಷರಿಗೇ ದಕ್ಕುವಂತಹ ಕಾನೂನುಗಳಿವೆ. ಮಗನಿಗೆ ತಂದೆಗೆ ಸಮನಾಗಿ ಪಾಲು ದೊರೆತರೆ ಮಗಳಿಗೆ ತಂದೆಯ ಪಾಲಿನಲ್ಲಿ ಒಂದಂಶ ಮಾತ್ರ ಸಿಗುತ್ತದೆ. ಹೆಣ್ಣು ಮಗಳು ಅವಿವಾಹಿತೆಯಾಗಿದ್ದಲ್ಲಿ ಅಥವಾ ವಿವಾಹ ವಿಚ್ಛೇದನ ಪಡೆಯದಿದ್ದಲ್ಲಿ ಮಾತ್ರ ತಂದೆಯ ಮನೆಯಲ್ಲಿ ವಾಸಿಸಬಹುದು. ಕುಟುಂಬದಲ್ಲಿ ಪುರುಷರು ಇರುವವರೆಗೂ ಆಕೆ ಆಸ್ತಿಯಲ್ಲಿ ಪಾಲು ಕೇಳುವ ಹಾಗಿಲ್ಲ, ಕೃಷಿ ಆಸ್ತಿಯಡಿ ಸಹ ಮಹಿಳೆಯರಿಗೆ ಪೂರ್ಣ ಲಭ್ಯವಾಗುವುದಿಲ್ಲ, ಮತ್ತು ಹೆಣ್ಣುಮಗಳ ತವರು ಮನೆ, ಆಕೆಯ ಸಂಪಾದನೆಯಿಂದಲೇ ಕೊಂಡಿದ್ದರೆ ಮಾತ್ರ ಆಕೆಗೆ ಅದರ ಮೇಲೆ ಆಸ್ತಿಯ ಹಕ್ಕು ಇರುತ್ತದೆ. ಈ ಕಾಯ್ದೆಯನ್ನು ರೂಪಿಸಲು ೧೫ ವರ್ಷಗಳ ಕಾಲ ಹಿಡಿಯಿತಾದರೆ ಅಂದಿನ ಪ್ರಧಾನಿ ನೆಹರು, ರಾಷ್ಟ್ರಪತಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ರವರ ನಡುವಿನ ಭಿನ್ನಾಭಿಪ್ರಾಯದಿಂದ, ಅದು ಅಪೂರ್ಣವಾಗಿಯೇ ಉಳಿಯಿತು. 'ಹಾಗಾಗಿಯೇ ಇಂದು ಒಬ್ಬ ಹಿಂದೂ ಮಹಿಳೆ ಭಾರತದ ಪ್ರಧಾನಿಯಾಗಿರಬಹುದು ಆದರೆ ಅವಿಭಕ್ತ ಕುಟುಂಬದ ಕರ್ತಾ (ಮುಖ್ಯಸ್ಥೆ) ಆಗಲಾಗುವುದಿಲ್ಲ' (ರಾಜೀವ್ ಧಾನನ್ ದಿ ಹಿಂದೂ)

ಎಲ್ಲಕ್ಕಿಂತಲೂ ಮಿಗಿಲಾಗಿ ನಾಗರಿಕ ಸಂಹಿತೆ ನಾಗರಿಕ ಸಮಾಜಕ್ಕೆ ಅವಶ್ಯವಾಗಿರುತ್ತದೆ. ಆದರೆ ಭಾರತೀಯ ಸಮಾಜದಲ್ಲಿರುವ ಅನಿಷ್ಟ ಜಾತಿ ಪದ್ಧತಿ, ಜಾತಿ ದ್ವೇಷ, ಕೋಮು ದ್ವೇಷ, ಹಿಂಸಾತ್ಮಕ ಪ್ರವೃತ್ತಿ ಇತ್ಯಾದಿಗಳನ್ನು ನೋಡಿದಾಗ ನಮ್ಮ ಸಮಾಜವು ನಾಗರಿಕ ಸಮಾಜವೇ? ಎಂಬ ಅನುಮಾನ ಮೂಡುತ್ತದೆ. ಮೊದಲು ನಾಗರಿಕರಾಗಲು ಯತ್ನಿಸಿ ನಂತರ ನಾಗರಿಕ ಸಂಹಿತೆಯ ಬಗ್ಗೆ ಪ್ರಸ್ತಾಪಿಸಿದ್ದಲ್ಲಿ ಅದು ಪ್ರಜಾತಾಂತ್ರಿಕ ಎನಿಸಿಕೊಳ್ಳುತ್ತದೆ. ಇಲ್ಲದಿದ್ದಲ್ಲಿ ಸಂಘಪರಿವಾರದ ಅಲ್ಪಸಂಖ್ಯಾತ ವಿರೋಧಿ ಫ್ಯಾಸಿಸ್ಟ್ ತಂತ್ರಗಳಿಗೆ ಉತ್ತಮ ವೇದಿಕೆ ಒದಗಿಸಿದಂತಾಗುತ್ತದೆ. ನ್ಯಾಯಾಲಯಗಳು, ನ್ಯಾಯಮೂರ್ತಿಗಳು ಈ ಬೆಳವಣಿಗೆಗೆ ಅವಕಾಶ ನೀಡದಿರುವುದು ಒಳಿತು.

ಮುಸ್ಲಿಂ ಕಾನೂನುಗಳ ಪೈಕಿ ೧೯೩೭ರ ಶರಿಯತ್ ಕಾಯ್ದೆ ೧೯೩೯ರ ಮುಸ್ಲಿಂ ವಿವಾಹ ವಿಚ್ಛೇದನ ಕಾಯ್ದೆ ೧೯೮೬ರ ಮುಸ್ಲಿಂ ಮಹಿಳೆ (ವಿಚ್ಛೇದನಾ ಹಕ್ಕುಗಳ ರಕ್ಷಣಾ) ಕಾಯ್ದೆ ಮುಂತಾದವುಗಳನ್ನು ಸಂಹಿತೆಗಳನ್ನಾಗಿ ಮಾಡಲಾಗಿದೆ. ಶರಿಯತ್ ಕಾಯ್ದೆಯ ಪ್ರಕಾರ ಮುಸ್ಲಿಂ ವೈಯಕ್ತಿಕ ಕಾನೂನು ಮಾತ್ರ ಮುಸ್ಲಿಂ ಸಮುದಾಯವನ್ನು ನಿಯಂತ್ರಿಸುತ್ತದೆ ಮತ್ತು ಈ ಕಾಯ್ದೆ ಸಂಪ್ರದಾಯವನ್ನೂ ಮೀರಿ ನಿಲ್ಲುತ್ತದೆ. ಆದರೆ ವಾಸ್ತವವಾಗಿ ಶರಿಯತ್ ಕಾಯ್ದೆ ಮುಖ್ಯ ವಾಗಿ ಖುರಾನ್ ಗ್ರಂಥವನ್ನೇ ಆಧರಿಸಿದೆ. ಈ ನಿಟ್ಟಿನಲ್ಲಿ ನಾಲ್ಕು ವಿಭಿನ್ನ ಚಿಂತನೆಗಳಿದ್ದು ಒಂದೊಂದು ಪಂಗಡವು ಒಂದೊಂದು ರೀತಿಯಲ್ಲಿ ವಿಶ್ಲೇಷಿಸುತ್ತವೆ. ೧೯೩೯ರ ಮುಸ್ಲಿಂ ವಿವಾಹ ಕಾಯ್ದೆಯು ಮುಸ್ಲಿಂ ಮಹಿಳೆಗೆ ವಿಚ್ಛೇದನದ ಹಕ್ಕನ್ನೂ, ಖುರಾನ್‌ನಲ್ಲಿ ಕಂಡುಬರುವ ಷರತ್ತುಗಳನ್ನೊಡ್ಡಿ ನಿರ್ಬಂಧಿಸುತ್ತವೆ. ಮುಸ್ಲಿಂ ಮಹಿಳೆ ವಿಚ್ಛೇದನ ಪಡೆಯಬೇಕಾದರೆ ಪತಿಯ ಕ್ರೂರತೆ, ನಪುಂಸಕತ್ವವನ್ನು ನಿರೂಪಿಸಬೇಕಾಗುತ್ತದೆ. ಆದರೆ ಮುಸ್ಲಿಂ ಪುರುಷ ಮೂರು ಸಲ ತಲಾಖ್ ಉಚ್ಚರಿಸುವ ಮೂಲಕ ವಿಚ್ಛೇದನ ನೀಡಬಹುದು. ಖುರಾನಿನ ಪ್ರಕಾರ ಮಹಿಳೆಯರಿಗೂ ಆಸ್ತಿಯಲ್ಲಿ ಸಮಪಾಲು ಲಭ್ಯವಿದೆ. ಆದರೆ ಈ ಕಾಯ್ದೆಯಲ್ಲಿ ಅದನ್ನು ಸೋದರರ ಪಾಲಿನ ಅರ್ಧಕ್ಕೆ ಸೀಮಿತಗೊಳಿಸಲಾಗಿದೆ. ೧೯೩೭ರ ಶರಿಯತ್ ಕಾಯ್ದೆ ಮಹಿಳೆಯರಿಗೆ ಕೃಷಿ ಭೂಮಿಯ ಪಾಲನ್ನೂ ನಿರಾಕರಿಸುತ್ತದೆ. ಇದನ್ನು ಜಮೀನ್ದಾರಿ ನಿರ್ಮೂಲನಾ ಕಾಯ್ದೆಯಲ್ಲೂ ಅಂಗೀಕರಿಸಲಾಗಿದೆ. ಬಹುಪತ್ನಿತ್ವ ಮುಸ್ಲಿಮರಲ್ಲಿ ಇಂದಿಗೂ ಜಾರಿಯಲ್ಲಿದ್ದರೆ, ಪುರುಷನು ಮಾತ್ರ ಮಕ್ಕಳ ಏಕೈಕ ಪೋಷಕನಾಗುವ ಹಕ್ಕು ಪಡೆದಿರುತ್ತಾನೆ.

ಕ್ರೈಸ್ತ ವೈಯಕ್ತಿಕ ಕಾನೂನಿನಲ್ಲಿ ೧೮೭೨ರ ಭಾರತೀಯ ಕ್ರೈಸ್ತ ವಿವಾಹ ಕಾಯ್ದೆ ಮತ್ತು ೧೮೬೯ರ ಭಾರತೀಯ ವಿಚ್ಛೇದನ ಕಾಯ್ದೆ ಎರಡನ್ನೂ ಸಂಹಿತೆಗಳನ್ನಾಗಿ ಪರಿವರ್ತಿಸಲಾಗಿದೆ. ಹಲವಾರು ಬದಲಾವಣೆ ತಿದ್ದುಪಡಿಗಳ ನಂತರ ಹೆಚ್ಚು ತಾರತಮ್ಯ ಇಲ್ಲದ ಕಾನೂನುಗಳಾಗಿವೆ. ೧೮೬೯ರ ವಿಚ್ಛೇದನಾ ಕಾಯ್ದೆಯಡಿಯಲ್ಲಿ ಪತಿ ಪತ್ನಿಯರಿಗೆ ವಿಚ್ಛೇದನ ನೀಡುವ ಸಮಾನ ಹಕ್ಕುಗಳನ್ನು ನೀಡಲಾಗಿದೆ ಆದರೆ ಪರಸ್ಪರ ಒಪ್ಪಿಗೆಯ ಮೇಲೆ ವಿಚ್ಛೇದನ ಪಡೆದವರು ಎರಡು ವರ್ಷಗಳ ಕಾಲ ಬೇರೆ ಇರಬೇಕಾಗುತ್ತದೆ. ಇತರ ವೈಯಕ್ತಿಕ ಕಾನೂನಿನಲ್ಲಿ ಎಲ್ಲಾ ಚರ್ಚುಗಳೂ ಈ ತಿದ್ದುಪಡಿಗಳಿಗೆ ಒಪ್ಪಿಗೆ ನೀಡಿದ್ದರೂ ರೋಮನ್ ಕ್ಯಾಥೋಲಿಕ್ ಚರ್ಚುಗಳು ಭಾರತೀಯ ವಿಚ್ಛೇದನ ಕಾನೂನನ್ನು ಅಂಗೀಕರಿಸುವುದಿಲ್ಲ.

ಗೋವಾದ ಕಾನೂನುಗಳನ್ನು ಹೊರತು ಪಡಿಸಿದರೆ, ಬೇರೆಲ್ಲಾ ಕಾನೂನುಗಳನ್ನು ವಿಶ್ಲೇಷಿಸುವಾಗ ಕಂಡು ಬರುವ ಮುಖ್ಯ ಅಂಶವೆಂದರೆ ಭಾರತೀಯ ಮಹಿಳೆಯರು ಎದುರಿಸುತ್ತಿರುವ ಅಸಮಾನತೆಯಲ್ಲೂ ಒಂದು ವಿಷಯದಲ್ಲಿ ಐಕ್ಯತೆ ಕಾಣಬಹುದು. ಯಾವುದೇ ಧರ್ಮದ ಮಹಿಳೆಯರಿಗೂ ತವರು ಮನೆಯ ಆಸ್ತಿ ದಕ್ಕುವುದಿಲ್ಲ. ಇದರಿಂದ ವಿವಾಹ ಬಂಧನ ಕಳೆದುಕೊಂಡ ಮಹಿಳೆಯರು ಯಾವುದೇ ನೆಲೆ ಇಲ್ಲದೆ ಸಂಬಂಧಿಕರನ್ನು ಅವಲಂಬಿಸಬೇಕಾಗುತ್ತದೆ.

ವೈಯಕ್ತಿಕ ಕಾನೂನುಗಳಲ್ಲಿನ ಈ ಹಲವಾರು ನ್ಯೂನತೆಗಳನ್ನು ವಿಶ್ಲೇಷಿಸುವಾಗ ಎಲ್ಲಾ ಧಾರ್ಮಿಕ ವೈಯಕ್ತಿಕ ಕಾನೂನುಗಳಲ್ಲೂ ಬದಲಾವಣೆ ಅಗತ್ಯ ಎನಿಸುತ್ತದೆ. ಆದರೆ ವಿಭಿನ್ನ ಪ್ರಾಂತ್ಯ ಅಥವಾ ಪಂಗಡಗಳಿಗೆ ಭಿನ್ನವಾದ ವೈಯಕ್ತಿಕ ಕಾನೂನುಗಳಿದ್ದ ಮಾತ್ರಕ್ಕೆ ಅದರಿಂದ ರಾಷ್ಟ್ರೀಯ ಭಾವೈಕ್ಯತೆಗೆ ಕುಂದು ಬರುವುದೆಂಬ ವಾದ ಹುರುಳಿಲ್ಲದ್ದು. ಇದರ ಬದಲಾಗಿ ಮಾನವ ಹಕ್ಕುಗಳನ್ನು ಸಮರ್ಥವಾಗಿ ಕಾಪಾಡುವ ಯಾವುದೇ ಕಾನೂನು ಅಥವಾ ಸಂಹಿತೆ ಅವಶ್ಯವಾಗಿದೆ. ಮಕ್ಕಳ ಮತ್ತು ಮಹಿಳೆಯರ ಹಕ್ಕುಗಳು ಹಾಗೂ ಸಬಲೀಕರಣ, ಕೌಟುಂಬಿಕ ಸಂಬಂಧಗಳಲ್ಲಿ ಸೆಕ್ಯುಲಾರ್ ನ್ಯಾಯ ಇದನ್ನು ಸಾಧಿಸಲು ಎಲ್ಲಾ ಧಾರ್ಮಿಕ ವೈಯಕ್ತಿಕ ಕಾನೂನುಗಳಲ್ಲೂ ತಿದ್ದುಪಡಿ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಪಾರ್ಸಿ ಕಾನೂನುಗಳಲ್ಲಿ ಪುರೋಗಾಮಿ ಬದಲಾವಣೆ

ಗಳನ್ನು ತರುವುದು ಮುಖ್ಯ ಕೆಲಸವಾಗಬೇಕಾಗಿದೆ. ಹಲವಾರು ಇಸ್ಲಾಂನ ಮೇಧಾವಿಗಳು ಖುರಾನ್ ಮತ್ತು ಪ್ರವಾದಿಯ ಹೇಳಿಕೆಗಳನ್ನಾಧರಿಸಿ ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ಹಲವಾರು ಬದಲಾವಣೆಗಳನ್ನು ಸೂಚಿಸಿದ್ದಾರೆ. ಆದರೆ ಈ ಬದಲಾವಣೆಗಳನ್ನು ಆಯಾ ಕಾನೂನಿನ ಪರಿಧಿಯೊಳಗೇ ಮಾಡಬೇಕಾಗುತ್ತದೆ. ಹಿಂದೂ, ಕ್ರೈಸ್ತ ಕಾನೂನುಗಳನ್ನು ಇದೇ ರೀತಿಯ ಪುರೋಗಾಮಿ ಬದಲಾವಣೆಗಳನ್ನು ತರುವುದು ಅತ್ಯವಶ್ಯ ವಾಗಿದೆ. ಹಲವಾರು ಇಸ್ಲಾಂ ದೇಶಗಳಲ್ಲಿ ಈ ರೀತಿಯ ಬದಲಾವಣೆಗಳನ್ನು ಅಳವಡಿಸಲಾಗಿದೆ. ಆದರೆ ಹಿಂದೂ, ಕ್ರೈಸ್ತ ಮುಸ್ಲಿಂ ಕಾನೂನುಗಳಲ್ಲಿ ಬದಲಾವಣೆ ಬಂದಾಗಲೆಲ್ಲಾ ಪ್ರತಿಗಾಮಿ ಶಕ್ತಿಗಳು, ಪುರೋಹಿತ ಶಾಹಿಯು ಅದನ್ನು ವಿರೋಧಿಸಿದೆ. ಹಿಂದೂ ವಿವಾಹ ಕಾಯ್ದೆಯನ್ನು ಜಾರಿಗೊಳಿಸಿದಾಗ ಏಕಪತ್ನಿತ್ವ ನೀತಿಯನ್ನು ಅಂದು ಹಿಂದುತ್ವವಾದಿಗಳು ವಿರೋಧಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ವಿಷಾದನೀಯ ಅಂಶವೆಂದರೆ ಈ ವಿಚಾರದಲ್ಲಿ ರಾಜಕೀಯ ಚರ್ಚೆಗಳು ನಾಗರೀಕ ಸಂಹಿತೆಗಳ ಏಕ ರೂಪತೆಯ ಬಗ್ಗೆ ಕೇಂದ್ರೀಕೃತವಾಗಿದೆಯೇ ಹೊರತು, ಸಮಾನತೆಯ ಬಗ್ಗೆ ಗಮನ ಹರಿಸಿಲ್ಲ. ನ್ಯಾಯಾಲಯಗಳಲ್ಲೂ ಇದೇ ಅಭಿಪ್ರಾಯವನ್ನು ತಳೆದಿರುವುದು ಕಂಡು ಬರುತ್ತದೆ. 'ಏನಾಸಂ'ಯ ಪರ ತೀವ್ರವಾಗಿ ವಾದಿಸುವವರು ವಿವಿಧ ಸಮುದಾಯಗಳ ನಡುವಿನ ಏಕ ರೂಪತೆಯ ಬಗ್ಗೆ ಮಾತನಾಡುತ್ತಿರುತ್ತಾರೆಯೇ ಹೊರತು, ಸಮುದಾಯದ ಒಳಗಿನ ಏಕರೂಪತೆಯ ಬಗ್ಗೆ ಚಕಾರವೆತ್ತುವುದಿಲ್ಲ. ಅಂದರೆ ಪುರುಷ-ಮಹಿಳೆಯರ ನಡುವಿನ ಸಮಾನತೆಯ ಬಗ್ಗೆ ಮಾತನಾಡುವುದಿಲ್ಲ. ಲಿಂಗಾಧಾರಿತ ನ್ಯಾಯದ ಬಗ್ಗೆ ತಾರತಮ್ಯಗಳ ಬಗ್ಗೆ ಮಾತನಾಡುವುದಿಲ್ಲ. ಎಲ್ಲಾ ವೈಯಕ್ತಿಕ ಕಾನೂನುಗಳೂ ಒಂದಲ್ಲ ಒಂದು ರೀತಿಯಲ್ಲಿ ಮಹಿಳೆಯರಿಗೆ-ಮಕ್ಕಳಿಗೆ ವಿರೋಧವಾಗಿಯೇ ಇದೆ.

ಲಿಂಗಾಧಾರಿತ ನ್ಯಾಯ ಒದಗಿಸದೆ ಹೋದಲ್ಲಿ ಯಾವುದೇ ಕಾನೂನು ಜನಪರವಾಗಿರಲು ಸಾಧ್ಯವಿಲ್ಲ. ಕೇವಲ ಸಂಹಿತೆಗಳನ್ನು ರೂಪಿಸುವುದರಿಂದ ಸಮಾನತೆಯನ್ನಾಗಲೀ ರಾಷ್ಟ್ರೀಯ ಐಕ್ಯತೆಯನ್ನಾಗಲೀ ಸಾಧಿಸಲಾಗುವುದಿಲ್ಲ. ಒಂದು ವೇಳೆ ಏನಾಸಂಯ ಉದ್ದೇಶ ನ್ಯಾಯ ಒದಗಿಸುವುದೇ ಆದಲ್ಲಿ ಸಂವಿಧಾನದ ವಿಧಿ ೧೪ರ ಮೂಲಭೂತ ಹಕ್ಕುಗಳ ಮೂಲಕ ಒದಗಿಸಬಹುದು ಅಥವಾ ವಿಧಿ ೪೪ರ ನಿರ್ದೇಶಕ ತತ್ವಗಳನ್ನು ತಿದ್ದುಪಡಿ ಮಾಡಬಹುದು. ಆದರೆ ೧೯೭೨ರಿಂದಲೂ ಈ ವಿವಾದ ಸಂಸತ್ತಿನಲ್ಲಿ ಚರ್ಚೆಯಾಗದೆ ಉಳಿದಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪಾಕಿಸ್ತಾನ ಮತ್ತು ಮುಸ್ಲಿಂ ರಾಷ್ಟ್ರಗಳಲ್ಲಿ ಮುಸ್ಲಿಂ ವೈಯಕ್ತಿಕ ಕಾನೂನು ಬದಲಾವಣೆ ಹೊಂದಿದ್ದರೆ ಆ ತಿದ್ದುಪಡಿಗಳನ್ನು ಅವರ ಪ್ರತಿನಿಧಿಗಳೇ ಮಾಡಿರುತ್ತಾರೆ. ಆದರೆ ಭಾರತದಲ್ಲಿ ಶೇ. ೧೨ರಷ್ಟಿರುವ ಮುಸ್ಲಿಂ ಸಮುದಾಯವನ್ನು ಪ್ರತಿನಿಧಿಸಲು ಸಂಸತ್ತಿನಲ್ಲಿ ಕೇವಲ ಶೇ.೪ರಷ್ಟು ಇದ್ದಾರೆ. ಅಷ್ಟೇ ಅಲ್ಲದೆ ಪ್ರಸ್ತುತ ಭಾಜಪ ನೇತೃತ್ವದ ಸರ್ಕಾರದ ಮೇಲೆ ಮುಸ್ಲಿಮರಿಗೆ ವಿಶ್ವಾಸವೂ ಇರುವುದಿಲ್ಲ. ಇನ್ನೊಂದೆಡೆ ಮುಸ್ಲಿಂ ಸಮುದಾಯದ ನಾಯಕತ್ವ ವಹಿಸಿರುವ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸರ್ಕಾರವನ್ನೇ ಅವಲಂಬಿಸಿರುತ್ತದೆ.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಸರ್ವೋಚ್ಚ ನ್ಯಾಯಾಲಯವು ಸಂಸತ್ತನ್ನು ಏನಾಸಂ ಜಾರಿಗೊಳಿಸಲು ಆಗ್ರಹಿಸಿರುವುದು, ಹಿಂದೂ ಮೂಲಭೂತವಾದಿಗಳಿಗೆ ಇನ್ನೊಮ್ಮೆ ಕುಮ್ಮಕ್ಕು ನೀಡಿದಂತಾಗುತ್ತದೆ. ಹಿಂದೂ ವೈಯಕ್ತಿಕ ಕಾನೂನುಗಳನ್ನು ತಿದ್ದುಪಡಿ ಮಾಡುವಾಗ ಹಿಂದೂ ಮಹಾಸಭಾ ಮುಂತಾದ ಸಂಘಟನೆಗಳು ವಿರೋಧಿಸಿದ್ದರಿಂದ ಅದು ಅಪೂರ್ಣವಾಗಿಯೇ ಉಳಿಯಿತು. ಹಾಗಾಗಿ ಯಾವುದೇ ವೈಯಕ್ತಿಕ ಕಾನೂನನ್ನು ತಿದ್ದುಪಡಿ ಮಾಡುವ ಮೊದಲು, ಸಮುದಾಯದ ಜನತೆಯ ಅಭಿಪ್ರಾಯ ಸಹಮತ ಅಗತ್ಯ. ಬಹುಸಂಖ್ಯಾತರ ಖಡ್ಡಾಯದಿಂದ ಈ ಕ್ರಮ ಕೈಗೊಳ್ಳುವುದು ಸಾಧ್ಯವಾಗುವುದಿಲ್ಲ. ದೇಶದಲ್ಲಿ ಲಿಂಗಾಧಾರಿತ ನ್ಯಾಯ ಸಾಧಿಸಬೇಕಾದರೆ, ವಿವಿಧ ಧರ್ಮಗಳಲ್ಲಿನ ಮಹಿಳಾ ತಾರತಮ್ಯಗಳನ್ನು ಸರಿಪಡಿಸಬೇಕಾದಲ್ಲಿ, ಸಮಸ್ತ ಜನತೆಗೂ ಮಾನವ ಹಕ್ಕುಗಳ ದೃಷ್ಟಿಯಿಂದ ನ್ಯಾಯ ಒದಗಿಸಬೇಕಾದಲ್ಲಿ, ನ್ಯಾಯಯುತವಾದ ಒಂದು ನಾಗರಿಕ ಸಂಹಿತೆ ಅಗತ್ಯವೆ, ಆದರೆ ಈ ವಿಷಯದಲ್ಲಿ ಮೂಲಭೂತವಾದಿಗಳಿಗೆ, ಧಾರ್ಮಿಕ ಮುಖಂಡರಿಗೆ ಯಾವುದೇ ಅವಕಾಶ ನೀಡದಿರುವುದು ಒಳಿತು. ಸಾಮಾನ್ಯ ಜನತೆ, ಸೆಕ್ಯುಲಾರ್ ಮನೋಭಾವದ, ಪ್ರಜಾತಾಂತ್ರಿಕ ದೃಷ್ಟಿಕೋನವುಳ್ಳ, ಸಾಮಾನ್ಯ ಜನತೆಯ ಪ್ರತಿನಿಧಿಗಳು ಈ ಚರ್ಚೆಯಲ್ಲಿ ಪಾಲ್ಗೊಂಡರೆ ಆಗ ಒಂದು ನ್ಯಾಯಯುತವಾದ ಸಂಹಿತೆ ಹೊರಹೊಮ್ಮುವ ಸಾಧ್ಯತೆಗಳಿವೆ. ಆದರೂ ಗುಜರಾತ್ ನಂತರದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಂಘ ಪರಿವಾರವು ಸೃಷ್ಟಿಸಿರುವ ವಿಷಮ ಪರಿಸ್ಥಿತಿಯಲ್ಲಿ ನಾಗರಿಕ ಸಂಹಿತೆಯ ಬಗ್ಗೆ ಪ್ರಸ್ತಾಪ ಮಾಡದಿರುವುದೇ ಲೇಸು.

ಎಲ್ಲಕ್ಕಿಂತಲೂ ಮಿಗಿಲಾಗಿ ನಾಗರಿಕ ಸಂಹಿತೆ ನಾಗರಿಕ ಸಮಾಜಕ್ಕೆ ಅವಶ್ಯವಾಗಿರುತ್ತದೆ. ಆದರೆ ಭಾರತೀಯ ಸಮಾಜದಲ್ಲಿರುವ ಅನಿಷ್ಟ ಜಾತಿ ಪದ್ಧತಿ, ಜಾತಿ ದ್ವೇಷ, ಕೋಮು ದ್ವೇಷ, ಹಿಂಸಾತ್ಮಕ ಪ್ರವೃತ್ತಿ ಇತ್ಯಾದಿಗಳನ್ನು ನೋಡಿದಾಗ ನಮ್ಮ ಸಮಾಜವು ನಾಗರಿಕ ಸಮಾಜವೇ? ಎಂಬ ಅನುಮಾನ ಮೂಡುತ್ತದೆ. ಮೊದಲು ನಾಗರಿಕರಾಗಲು ಯತ್ನಿಸಿ ನಂತರ ನಾಗರಿಕ ಸಂಹಿತೆಯ ಬಗ್ಗೆ ಪ್ರಸ್ತಾಪಿಸಿದ್ದಲ್ಲಿ ಅದು ಪ್ರಜಾತಾಂತ್ರಿಕ ಎನಿಸಿಕೊಳ್ಳುತ್ತದೆ. ಇಲ್ಲದಿದ್ದಲ್ಲಿ ಸಂಘಪರಿವಾರದ ಅಲ್ಪಸಂಖ್ಯಾತ ವಿರೋಧಿ ಫ್ಯಾಸಿಸ್ಟ್ ತಂತ್ರಗಳಿಗೆ ಉತ್ತಮ ವೇದಿಕೆ ಒದಗಿಸಿದಂತಾಗುತ್ತದೆ. ನ್ಯಾಯಾಲಯಗಳು, ನ್ಯಾಯಮೂರ್ತಿಗಳು ಈ ಬೆಳವಣಿಗೆಗೆ ಅವಕಾಶ ನೀಡದಿರುವುದು ಒಳಿತು. ●

ನೋಟುಗಳು ಮಾತನಾಡುತ್ತವೆ?

ಇಲ್ಲಿ ನೋಟುಗಳು ಮಾತನಾಡುತ್ತವೆ
ಕೋಟುಗಳು ತುಟಿ ಹೊಲೆದು
ಬೂಟಿನ ತುದಿಯಿಂದ ತಲೆ ತಲೆಗೆ
ಜಿಗಿದೆ ಜಿಗಿಯುತ್ತವೆ ಮಂಗನಂತೆ.

ಇಲ್ಲಿ ನೋಟುಗಳು ನಗುತ್ತವೆ
ಕೋಟೆಯ ಮೇಲೆ ನಿಂತು
ಖಜಾನೆಯ ಒಳಗೆ ಕುಂತು
ಸದಾ ಭಾರ ಹೆಚ್ಚಿಸಿಕೊಳ್ಳುತ್ತವೆ ತಮ್ಮೊಳಗೆ.

ಇಲ್ಲಿ ಬೆವರಿನ ರಭಸಕ್ಕೆ
ಬಂಗ್ಲೆಗಳು ಎದ್ದೇಳುತ್ತವೆ
ನೋಟುಗಳು ಬಂದು ನರ್ತಿಸಿದಾಗ
ಬೆವರಿನ ಬಲದ ವಾಸನೆಗೆ ಇಂತಿಷ್ಟೆ ಬೆಲೆ.

ಇಲ್ಲಿ ನೋಟುಗಳು ಜಿಗಿಯುತ್ತವೆ
ರೋಷಕ್ಕೆ ವೃದ್ಧಾಪ್ಯೆ ನೀಡಲು
ಬರಿಯೊಟ್ಟೆವನಿತೆಯರ ಹೊಟ್ಟೆತುಂಬಿಸಲು
ಕಾರುಬಾರುಗಳಿಂದ ಒಂದೆ ಸಮನೆ ಜಿಗಿಯುತ್ತವೆ.

ಇಲ್ಲಿ ನೋಟುಗಳು ಸದಾ ನಸೆಯಲ್ಲಿರುತ್ತವೆ
ಕಾಲಲ್ಲಿ ಸಿಕ್ಕ ನರಸತ್ತವರ ನಾಮವಳಿಸಿ
ರಕ್ತದೋಕುಳಿಯಾಡಿ ರಕ್ಕಸ ಪುತ್ರರಂತೆ
ಮತ್ತೆ ರಾಮರಾಜ್ಯ ಕಟ್ಟುತ್ತೇವೆಂದು
ಗಂಗೆಯಿಂದೆದ್ದು ಬರುತ್ತವೆ.

ಇಲ್ಲಿ ನೋಟುಗಳು ಕತ್ತಿಯಾಗುತ್ತವೆ
ಸುತ್ತುಬಳಸಿ ಹುಡುದಾರ ಹುಡುಕುತ್ತವೆ
ಮತ್ತೊಮ್ಮೆ ತ್ರಿಶೂಲ, ಖಡ್ಗ ಎಂದು
ಅಬ್ಬರಿಸಿ ಬೊಬ್ಬಿಡುವ ಮಗುವನ್ನೇ ಕತ್ತರಿಸುತ್ತವೆ.

ಈ ನೋಟುಗಳು ಸಾಯುವುದೇ ಇಲ್ಲ
ಸಾವು ಇರುವುದು ಈ ನೋಟುಗಳ ಮನೆಯಲ್ಲೆ
ಈ ನೋಟುಗಳಿಗೆ ಕಾಲಕಾಲಕ್ಕೆ ಪೊರೆ ಕಳಚಿ
ಹೊಸ ಪೊರೆ, ಹೊಸ ಬಣ್ಣ, ಹೊಸ ಆಕಾರ,
ಪಡೆಯುತ್ತವೆ.

○ ಮರಿಯಪ್ಪ ನಾಟೇಕಾರ್

ಆರಾಮ ಕುರ್ಚಿ ಏರಿದ ಜಾತಿ ಪ್ರಶ್ನೆ

ಬ್ರಾಹ್ಮಣಶಾಹಿ ಸಿದ್ಧಾಂತಗಳು, ಮನಃಶಾಸ್ತ್ರ ಕಲ್ಪನೆಗಳನ್ನು ಭೇದಿಸಬಲ್ಲವೆ ?

ದೃಷ್ಟಿಕೋನ

ಬದಲಾವಣೆಯ ಒತ್ತಡಕ್ಕೆ ಸಿಕ್ಕ ಯಾವುದೇ ಸಂಗತಿಗಳು, ಪದ್ಧತಿಗಳು, ಆಚರಣೆಗಳು ತೀವ್ರಗತಿಯಲ್ಲಿ ಬದಲಾಗಬೇಕಾಗುತ್ತದೆ. ಆದರೆ ಭಾರತೀಯ ಸಮಾಜದ ರೀತಿ–ನೀತಿಗಳು ಮಾತ್ರ ಸಾವಿರಾರು ವರ್ಷಗಳಿಗಿಂತ ಕ್ರೂರವಾಗುತ್ತಿರುವುದು ವಿಷಾಧನೀಯ. ಬ್ರಾಹ್ಮಣ್ಯಶಾಹಿಗಳು ಸೃಷ್ಟಿಸಿದ ಧಾರ್ಮಿಕ ಆಚರಣೆಗಳು, ಅಮಾನವೀಯ ಶೋಷಣೆಗಳನ್ನು ಇಂದಿನ ಆಧುನಿಕ ಯುಗದಲ್ಲೂ ಹೇಗೆ ಪೋಷಿಸಿಕೊಂಡು ಬರುತ್ತಿವೆ ಎಂಬುದರ ಬಗ್ಗೆ ಕಳೆದ ವರ್ಷ ರಾಷ್ಟ್ರಮಟ್ಟದ ವಿಚಾರ ಸಂಕಿರಣವೊಂದರಲ್ಲಿ ನಡೆದ ಚರ್ಚೆಗಳನ್ನು ನಿಮಗಾಗಿ ಇಲ್ಲಿ ನೀಡಲಾಗುತ್ತಿದೆ.

ಇಂಗ್ಲೀಷ್ ಮೂಲ:
ಸಿರಿಯಾವನ್ ಆನಂದ್
ಕನ್ನಡಕ್ಕೆ : ದು. ಸರಸ್ವತಿ

ನಾನೊಬ್ಬ ಅಸ್ಪೃಶ್ಯ, ಭಾರತದಲ್ಲೆಡೆ ನನಗೆ ನನ್ನ ಜನರಿಗೆ ಅಸ್ಪೃಶ್ಯರೆಂಬ ಕಾರಣಕ್ಕೆ ಆಗುತ್ತಿದ್ದ ಅವಮಾನ- ಇವೆಲ್ಲವೂ ಐದು ವರ್ಷಗಳ ಕಾಲ ನಾನು ಯುರೋಪ್ ಮತ್ತು ಅಮೇರಿಕದಲ್ಲಿದ್ದಾಗ ನನ್ನ ಪ್ರಜ್ಞೆಯಿಂದಲೇ ಅಳಿಸಿ ಹೋಗಿತ್ತು. ಆದರೆ ಬರೋಡಾದಲ್ಲಿ ರೈಲಿಳಿದ ತಕ್ಷಣ ನನಗೆ ಕಾಡಿದ ಪ್ರಶ್ನೆಗಳೆಂದರೆ 'ಎಲ್ಲಿಗೆ ಹೋಗಲಿ? ಯಾರು ನನ್ನನ್ನು ಬರಮಾಡಿಕೊಳ್ಳುತ್ತಾರೆ?' ಎಂಬುದು. ನನಗೆ ಕಳವಳವಾಯಿತು. ಅಲ್ಲಿ ವಿಶಿಸ್ ಎಂಬ ಹಿಂದು ಹೋಟೆಲುಗಳಿದ್ದವು. ಅಲ್ಲಿ ನನ್ನನ್ನು ಖಂಡಿತ ಸೇರಿಸಿಕೊಳ್ಳುವುದಿಲ್ಲವೆಂದು ಗೊತ್ತಿತ್ತು. ಉಳಿದ ಒಂದೇ ದಾರಿ ಎಂದರೆ ನನ್ನ ಜಾತಿಯ ಗುರುತನ್ನು ಮರೆ ಮಾಚುವುದು. ಗುರುತು ತಿಳಿದರೆ ಆಗುವ ಅನಾಹುತದ ಅರಿವಿದ್ದುದರಿಂದ ನಾನದಕ್ಕೆ ಸಿದ್ಧವಾಗಿರಲಿಲ್ಲ.

ಬಿ.ಆರ್. ಅಂಬೇಡ್ಕರ್ 'ವೇಯಿಟಿಂಗ್ ಫಾರ್ ವೀಸಾ' ಪುಸ್ತಕದಲ್ಲಿ ಒಬ್ಬ ಹಿಂದು ಮತ್ತೊಬ್ಬ ಬ್ರಾಹ್ಮಣ-ಕ್ರಿಶ್ಚಿಯನ್ ಸ್ನೇಹಿತರಿದ್ದರೂ ಅವರಿಗೆ ತೊಂದರೆಯಾಗಬಹುದೆಂಬ ಉದ್ದೇಶದಿಂದ ಅಂಬೇಡ್ಕರ್‌ರವರು ತಮ್ಮ ಜಾತಿ ಗುರುತನ್ನು ಮರೆಮಾಜಿ ಪಾರ್ಸಿ ಎಂದು ಹೇಳಿ ಪಾರ್ಸಿಗಳ ಹೋಟೆಲಿನಲ್ಲಿ ಜಾಗ ಪಡೆದುಕೊಂಡರು. ವಿಷಯ ಗೊತ್ತಾದಾಗ ಅವರನ್ನು ಹೊರಹಾಕಲಾಯಿತು. ಆ ಘಟನೆಯ ನಂತರ 'ಹಿಂದೂಗಳಿಗೆ ಅಸ್ಪೃಶ್ಯನಾದವನು ಪಾರ್ಸಿಗಳಿಗೂ ಅಸ್ಪೃಶ್ಯನೆಂಬುದು ಮೊದಲು ಬಾರಿಗೆ ತಿಳಿಯಿತು' ಎಂದು ಅಂಬೇಡ್ಕರ್ ಹೇಳಿದ್ದಾರೆ.

೧೯೧೮ರಲ್ಲಿ ಈ ಘಟನೆ ಜರುಗಿದರೂ ನಗರದ ಶಿಕ್ಷಿತ ದಲಿತರಿಗೆ ಪರಿಸ್ಥಿತಿ ಇನ್ನೂ ಬದಲಾಗಿಯೇ ಇಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಚಪ್ಪಲಿಯಲ್ಲಿ ಹೊಡೆಸಿಕೊಳ್ಳುವುದೇನೂ ಕಡಿಮೆಯಾಗಿಲ್ಲ. ದಲಿತೇತರರಿಂದ ಜಾತಿ ಗುರುತನ್ನು ಮುಚ್ಚಿಟ್ಟುಕೊಳ್ಳಬೇಕೆಂಬ ಒತ್ತಡ ಈಗಲೂ ಇರುವುದು ಅತ್ಯಂತ ಅವಮಾನಕರ. ಇದು ಪುಣೆಯಲ್ಲಿ 'ಜಾತಿ ಮತ್ತು ಮನಸ್ಸಿನ ವ್ಯಾಖ್ಯಾನ' ಕುರಿತಂತೆ ನಡೆದ ಸೆಮಿನಾರಿನಲ್ಲಿ ಸಾಬೀತಾಯಿತು. ಲಂಡನ್ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿರುವ, ಮನಃಶಾಸ್ತ್ರಜ್ಞ ಮತ್ತು ವೈದ್ಯಕೀಯ ಮಾನವ ವಿಜ್ಞಾನಿ ಸುಶ್ರುತ್ ಜಾದವ್ ಹಾಗೂ ಪುಣೆಯಲ್ಲಿ ನೆಲೆಸಿರುವ ಬಾಪು ಟ್ರಸ್ಟ್‌ನ ನಿರ್ದೇಶಕರಾದ, ಮಹಿಳೆಯರ ಮಾನಸಿಕ ಆರೋಗ್ಯ ಕುರಿತು ಸಂಶೋಧನೆ ಮಾಡಿರುವ, ತಮಿಳು ಬ್ರಾಹ್ಮಣರಾದ ಭಾರ್ಗವಿ ಪಿ. ದವರ್ ಅವರು ೨೦೦೨ ಡಿಸೆಂಬರ್ ೧೪-೧೫ರಂದು ನಡೆದ ಸೆಮಿನಾರಿನಲ್ಲಿ ಜಾತಿ ಪ್ರಶ್ನೆ ಕುರಿತು ಮಾತನಾಡಿದರು. ದಲಿತರು, ಬ್ರಾಹ್ಮಣರು, ಬ್ರಾಹ್ಮಣೇತರರು, ಅಮೇರಿಕನ್ನರು, ಯುರೋಪಿಯನ್ನರು ಮತ್ತು ಜಪಾನಿಯರ ವಿಷಯ ಕುರಿತು ಜಗ್ಗಾಡಿದರು. ಸರ್ ದೊರ್ಬಜಿ ಟಾಟಾ ಎಂಬ ಪಾರ್ಸಿ ಹೆಸರಿನ ಟ್ರಸ್ಟ್ ಈ ಸೆಮಿನಾರನ್ನು ಭಾಗಶಃ ಪ್ರಾಯೋಜಿಸಿದ್ದು ವ್ಯಂಗ್ಯವೇ ಸರಿ.

ವಿಸ್ತಾರವಾಗಿ ನಡೆದ ಚರ್ಚೆಯಲ್ಲಿ ಜಾತೀಯತೆ ವ್ಯಕ್ತಿತ್ವಕ್ಕೆ ಕಳಂಕ ತರುತ್ತದೆಯೆ? ಅದನ್ನು ಎದುರಿಸುವುದು, ತೊಡೆದು ಹಾಕುವುದು ಹೇಗೆ? ಮತಾಂತರವು ಕಳಂಕವನ್ನು ತೊಡೆದುಹಾಕುವುದೇ ಅಥವಾ ಹೆಚ್ಚಿಸುತ್ತದೆಯೇ? ಹೌದಾದರೆ ಹೇಗೆ? ಜಾತೀಯತೆಯನ್ನು ಆಚರಿಸವವರಿಗೆ ಹಾಗೂ ಜಾತೀಯತೆಗೆ ಬಲಿಯಾಗುವವರಿಗೆ ಮಾನಸಿಕವಾಗಿ ಉಂಟಾಗುವ ಪರಿಣಾಮಗಳೇನು? ದಲಿತರ ದೇಸಿ ಮನಃಶಾಸ್ತ್ರವೆಂಬುದುದಿದೆಯೆ? ಅದು ದಾಖಲಾಗಿರುವ ಮನಃಶಾಸ್ತ್ರಕ್ಕಿಂತ ಭಿನ್ನವೇ? ಯಾವುದು ದಲಿತ ಐಡೆಂಟಿಟಿಯನ್ನು ರೂಪಿಸುವುದು? ಇಲ್ಲಿನ ಅನುಭವಗಳಿಗೂ ಜಗತ್ತಿನ ಇತರೆಡೆ ತುಳಿತಕ್ಕೊಳಗಾದ ಸಮುದಾಯಗಳ ಅನುಭವಗಳಿಗೂ ಸಾಮ್ಯವಿದೆಯೆ? ಬ್ರಾಹ್ಮಣ್ಯ ಸಿದ್ಧಾಂತವು ಭಾರತೀಯ ಮನಃಶಾಸ್ತ್ರ ಕಲ್ಪನೆಗಳನ್ನು ಭೇದಿಸಬಲ್ಲವೆ? ಎಂಬುದನ್ನು ಚರ್ಚಿಸಲಾಯಿತು. ಭಾಗವಹಿಸಿದ ಹಲವರಿಗೆ ವಿಷಯ ಹೊಸತಾದ್ದರಿಂದ ಬಹುಪಾಲು ಪ್ರಶ್ನೆಗಳಿಗೆ ಖಚಿತವಾದ ಉತ್ತರಗಳೇ ದೊರೆಯಲಿಲ್ಲ.

ಇತ್ತೀಚಿನ ದಿನಗಳಲ್ಲಿ ಜಾತಿ ಕುರಿತಂತೆ ನಡೆಯುವ ಎಲ್ಲಾ ಚರ್ಚೆಗಳಂತೆಯೇ ಈ ಚರ್ಚೆಯಲ್ಲೂ ಹೆಚ್ಚಿಗೆ ಒತ್ತು ನೀಡಿದ್ದು ದಲಿತ ಐಡೆಂಟಿಟಿ ಕುರಿತು. ಜಾತಿ ಎಂದರೆ ಅಸ್ಪೃಶ್ಯತೆ ಮತ್ತು ಅಸ್ಪೃಶ್ಯರು ಎಂಬಂತಾಗಿನೆ. ಸೆಮಿನಾರಿ ನಲ್ಲಿ ಹುಟ್ಟಿನಿಂದ ಬ್ರಾಹ್ಮಣರಾದ ಕೆಲವರು ಬ್ರಾಹ್ಮಣರ ಪಾತ್ರ ಕುರಿತು ಗೊಂದಲವುಂಟು ಮಾಡಿದ್ದಲ್ಲದೆ ಭಾಗವಹಿಸಿದ್ದ ದಲಿತರೊಂದಿಗೂ ಹೋಲಿಸಿದರು. ಅವರಲ್ಲಿ ಪೂರ್ವಸಿದ್ಧತೆ ಇಲ್ಲದಿದ್ದುದು ಸ್ಪಷ್ಟವಾಗಿತ್ತು. ಸೆಮಿನಾರಿನ ಉದ್ದೇಶವು ಸಮುದಾಯಗಳನ್ನು ಪಾಪಪ್ರಜ್ಞೆಗೆ ದೂಡುವುದಾಗಿರಲಿಲ್ಲ. ಆದರೆ ದಲಿತರ ವಿಷಯಕ್ಕೆ ಸರಿಯಾದ ಒತ್ತು ನೀಡದಿದ್ದ ಕಾರಣ, ಇಡೀ ಚರ್ಚೆ ಜಾತೀಯತೆಯನ್ನು ಆಚರಿಸುವವರಿಗಿಂತ ಜಾತೀಯತೆಗೆ ಬಲಿಪಶುಗಳಾದವರ ಮಾನಸಿಕ ಪರಿಣಾಮಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಯಿತೆಂಬ ಭಾವನೆ ಹುಟ್ಟಿತು. ದಲಿತೇತರರೇ, ನಿರ್ಧಿಷ್ಟವಾಗಿ ಬ್ರಾಹ್ಮಣರೇ ಚರ್ಚೆಯಲ್ಲಿ ಪ್ರಾಧಾನ್ಯತೆ ಪಡೆದುಕೊಂಡಿದ್ದು ಆ ಭಾವನೆಯನ್ನು ಸ್ಪಷ್ಟಪಡಿಸಿತು.

ಹುಟ್ಟಿನಿಂದ ಅಮೆರಿಕಾದ ಬಿಳಿಯರಾದ, ಸಮಾಜ ಶಾಸ್ತ್ರಜ್ಞೆ ಮತ್ತು ಸಾಮಾಜಿಕ ಕಾರ್ಯಕರ್ತೆಯಾದ ಗೇಲ್ ಓಂವೆಡ್ತ್‌ರವರು ಒಳನೋಟವುಳ್ಳ ಪ್ರಬಂಧವನ್ನು ಮಂಡಿಸಿದರು. ಆಕೆ ಹೇಗೆ ಹಿಂದುತ್ವ ಮತ್ತು ಬ್ರಾಹ್ಮಣ ಸಿದ್ಧಾಂತವು ಸಮಾಜ ವಿಜ್ಞಾನಗಳೊಳಗೂ ನುಸುಳಿದೆ ಎಂಬುದನ್ನು ವಿವರಿಸಿದರು. 'ಅಮೆರಿಕಾದಲ್ಲಿ ಸಾಮಾಜಿಕ ಶ್ರೇಣೀಕರಣವನ್ನು ಅಧ್ಯಯನ ಮಾಡುವಾಗ ಇಡೀ ವ್ಯವಸ್ಥೆಯನ್ನು ಪರೀಕ್ಷಿಸಬೇಕಾಗುತ್ತದೆ. ಅಲ್ಲಿ ಸರಿಯಾದ ಸಮಾಜಶಾಸ್ತ್ರವೆಂಬುದಿಲ್ಲ. ಆಳುವ ವರ್ಗವನ್ನೂ ನೀವು ಸಮಾನವಾಗಿ ಅಭ್ಯಸಿಸಬೇಕಾಗುತ್ತದೆ. ಆದರೆ ಭಾರತದಲ್ಲಿ ದುರ್ಬಲವರ್ಗದ ಸಮಾಜ ಶಾಸ್ತ್ರವನ್ನು ಕಾಣುತ್ತೇವೆಯೇ ಹೊರತು ಪ್ರಬಲ ವರ್ಗದವರದಲ್ಲ. ತಮ್ಮದೇ ಪ್ರಾಧಾನ್ಯತೆಯ ಗುಡ್ಡೆಗಳ ಕುರಿತು ಅಧ್ಯಯನ ನಡೆಸಿರುವ ಬಗ್ಗೆ ಸಮಾಜ ವಿಜ್ಞಾನಗಳ ವಿಭಾಗಗಳಲ್ಲಿ ತೀವ್ರವಾದ ಅಸಡ್ಡೆಯಿದೆ'. ಇದರ ಪರಿಣಾಮವಾಗಿ ಡಾಕ್ಟರೇಟ್ ಸಂಶೋಧನೆ ನಡೆಸಿದಂತಹ ಕೆಲವು ದಲಿತರು, ಹಿಂದುಳಿದ ವರ್ಗಗಳ ಸದಸ್ಯರು ಮತ್ತು ಆದಿವಾಸಿಗಳನ್ನು ತಮ್ಮದೇ ಸಮುದಾಯಗಳ ಕುರಿತು ಅಧ್ಯಯನ ಮಾಡಲು ಪ್ರೋತ್ಸಾಹಿಸಲಾಗುತ್ತದೆಯೇ ಹೊರತು ಮೇಲ್ಜಾತಿಯವರ

ದನ್ನಲ್ಲ. ಇದು ಬದ್ಧತೆಯ ಕೊರತೆಯನ್ನು ಸೂಚಿಸುತ್ತದೆ. ಅಂತರಜಾತೀಯ ಮದುವೆಗಳ ಕುರಿತು ಇಲ್ಲಿಯವರೆಗೂ ಸಮಾಜಶಾಸ್ತ್ರೀಯ ಅಂಕಿಅಂಶವನ್ನು ದಾಖಲಿಸುವ ಪ್ರಯತ್ನವೂ ಆಗಿಲ್ಲವೆಂಬುದನ್ನು ಆಕೆ ಹೇಳಿದರು.

ಮನೋದೇವನ ಚರಿತ್ರೆ :

ದೇಶದೆಲ್ಲೆಡೆ ಅಸ್ಪೃಶ್ಯತೆಯನ್ನು ಒಂದೇ ರೀತಿಯಲ್ಲಿ ಆಚರಿಸುವುದಿಲ್ಲವೆಂಬುದು ಸೆಮಿನಾರಿನಲ್ಲಿ ಸಾಬೀತಾಯಿತು. ದೆಹಲಿಯ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿರುವ ಸುಖದೇವ್ ಕೆ. ಥೊರಟ್‌ರವರು ಹಳ್ಳಿಯ ಮತ್ತು ನಗರಗಳಲ್ಲಿ ವಾಸಿಸುವ ದಲಿತರ ಅನುಭವಗಳ ನಡುವಿರುವ ವ್ಯತ್ಯಾಸಗಳನ್ನು ಕುರಿತು ಮಾತನಾಡಿದರು. ಅವರು ಅಸ್ಪೃಶ್ಯನಾಗಿ ತಾವು ಬೆಳೆದ ಅನುಭವಗಳನ್ನು ಹಂಚಿಕೊಂಡರು. 'ಹಳ್ಳಿಗಳಲ್ಲಿ ದಲಿತರ ಒಡನಾಟಗಳು ಪೂರ್ವ ನಿರ್ಧಾರಿತ ವಾಗಿರುತ್ತವೆ. ಒಡನಾಟದ ಮಿತಿ ಗಳನ್ನು ಮಾತು, ನಡಿಗೆ ಕಲಿಯುವ ವಯಸ್ಸಿನಿಂದಲೇ ರೂಪಿಸಲಾಗುತ್ತದೆ. ನಿತ್ಯದ ಅವಮಾನವಲ್ಲದೆ, ಮನೆಗಳಲ್ಲಿ ದೈಹಿಕವಾಗಿ, ಸಾಮಾಜಿಕವಾಗಿ ಪ್ರತ್ಯೇಕತೆಯನ್ನು ಅನುಭವಿಸಬೇಕಾಗುತ್ತದೆ. ಎಲ್ಲಾ ಗ್ರಾಮೀಣ ದಲಿತ ಮಕ್ಕಳು ಒಂದಲ್ಲ ಒಂದು ರೀತಿಯ ಅವಮಾನವನ್ನು ಅನುಭವಿಸುತ್ತಾರೆ. ಶಾಲೆಗಳಲ್ಲಿ ಉಪಾಧ್ಯಾಯರು ಮತ್ತು ದಲಿತ ಮಕ್ಕಳ ನಡುವೆ ಒಡನಾಟವೇ ಏರ್ಪಡದ ಕಾರಣ ಪ್ರತ್ಯೇಕತೆಯ ಅನುಭವ ತೀವ್ರವಾಗುತ್ತದೆ'. ಎಂದು ಥೊರಟ್‌ರವರು ಅಭಿಪ್ರಾಯ ಪಟ್ಟರು. ತಾವು ಅಂಬೇಡ್ಕರ್ ಸ್ಥಾಪಿಸಿದ ಕಾಲೇಜಿನಲ್ಲಿ ಓದಿದ್ದರಿಂದಾಗಿ 'ಯಾವ ತಾರತಮ್ಯವನ್ನು ಅನುಭವಿಸಲಿಲ್ಲ. ಕಾರಣ, ಅಲ್ಲಿ 'ಹಿಂದೂ ಸವರ್ಣೀಯರು ಇರಲೇ ಇಲ್ಲ' ಎಂದು ಹೇಳಿದರು. ಆದರೆ ಜೆ.ಎನ್.ಯು ನಲ್ಲಿ ಪಿ.ಹೆಚ್.ಡಿ ಮಾಡುವಾಗ ಈ ವಾತಾವರಣವಿರಲಿಲ್ಲ. ಔರಂಗ್‌ಬಾದ್ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿ ಸೇರಿದಾಗ ಅಲ್ಲಿದ್ದ ವಿದ್ಯಾರ್ಥಿಗಳು, ಗಿರಿಜನರು ದಲಿತರು ಮತ್ತು ಪ್ರಾಧ್ಯಾಪಕರುಗಳೂ ಸಹ ದಲಿತರೇ ಆಗಿದ್ದರು. ಹಾಗಾಗಿ ನಾನು ಆರಾಮವಾಗಿದ್ದೆ ಎಂದು ಥೋರಟ್‌ರವರು ಹೇಳಿದರು.

ಥೊರಟ್‌ರವರು ತಮ್ಮ ಮತ್ತು ತಮ್ಮ ಮಗನ ಅನುಭವದಲ್ಲಿನ ವ್ಯತ್ಯಾಸವನ್ನು ಕುರಿತು ಮಾತನಾಡಿದರು. ತಾಯಿ ತಂದೆಯರಿಬ್ಬರು ಅಕೆಡಮಿಕ್‌ಗಳಾಗಿದ್ದುದರಿಂದ ಮತ್ತು ಜೆ.ಎನ್.ಯು ಕ್ಯಾಂಪಸ್‌ನಲ್ಲಿ ಉದಾರವಾದಿ-ಎಡಪಂಥೀಯ ವಾತಾವರಣವಿದ್ದುದರಿಂದ ನನ್ನ ಮಗ ಶಾಲೆಯಲ್ಲಿ ಚೆನ್ನಾಗಿ ಓದುತ್ತಿದ್ದ. ಆದರೆ, ದೆಹಲಿ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ ಪದವಿ ಪರೀಕ್ಷೆಯಲ್ಲಿ ಫೇಲಾದ. ಕಾರಣ ಅಲ್ಲಿ ನಡೆದ ಘಟನೆಗಳು. ಮೊದಲ ದಿನವೇ ಕಾಲೇಜಿನ ಪ್ರಾಧ್ಯಾಪಕರೊಬ್ಬರು ಕ್ಲಾಸಿನಲ್ಲಿ, 'ನೋಡು ಮೀಸಲು ಕೋಟಾದಿಂದ ಬಂದಿರುವುವವರು ಮೊದಲ ಸೆಮಿಸ್ಟಾರ್‌ವರೆಗು ಹೇಗೂ ಬರುತ್ತೀರಿ. ಆದರೆ ಇದಕ್ಕಿಂತ ಮುಂದೆ ಹೋಗಲು ಸಾಧ್ಯವೇ ಇಲ್ಲ' ಎಂದು ಹೇಳಿದ್ದರು. ಈ ರೀತಿ ಬಹಿರಂಗವಾಗಿ ಎಂದೂ ತಾರತಮ್ಯಕ್ಕೆ ಒಳಗಾಗದಿದ್ದ ನಮ್ಮ ಮಗ ಪರಿಸ್ಥಿತಿಯನ್ನು ನಿಭಾಯಿಸಲಾಗದೆ ಸೋತ. ಕೊನೆಯದಾಗಿ ಥೊರಟ್‌ರವರು 'ಹಳ್ಳಿಗಳಲ್ಲಿ ದಲಿತ ಮಕ್ಕಳಿಗೆ ಅಸ್ಪೃಶ್ಯತೆ ಅಥವಾ ಅವಮಾನವೆಂಬುದು ಬಹಿರಂಗವಾಗಿ, ನಿರಂತರವಾಗಿ ನಡೆಯುವಂತಹದು. ನಗರದ ಮಕ್ಕಳಿಗೆ ಇದು ಧಿಡೀರನೆ ಒಂದು ದಿನ ಆಗುವಂತಹುದಾದುದರಿಂದ ಆಘಾತಗೊಂಡು ಪರಿಸ್ಥಿತಿಯನ್ನು ನಿಭಾಯಿಸಲು ಕಷ್ಟವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.



ಜಾತೀಯತೆ ವ್ಯಕ್ತಿತ್ವಕ್ಕೆ ಕಳಂಕ ತರುತ್ತದೆಯೆ? ಅದನ್ನು ಎದುರಿಸುವುದು, ತೊಡೆದು ಹಾಕುವುದು ಹೇಗೆ? ಮತಾಂತರವು ಕಳಂಕವನ್ನು ತೊಡೆದುಹಾಕುವುದೇ ಅಥವಾ ಹೆಚ್ಚಿಸುತ್ತದೆಯೇ? ಹೌದಾದರೆ ಹೇಗೆ? ಜಾತೀಯತೆಯನ್ನು ಆಚರಿಸವವರಿಗೆ ಹಾಗೂ ಜಾತೀಯತೆಗೆ ಬಲಿಯಾಗುವವರಿಗೆ ಮಾನಸಿಕವಾಗಿ ಉಂಟಾಗುವ ಪರಿಣಾಮಗಳೇನು? ದಲಿತರ ದೇಸಿ ಮನಃಶಾಸ್ತ್ರವೆಂಬುದುದಿದೆಯೆ? ಅದು ದಾಖಲಾಗಿರುವ ಮನಃಶಾಸ್ತ್ರಕ್ಕಿಂತ ಭಿನ್ನವೇ? ಯಾವುದು ದಲಿತ ಐಡೆಂಟಿಟಿಯನ್ನು ರೂಪಿಸುವುದು? ಇಲ್ಲಿನ ಅನುಭವಗಳಿಗೂ ಜಗತ್ತಿನ ಇತರೆಡೆ ತುಳಿತಕ್ಕೊಳಗಾದ ಸಮುದಾಯಗಳ ಅನುಭವಗಳಿಗೂ ಸಾಮ್ಯವಿದೆಯೆ? ಬ್ರಾಹ್ಮಣ್ಯ ಸಿದ್ಧಾಂತವು ಭಾರತೀಯ ಮನಃಶಾಸ್ತ್ರಕಲ್ಪನೆಗಳನ್ನು ಭೇದಿಸಬಲ್ಲವೆ? ಎಂಬುದನ್ನು ಚರ್ಚಿಸಲಾಯಿತು.

ಹಳ್ಳಿಯಲ್ಲಿ ಬೆಳೆದರೂ ಥೊರಟ್‌ರವರಿಗೆ ಆಚರಣೆಗಳಿಗೆ ಶರಣಾಗುವ ರೂಢಿ ಇರಲಿಲ್ಲ. ಅವರು ಎಂಟು ವರ್ಷದವರಾಗಿದ್ದಾಗಲೇ ಅಂಬೇಡ್ಕರ್ ಚಳವಳಿ ಕಾಲಿರಿಸಿತ್ತು. 'ನಾವು ಹಲವರು ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು, ದೇವರುಗಳು, ದೇವಸ್ಥಾನಗಳನ್ನು ತ್ಯಜಿಸಿದ್ದೆವು. ಹಿಂದೂ ದೇವರ ಪ್ರತಿಮೆಗಳನ್ನು ಕರಗಿಸಿ ಉಪಕರಣಗಳನ್ನು ಮಾಡಿದ್ದೆವು. ನಮಗೆ ಹೊಸ ಐಡೆಂಟಿಟಿಯನ್ನು ಹುಟ್ಟು ಹಾಕುವ ಅಗತ್ಯವಿತ್ತು. ಇಂದು ಜೆ.ಎನ್.ಯುನಲ್ಲಿ ದೀಪಾವಳಿ ಹಬ್ಬವನ್ನು ಆಚರಿಸದಿರುವ ದಲಿತ ಪ್ರಾಧ್ಯಾಪಕ ನಾನೊಬ್ಬನೆ ಇರಬೇಕು' ಎಂದು ಥೊರಟ್‌ರವರು ಹೇಳಿದರು. ಸಾಮಾನ್ಯ ದಲಿತ ಮಗುವು ತೀವ್ರ ಕೀಳರಿಮೆಯನ್ನು ಅನುಭವಿಸುತ್ತದೆ. 'ಹಿಂದೂ ಸವರ್ಣೀಯರೊಂದಿಗಿನ ಒಡನಾಟದ ಸಲುವಾಗಿ ದಲಿತ ವ್ಯಕ್ತಿಯು ಪುಕ್ಕಲುತನ, ದೈನ್ಯತೆ, ಅವಮಾನದ ಭಾವನೆಗಳನ್ನು ಬೆಳೆಸಿಕೊಳ್ಳುವುದಲ್ಲದೆ ಯಾರಿಗೆ ತಮ್ಮ ಜಾತಿಯ ಗುರುತು ತಿಳಿದುಬಿಡುತ್ತದೆಯೊ ಎಂಬ ಮಾನಸಿಕ ಒತ್ತಡದಲ್ಲಿ ದಲಿತರಿರುತ್ತಾರೆ ಎಂದವರು ಅಭಿಪ್ರಾಯಪಟ್ಟರು.

ಜಾತೀಯತೆಯ ಸಮಾಜದಿಂದ ಹೊರಗುಳಿದ ಕಾರಣದಿಂದಾಗಿ ಥೊರಟ್‌ರವರಿಗೆ ಗಟ್ಟಿ ವ್ಯಕ್ತಿತ್ವ ಬೆಳೆಸಿಕೊಳ್ಳಲು ಸಾಧ್ಯವಾಯಿತು. ೩೧ನೇ ವಯಸ್ಸಿಗೆ ಅವರು ಉತ್ತಮ ಶೈಕ್ಷಣಿಕ ದಾಖಲೆ ಹೊಂದಿದ್ದರು. ನಾಲ್ಕು ಪುಸ್ತಕಗಳನ್ನು, ಮೂವತ್ತು ಪ್ರಬಂಧಗಳನ್ನು ಪ್ರಕಟಿಸಿದ್ದರು. ಮುಂದೆ ಜೆ.ಎನ್.ಯು ಸೇರಿದ ಮೇಲೆ ಅವರ ಸಾಧನೆ ಇಳಿಮುಖವಾಯಿತು. ಹಲವಾರು ವರ್ಷಗಳು ಏನನ್ನೂ ಪ್ರಕಟಿಸಲಿಲ್ಲ. ಅಕೆಡಮಿಕ್ ಯಶಸ್ಸಿಗೆ ತೀರಾ ಅಗತ್ಯವಿದ್ದ ಜಾತಿ, ಭಾಷೆ, ಧಾರ್ಮಿಕ, ಪ್ರಾದೇಶಿಕ ವಿಷಯಗಳ ಕುರಿತಂತೆ ನಡೆಯುವ ಅನೌಪಚಾರಿಕ ಚರ್ಚೆಗಳಿಂದ ಅವರನ್ನು ಹೊರಗಿಡಲಾಗುತ್ತಿತ್ತು. ಪ್ರಯತ್ನಪಟ್ಟು ಇಂಟರ್ ನ್ಯಾಷನಲ್ ಫುಡ್ ಪಾಲಿಸಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಮೂರು ವರ್ಷಗಳ ಕಾಲ ಕೆಲಸ ಮಾಡುವ ಅವಕಾಶ ಪಡೆದುಕೊಂಡಿದ್ದು ಮತ್ತೆ ಸ್ಫೂರ್ತಿಗೊಳ್ಳುವಂತೆ ಮಾಡಿತು. ಜೆ.ಎನ್.ಯು ಸಹೋದ್ಯೋಗಿಗಳ ನಡುವೆ ಸ್ಥಾನ ಹೆಚ್ಚಾಗಿ, ಹೊಸ ಗೌರವ ದೊರೆಯಿತು. ಆಫ್ರಿಕನ್-ಅಮೆರಿಕನ್ ಬರಹಗಳು ತಾವು ಅನುಭವಿಸುತ್ತಿದ್ದ ಸಮಸ್ಯೆಗಳಿಗೊಂದು ತಾತ್ವಿಕ ಚೌಕಟ್ಟು ನೀಡಿತು. ಅವಮಾನದಿಂದ ಕುಗ್ಗಿ ಹೋಗಿದ್ದು ಏಕಾಕಿತನ, ಅಮೆರಿಕ ಪಯಣ ಇವೆಲ್ಲದರಿಂದ ಒಳ್ಳೆಯ ಪರಿಣಾಮವೇ ಆಯಿತು. ಹಿಂದೂ-ಗ್ರೀಕ್ ಪುರಾಣಗಳ ನಾಯಕರುಗಳಂತೆ ಮರು ರೂಪಿಸಿಕೊಂಡು, ಹೊಸ ಐಡೆಂಟಿಟಿಗಳನ್ನು ಕಂಡುಕೊಂಡು, ತನ್ನತನಕ್ಕೆ ಮರು ಆಕೃತಿ ನೀಡಿ ಮತ್ತೆ ಆರೋಗ್ಯಕರ ಭಾವನೆ ಬೆಳೆಸಿತು ಎಂದು ಅವರು ಹೇಳಿದರು.

ಥೊರಟ್‌ರವರ ಅನುಭವವು ಸವರ್ಣೀಯ ಹಿಂದುಗಳೊಡನೆ ವ್ಯವಹರಿಸುವಾಗಿನ ಒತ್ತಡವನ್ನು ಕುರಿತು ಮತ್ತು ಅಸ್ಪೃಶ್ಯತೆ, ಅವಮಾನ ಕುರಿತು ಎಚ್ಚರವಹಿಸಬೇಕಾದ ಒತ್ತಡವಿಲ್ಲದಿದ್ದಾಗ ದಲಿತ ವ್ಯಕ್ತಿಯು ಸಾಮಾಜಿಕವಾಗಿ, ಬುದ್ಧಿಜೀವಿಯಾಗಿ ಯಶಸ್ಸು ಸಾಧಿಸಬಹುದೆಂಬುದನ್ನು ತೋರಿಸುತ್ತದೆ. ೧೯೩೨ರಲ್ಲಿ, ಗಾಂಧೀಜಿಯವರ ನಾಟಕೀಯ ಉಪವಾಸದ ನಂತರದ ಪೂನಾ ಒಪ್ಪಂದಕ್ಕೆ ಬಲಯುತವಾಗಿ ಸಹಿಹಾಕಿದ ಮೇಲೆ ಅಂಬೇಡ್ಕರ್‌ರವರು ಜಂಟಿ-ಮತ ಕ್ಷೇತ್ರಗಳನ್ನು ಸ್ಥಾಪಿಸುವ ಮೂಲಕ ಹೇಗೆ

ಕಾಂಗ್ರೆಸ್ ಪಕ್ಷವು ಪ್ರಾಮಾಣಿಕ ದಲಿತ ಅಭ್ಯರ್ಥಿಗಳ ಅವಕಾಶಗಳನ್ನು ಯಶಸ್ವಿಯಾಗಿ ತಡೆಗಟ್ಟಿತೆಂಬುದನ್ನು ಅರಿತುಕೊಂಡರು. ರಾಜಕೀಯದಲ್ಲಿ ಮಾತ್ರ ಪ್ರತ್ಯೇಕ ಮತ ಕ್ಷೇತ್ರಗಳಲ್ಲದೆ, ಸಾಮಾಜಿಕವಾಗಿ ಪ್ರತ್ಯೇಕ ಗ್ರಾಮಗಳು ದಲಿತರಿಗೆ ಬೇಕೆಂಬುದು ಅಂಬೇಡ್ಕರ್‌ರವರ ನಂಬಿಕೆಯಾಗಿತ್ತು. ಇದೊಂದೆ ಸವರ್ಣೀಯ ಹಿಂದೂಗಳ ಸರ್ವಾಧಿಕಾರವನ್ನು ತಡೆಯಲು ದಾರಿ ಎಂದು ಅವರು ನಂಬಿದ್ದರು. ಪ್ರತ್ಯೇಕವಾಗಿ ಇತ್ಯರ್ಥವಾಗಬೇಕೆಂಬ ನಿರ್ಧಾರವು ರೂಪುಗೊಂಡಿದ್ದು ೧೯೪೨ರ ನಾಗಪುರದ ಅಖಿಲಭಾರತ ಪರಿಶಿಷ್ಟ ಜಾತಿಗಳ ಸಮಾವೇಶದಲ್ಲಿ. ಆ ಸಮಾವೇಶದ ನಿರ್ಣಯ ೩ರಲ್ಲಿ '...ಎಲ್ಲಿಯವರೆಗೂ ಪರಿಶಿಷ್ಟ ಜಾತಿಯವರು ಹಿಂದೂ ಹಳ್ಳಿಗಳ ಗಡಿಗಳಲ್ಲಿ, ಜೀವನೋಪಾಯಕ್ಕೆ ದಾರಿಯಿಲ್ಲದೆ, ಇತರ ಹಿಂದೂಗಳಿಗೆ ಹೋಲಿಸಿದಾಗ ಕಡಿಮೆ ಸಂಖ್ಯೆಯಲ್ಲಿ ವಾಸಿಸುತ್ತಾರೋ ಅಲ್ಲಿಯವರೆಗೂ ಅವರು ಅಸ್ಪೃಶ್ಯರಾಗೇ ಉಳಿಯುತ್ತಾರೆ. ಸಂಪೂರ್ಣ ಜೀವನವನ್ನು ಅನುಭವಿಸುವ್ದುದೇ ಇಲ್ಲ' ಎಂದು ಹೇಳಲಾಗಿದೆ. ಇದು ಇಂದಿಗೂ ಸತ್ಯ.

ಈ ಗ್ರಹಿಕೆಯನ್ನು ಜಾದವ್‌ರವರ ಅನುಭವವು ಸಮರ್ಥಿಸಿತು. ಅವರ ಪ್ರಬಂಧವು ಮೇಲ್ಪದರದ ಐವರು ದಲಿತರ ಮನೋಜೀವನ ಚರಿತ್ರೆಗಳನ್ನಾಧರಿಸಿತ್ತು. ಬಾಂಬೆಯಲ್ಲಿ ನೆಲೆಸಿರುವ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ತರಬೇತುಗೊಂಡ ದಲಿತರೊಬ್ಬರು ವ್ಯತಿರಿಕ್ತ ಅಸ್ಪೃಶ್ಯತೆ ಆಚರಣೆಯಲ್ಲಿರುವುದನ್ನು ಕುರಿತು ಹೇಳಿದ್ದನ್ನು ತಿಳಿಸಿದರು. ಕೆಲವೊಮ್ಮೆ ಚಾಲಾಕಿತನ ತೋರುವ ಬ್ರಾಹ್ಮಣ ಹುಡುಗರನ್ನು ಥಳಿಸಿದ್ದನ್ನು ಆತ ನೆನಪಿಸಿಕೊಂಡರು. ಆತನಿದ್ದ ಏರಿಯಾದಲ್ಲಿ ಎಲ್ಲಾ ತಾಯಿ-ತಂದೆಯರಂತೆ ಆತನ ತಾಯಿ-ತಂದೆಯರು ಕಾರ್ಖಾನೆ ಕಾರ್ಮಿಕರು. ಅಂಬೇಡ್ಕರ್ ಪ್ರಭಾವ ಹೆಚ್ಚಾಗಿದ್ದ ಮಹಾರಾಷ್ಟ್ರದಲ್ಲಿ ಅವರ ತಾಯಿ-ತಂದೆಯರಿಗಿದ್ದುದು ಕಾರ್ಖಾನೆ ಕಾರ್ಮಿಕರೆಂಬ ಐಡೆಂಟಿಟಿಯೇ ಹೊರತು ಅಸ್ಪೃಶ್ಯರೆಂದಲ್ಲ. 'ನನ್ನ ತಾಯಿ-ತಂದೆಯರಿಗೆ ಸವರ್ಣೀಯ ಹಿಂದೂಗಳ ಎದುರು ತಲೆತಗ್ಗಿಸಿ ನಿಲ್ಲುವ, ಸಾಲ ಕೇಳುವ, ಸಹಾಯ ಅಥವಾ ಕರುಣೆಯ ಅಗತ್ಯವಿರಲಿಲ್ಲ' ಎಂದು ಹೇಳಿದ್ದನ್ನು ತಿಳಿಸಿದರು. ಸವರ್ಣೀಯ ಹಿಂದೂಗಳಿಂದ ದಲಿತರನ್ನು ಪ್ರತ್ಯೇಕಿಸಬೇಕೆಂಬ ಅಂಬೇಡ್ಕರ್ ವಿಚಾರವು ಬಲಗೊಳ್ಳಬೇಕೆಂದು ಆತ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಓದಲು, ಕೆಲಸಕ್ಕೆ ಸೇರಲು ಎಂದೂ ಮೀಸಲಾತಿಯನ್ನು ಬಳಸಿಕೊಂಡಿಲ್ಲ. ಆದರೆ ಮೀಸಲಾತಿ ಮೂಲಕ ಬಡ್ತಿ ಪಡೆದುಕೊಂಡು ಇತರರನ್ನು ಹಿಂದಕ್ಕೆ ಹಾಕಿ ಬಿಡುತ್ತಾನೆಂಬ ಸಂದರ್ಭದಲ್ಲಿ ಆತನಿಗೆ ಜಾತಿಯಿಂದ ತೊಂದರೆಯಾದುದನ್ನು ತಿಳಿಸಿದರು. ಸಂಪರ್ಕಿಸಿದ ಮತ್ತೊಬ್ಬ ದಲಿತ ವ್ಯಕ್ತಿಯು ಬ್ಯಾಂಕಿನಲ್ಲಿ ಹಿರಿಯ ಅಧಿಕಾರಿಗಳಾಗಿರುವವರು ಹಾಗೂ ಬರಹಗಾರರು. ಶಾಲೆಯಲ್ಲಿ ಮೇಧಾವಿ ಎನಿಸಿಕೊಂಡಿದ್ದ ಅವರು ಮುಂದೆ ಪುಣೆಯ ಬ್ರಾಹ್ಮಣರಿಗಷ್ಟೇ ಸೀಮಿತವಾಗಿದ್ದ ಸಂಸ್ಕೃತ ಪ್ರಶಸ್ತಿಯನ್ನು ಹೆಚ್ಚುಕಡಿಮೆ ಪಡೆಯುವ ಹಂತದಲ್ಲಿದ್ದರು.

ಪೂನಾ ಒಪ್ಪಂದಕ್ಕೆ ಬಲಯುತವಾಗಿ ಸಹಿಹಾಕಿದ ಮೇಲೆ ಅಂಬೇಡ್ಕರ್‌ರವರು ಜಂಟಿ-ಮತ ಕ್ಷೇತ್ರಗಳನ್ನು ಸ್ಥಾಪಿಸುವ ಮೂಲಕ ಹೇಗೆ ಕಾಂಗ್ರೆಸ್ ಪಕ್ಷವು ಪ್ರಾಮಾಣಿಕ ದಲಿತ ಅಭ್ಯರ್ಥಿಗಳ ಅವಕಾಶಗಳನ್ನು ಯಶಸ್ವಿಯಾಗಿ ತಡೆಗಟ್ಟಿತೆಂಬುದನ್ನು ಅರಿತುಕೊಂಡರು. ರಾಜಕೀಯದಲ್ಲಿ ಮಾತ್ರ ಪ್ರತ್ಯೇಕ ಮತ ಕ್ಷೇತ್ರಗಳಲ್ಲದೆ, ಸಾಮಾಜಿಕವಾಗಿ ಪ್ರತ್ಯೇಕ ಗ್ರಾಮಗಳು ದಲಿತರಿಗೆ ಬೇಕೆಂಬುದು ಅಂಬೇಡ್ಕರ್‌ರವರ ನಂಬಿಕೆಯಾಗಿತ್ತು. ಇದೊಂದೆ ಸವರ್ಣೀಯ ಹಿಂದೂಗಳ ಸರ್ವಾಧಿಕಾರವನ್ನು ತಡೆಯಲು ದಾರಿ ಎಂದು ಅವರು ನಂಬಿದ್ದರು.

ಹೈಯರ್ ಸೆಕೆಂಡರಿ ಹಂತದಲ್ಲಿ ಇಂಗ್ಲೀಷ್ ಮೀಡಿಯಂ ಸೇರಿದ್ದರಿಂದ ಮೊದಲಿನ ಧೈರ್ಯ ಕಳೆದುಕೊಂಡು ಒಂದು ವರ್ಷ ಮಂಕಾದರೆ. ಬಾಯಿಬಿಟ್ಟರೆ ಜಾತಿಯ ಗುರುತು ತಿಳಿದು ಬಿಡುತ್ತೆನ್ನುವ ಆತಂಕ ಅನುಭವಿಸಿದರು. ಇದನ್ನು ಜಾದವ್‌ರವರು 'ಸ್ವಯಮಿಚ್ಛೆಯ ಮೌನ' ವೆಂದು ಕರೆಯುತ್ತಾರೆ. ತಾವು ಸಂದರ್ಶಿಸಿದ ಮತ್ತೊಬ್ಬ ವ್ಯಕ್ತಿಯು ಐಐಟಿ ವಿದ್ಯಾರ್ಥಿಯಾಗಿದ್ದಾಗ ಉಗ್ಗಿನಿಂದಾಗಿ ತೊಂದರೆ ಅನುಭವಿಸಿದ್ದನ್ನು ವಿವರಿಸಿದರು. ಆತ ಈಗ ಹಿರಿಯ ಅಧಿಕಾರಿಯಾಗಿದ್ದಾರೆ. ಉಗ್ಗು ಮಾನಸಿಕ ವ್ಯಥೆಯಿಂದ ಬಳಲುತ್ತಿರುವುದರ ಲಕ್ಷಣ. ಬೇರೆಯವರು ಹುಟ್ಟಿಹಾಕುವ ತಾನೊಬ್ಬ ಅನರ್ಹನೆಂಬ ಭಾವನೆಯನ್ನು ತನ್ನ ಸ್ವಭಾವವೇ ಎಂದು ಭಾವಿಸಿಕೊಳ್ಳುವುದರಿಂದ ಉಂಟಾಗುತ್ತದೆ.

ಜಾದವ್‌ರವರು ಸಂದರ್ಶನ ಮಾಡಿದ್ದ ಮತ್ತೊಬ್ಬ ವ್ಯಕ್ತಿಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕವಿ. ಈಗಲೂ ತನ್ನ ಕುಟುಂಬದವರನ್ನು ಕಳೆದುಕೊಂಡಿರುವುದರ ಬಗ್ಗೆ ದುಃಖಿಸುತ್ತಾರೆ. ಬಾಂಬೆಯ ವೈದ್ಯಕೀಯ ಶಾಲೆಯಲ್ಲಿ ಓದುತ್ತಿದ್ದ ಆಕೆಯ ಮಗ ಜಾತಿ ತಾರತಮ್ಯದಿಂದಾಗಿ ಆತ್ಮಹತ್ಯೆ ಮಾಡಿಕೊಂಡ. ಈ ದುರಂತದಿಂದ ನೊಂದ ಆಕೆಯ ಪತಿ ಕುಡಿತದ ಚಟ ಬೆಳೆಸಿಕೊಂಡು ತೀರಿಕೊಂಡರು. ಆಕೆಯ ಮಗಳು ಬೇರೆ ಜಾತಿಯವರನ್ನು ಮದುವೆಯಾಗಬೇಕಿತ್ತು. ಮದುವೆ ಸಂದರ್ಭದಲ್ಲಿ ಜಾತಿ ಗೊತ್ತಾಗಿ ಬಿಡುತ್ತದೆ ಎಂಬ ಭೀತಿಯಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿದಳು. ದಲಿತರ ಸಂಕಟಕ್ಕೆ ಮುಖ್ಯ ಕಾರಣವಾಗಿರುವ ಅನಕ್ಷರತೆಯನ್ನು ಹೋಗಲಾಡಿಸಲು, ಸಾಕ್ಷರತೆಯ ಕೆಲಸದಲ್ಲಿ ತೊಡಗಿಸಿಕೊಳ್ಳುವ ಮೂಲಕ ಆಕೆ ತನ್ನ ಬದುಕಿನ ದುರಂತವನ್ನು ಸಹಿಸಿಕೊಳ್ಳುತ್ತಿದ್ದಾರೆ.

ವರ್ಗ ಬದಲಾವಣೆ:

ಬರೋಡಾದಲ್ಲಿ ಅಂಬೇಡ್ಕರ್‌ರವರು ಅನುಭವಿಸಿದ ಸಮಸ್ಯೆಗೆ ಹಿಂತಿರುಗಿದಾಗ ಹಲವರು ತಮ್ಮ ಪ್ರಬಂಧಗಳಲ್ಲಿ ಐಡೆಂಟಿಟಿಯ ವಿಷಯ, ಅದನ್ನು ಮರೆಮಾಚಿಕೊಳ್ಳುವಾಗಿನ ಯಾತನೆ, ಅದರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ನಡೆಸುವ ಪ್ರಯತ್ನಗಳನ್ನು ಕುರಿತು ವಿವರಿಸಿದರು. ಥೊರಟ್‌ರವರ ಪ್ರಕಾರ ದಲಿತ ಅಕೆಡಮಿಕ್‌ಗಳು ಕೋಮಾ(ಪ್ರಜ್ಞಾಹೀನ ಸ್ಥಿತಿ) ಸ್ಥಿತಿಯಲ್ಲಿದ್ದಾರೆಂದು ಅಭಿಪ್ರಾಯಪಟ್ಟರು. 'ನಾನು ಅಂಬೇಡ್ಕರ್ ಮತ್ತು ಜಲನೀತಿ ಕುರಿತು ಪುಸ್ತಕ ಬರೆದಾಗ ನನ್ನ ನಿಲುವನ್ನು ಅಕೆಡಮಿಕ್ ವಲಯದಲ್ಲಿ ಮಹತ್ವದ್ದೆಂದು ಪರಿಗಣಿಸುವುದಿಲ್ಲ' ಎಂದು ಹೇಳಿದರು. ಜಾದವ್‌ರವರು ಅಂತರ ಜಾತೀಯ ವರ್ಗಾವಣೆ ಎಂಬ ಹೊಸ ಕಲ್ಪನೆಯನ್ನು ಪರಿಚಯಿಸಿದರು. ಆ ಬಗ್ಗೆ ವಿಸ್ತಾರವಾಗಿ ಮಾತನಾಡುತ್ತಾ ಅವರು ಈ ವಿಷಯ ಹೇಗೆ ಸವರ್ಣೀಯರೊಂದಿಗೆ ಅತೀ ಅಂಗೀಕಾರ, ಅತಿ ಸ್ನೇಹ, ಜಾತಿಯನ್ನು ಧಿಕ್ಕರಿಸುವುದು ಅಥವಾ ಸಿಟ್ಟು ಮತ್ತು ಅಪನಂಬಿಕೆಯೊಂದಿಗೆ ತಳುಕು ಹಾಕಿಕೊಂಡಿದೆ ಎಂಬುದನ್ನು ವಿವರಿಸಿದರು. ಕೆಲವು ಸಮಯ ಘರ್ಷಣೆಯ ಪ್ರಕ್ರಿಯೆಯಲ್ಲಿ ದಲಿತ ವ್ಯಕ್ತಿಯು ಸವರ್ಣೀಯ ಹಿಂದೂಗಳೊಂದಿಗೆ ಜಾತಿಯ ಗುರುತು ಕುರಿತು ಹೆಚ್ಚಿನ ಒತ್ತು ನೀಡುವುದರಿಂದಲೂ ತೊಂದರೆ ಅನುಭವಿಸಬಹುದು. ಮುಂದುವರೆಯುತ್ತಾ ಅವರು, ವಿನಯ ಒಳ್ಳೆಯದು ಕೋಮಾದಿಂದ ಹೊರಬರಲು ಗಾಯವನ್ನು ಶಮನ ಮಾಡುವಂತಹವರ ಅಗತ್ಯವೂ ಇದೆ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಗೇಲ್‌ರವರು ಅಮೆರಿಕದ ಕರಿಯರಿಗೆ ತಮ್ಮ ಐಡೆಂಟಿಟಿಯ ಬಗ್ಗೆ ಹೆಮ್ಮೆ ಇದೆ, ಅದನ್ನವರು ಸಾಧಿಸಿಕೊಂಡಿದ್ದಾರೆ. ಅವರಿಗೆ ಅವರ ಐಡೆಂಟಿಟಿಯನ್ನು ಮರೆ ಮಾಚಲು ಸಾಧ್ಯವಿಲ್ಲ. ಆದರೆ ಭಾರತದಲ್ಲಿ ದಲಿತರು ತಮ್ಮ ಐಡೆಂಟಿಟಿಯನ್ನು ಮರೆಮಾಚಿಕೊಳ್ಳಬಹುದು. ಹಾಗೆ ಮರೆಮಾಚಿಕೊಳ್ಳುವ ಒತ್ತಡವೂ ಇದೆ. ಇದರಿಂದಾಗಿ ಅವರ ಮೇಲಿನ ಹೊರೆ ಹೆಚ್ಚು ಎಂದು ಹೇಳಿದರು.

ಗೇಲ್‌ರವರ ಪ್ರಬಂಧವು, ನೇರ ತಾರತಮ್ಯವನ್ನು ದಲಿತರು ಸಮರ್ಥವಾಗಿ ಎದುರಿಸಲಾರದ ಕಾರಣಕ್ಕಾಗಿಯೇ ಇತಿಹಾಸ, ಭಾಷೆ ಮತ್ತು ಸ್ಮೃತಿ ಎಲ್ಲವೂ ಬ್ರಾಹ್ಮಣೀಕರಣಕ್ಕೊಳಗಾಗಿದೆ ಎಂಬುದನ್ನು ತಿಳಿಸುತ್ತದೆ. ಆಕೆ, ರೋಮಿಲಾ ಥಾಪರ್‌ರವರಂತಹ ಪ್ರಗತಿಪರ, ಎಡಪಂಥೀಯ ವಿಚಾರಧಾರೆಯವರೂ ಸಹ ಹೇಗೆ 'ಹಿಂದೂ' ಪೂರ್ವಾಗ್ರಹಗಳನ್ನೊಳಗೊಂಡಿರುತ್ತಾರೆ ಎಂದು ತಿಳಿಸಿದರು. ತಮ್ಮ ವೃತ್ತಿಯಲ್ಲಿನ ಬ್ರಾಹ್ಮಣ ಆಕ್ರಮಣವನ್ನು ಟೀಕಿಸದೆ ಭಾಗವಹಿಸಿದ್ದು ಬ್ರಾಹ್ಮಣಶಾಹಿ ಹಿಂದೂಧರ್ಮದ ಶ್ರೇಣೀಕರಣ, ಅಸಮಾನತೆಯನ್ನು ಕಾಣಬಹುದು. ಹಾಗಾಗಿಯೇ ಸಿಂಧೂ ಕಣಿವೆ ನಾಗರೀಕತೆಯ ಲಿಪಿಯು ಗೂಡಾರ್ಥವನ್ನು ಒಡೆದಿಲ್ಲವೆಂಬ ಒಂದೇ ಕಾರಣಕ್ಕಾಗಿ ಅದನ್ನು ಇತಿಹಾಸ ಪೂರ್ವ ಎಂದು ವರ್ಗೀಕರಿಸಲಾಗಿದೆ.

ಅಮೆರಿಕಾದ ಕರಿಯರಿಗೆ ಹೋಲಿಸಿದರೆ ಭಾರತದ ದಲಿತರು 'ಸಾಧು, ಸೌಮ್ಯ, ಆಕ್ರಮಣ ಶೀಲರಲ್ಲ'ವೆಂದು ಗೇಲ್‌ರವರು ಭಾವಿಸುತ್ತಾರೆ. ತಮ್ಮ ಕರಿಯ ಸಹೋದ್ಯೋಗಿಯೊಬ್ಬರು 'ತಾಯ್ಗಂಡ ಎಂದು ಹೇಳುವು

ದನ್ನು ನಿಲ್ಲಿಸಿದ ದಿನ ನನ್ನನ್ನು ನಾನು ಹೊಂದಾಣಿಕೆ ಮಾಡಿಕೊಂಡೆ ಎಂದುಕೊಳ್ಳುತ್ತೇನೆ' ಎಂದು ಹೇಳಿದ್ದನ್ನು ಆಕೆ ನೆನಪಿಸಿಕೊಂಡರು. ಇತಿಹಾಸ ದಲ್ಲಿ ಅಕ್ಷರ ವಿನ್ಯಾಸವು ಬೆಳೆದು ಬಂದಿರುವುದರ ಮೇಲೆ ಬೆಳಕು ಚೆಲ್ಲುತ್ತಾ, ಗೇಲ್‌ರವರು ಹೇಗೆ ಭಾಷೆಯು ಇತರರನ್ನು ಎದುರಿಸಲು, ನಿಯಂತ್ರಿಸಲು, ಮಾನಸಿಕ-ಅಪಮಾನಕ್ಕೆ ಅಸ್ತ್ರವಾಗುತ್ತದೆ ಎಂಬುದನ್ನು ತೋರಿಸಿಕೊಟ್ಟರು. ಥಾಪರ್ ರವರ ಕೃತಿಗಳಲ್ಲಿ ಉತ್ತರ ಭಾರತದ ಕುರಿತು, ಕಾಗುಣಿತ ಹಾಗೂ ಇನ್ನೂ ಹಲವು ವಿಷಯಗಳ ಕುರಿತು ಪೂರ್ವಾಗ್ರಹಗಳಿರುವುದನ್ನು ಕುರಿತು ಹೇಳಿದರು. ಮಾತೃ ಪ್ರಧಾನತೆಯಿದ್ದ ಶಾತವಾಹನರನ್ನು (ಅವರು ಗೌತಮಿ ಪುತ್ರ ಎಂಬ ಹೆಸರನ್ನೂ ಬಳಸುತ್ತಿದ್ದರು) ಥಾಪರ್‌ರಂತಹ ವಿದ್ವಾಂಸರು ಕಡೆಗಣಿಸಿದ್ದಾರೆ. ಶಾತವಾಹನರ ಸಾಹಿತ್ಯ ದಲ್ಲಿ ಬರುವ ಬಾಮನ್ ಎಂಬ ಪದವನ್ನು ಥಾಪರ್‌ರವರು ಬ್ರಾಹ್ಮಣರೆಂದು ಪರಿಗಣಿಸುತ್ತಾರೆ. ಇತಿಹಾಸಕಾರರು ಪುರಾಣಗಳಿಂದ ಹೆಚ್ಚಿನ ಒತ್ತು ನೀಡುತ್ತಾರೆ. ಈ ಪುರಾಣ ಗಳು ಅಶೋಕನನ್ನು ಉಲ್ಲೇಖಿಸುವುದೇ ಇಲ್ಲ. ಅಶೋಕ ನನ್ನು ಕುರಿತು ಶೋಧನೆ ಮಾಡಿದವರು ಬ್ರಿಟಿಷ್ ವಿದ್ವಾಂಸರು. ಬೌದ್ಧಸಾಹಿತ್ಯ ದೊರೆತಿರುವುದೆಲ್ಲ ಭಾರತದ ಹೊರಗಡೆಯೇ. ಭಾರತದಲ್ಲಿ ಪಾಲಿ, ಪ್ರಾಕೃತ ಭಾಷೆ, ಶಾಸನಗಳು, ಸಂಸ್ಕೃತ ಶಾಸನಗಳಿಗಿಂತ ಮೊದಲೇ ದೊರೆತಿದ್ದವು. ಮೊದಲ ಸಂಸ್ಕೃತ ಶಾಸನವು ದೊರೆತಿದ್ದು ಗುಪ್ತರ ಕಾಲದಲ್ಲಿ, ಅಂದರೆ ಪಾಲಿ ಶಾಸನಗಳು ದೊರೆತ ೬೦೦ ವರ್ಷಗಳ ನಂತರ. ಇವೆಲ್ಲಾ ಪುರಾವೆಗಳಿದ್ದರೂ ಸಹ ಪ್ರಾಚೀನ ಭಾರತದ ಇತಿಹಾಸವನ್ನು ನಾವು ಹಿಂದೂ ಭಾರತವೆಂದು ಓದುತ್ತಿದ್ದೇವೆಯೆ ಹೊರತು ಬೌದ್ಧ ಭಾರತವನ್ನಾಗಿ ಅಲ್ಲ.

ಶಾತವಾಹನರ ಕಾಲದಲ್ಲಿ ಬ್ರಾಹ್ಮಣರನ್ನು ಬಾಮನ್ ಎಂದು ಕರೆದರೆ ತೆಲುಗು ದೇಶದಲ್ಲಿ ಇಂದಿಗೂ ಬ್ರಾಹ್ಮಣೇತರರು ಬ್ರಾಹ್ಮಣರನ್ನು ಬಾಪನೊಡು ಎಂದು ಕರೆಯುತ್ತಾರೆ. ರ ಒತ್ತಾಕ್ಷರವು ಬ್ರಾಹ್ಮಣ್ಯದ ಪ್ರಭಾವ ವಾಗಿದೆ. ಹಾಗೆಯೇ ಗ್ರಾಮ್ಯ ತಮಿಳಿನಲ್ಲಿ ಪಾಪ್ಪನ್ ಎಂದು, ಉತ್ತರ ಭಾರತದಲ್ಲಿ ಹಲವೆಡೆ ಬಾಮ್ಮನ್ ಎಂದು ಕರೆಯುತ್ತಾರೆ. ಮರಾಠಿಯಲ್ಲಿ ದಲಿತ ಬಹುಜನ ವಲಯದ ಕನೋಬ, ಸಂಸ್ಕೃತದ ಪ್ರಭಾವದಿಂದಾಗಿ ಕೃಷ್ಣನಾಗಿದ್ದಾರೆ. ಅದೇ ರೀತಿ ಮೂಗಿನಿಂದ ಉಚ್ಚರಿಸುವ ಅಂ ಅನ್ನು ಸೇರಿಸುವ ಮೂಲಕ ಹಳ್ಳಿಗಳ ಹೆಸರುಗಳನ್ನು ಬ್ರಾಹ್ಮಣೀಕರಣಗೊಳಿಸಲಾಗಿದೆ. ಗೇಲ್‌ರವರು ವಾಸಿಸುವ ಕೇಸ್‌ಗಾಂವ್ ಮೂಲದಲ್ಲಿ ಕೇಸ್‌ಗಾವ್ ಆಗಿತ್ತು. ತಕಶಿಲ ತಕ್ಷಶಿಲಾವಾದರೆ, ಪಾಯ್‌ಥಾನ್ ಎಂಬುದು ಪಥಿಸ್ಥಾನ್ ಆಯಿತು. ಇದೊಂದು ರೀತಿಯ ಸಂಚೆಂದು ಗೇಲ್ ರವರು ಅಭಿಪ್ರಾಯಪಟ್ಟರು. ಇಂತಹ ಭಾಷೀಯ ಹಿಂಸೆ ಮತ್ತು ದಲಿತ ಬಹುಜನರ ಸ್ಮೃತಿಯನ್ನು ಅಳಿಸಿಹಾಕುವ ನೀತಿಯ ಪರಿಣಾಮಗಳು ಘೋರವೆಂಬುದು ಸ್ಪಷ್ಟ.

ಪುಣೆಯಲ್ಲಿ ನೆಲೆಸಿರುವ ಬ್ರಿಟಿಷ್ ಬೌದ್ಧರಾದ ಲೋಕಮಿತ್ರ ಅವರು ತಮ್ಮ ಪ್ರಬಂಧದಲ್ಲಿ ಧಾರ್ಮಿಕ ಮತಾಂತರ, ನಿರ್ದಿಷ್ಟವಾಗಿ ಮಹಾರಾಷ್ಟ್ರದ ನವ



ನಿರ್ದಿಷ್ಟವಾಗಿ ಮಹಾರಾಷ್ಟ್ರದ ನವ ಬೌದ್ಧರು ಏಕೆ ಮತ್ತು ಹೇಗೆ ಹಿಂದೂ ಧರ್ಮದತ್ತ ಮತ್ತೆ ತಿರುಗುತ್ತಿದ್ದಾರೆ ಎಂಬ ವಿಷಯದ ಕುರಿತು ಚರ್ಚಿಸಿದ್ದಾರೆ. ೧೯೫೬ರಲ್ಲಿ ಅಂಬೇಡ್ಕರ್ ನಾಯಕತ್ವದಲ್ಲಿ ಮಹಾರ್ ಜನರು ಬಹುಸಂಖ್ಯೆಯಲ್ಲಿ ಬೌದ್ಧಮತಕ್ಕೆ ಮತಾಂತರ ಗೊಂಡ ನಂತರ ಬೌದ್ಧಮತದಲ್ಲಿ ಬ್ರಾಹ್ಮಣೀಯ ಆಸಕ್ತಿ ಗಳು ಇಳಿಮುಖವಾದವು. ಅಂತರರಾಷ್ಟ್ರೀಯ ಬೌದ್ಧ ಸಮುದಾಯವು ಪಶ್ಚಿಮ ದೇಶಗಳಿಗೆ ಧಮ್ಮ ಪ್ರಚಾರಕರನ್ನು ಕಳುಹಿಸಲು ಹೆಚ್ಚಿನ ಆಸಕ್ತಿವಹಿಸಿತೇ ವಿನಹಃ ಭಾರತಕ್ಕಲ್ಲ. ಹಾಗಾಗಿ ದಲಿತ ಬೌದ್ಧರಲ್ಲನೇಕರಿಗೆ ಬೌದ್ಧಧರ್ಮ ಕುರಿತ ಜ್ಞಾನ ಕಡಿಮೆ. ಇದರ ಪರಿಣಾಮ ವೇನೆಂದರೆ ದಲಿತ ವ್ಯಕ್ತಿಯೊಬ್ಬ ಮಗುವನ್ನು ಪಡೆಯಲು ಜೈ ಸಂತೋಷಿಮಾಳನ್ನು ಬೇಡಿಕೊಳ್ಳುವ ಬದಲು ಬುದ್ಧಂ ಶರಣಂ ಗಚ್ಛಾಮಿ ಎಂದು ಹೇಳುವುದು ಸಹಾಯಕರ ವೆಂದುಕೊಳ್ಳುತ್ತಾನೆ. ಮಹಾರಾಷ್ಟ್ರದಲ್ಲಿ ನೀವು ಬೌದ್ಧ ರೆಂದರೆ ಎಲ್ಲರೂ ಕೇಳುವುದು ನೀವು ಮಹಾರರೆ ಎಂದು. ವಿಶಾಲಾರ್ಥದಲ್ಲಿ ಬೌದ್ಧ ಐಡೆಂಟಿಟಿಯನ್ನು ಮಹಾರ್ ಐಡೆಂಟಿಟಿಯೊಂದಿಗೆ ಗಂಟುಹಾಕಲಾಗುತ್ತದೆ.

ಬೌದ್ಧರು ಏಕೆ ಮತ್ತು ಹೇಗೆ ಹಿಂದೂ ಧರ್ಮದತ್ತ ಮತ್ತೆ ತಿರುಗುತ್ತಿದ್ದಾರೆ ಎಂಬ ವಿಷಯದ ಕುರಿತು ಚರ್ಚಿಸಿದ್ದಾರೆ. ೧೯೫೬ರಲ್ಲಿ ಅಂಬೇಡ್ಕರ್ ನಾಯಕತ್ವದಲ್ಲಿ ಮಹಾರ್ ಜನರು ಬಹುಸಂಖ್ಯೆಯಲ್ಲಿ ಬೌದ್ಧಮತಕ್ಕೆ ಮತಾಂತರ ಗೊಂಡ ನಂತರ ಬೌದ್ಧಮತದಲ್ಲಿ ಬ್ರಾಹ್ಮಣೀಯ ಆಸಕ್ತಿಗಳು ಇಳಿಮುಖವಾದವು. ಅಂತರರಾಷ್ಟ್ರೀಯ ಬೌದ್ಧ ಸಮುದಾಯವು ಪಶ್ಚಿಮ ದೇಶಗಳಿಗೆ ಧಮ್ಮ ಪ್ರಚಾರಕ ರನ್ನು ಕಳುಹಿಸಲು ಹೆಚ್ಚಿನ ಆಸಕ್ತಿವಹಿಸಿತೇ ವಿನಹಃ ಭಾರತಕ್ಕಲ್ಲ. ಹಾಗಾಗಿ ದಲಿತ ಬೌದ್ಧರಲ್ಲನೇಕರಿಗೆ ಬೌದ್ಧಧರ್ಮ ಕುರಿತ ಜ್ಞಾನ ಕಡಿಮೆ. ಇದರ ಪರಿಣಾಮ ವೇನೆಂದರೆ ದಲಿತ ವ್ಯಕ್ತಿಯೊಬ್ಬ ಮಗುವನ್ನು ಪಡೆಯಲು ಜೈ ಸಂತೋಷಿಮಾಳನ್ನು ಬೇಡಿಕೊಳ್ಳುವ ಬದಲು ಬುದ್ಧಂ ಶರಣಂ ಗಚ್ಛಾಮಿ ಎಂದು ಹೇಳುವುದು ಸಹಾಯಕರ ವೆಂದುಕೊಳ್ಳುತ್ತಾನೆ. ಮಹಾರಾಷ್ಟ್ರದಲ್ಲಿ ನೀವು ಬೌದ್ಧ ರೆಂದರೆ ಎಲ್ಲರೂ ಕೇಳುವುದು ನೀವು ಮಹಾರರೆ ಎಂದು. ವಿಶಾಲಾರ್ಥದಲ್ಲಿ ಬೌದ್ಧ ಐಡೆಂಟಿಟಿಯನ್ನು ಮಹಾರ್ ಐಡೆಂಟಿಟಿಯೊಂದಿಗೆ ಗಂಟುಹಾಕಲಾಗುತ್ತದೆ. 1956ರ ನಂತರ ಹಿಂದೂ ಸವರ್ಣೀಯರು ಬೌದ್ಧ ಮತವು ದಲಿತರಿಗೆ ಒಳ್ಳೆಯದು ನಮಗಲ್ಲ ಎಂದು ನೋಡ ತೊಡಗಿದರು. ಆದ್ದರಿಂದ ಮತಾಂತರವಷ್ಟೇ ಕಳಂಕವನ್ನು ತೊಡೆದು ಹಾಕುವುದಿಲ್ಲ. ಇದರ ಪರಿಣಾಮವೇನೆಂದರೆ ನವ ಬೌದ್ಧರು ತಮ್ಮ ಮುಂದಿನ ಪೀಳಿಗೆಯವರ ಮದುವೆಯನ್ನು ಬೌದ್ಧರಲ್ಲದ ಬ್ರಾಹ್ಮಣ ರೊಂದಿಗೆ ಮಾಡಲಿಚ್ಚಿಸುತ್ತಾರೆಯೇ ಹೊರತು ಬೌದ್ಧ ರಲ್ಲದ ದಲಿತರೊಂದಿಗಲ್ಲ.

ಅವಮಾನದ ಭೀತಿ:

ದೆಹಲಿ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿರುವ ರಾಜ್ಯಶಾಸ್ತ್ರಜ್ಞ ಗೋಪಾಲ್ ಗುರುರವರು ಅವಮಾನವನ್ನು ಒಂದು ಸೈದ್ಧಾಂತಿಕ ಚೌಕಟ್ಟಿನಲ್ಲಿಟ್ಟು ವಿಶ್ಲೇಷಿಸಿದರು. ಅವಮಾನದ ಹಿಂದಿನ ಮನಃಶಾಸ್ತ್ರ ಅದರ ರಚನೆ, ಮೀರುವಿಕೆ ಕುರಿತು ವಿವರವಾಗಿ ಮಾತನಾಡಿದರು. ಅವ ಮಾನವು ಕೆಲವು ಸಮಾಜಗಳಲ್ಲಿ ಒಂದು 'ಸ್ಥಿತಿ'ಯಾದರೆ ಉಳಿದೆಡೆ ಅದೊಂದು 'ಹೇರಿಕೆ'ಯಾಗಿರುತ್ತದೆ. ಯುವ ಜನಾಂಗದಲ್ಲಿ ಪ್ರಚಲಿತವಿರುವ ರ್‍ಯಾಗಿಂಗ್‌ಅನ್ನು 'ಸ್ಥಿತಿ'ಗೆ ಉದಾಹರಣೆಯಾಗಿ ನೀಡಿದರು. ಸ್ಥಿತಿ ಎಂಬುದು ತಾತ್ಕಾಲಿಕ. ಇಲ್ಲಿ ಅವಮಾನವನ್ನು ಮೀರುವ ಸಾಧ್ಯತೆ ಗಳಿರುತ್ತವೆ. ಭಾರತ ಮತ್ತು ಅಮೆರಿಕಾದಲ್ಲಿ ಅವಮಾನ ವೆಂಬುದು ಹೇರಿಕೆಯಾಗಿದೆ. ಹಾಗಾಗಿ ಅದು ಖಾಯಂ ಅರ್ಥ ಪಡೆದುಕೊಳ್ಳುತ್ತದೆ. ಎಲ್ಲಿ ಅವಮಾನವು ಒಂದು ಹೇರಿಕೆಯಾಗಿರುತ್ತದೊ ಅಲ್ಲಿ ಅದರ ರಚನೆ ಪದೇ ಪದೇ (ಮರು) ವೃದ್ಧಿಸುತ್ತದೆ. ಈ ಹೇರಿಕೆಯಿಂದ ಹೊರಬರಲು ವ್ಯಕ್ತಿಯೊಬ್ಬ ಆತ್ಮಗೌರವವನ್ನು ಹೊಂದಬೇಕು. ಇದು ಸಾಧ್ಯವಾಗುವುದು ಉದಾರ ಮಾನವತಾವಾದವಿರುವ ಸಮಾಜಗಳಲ್ಲಿ ಮಾತ್ರ. ಆ ಸಮಾಜದಲ್ಲಿ ಹಕ್ಕಿನ ಭಾವನೆಯು ಆತ್ಮಗೌರವಕ್ಕೆ ದಾರಿ ಮಾಡಿಕೊಡುತ್ತದೆ. (ಅಮೆರಿಕದ ಕಪ್ಪು ಜನರ ವಿಷಯವನ್ನು ತೆಗೆದುಕೊಳ್ಳ ಬಹುದು). ತರಕಾರಿಯಾಗಿ ಮಾರ್ಪಾಡಾದ ವ್ಯಕ್ತಿ ಯೊಬ್ಬರಿಗೆ ಆತ್ಮಗೌರವವಿರಲು ಸಾಧ್ಯವಿಲ್ಲ. ಹಾಗೂ ಅವನು/ಅವಳು ಆತ್ಮಗೌರವದ ಪ್ರತಿಮೆಗಳನ್ನು ತಾವೇ ಶೋಧಿಸಿಕೊಂಡರೆ ಅಂತಹ ಸಂದರ್ಭದಲ್ಲಿ ಹಕ್ಕನ್ನು ಪ್ರತಿಪಾದಿಸಿಕೊಳ್ಳುವುದು ಶೋಷಕರಿಗೆ ಕಾಟವೆನಿಸಿ ಘರ್ಷಣೆಗೆ ಕಾರಣವಾಗುತ್ತದೆ. ಋಣ, ಹಂಗು ಎಂಬ

(೪೦ನೇ ಪುಟಕ್ಕೆ)

ಅಂಬೇಡ್ಕರ್ ಚಿಂತನೆ ನೆಲೆಯಲ್ಲಿ:

ಸಾಮಾಜಿಕ ನ್ಯಾಯ, ಆರ್ಥಿಕ ಹಕ್ಕು ಇತ್ಯಾದಿ

ಚಿಂತನೆ

ಅಂಬೇಡ್ಕರ್ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಪ್ರತಿಪಾದಕರು. ಆದ್ದರಿಂದಲೇ ತಾವು ರಚಿಸಿದ ಸಂವಿಧಾನದಲ್ಲಿ ಈ ಅಂಶಗಳಿಗೆ ವಿಶೇಷವಾದ ಮಹತ್ವವನ್ನು ನೀಡಿ, ತಮ್ಮ ಕಾಳಜಿಯನ್ನು ಮೆರೆದಿದ್ದಾರೆ. ಆದರೆ, ಸಂವಿಧಾನದ ಆಶಯಗಳನ್ನು ಪಾಲಿಸುವ ಪ್ರಮಾಣದೊಂದಿಗೆ ಅಧಿಕಾರಕ್ಕೆ ಬಂದ ಸರ್ಕಾರಗಳು ಹೇಗೆ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಹತ್ತಿಕ್ಕುತ್ತಿವೆ ಮತ್ತು ಆರ್ಥಿಕ ಸ್ವಾತಂತ್ರ್ಯದ ಹೆಸರಿನಲ್ಲಿ ಶ್ರೀಮಂತರಿಗೆ ಹೇಗೆ ಮಣೆಹಾಕುತ್ತಿವೆ ಎಂಬ ಸವಿವರ ಚರ್ಚೆ ಇಲ್ಲಿದೆ.

○ಬಿ.ವಿ. ವೀರಭದ್ರಪ್ಪ

ಭಾರತದ ಹಾಗೆಯೇ ಪ್ರಪಂಚದ ಇತರ ದೇಶಗಳೂ ಸಾಮಾಜಿಕ ಅಸಮಾನತೆಯ ಸಮಸ್ಯೆಯನ್ನು ಎದಿರಿಸುತ್ತಿವೆ. ನಮ್ಮಲ್ಲಿ ಅದು ಜಾತಿ ಆಧಾರಿತ ಸಮಸ್ಯೆಯಾಗಿರಬಹುದು. ಉಳಿದ ದೇಶಗಳಲ್ಲಿ ಅದು ಜನಾಂಗಿಕ ಆಧಾರಿತ ಸಮಸ್ಯೆಯಾಗಿದೆ. ಉದಾಹರಣೆಗೆ ವಿಶ್ವದ ಮುಂದುವರಿದ ದೇಶಗಳಲ್ಲಿ ಅಗ್ರಸ್ಥಾನದಲ್ಲಿರುವ ಅಮೆರಿಕ 'ಸಾಮಾಜಿಕ ನ್ಯಾಯ' ಸಮಸ್ಯೆಯನ್ನು ಹೇಗೆ ಎದುರಿಸುತ್ತಿದೆ ಎಂದು ನೋಡಬಹುದು. ಅದು ಕಂಡುಕೊಂಡ ಪರಿಹಾರ ಮಾರ್ಗಗಳು ನಮಗೂ ಮಾರ್ಗದರ್ಶಕವಾಗಬಹುದು.

ಅಮೆರಿಕದಲ್ಲಿ ಬಿಳಿಯರು ಬಹುಸಂಖ್ಯಾತರು, ಆಫ್ರಿಕ ಮೂಲದ ಕರಿಯರು (ನೀಗ್ರೊಗಳು), ಅಮೆರಿಕಾದ ಮೂಲನಿವಾಸಿಗಳು (ರೆಡ್ ಇಂಡಿಯನ್ಸ್), ಸ್ಪೈನ್ ಮತ್ತು ದ.ಅಮೆರಿಕ ಮೂಲದ ಹಿಸ್ಪಾನಿಕ್ಸ್ ಎಂಬ ಜನಾಂಗ ಮತ್ತು ಎಲ್ಲ ಜನಾಂಗಗಳ ಸ್ತ್ರೀಯರನ್ನು ಅಲ್ಲಿ ಹಿಂದುಳಿದವರು ಎಂದು ಪರಿಗಣಿಸಿ ೧೯೬೮ರಿಂದ ಅವರ ಅಭಿವೃದ್ಧಿಗಾಗಿ ಮತ್ತು ಮುಖ್ಯಪ್ರವಾಹದಲ್ಲಿ ಅವರನ್ನು ಸೇರಿಸುವ ಸಲುವಾಗಿ ಅವರಿಗೆ ಮೀಸಲಾತಿಯನ್ನು ನೀಡಲಾಗುತ್ತಿದೆ. ಅದನ್ನು ಅವರು 'ಸುಭದ್ರತಾ ಕ್ರಿಯೆ' (affirmative action)ಎಂದು ಕರೆಯುತ್ತಾರೆ.

೧೬೩೬ರಲ್ಲಿ ಸ್ಥಾಪನೆಯಾದ ಹಾರ್ವರ್ಡ್ ವಿಶ್ವವಿದ್ಯಾಲಯ ಪ್ರಪಂಚದ ಅತಿಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಅಲ್ಲಿಂದ ಪದವಿಗಳಿಸಿದ ಪ್ರತಿಭಾವಂತರಲ್ಲಿ ೩೮ ಜನ ನೊಬೆಲ್ ಪಾರಿತೋಷಕಗಳಿಸಿದ್ದಾರೆ. ೮೪೦೨ ಜನ ಬೋಧಕ ಸಿಬ್ಬಂದಿಯನ್ನು ಮತ್ತು ೫೯೦೦ ಜನ ತರಬೇತಿದಾರರನ್ನು ಉಳ್ಳ ಅದರ ವೈದ್ಯಕೀಯ ಕಾಲೇಜು (Medical School) ವೈದ್ಯಕೀಯ ಶಿಕ್ಷಣದಲ್ಲಿ ವಿಶ್ವದಲ್ಲೇ ಅಗ್ರಮಾನ್ಯವಾದುದು. ಅಲ್ಲಿ ಹಿಂದುಳಿದವರ ಅಭಿವೃದ್ಧಿ ಕಾರ್ಯಕ್ರಮ ಎಂಬ ಒಂದು ವಿಶಿಷ್ಟ ವಿಭಾಗವಿದೆ. ಅದರ ಉದ್ದೇಶ ಹಿಂದುಳಿದ ಜನಾಂಗಗಳು ಮತ್ತು ಮಹಿಳೆಯರಲ್ಲಿ ಪ್ರತಿಭೆಯನ್ನು ಗುರುತಿಸಿ ಅವರಿಗೆ ಉದ್ಯೋಗಗಳನ್ನು ನೀಡುವುದಾಗಿದೆ. ಕಾಲೇಜಿನ ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಸಮುದಾಯ ಅಮೆರಿಕಾದ ಜನ ಸಮುದಾಯವನ್ನು ಪ್ರತಿಬಿಂಬಿಸುವಂತಿರಬೇಕೆಂಬುದು, ಅವರ ಧ್ಯೇಯ ವಾಕ್ಯವಾಗಿದೆ. ೧೯೯೯ರ ಜನ ಗಣತಿಯ ಪ್ರಕಾರ ಹಾರ್ವರ್ಡ್ ಮೆಡಿಕಲ್ ಕಾಲೇಜಿನ ಬೋಧಕ ಸಿಬ್ಬಂದಿಯಲ್ಲಿ ಶೇ. ೧೪ರಷ್ಟು ದಲಿತರು ಮತ್ತು ಶೇ. ೩೩ರಷ್ಟು ಮಹಿಳೆಯರು ಇದ್ದರು; ತರಬೇತಿದಾರರಲ್ಲಿ ಶೇ. ೩೮ರಷ್ಟು ದಲಿತರು ಮತ್ತು ಶೇ. ೩೮ರಷ್ಟು ಮಹಿಳೆಯರಿದ್ದರು. ವಿಶ್ವವಿದ್ಯಾಲಯದ ಸಮುದಾಯದಲ್ಲಿ ಬಹುಮುಖಿ ಪ್ರಾತಿನಿಧ್ಯವು ತಜ್ಞತೆಯ ಪೋಷಣೆ ಮತ್ತು ಸುಭದ್ರತಾಕ್ರಿಯೆಯನ್ನು ಸಾಧಿಸಲು ಅತ್ಯವಶ್ಯಕವಾಗಿದೆ. ಸಮಾನ ನೇಮಕಾವಕಾಶಗಳು ಮತ್ತು ಸುಭದ್ರತಾ ಕ್ರಿಯೆಗಳು ವಿಶ್ವ ವಿದ್ಯಾಲಯ ಪ್ರತಿಪಾದಿಸುವ ಮತ್ತು ಪ್ರಜಾಪ್ರಭುತ್ವ ಎತ್ತಿ ಹಿಡಿಯುವ ಮೌಲ್ಯಗಳ ಕಾರ್ಯಗತಗೊಳಿಸುವುದನ್ನು ಹಾರ್ವರ್ಡ್ ವಿಶ್ವವಿದ್ಯಾಲಯ ಸಮರ್ಥಿಸುತ್ತದೆ.

ಆ ವಿಶ್ವವಿದ್ಯಾಲಯದಲ್ಲಿ ಹಿಂದುಳಿದವರ ಮತ್ತು ಮಹಿಳೆಯರ ನೇಮಕಾತಿ ಪ್ರಮಾಣ ಪ್ರತಿವರ್ಷ ಏರುತ್ತಿರುವುದು ಅಂಕಿ ಸಂಖ್ಯೆಗಳಿಂದ ಸಾಬೀತಾಗಿದೆ. ಈ ಸುಭದ್ರಾ ಕ್ರಿಯೆಯನ್ನು ಜಾರಿಗೆ ತರುವಲ್ಲಿ ಮುಂದುವರಿದ ಬಿಳಿಯ ಜನಾಂಗ ಹೆಚ್ಚು ಆಸಕ್ತಿಯನ್ನು ತೋರಿಸುತ್ತಿರುವುದು ಅಲ್ಲಿಯ ಮತ್ತೊಂದು ವಿಶೇಷ.

ಆದರೆ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವುದೇನು? ದೆಹಲಿ ವಿ.ವಿ.ದಲ್ಲಿ ಶೇ.೧೫ರಷ್ಟು ಮಾತ್ರ ದಲಿತ ಬೋಧಕ ಸಿಬ್ಬಂದಿ ಇದೆ. ಹಿಂದಿನ ಖಾಲಿ ಹುದ್ದೆಗಳಿಗೆ ದಲಿತರನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಕೈಗೊಂಡ ನಿರ್ಣಯಕ್ಕೆ ಮುಂದುವರಿದವರಿಂದ ಪ್ರತಿಭಟನೆ ಮೆರವಣಿಗೆಯ ಮೂಲಕ ಬಲವಾದ ವಿರೋಧ ವ್ಯಕ್ತವಾಯಿತು. ಅವರಲ್ಲಿ ಒಬ್ಬ 'ಇಂದು ಭಾರತದಲ್ಲಿ ಪ್ರತಿಭೆಗೆ ಮನ್ನಣೆ ಇಲ್ಲ. ನಾವೆಲ್ಲಾ ವಿದೇಶಗಳಿಗೆ ವಲಸೆ ಹೋಗುವುದು ಉತ್ತಮ' ಎಂದು ಕೂಗುತ್ತಿದ್ದ. ಹೀಗೆ ವರ್ಣ-ಬುದ್ಧಿಜೀವಿಗಳು ದಲಿತರ ಬುದ್ಧಿ ಮತ್ತೆಯನ್ನೆ ಅಣಕಿಸಲು ಹೊರಟಿದ್ದಾರೆ. ವಿಶ್ವ ವಿಖ್ಯಾತ ವಿಶ್ವವಿದ್ಯಾಲಯವೊಂದು ಬೌದ್ಧಿಕ ಪ್ರಜಾ ಪ್ರಭುತ್ವವನ್ನು ಎತ್ತಿಹಿಡಿದರೆ ಭಾರತದ ಅಗಣ್ಯ ವಿಶ್ವವಿದ್ಯಾಲಯವೊಂದು ವರ್ಣಪ್ರಭುತ್ವಕ್ಕಾಗಿ ಹಂಬಲಿಸುತ್ತದೆ.

ವಿಶ್ವವಿದ್ಯಾಲಯಗಳಲ್ಲಿ ಮಾತ್ರವಲ್ಲ, ಖಾಸಗಿ ಒಡೆತನದ ಬೃಹತ್ ಕಂಪನಿಗಳು ಸಹ ಅಮೆರಿಕದಲ್ಲಿ ಸುಭದ್ರತಾಕ್ರಿಯೆ (ಮೀಸಲಾತಿ) ಯನ್ನು ಜಾರಿಗೆ ತರುವಲ್ಲಿ ಆಸಕ್ತಿ ವಹಿಸುತ್ತಿರುವುದನ್ನು ನಾವು ನೋಡಬಹುದು. 'ಬಿಲ್ ಗೇಟ್' ಮತ್ತು 'ಮೈಕ್ರೊಸಾಫ್ಟ್' ಮಾಹಿತಿ ತಂತ್ರಜ್ಞಾನ ಜಾಲದ ಹೆಸರುಗಳನ್ನು ಕೇಳದವರಾರು. ೧೯೭೫ರಲ್ಲಿ ಕೇವಲ ೧೨೦೦೦ ಡಾಲರುಗಳಿಂದ ಅವನು ಮಾಹಿತಿ ತಾಂತ್ರಿಕೋದ್ಯಮವನ್ನು ಸ್ಥಾಪನೆಮಾಡಿ ಇಂದು ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿ ಎನ್ನಿಸಿಕೊಂಡಿದ್ದಾನೆ.

ಮೈಕ್ರೊ ಸಾಫ್ಟ್ ಇಂದು ೫೦ದೇಶಗಳಲ್ಲಿ ಸುಮಾರು ೧೦೦ ಮಿಲಿಯ ಜನರಿಗೆ ಮಾಹಿತಿ ತಂತ್ರಜ್ಞಾನವನ್ನು ಮಾರಾಟ ಮಾಡುತ್ತಿದೆ. ಆ ಬಿಲ್ ಗೇಟ್‌ನ ದೂರದೃಷ್ಟಿಯತ್ತ ಒಂದು ಇಣುಕು ನೋಟ ಹಾಯಿಸುವುದು ಭಾರತೀಯ ಬುದ್ಧಿಜೀವಿಗಳಿಗೆ ಮತ್ತು ದಲಿತರಿಗೆ ಸಮಾನವಾಗಿ ದಾರಿ ದೀಪವಾಗಬಹುದು. ಅಮೆರಿಕದಲ್ಲಿ ರೂಢಿಯಲ್ಲಿದ್ದ ಮತ್ತು ಈಗಲೂ ಅಲ್ಲಲ್ಲಿ ಇರುವ ಜನಾಂಗೀಯ ತಾರತಮ್ಯ ರೀತಿಗೆ ಸಮಾನವಾದುದನ್ನು ದಕ್ಷಿಣ ಆಫ್ರಿಕ ಮತ್ತು ಭಾರತಗಳಲ್ಲೂ ಕಾಣಬಹುದು. ಅಲ್ಲಿಯ ತಾರತಮ್ಯ ಜನಾಂಗೀಯವಾಗಿದ್ದರೆ ಇಲ್ಲಿ ಜಾತಿ ಆಧಾರಿತವಾಗಿದೆ, ಅಷ್ಟೇ ವ್ಯತ್ಯಾಸ.

ಅಮೆರಿಕದಲ್ಲಿ ೧೯೬೮ರಲ್ಲಿ ಕೆರ್ನರ್ ಆಯೋಗ ನೀಡಿದ ಎಚ್ಚರಿಕೆಯಿಂದ ಇಲ್ಲಿ ಇಂದು ಸರ್ಕಾರಿ ವಲಯದಲ್ಲಿ ಮಾತ್ರವಲ್ಲ ಖಾಸಗಿ ವಲಯದಲ್ಲೂ ಸುಭದ್ರತಾಕ್ರಿಯೆಯು (ಮೀಸಲಾತಿ ಪದ್ಧತಿ) ಜಾರಿಗೆ ಬಂದಿರುವುದನ್ನು ಕಾಣುತ್ತೇವೆ. ಬಿಲ್ ಗೇಟ್ ಈ ಪದ್ಧತಿಗೆ ಚೈತನ್ಯ ನೀಡಿದ.

ಮೈಕ್ರೊ ಸಾಫ್ಟ್ ಏನು ಹೇಳುತ್ತಿದೆ?

೧. ಸ್ತ್ರೀಯರು ಮತ್ತು ಕಪ್ಪು ವರ್ಣೀಯರು, ತಮ್ಮನ್ನು ತಾವು ಸಮರ್ಥರು ಎಂದು ತೋರಿಸಿಕೊಳ್ಳುವವರೆಗೂ, ಅಸಮರ್ಥರೆಂದೇ ಪರಿಗಣಿಸಲ್ಪಡುತ್ತಾರೆ.

೨. ಜನರ ದಕ್ಷತೆ ಮತ್ತು ಬುದ್ಧಿ ಮತ್ತೆಗಳನ್ನು ಅಳೆಯಲು ಸಮರ್ಥವಾದ ಪರಿಪೂರ್ಣ ತಾಂತ್ರಿಕತೆಯನ್ನು ಇದುವರೆಗೂ ಸಿದ್ಧಪಡಿಸಿಲ್ಲವಾದ್ದರಿಂದ ಈ ವಲಯಗಳಲ್ಲಿ ವ್ಯಕ್ತಿನಿಷ್ಠ ಮಾನದಂಡಗಳು ಪ್ರವೇಶಿಸುತ್ತವೆ. ಸ್ತ್ರೀಯರು ಮತ್ತು ಕಪ್ಪು ಜನರನ್ನು ಹೀನವಾಗಿ ಕಾಣಲಾಗುತ್ತಿದ್ದು ಅವರು ಇಂತಹ ಮೌಲ್ಯಮಾಪನದಿಂದ ಅನ್ಯಾಯಕ್ಕೊಳಗಾಗುತ್ತಿದ್ದಾರೆ.

೩. ಬಹುಮುಖೀಕರಣ ಅರ್ಥಿದರೆ ಹಿಂದುಳಿದವರನ್ನು ಮುಖ್ಯ ಪ್ರವಾಹದಲ್ಲಿ ತರುವ ಕ್ರಿಯೆ ನಮ್ಮ ಕಾರ್ಯ ಚಟುವಟಿಕೆ ಮತ್ತು ಉತ್ಪಾದನಾ ಸಾಮಗ್ರಿಯನ್ನು ಶ್ರೀಮಂತ ಗೊಳಿಸುತ್ತದೆ. ಅಷ್ಟೇ ಅಲ್ಲ ನಾವು ವಾಸಿಸುವ ಸಮಸ್ತ ಸಮುದಾಯವನ್ನೂ ಶ್ರೀಮಂತಗೊಳಿಸುತ್ತದೆ.

ಈ ಬಗ್ಗೆ ಮೈಕ್ರೊ ಸಾಫ್ಟ್ ಏನು ಮಾಡುತ್ತಿದೆ?

೧. ಅದು ಹಿಂದುಳಿದವರ ಅಭಿವೃದ್ಧಿಗಾಗಿ ಬಹುಮುಖಿ ನೇಮಕಾತಿ ಕ್ರಮವನ್ನು ಕೈಗೊಂಡಿದೆ. ಅಂದರೆ ಕರಿಯರು, ಆದಿವಾಸಿ ಅಮೆರಿಕನ್ನರು, ಇತರ ಹಿಂದುಳಿದವರು ಮತ್ತು ಮಹಿಳೆಯರ ನೇಮಕಾತಿಗಾಗಿ ಮೀಸಲಾತಿ ಪದ್ಧತಿಯನ್ನು ಅನುಸರಿಸುತ್ತಿದೆ.

೨. ಅದು ಒಂದು ಡಜನ್‌ಗಿಂತಲೂ ಹೆಚ್ಚು ಹಿಂದುಳಿದ ಗುಂಪುಗಳ ಜೊತೆಗೆ ಅಧಿಕೃತ ಸಂಪರ್ಕವನ್ನು ಏರ್ಪಡಿಸಿ ಕೊಂಡು ಅವರಿಗೆ ನೇಮಕಾತಿ ಅವಕಾಶಗಳನ್ನು ಕಲ್ಪಿಸಿ ಕೊಟ್ಟಿದೆ.

೩. ಮೈಕ್ರೊ ಸಾಫ್ಟ್ ದಲಿತರ ಶಿಕ್ಷಣ ಮತ್ತು ತರಬೇತಿಗಾಗಿ ಎಲ್ಲ ಹಂತಗಳಲ್ಲಿ ಆರ್ಥಿಕ ನೆರವನ್ನು ನೀಡುತ್ತಿದೆ.

೪. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಗುಂಪುಗಳಿಂದ ಉತ್ಪಾದನೆಗಳನ್ನು ಖರೀದಿಸುವ ನೀತಿ ಯನ್ನು ಅನುಸರಿಸುತ್ತಿದೆ.

೫. ಹಿಂದುಳಿದವರ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂಸ್ಥೆ ಗಳಿಗೆ ಧನಸಹಾಯವನ್ನು ನೀಡುತ್ತಿದೆ. ಬಿಲ್ ಮತ್ತು ಮೆಲಿಂಡಾ ಪ್ರತಿಷ್ಠಾನ ಎಂಬ ಹೆಸರಿನಲ್ಲಿ ಹಿಂದುಳಿದವರ ಆರೋಗ್ಯ, ಶಿಕ್ಷಣ ಮತ್ತು ತರಬೇತಿಗಾಗಿ ೨೧ ಬಿಲಿಯನ್ ಡಾಲರುಗಳ ಒಂದು ದತ್ತಿ ನಿಧಿಯನ್ನು ಸ್ಥಾಪಿಸಿದೆ.

ವಾಸ್ತವವಾಗಿ ಮೈಕ್ರೊ ಸಾಫ್ಟ್ ಮಾಡುತ್ತಿರುವುದೇನೆಂದರೆ ೧. ಅದು ಸಾಮಾಜಿಕ ನ್ಯಾಯ ಅನುಸರಿಸಲು ಒಂದು ಸೈದ್ಧಾಂತಿಕ ಸಮರ್ಥನೆಯನ್ನು ನೀಡುತ್ತಿದೆ. ೨.ಅದು ಕರಿಯರು, ಮೂಲ ನಿವಾಸಿಗಳು ಇತ್ಯಾದಿಗಳಿಗೆ ವೃತ್ತಿ ತರಬೇತಿಯನ್ನು ಪಡೆಯಲು ವಿದ್ಯಾರ್ಥಿವೇತನ ವನ್ನು ನೀಡುತ್ತಿದೆ. ೩. ಹಿಂದುಳಿದವರನ್ನು ನೇಮಕಾತಿ ಮಾಡಿಕೊಳ್ಳುತ್ತಿದೆ. ೪. ಹಿಂದುಳಿದವರು ಉತ್ಪಾದಿಸಿದ ಮಾಹಿತಿ ತಂತ್ರಜ್ಞಾನವನ್ನು ಕೊಂಡುಕೊಳ್ಳುತ್ತಿದೆ ಮತ್ತು ೫. ಸಮುದಾಯದ ಚಟುವಟಿಕೆಗಳಲ್ಲಿ ಸಹಭಾಗಿತ್ವವನ್ನು ವಹಿಸುತ್ತದೆ.

ನಮ್ಮಲ್ಲಿ ಖಾಸಗಿ ಕಂಪನಿಗಳು ಏನು ಮಾಡುತ್ತಿವೆ? ಯಾರಾದರೂ ಒಬ್ಬ ಕೈಗಾರಿಕೋದ್ಯಮಿ ಖಾಸಗಿ ವಲಯ ದಲ್ಲಿ ದಲಿತರಿಗೆ ಉದ್ಯೋಗಾವಕಾಶಗಳನ್ನು ನೀಡುವ ಬಗ್ಗೆ ಮಾತನಾಡಿರುವರೆ? ಯಾವ ಕೈಗಾರಿಕೋದ್ಯಮಿ ಯಾದರೂ ದಲಿತರ ಶಿಕ್ಷಣ ಅಥವಾ ತರಬೇತಿಗಾಗಿ ಧನ ಸಹಾಯ ಮಾಡಿರುವರೆ?

ಭಾರತದಲ್ಲಿ 'ಇನ್ಫೋಸಿಸ್' ಮಾಹಿತಿ ತಂತ್ರಜ್ಞಾನದ ಪ್ರಗತಿಯ ಒಂದು ಸಂಕೇತವಾಗಿದೆ. ಇಂದು ವಿಶ್ವದ ಆರ್ಥಿಕ ನಿಧಾನಗತಿಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಅದು ಕುಗ್ಗದೆ ಮುಂದಡಿ ಇಡುತ್ತಿದೆ. ಹೊಸ ಸಹಸ್ರ ಮಾನದ ಪ್ರಶಂಸಾರ್ಹ ಕಂಪನಿ ಎಂದು ಅದನ್ನು ಆಯ್ಕೆ ಮಾಡಲಾಗಿದೆ. ಅದರ ಸೂತ್ರಧಾರಿ ನಾರಾಯಣ ಮೂರ್ತಿಯನ್ನು ಅತ್ಯಂತ ಸಾಮಾಜಿಕ ಪ್ರಜ್ಞೆಯನ್ನುಳ್ಳ ನೇತಾರನೆಂದು ಪ್ರಶಂಸಿಸಲಾಗುತ್ತಿದೆ. ಆದರೆ ನಾರಾಯಣ ಮೂರ್ತಿಯರರು ಏಕೆ ಸಾಮಾಜಕ ನ್ಯಾಯದತ್ತ ಇನ್ಫೋಸಿಸ್‌ನ್ನು ಬಹುಮುಖೀಕರಣಗೊಳಿಸುವತ್ತ ಮುಂದಡಿ ಇಡುತ್ತಿಲ್ಲ? ಮೀಸಲಾತಿ ಎಂಬ ಪದ ಕೆಲವರಿಗೆ ಅಲರ್ಜಿಯಾಗಿ ಕಾಣಸಬಹುದು. 'ಆದರೆ ಬಹುಮುಖೀಕರಣ ಹೆಚ್ಚು ಗೌರವಾರ್ಹ ರೀತಿಯಲ್ಲಿ ಸೂಚಿಸುವ ಪದ ಗಳಾಗಿವೆ. ಅಮೆರಿಕದಲ್ಲಿಯಂತೆ ಭಾರತದ ಖಾಸಗಿ ವಲಯದಲ್ಲೂ ದಲಿತರು, ಬಹುಜನರು ಮತ್ತು ಮಹಿಳೆಯರು ಪ್ರತಿನಿಧಿಸಲ್ಪಡಬೇಕು. ಹಾಗಾದಾಗಲೇ ದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ.

'ಇನ್ಫೋಸಿಸ್' ಮಾಹಿತಿ ತಂತ್ರಜ್ಞಾನದ ಪ್ರಗತಿಯ ಒಂದು ಸಂಕೇತವಾಗಿದೆ. ಇಂದು ವಿಶ್ವದ ಆರ್ಥಿಕ ನಿಧಾನಗತಿಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಅದು ಕುಗ್ಗದೆ ಮುಂದಡಿ ಇಡುತ್ತಿದೆ. ಹೊಸ ಸಹಸ್ರ ಮಾನದ ಪ್ರಶಂಸಾರ್ಹ ಕಂಪನಿ ಎಂದು ಅದನ್ನು ಆಯ್ಕೆ ಮಾಡಲಾಗಿದೆ. ಅದರ ಸೂತ್ರಧಾರಿ ನಾರಾಯಣ ಮೂರ್ತಿಯನ್ನು ಅತ್ಯಂತ ಸಾಮಾಜಿಕ ಪ್ರಜ್ಞೆಯನ್ನುಳ್ಳ ನೇತಾರನೆಂದು ಪ್ರಶಂಸಿಸಲಾಗುತ್ತಿದೆ. ಆದರೆ ನಾರಾಯಣ ಮೂರ್ತಿಯವರು ಏಕೆ ಸಾಮಾಜಿಕ ನ್ಯಾಯದತ್ತ ಇನ್ಫೋಸಿಸ್‌ನ್ನು ಬಹುಮುಖೀಕರಣಗೊಳಿಸುವತ್ತ ಮುಂದಡಿ ಇಡುತ್ತಿಲ್ಲ? ಮೀಸಲಾತಿ ಎಂಬ ಪದ ಕೆಲವರಿಗೆ ಅಲರ್ಜಿಯಾಗಿ ಕಾಣಿಸಬಹುದು. 'ಆದರೆ ಬಹುಮುಖೀಕರಣ ಹೆಚ್ಚು ಗೌರವಾರ್ಹ ರೀತಿಯಲ್ಲಿ ಸೂಚಿಸುವ ಪದಗಳಾಗಿವೆ. ಅಮೆರಿಕದಲ್ಲಿಯಂತೆ ಭಾರತದ ಖಾಸಗಿ ವಲಯದಲ್ಲೂ ದಲಿತರು, ಬಹುಜನರು ಮತ್ತು ಮಹಿಳೆಯರು ಪ್ರತಿನಿಧಿ ಸಲ್ಪಡ ಬೇಕು. ಹಾಗಾದಾಗಲೇ ದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ.

ಮಾಹಿತಿ ತಂತ್ರಜ್ಞಾನದಂತಹ ಅತ್ಯಂತ ನೈಪುಣ್ಯದಿಂದ ಕೂಡಿದ ಕ್ಷೇತ್ರದಲ್ಲಿ ದಲಿತರು ಮತ್ತು ಇತರ ಹಿಂದುಳಿದ ವರು ಕೆಲಸ ನಿರ್ವಹಿಸಲು ಸಮರ್ಥರಲ್ಲ ಎಂಬ ವಾದ ವನ್ನು ಮಂಡಿಸಲಾಗುತ್ತಿದೆ. ಹಾಗಾದರೆ ಬೌದ್ಧಿಕತೆ ಮತ್ತು ಸಾಮರ್ಥ್ಯಗಳೆಂಬುವು ಜಾತಿಯನ್ನಾಧರಿಸಿವೆಯೆ ಅಥವಾ ಪರಿಸರ ಮತ್ತು ತರಬೇತಿಯನ್ನಾಧರಿಸಿವೆಯೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗಿದೆ.

ಭಾರತದಲ್ಲಿಯಂತೆ ಅಮೆರಿಕದಲ್ಲಿಯೂ ಅನೇಕ ಸಮಾಜ ವಿಜ್ಞಾನಿಗಳು ಹಾಗೂ ಜೀವ ವಿಜ್ಞಾನಿಗಳು, ಕರಿಯರು ಮತ್ತು ಮೂಲನಿವಾಸಿಗಳು ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಹಿಂದೆ ಬೀಳಲು ಕಾರಣ ಅವರ ಬೌದ್ಧಿಕ ದಾರಿದ್ರ್ಯವೇ ಹೊರತು ಬೇರೇನೂ ಅಲ್ಲ ಎಂದು ವಾದಿಸುತ್ತಿದ್ದರು. ಆದರೆ ಇಂದು ಅವರ ವಾದ ಹಿಂದೆ ಬಿದ್ದಿದೆ.

೧೯೯೪ರಲ್ಲಿ ಪ್ರಕಟವಾದ 'The Bell Curve; Intelligence and Class structure in Americal life' ಎಂಬ ಒಂದು ಗ್ರಂಥ ಕೋಲಾಹಲವನ್ನುಂಟು ಮಾಡಿದೆ. IQ ಟೆಸ್ಟ್‌ಗಳಲ್ಲಿ ಕರಿಯರು ಬಿಳಿಯರಿಗಿಂತ ಹಿಂದೆ ಬೀಳಲು ಕಾರಣಗಳು ಬೇರೆಯೇ ಇವೆ. ಹಿಂದಿನ ದಶಕ ಗಳಲ್ಲಿ IQ ಗಳಿಕೆಯ ರಾಷ್ಟ್ರೀಯ ಸರಾಸರಿಗಳು ಬಿಳಿಯರ ಮತ್ತು ಕರಿಯರ ನಡುವೆ ಇದ್ದ ಅಂತರ ನಿವಾರಣೆಯ ದಿಕ್ಕಿನಲ್ಲಿ ೧೫ ಅಂಕಗಳಷ್ಟು ಪ್ರಗತಿಯನ್ನು ತೋರಿಸುತ್ತಿವೆ. ೨೦-೩೦ ವರ್ಷಗಳಲ್ಲಿ ಅನುವಂಶಿಕ ಸಾಮರ್ಥ್ಯ ಹೇಗೆ ಬದಲಾಗಲು ಸಾಧ್ಯ. ಅಂದರೆ IQ ಟೆಸ್ಟ್‌ಗಳು ಬುದ್ಧಿವಂತಿಕೆಯ ಜೊತೆಗೆ ಬೇರೇನನ್ನೊ ಮಾಪನ ಮಾಡುತ್ತಿವೆ ಎಂಬುದು ಈಗ ಖಚಿತವಾಗಿದೆ. ಭಾರತದಲ್ಲಿ ಅದೇ ವಾದ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ ಎಂದೇ ಹೇಳಬಹುದು. ಇಲ್ಲಿಯ ದಲಿತರು, ಹಿಂದುಳಿದವರು ಚಿಕ್ಕಂದಿನಿಂದ ಪೌಷ್ಟಿಕ ಆಹಾರದ ಕೊರತೆಯ ಜೊತೆಗೆ ಸರಿಯಾದ ಶಾಲೆ ಮತ್ತು ಶಿಕ್ಷಕರ ಕೊರತೆಯನ್ನು ಅನುಭವಿಸುತ್ತಿರುವಾಗ ಮೇಲುವರ್ಗದ ಬಾಲಕರೊಡನೆ IQ ಸ್ಪರ್ಧೆಗಳನ್ನು ತೆಗೆದುಕೊಳ್ಳಲು ಹೇಗೆ ಸಾಧ್ಯ? ಮಾಹಿತಿ ತಂತ್ರ ಜ್ಞಾನ ಅಥವಾ ಇನ್ನಾವುದೇ ವೃತ್ತಿ ಶಿಕ್ಷಣದಲ್ಲಿ ದಲಿತರು ಮತ್ತು ಇತರ ಹಿಂದುಳಿದವರು ಹಿಂದೆ ಬೀಳಲು ಕಾರಣ ಅವರು ಕಡಿಮೆ ಬುದ್ಧಿಶಾಲಿ ಗಳೆಂಬುದಲ್ಲ; ಅವರು ಸಮಾನ ಅವಕಾಶಗಳಿಂದ ವಂಚಿತರಾದವರು ಎಂಬುದಾಗಿದೆ.

ಸಮಾನತೆ: ಲೇಖಕಿ ಮತ್ತು ಅಂಕಣಗಾರ್ತಿ ಗೇಯ್ಲ್ ಓಂವೇಡ್ತ್ (Gail Ovedt)ಅವರು ನೀಡುವ ಒಂದು ಮಾಹಿತಿ ಗಮನಾರ್ಹವಾಗಿದೆ: ಪುಣೆ ವಿಶ್ವವಿದ್ಯಾಲಯ ದಲ್ಲಿ ಒಂದು ಕಂಪ್ಯೂಟರ್ ತರಬೇತಿ ಕಾರ್ಯಕ್ರಮವನ್ನು ಯೋಜಿಸಲಾಗಿದೆ. ಅದು ಕಳೆದ ಆರು ವರ್ಷಗಳಿಂದ ಪ್ರತಿ ವರ್ಷ ೪೦೦ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿದೆ. ಅಲ್ಲಿ ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಪ್ರವೇಶವನ್ನು ನೀಡಿದ್ದರೆ ಈವರೆಗೆ ಸುಮಾರು ೬೦೦ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳು ಕಂಪ್ಯೂಟರ್ ತರಬೇತಿ ಪಡೆಯುತ್ತಿದ್ದರು. ಆದರೆ ಇಲ್ಲಿಯ ವರೆಗೂ ಒಬ್ಬ ವಿದ್ಯಾರ್ಥಿಯೂ ಅಲ್ಲಿ ಕಂಪ್ಯೂಟರ್ ತರ ಬೇತಿ ಪಡೆದಿಲ್ಲ. ಪುಣೆ ವಿಶ್ವವಿದ್ಯಾಲಯದ ಅಂಬೇಡ್ಕರ್ ಸಂಘ ಹೇಳುವಂತೆ ೬೦೦ ದಲಿತರು ಮತ್ತು ಆದಿವಾಸಿ ಗಳನ್ನು ಕಂಪ್ಯೂಟರ್ ತರಬೇತಿಯ ಆಧುನಿಕ ಜಗತ್ತಿನಿಂದ ಹೊರಗೆ ತಳ್ಳಲಾಗಿದೆ. ಇದು ಒಂದು ವಿಶ್ವವಿದ್ಯಾಲಯದ ಒಂದು ವಿಭಾಗದ ಕಥೆ ಮಾತ್ರ. ಸ್ವಲ್ಪ ಹೆಚ್ಚು ಕಡಿಮೆ ಅದೇ ರೀತಿ ಉಳಿದ ಕಡೆಯಲ್ಲೂ ನಡೆದಿರಲು ಸಾಕು.

ಭಾರತದ ಬಹುಸಂಖ್ಯಾತರಾದ ದಲಿತರು ಮತ್ತು ಬಹು ಜನರನ್ನು ಮಾಹಿತಿ ತಂತ್ರಜ್ಞಾನದಂತಹ ಉನ್ನತ ಶಿಕ್ಷಣ ದಿಂದ ಹೊರಗೆ ಉಳಿಸಿದರೆ ಅದರಿಂದಾಗುವ ದುಷ್ಪರಿ ಣಾಮಗಳನ್ನು ಈ ಮೊದಲು ಯಾರೂ ಊಹಿಸಿರಲಿಲ್ಲ. ಈಗ ಅವು ಸ್ಪಷ್ಟವಾಗಿ ಗೋಚರಿಸುತ್ತಿವೆ.

ಭಾರತವು ಮಾಹಿತಿ ತಂತ್ರಜ್ಞಾನದಲ್ಲಿ ಅದ್ಭುತವನ್ನು ಸಾಧಿಸಿದೆ ಎಂದು ಹೇಳಲಾಗುತ್ತಿದೆ. ಆದರೆ ಅಂಕಿ-ಅಂಶ

ಗಳನ್ನು ಗಮನಿಸಿದರೆ ಕಂಡು ಬರುವ ದೃಶ್ಯವೇ ಬೇರೆ. ಮಾಹಿತಿ ತಂತ್ರಜ್ಞಾನದ ಬಳಕೆಯಲ್ಲಿ ಭಾರತ ತುಂಬಾ ಹಿಂದೆ ಬಿದ್ದಿದೆ. ಪ್ರತಿ ೧೦,೦೦೦ ಜನಸಂಖ್ಯೆಗೆ ಜನವರಿ ೨೦೦೦ದಲ್ಲಿ ಯಾವ ಯಾವ ದೇಶದಲ್ಲಿ ಎಷ್ಟು ಜನ 'ಇಂಟರ್ ನೆಟ್' ಸಂಪರ್ಕ ಹೊಂದಿದ್ದಾರೆ ಮತ್ತು ವೈಯಕ್ತಿಕ ಕಂಪ್ಯೂಟರ್‌ಗಳನ್ನು ಯಾವ ಪ್ರಮಾಣದಲ್ಲಿ ಬಳಸುತ್ತಿದ್ದಾರೆ ಎಂಬುದನ್ನು ಸ್ವಲ್ಪ ಗಮನಿಸೋಣ.

ದೇಶ ೨೦೦೦ದಲ್ಲಿ ಪ್ರತಿ ೧೦,೦೦೦ಜನಸಂಖ್ಯೆಗೆ 'ಇಂಟರ್ ನೆಟ್' ಸಂಪರ್ಕ ಹೊಂದಿದ್ದವರ ಸಂಖ್ಯೆ ಮತ್ತು ೧೯೯೮ರಲ್ಲಿ ಪ್ರತಿ ೧೦೦೦ ಜನಸಂಖ್ಯೆಗೆ 'ವೈಯಕ್ತಿಕ ಕಂಪ್ಯೂಟರ್' ಹೊಂದಿದ್ದವರ ಸಂಖ್ಯೆ ಕ್ರಮವಾಗಿ

೧. ಭಾರತ ೦.೨೩ ೨.೭
೨. ಚೀನಾ ೦.೫೭ ೮.೯
೩. ಈಜಿಪ್ಟ್ ೦.೭೩ ೯.೧
೪. ಇಂಡೋನೇಷ್ಯಾ ೧.೦೦ ೮.೨
೫. ಬ್ರೆಜಿಲ್ ೨೬.೨೨ ೩೦.೧
೬. ಮೆಕ್ಸಿಕೋ ೪೦.೮೮ ೪೭.೦
೭. ದಕ್ಷಿಣ ಆಫ್ರಿಕ ೩೯.೧೭ ೪೭.೪
೮. ಅಮೆರಿಕ ೧೯೩೯.೯೭ ೪೫೮.೬

(ಆಧಾರ: ವಿಶ್ವ ಅಭಿವೃದ್ಧಿ ವರದಿ ೨೦೦೦-೦೧, ಪಟ್ಟಿ೧೯)

ಅಭಿವೃದ್ಧಿ ಹೊಂದುತ್ತಿರುವ ಜನಸಂಖ್ಯಾ ಬಾಹುಳ್ಯದ ದೇಶಗಳೊಡನೆ ಹೋಲಿಸಿದಾಗ ಭಾರತದ ಸ್ಥಾನ ಏನು ಎಂಬುದು ಮೇಲಿನ ಪಟ್ಟಿಯಿಂದ ವೇದ್ಯವಾಗುತ್ತದೆ. ಭಾರತದ ಇನ್ಫೋಸಿಸ್, ವಿಪ್ರೋದಂತಹ ಕಂಪನಿಗಳು ಇದರಿಂದ ಒಂದು ಪಾಠವನ್ನು ಕಲಿಯಬಹುದಾಗಿದೆ. ಅವು ಏನು ಮಾಡಬಹುದು ಎಂಬುದು ಪರಿಶೀಲನಾ ಯೋಗ್ಯ. ಭಾರತ ಮತ್ತು ಅಮೆರಿಕಾದಲ್ಲಿ ಸರ್ಕಾರಿ ಮತ್ತು ಖಾಸಗಿ ವಲಯಗಳು ಮೀಸಲಾತಿ ಅಥವಾ ಸಾಮಾಜಿಕ ನ್ಯಾಯ ಕ್ರಮಗಳನ್ನು ಅನುಸರಿಸುತ್ತಿರುವ ರೀತಿಯಲ್ಲಿರುವ ವೈರುಧ್ಯಗಳು ಗಮನಾರ್ಹವಾಗಿವೆ. ಭಾರತದ ಒಬ್ಬ ಪ್ರತಿಭಾವಂತ ಬುದ್ಧಿಜೀವಿ ಹಾಗೂ ದಲಿತ ಅಂಕಣ ಕಾರರು, ಚಂದ್ರಭಾನ್ ಪ್ರಸಾದ್ ಈ ಬಗ್ಗೆ ಅಮೆರಿಕ ಮತ್ತು ಭಾರತಗಳಲ್ಲಿ ಕ್ಷೇತ್ರಕಾರ್ಯಮಾಡಿ ಅಮೂಲ್ಯವಾದ ತೌಲನಿಕ ಮಾಹಿತಿಯನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಅದು ದಲಿತರಿಗೂ ಮೇಲ್ವರ್ಗದವರಿಗೂ ಸಮಾನವಾಗಿ ಚಿಂತನಾ ಸಾಮಗ್ರಿಯನ್ನು ಒದಗಿಸುತ್ತದೆ.

ಭಾರತದಲ್ಲಿ ಸಾರ್ವಜನಿಕ ವಲಯದಲ್ಲಿ ಮೀಸಲಾತಿ ಪದ್ಧತಿ ಇದ್ದರೂ ಕೆಲವು ವಲಯಗಳಲ್ಲಿ, ಅದರಲ್ಲೂ ವಿಶೇಷವಾಗಿ ವಿಜ್ಞಾನ ಮತ್ತು ರಕ್ಷಣಾ ಕ್ಷೇತ್ರಗಳನ್ನು ಮೀಸಲಾತಿಯಿಂದ ಹೊರಗೆ ಉಳಿಸಲಾಗಿದೆ.

ರಕ್ಷಣಾ ಇಲಾಖೆಯಲ್ಲಿ ಎಷ್ಟು ಜನ ದಲಿತರು ಅಥವಾ ಇತರ ಹಿಂದುಳಿದವರು ಜನರಲ್ ಆಗಿದ್ದಾರೆ ಎಂಬ ಪ್ರಶ್ನೆಯನ್ನೆತ್ತುವ ಧೈರ್ಯ ಯಾರಿಗಿದೆ? ಆ ದಿಕ್ಕಿನಲ್ಲಿ ಅವರಿಗೆ ತರಬೇತಿಯಾದರೂ ಸಿಕ್ಕೀತೆ? ಆದರೆ ಕಾರ್ಗಿಲ್ ನಂತಹ ಯುದ್ಧ ಭೂಮಿಯಲ್ಲಿ ಹೋರಾಡಿ ಸಾಯುವ ಸೈನಿಕರ ಜಾತಿಗೂ ಅವರನ್ನು ಹೋರಾಟಕ್ಕೆ ಹುರಿದುಂಬಿ ಸುವ ಅಧಿಕಾರಿಗಳ ಜಾತಿಗೂ ವ್ಯತ್ಯಾಸವಿದೆ! ದಲಿತರು

ಮತ್ತು ಹಿಂದುಳಿದವರನ್ನು ವಿಜ್ಞಾನದ ಉನ್ನತ ಹಂತಗಳಿಗೆ ಸಿದ್ಧಪಡಿಸಲು ಕಾರ್ಯಕ್ರಮಗಳಾಗಲಿ, ತಯಾರಿ ಯಾಗಲಿ ನೀಡುತ್ತಿಲ್ಲ.

ಆದರೆ ನ್ಯಾಷನಲ್ ಏರೋನಾಟಿಕ್ಸ್ ಆಂಡ್ ಸ್ಪೇಸ್ ಆಡ್ಮಿನಿಸ್ಟ್ರೇಶನ್(NASA)ಯಲ್ಲಿ ಪ್ರತಿಭಾವಂತರನ್ನು ತಯಾರು ಮಾಡಲು ಒಂದು ವಿಶೇಷ ವಿಭಾಗವೇ ಇದೆ. 'ನಾಸಾ'ದಲ್ಲಿ ಈ ಹಿಂದೆ ಹೊರಗೆ ಇಡಲಾಗಿದ್ದ ದುರ್ಬಲ ವರ್ಗದವರ ಪ್ರತಿಭೆಯನ್ನು ಗುರುತಿಸಿ ಅವರಿಗೆ ತರಬೇತಿ ಯನ್ನು ನೀಡುವ ವ್ಯವಸ್ಥೆ ಇದೆ. ಆದರ ಪರಿಣಾಮವಾಗಿ ಇದುವರೆಗೆ ಸೈನ್ಯದಿಂದ ಹೊರಗೆ ಇಡಲಾಗಿದ್ದ ಆಫ್ರಿಕನ್ ಅಮೆರಿಕನ್ನರು ಇಂದು ರಕ್ಷಣಾ ಇಲಾಖೆಯಲ್ಲಿ ಜನರಲ್ ಪದವಿಗೆ ಸಹ ಏರಿದ್ದಾರೆ. ಜನರಲ್ ಕಾಲಿನ್ ಪೊವೆಲ್ ಇಂದು ಅಮೆರಿಕದ ಅಧ್ಯಕ್ಷಸ್ಥಾನದಿಂದ ಮೂರನೆ ಉನ್ನತ ಶಕ್ತಿಶಾಲಿ ಹಾಗೂ ಗೌರವದ ಸ್ಥಾನದಲ್ಲಿದ್ದಾರೆ ಅಮೆರಿಕ ದಲ್ಲಿ ಸುಭದ್ರತಾ ಕ್ರಿಯೆ ಬಹುಮುಖೀಕರಣ,ಸಾಮಾಜಿಕ ನ್ಯಾಯ ಅಥವಾ ಮೀಸಲಾತಿ ಎಂಬುದು ಪ್ರತಿಭಾ ಬೇಟೆಯ ಒಂದು ಆರೋಪವಾಗಿದೆ. ಕಂಪನಿಗಳು ಮತ್ತು ಸಂಸ್ಥೆಗಳು ತಮ್ಮ ನೌಕರರ ನೇಮಕಾತಿಯಷ್ಟರಿಂದಲೇ ತೃಪ್ತರಾಗದೇ ಪ್ರತಿಭಾವಂತರನ್ನು ಹುಡುಕುವ ಕೆಲಸದಲ್ಲಿ ತೊಡಗುತ್ತಾರೆ.

ರಕ್ಷಣಾ ಇಲಾಖೆಯಲ್ಲಷ್ಟೇ ಅಲ್ಲ, ಖಾಸಗಿ ಕ್ಷೇತ್ರಗಳಾದ ವಿಶ್ವವಿದ್ಯಾಲಯಗಳಲ್ಲಿ, ಮಾಹಿತಿ ತಂತ್ರಜ್ಞಾನ ಕಾರ್ಪೊ ರೇಷನ್‌ಗಳಲ್ಲಿ, ಪತ್ರಿಕೋದ್ಯಮ ಸಂಸ್ಥೆಗಳಲ್ಲಿ ಮೀಸಲಾತಿ ಪದ್ಧತಿಯನ್ನು ಅಮೆರಿಕಾದಲ್ಲಿ ಅನುಸರಿಸಲಾಗುತ್ತಿದೆ. ಒಂದು ದೇಶದ ಎಲ್ಲ ಜನಾಂಗಗಳು, ಗುಂಪುಗಳು ಪ್ರತಿಯೊಂದು ಉತ್ಪಾದನಾ ಕ್ಷೇತ್ರದಲ್ಲೂ ಸಹಭಾಗಿತ್ವವನ್ನು ಹೊಂದಿರುವುದರಿಂದ ಮಾತ್ರ ಸಾಮಾಜಿಕ ಮತ್ತು ಆರ್ಥಿಕ ಸುಭದ್ರತೆಗಳು ಸಾಧ್ಯವೆಂಬುದನ್ನು ಅವರು ಮನ ಗಂಡಿದ್ದಾರೆ. ಸಮಾಜದ ಭಿನ್ನ ಭಿನ್ನ ಗುಂಪುಗಳ ನಡುವೆ ಏನೇ ವ್ಯತ್ಯಾಸಗಳಿರಲಿ, ಅವರೆಲ್ಲಾ ಸಮಾನವಾಗಿ ಮುಖ್ಯ ಪ್ರವಾಹದಲ್ಲಿ ಬೆರೆಯಬೇಕೆಂಬುದೇ ಅವರ ಉದ್ದೇಶ. ವೈವಿಧ್ಯಮಯವಾದ ಸಾಮಾಜಿಕ ಗುಂಪುಗಳು ಪರಸ್ಪರ ಬೆರೆತಾಗ ಮಾತ್ರ ಅವು ಪ್ರತಿಯೊಂದೂ ಲಾಭದಾಯಕ ವಾಗಿ ಬೆಳೆಯಲು ಸಹಾಯಕವಾಗುತ್ತದೆ.

ಭಾರತದಲ್ಲಿ ಪ್ರತಿ ೧೦೦ ವಾಣಿಜ್ಯ ಕುಟುಂಬಗಳಲ್ಲಿ ೭೫ ಅಥವಾ ಇನ್ನೂ ಹೆಚ್ಚು ಕುಟುಂಬಗಳು ವೈಶ್ಯರವಾಗಿರು ತ್ತವೆ. ಪ್ರತಿ ೧೦೦ ಕುಲಪತಿಗಳಲ್ಲಿ ಅಥವಾ ಪತ್ರಿಕಾ ಸಂಪಾ ದಕರಲ್ಲಿ ೭೫ ಜನ ಬ್ರಾಹ್ಮಣರಾಗಿರುತ್ತಾರೆ. ಇತ್ತೀಚೆಗೆ ಕೆಲವು ಬದಲಾವಣೆಗಳಾಗಿರಬಹುದು. ರಾಜಕೀಯ ಪಕ್ಷ ಗಳೂ ವರ್ಣಜಾತಿ ಆಧಾರಗಳ ಮೇಲೆ ರೂಪಗೊಳ್ಳ ಲಾರಂಭಿಸಿವೆ. ಭೂಕಂಪನದಂತಹ ಅಪತ್ಕಾಲದಲ್ಲೂ ವರ್ಣ-ಜಾತಿ ಪಕ್ಷಪಾತಗಳು ಪರಿಹಾರ ಮತ್ತು ಪುನರ್ವಸತಿ ವ್ಯವಸ್ಥೆಗಳಲ್ಲಿ ಮಧ್ಯ ಪ್ರವೇಶ ಮಾಡಿವೆ.

ಭಾರತೀಯ ಕಲೆ, ಚಲನಚಿತ್ರ ಮತ್ತು ಮಾಧ್ಯಮಗಳು ಇವನ್ನೆಲ್ಲಾ ಪ್ರತಿಬಿಂಬಿಸಲು ಸಾಧ್ಯವಾಗಿವೆಯೆ? ಅಮೆರಿಕ ವಿದ್ವಾಂಸರಿಗೆ, ಕೈಗಾರಿಕೋದ್ಯಮಿಗಳಿಗೆ ಮತ್ತು ಶ್ರೀಮಂತ ಮಕ್ಕಳಿಗೆ ಮಾತ್ರವಲ್ಲ ಕಲೆ ಮತ್ತು ಮಾಧ್ಯಮಗಳವರಿಗೂ ಕನಸಿನ ನಾಡಾಗಿದೆ. ಅದಕ್ಕಾಗಿಯೇ ಇರಬೇಕು, ಮುಂಬಯಿಯ ಚಿತ್ರ ಜಗತ್ತು 'ಬಾಲಿವುಡ್' ಎಂದು ಕರೆದುಕೊಳ್ಳುತ್ತಾ ಒಂದೇ ನೆಗೆತದಲ್ಲಿ ಅಮೆರಿಕದ 'ಹಾಲಿವುಡ್'ಗೆ ಸಮೀಪವಾಗಲು ಬಯಸುತ್ತದೆ. ವಿಕ್ಟರ್ ಬ್ಯಾನರ್ಜಿ, ಓಂಪುರಿ, ಶೇಖರ್ ಕಪೂರ್ ಮುಂತಾದವರು ಪ್ರಖ್ಯಾತರಾದುದು ಅವರು ಹಾಲಿವುಡ್‌ನ ಮಾದರಿ ಯನ್ನು ಅನುಸರಿಸಿದ್ದರಿಂದಲೇ, ಆದರೆ ನಮ್ಮ ಕಲಾ ವಿದರು ಹಾಲಿವುಡ್ ಸಾಮಾಜಿಕ ಪ್ರಜ್ಞೆಯಿಂದ ಪ್ರೇರಣೆ ಪಡೆಯಲು ಸಿದ್ಧರಾಗಿದ್ದಾರೆಯೇ ಎಂಬುದು ಪ್ರಶ್ನೆ. ಇತ್ತೀಚೆಗೆ ಬಿಳಿಯ ಅಮೆರಿಕನ್ನರು ಎಲ್ಲಿಯವರೆಗೆ ಹಿಂದುಳಿದ ಭಿನ್ನ ಜನಾಂಗೀಯರಿಗೆ ಶಿಕ್ಷಣ ಸಂಸ್ಥೆಗಳಲ್ಲಿ, ಉದ್ಯೋಗಾವಕಾಶಗಳಲ್ಲಿ, ಬಂಡವಾಳ ಹೂಡಿಕೆಯಲ್ಲಿ ಅವರ ಸಂಖ್ಯಾಪ್ರಮಾಣಕ್ಕೆ ತಕ್ಕ ಸಹಭಾಗಿತ್ವವನ್ನು ಕೊಡಲಾಗುವುದಿಲ್ಲವೋ ಅಲ್ಲಿಯವರೆಗೆ ಜನಾಂಗೀಯ ಆಧಾರಿತ ಸಂಘರ್ಷಗಳೂ ಅವರನ್ನು ಕಾಡಿಸದೆ ಬಿಡುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಅವರು ಜ್ಞಾನ, ಮಾಧ್ಯಮಗಳು ಮತ್ತು ಕಲಾ ಕ್ಷೇತ್ರಗಳಲ್ಲಿ ಮಹತ್ವದ ನಿರ್ಣಯವೊಂದನ್ನು ಕೈಗೊಂಡಿ ದ್ದಾರೆ. ಅಮೆರಿಕದ ಬರಹಗಾರರ ಒಕ್ಕೂಟವು (Writers Guild of America, 'WGA')ಕರಿಯರಿಗೆ, ಮಹಿಳೆ ಯರಿಗೆ ಮತ್ತು ಹಿರಿಯ ಬರಹಗಾರರಿಗೆ ಚಲನಚಿತ್ರ ಮತ್ತು ದೂರದರ್ಶನಗಳಲ್ಲಿ ಸೇವಾವಕಾಶಗಳು ಯಾವ ಪ್ರಮಾಣದಲ್ಲಿ ದೊರೆಯುತ್ತಿವೆ ಎಂಬ ಬಗ್ಗೆ ಕಾಲಕಾಲಕ್ಕೆ ವರದಿ ಮಾಡಲು ಆಯೋಗವನ್ನು ನೇಮಿಸಿದೆ. 1998ರಲ್ಲಿ ಪ್ರಕಟವಾದ ಹಾಲಿವುಡ್ ಬರಹಗಾರರ ನಾಲ್ಕನೆ ವರದಿ ಎರಡು ಡಜನ್ ಪಟ್ಟಿಗಳ ಮೂಲಕ ವಿವರವಾದ ವರದಿಯನ್ನು ಒದಗಿಸಿದೆ. ಅದರ ಪ್ರಕಾರ ೧೯೭೭ರಲ್ಲಿ ಬಿಳಿಯ ಬರಹಗಾರರು ದೂರದರ್ಶನದಲ್ಲಿ ಶೇ. ೭೦ ರಷ್ಟು ಮತ್ತು ಚಲನಚಿತ್ರಗಳಲ್ಲಿ ಶೇ. ೮೦ರಷ್ಟು ಇದ್ದರು. ಜನಾಂಗೀಯ ಅಲ್ಪಸಂಖ್ಯಾತರು ಕ್ರಮವಾಗಿ ಕೇವಲ ಶೇ.೭ ಮತ್ತು ಶೇ.೫ರಷ್ಟು ಮಾತ್ರ ಇದ್ದರು. ಆದರೆ ೧೯೯೨ ಮತ್ತು ೧೯೯೮ರ ಮಧ್ಯೆ WGAನ ಸದಸ್ಯಾಬಲ ಹಿಂದುಳಿದವ ರಲ್ಲಿ ಶೇ. ೬೧ರಷ್ಟು ಮತ್ತು ಒಟ್ಟಾರೆ ಶೇ. ೧೭ರಷ್ಟು ಬೆಳೆಯಿತು. ೧೯೯೧ ಮತ್ತು೧೯೭೭ರ ಮಧ್ಯೆ ಚಲನಚಿತ್ರ ಮತ್ತು ದೂರದರ್ಶನ ಗಳಲ್ಲಿ ಹಿಂದುಳಿದವರ ನೇಮಕ ಶೇ.೬೬ ರಷ್ಟು ಬೆಳೆಯಿತು. ಆ ಅವಧಿಯಲ್ಲಿ ನೇಮಕಗಳ ಒಟ್ಟಾರೆ ಏರಿಕೆ ಶೇ. ೧೦ ಮಾತ್ರವಾಗಿತ್ತು.

ಹಾಲಿವುಡ್‌ನಲ್ಲಿ ಬದಲಾವಣೆ ಹೀಗೆ ನಡೆಯುತ್ತಿರುವಾಗ 'ಬಾಲಿವುಡ್'ನಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಬಹುದು. 'ಬಾಲಿವುಡ್'ನಲ್ಲಿ ಯಾರಾದರೂ ದಲಿತ ಬರಹಗಾರರಿದ್ದಾರೆಯೆ ಅವರ ಬಗ್ಗೆ ಅಧ್ಯಯನಗಳೇನಾದರೂ ನಡೆಯುತ್ತಿವೆಯೇ ಕಲಾಪ್ರಪಂಚವೇ ಅಸ್ಪೃಶ್ಯತೆಯನ್ನು ಅನುಸರಿಸುತ್ತಿರುವಾಗ ದಲಿತರು 'ಬಾಲಿವುಡ್'ನ್ನು ಏಕೆ ಬೆಂಬಲಿಸಬೇಕು? 'ಬಾಲಿವುಡ್' ಲೇಖಕರು ತಮ್ಮ ವಾಣಿಜ್ಯೋದ್ಯಮ ಚಾತುರ್ವರ್ಣ್ಯ ಆಧಾರಿತವಾದುದು ಎಂದು ಒಪ್ಪಿಕೊಳ್ಳುವರೆ? ಅವರು ತಮ್ಮ ಬರಹಗಾರರ ಸಾಮಾಜಿಕ ಹಿನ್ನೆಲೆಯ ಬಗ್ಗೆ ಒಂದು ಅಧ್ಯಯನವನ್ನು ಕೈಗೊಳ್ಳಬೇಕು ಮತ್ತು ಅವರಲ್ಲಿ ದಲಿತರು ಸೇರ್ಪಡೆಯಾಗುವಂತೆ ಒಂದು ಪ್ರಜ್ಞಾಪೂರ್ವಕ ಪ್ರಯತ್ನವನ್ನು ಮಾಡಬೇಕು. ಒಟ್ಟಾರೆ ಭಾರತದ ವರ್ಣವ್ಯವಸ್ಥೆಯ ಅತ್ಯಂತ ಪ್ರಗತಿಪರವಾದ ಕಲಾವಿದರೂ ಸಹ ಅಮೆರಿಕದ ಸಂಪ್ರದಾಯವಾದಿಗಳಾದ ಕಲಾವಿದರಿಂದ ಕಲಿಯುವುದು ಬಹಳ ಇದೆ. ತೆರೆದ ಮನಸ್ಸು ಮತ್ತು ಮುಕ್ತವಿಚಾರವಿದ್ದಲ್ಲಿ ಮಾತ್ರ ಅಪೇಕ್ಷಿತ ಬದಲಾವಣೆ ತರಲು ಸಾಧ್ಯ ಎಂದು ಚಂದ್ರಭಾನ್ ಪ್ರಸಾದ್ ಅಭಿಪ್ರಾಯ ಪಡುತ್ತಾರೆ.

ಆರ್ಥಿಕ ಹಕ್ಕು : ಋಗ್ವೇದದ ಅಂತ್ಯಕಾಲಕ್ಕೆ ಚಾತುರ್ವರ್ಣಗಳು ಭಾರತ ಭೂಮಿಯಲ್ಲಿ ಜನ್ಮ ತಾಳಿದವು. ಪುರುಷ ಸೂಕ್ತ ಅವುಗಳ ಆಕರವನ್ನ ದಾಖಲಿಸಿವೆ. ಅನಂತರ ಧರ್ಮಶಾಸ್ತ್ರಕಾರರು ಅವುಗಳನ್ನು ಶ್ರೇಣೀಕೃತ ಶೋಷಕ-ಶೋಷಿತರನ್ನಾಗಿ ವಿಂಗಡಿಸಿದರು. ಒಂದು ಜಾತಿಯಲ್ಲಿ ಜನಿಸಿದ ಕಾರಣದಿಂದಲೇ ಒಬ್ಬ ವ್ಯಕ್ತಿಗೆ ಕೆಲವು ಸೌಲಭ್ಯಗಳು ಅಥವಾ ದೌರ್ಬಲ್ಯಗಳು ಪ್ರಾಪ್ತಿಯಾಗುತ್ತಿದ್ದುವು. ಅವುಗಳಲ್ಲಿ ದುಡಿಯದಲೇ ದುಡಿಮೆಯ ಫಲವನ್ನು ಪಡೆಯುವ ಹಕ್ಕು ಕೆಲವರದಾದರೆ, ದುಡಿದರೂ ಅದರ ಫಲದಿಂದ ವಂಚಿತರಾಗುವ ಪ್ರಾರಾಬ್ಧ ಕರ್ಮ ಕೆಲವರದಾಯಿತು. ಈ ಬಗ್ಗೆ ಮನುಸ್ಮೃತಿಯ ಆದೇಶವನ್ನು ನೋಡಿ

'ಧನಾರ್ಜನೆ ಮಾಡುವ ಸಾಮರ್ಥ್ಯವಿದ್ದರೂ ಶೂದ್ರನಾದವನು ಧನವನ್ನು ಗಳಿಸಬಾರದು. ಅವನು ಯಾವುದೇ ಆಸ್ತಿಪಾಸ್ತಿ ಹೊಂದಿರಬಾರದು. ಏಕೆಂದರೆ ಮುಂದೆ ಅದು ಬ್ರಾಹ್ಮಣರ ಪೀಡೆಗೆ ಪ್ರೇರಣೆಯಾಗುವುದು' (ಮನು-೧೦-೧೨೯)

'ಬ್ರಾಹ್ಮಣನಾದವನು ಯಾವುದೇ ಸಂಕೋಚವಿಲ್ಲದೆ ಶೂದ್ರನ ಆಸ್ತಿಯನ್ನು ಕಸಿದುಕೊಳ್ಳಬಹುದು. ಬ್ರಾಹ್ಮಣರ ಸೇವೆಗಾಗಿಯೇ ಹುಟ್ಟಿದ ಶೂದ್ರನಿಗೆ ತನಗಾಗಿ ಯಾವುದೇ ಆಸ್ತಿ ಮಾಡುವ ಹಕ್ಕಿಲ್ಲ. ಅವನ ಗಳಿಕೆ ಎಲ್ಲವೂ ಅವನ ಒಡೆಯನಾದ ಬ್ರಾಹ್ಮಣನದು'(ಮನು-೮-೪೧೭)

ಇಂತಹ ಧಾರ್ಮಿಕ ಹಿನ್ನೆಲೆಯಿಂದ ಬಂದ ಶೂದ್ರರು ಮತ್ತು ದಲಿತರು ಚರಿತ್ರೆಯ ಉದ್ದಕ್ಕೂ ಬ್ರಾಹ್ಮಣರ ದಾಸರಾಗಿ ದುಡಿದರು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸ್ವಲ್ಪಮಟ್ಟಿಗೆ ಬ್ರಿಟಿಷ್ ಆಡಳಿತದಲ್ಲಿ ಮತ್ತು ಸ್ವಾತಂತ್ರ್ಯಾನಂತರ ಅವರಿಗೆ ಶಿಕ್ಷಣ ಹೊಂದುವ ಮತ್ತು ತಮಗೆ ಇಷ್ಟವಾಗುವ ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕುಗಳು ಪ್ರಾಪ್ತಿಯಾದವು.

ಭಾರತದಲ್ಲಿ ಪ್ರತಿ ೧೦೦ ವಾಣಿಜ್ಯ ಕುಟುಂಬಗಳಲ್ಲಿ ೭೫ ಅಥವಾ ಇನ್ನೂ ಹೆಚ್ಚು ಕುಟುಂಬಗಳು ವೈಶ್ಯರವಾಗಿರು ತ್ತವೆ. ಪ್ರತಿ ೧೦೦ ಕುಲಪತಿಗಳಲ್ಲಿ ಅಥವಾ ಪತ್ರಿಕಾ ಸಂಪಾದಕರಲ್ಲಿ ೭೫ ಜನ ಬ್ರಾಹ್ಮಣರಾಗಿರುತ್ತಾರೆ. ಇತ್ತೀಚೆಗೆ ಕೆಲವು ಬದಲಾವಣೆಗಳಾಗಿರಬಹುದು. ರಾಜಕೀಯ ಪಕ್ಷಗಳೂ ವರ್ಣಜಾತಿ ಆಧಾರಗಳ ಮೇಲೆ ರೂಪಗೊಳ್ಳಲಾರಂಭಿಸಿವೆ. ಭೂಕಂಪನದಂತಹ ಅಪತ್ಕಾಲದಲ್ಲೂ ವರ್ಣ-ಜಾತಿ ಪಕ್ಷಪಾತಗಳು ಪರಿಹಾರ ಮತ್ತು ಪುನರ್ವಸತಿ ವ್ಯವಸ್ಥೆಗಳಲ್ಲಿ ಮಧ್ಯ ಪ್ರವೇಶ ಮಾಡಿವೆ. ಎಲ್ಲಿಯವರೆಗೆ ಹಿಂದುಳಿದವರಿಗೆ ಶಿಕ್ಷಣ ಸಂಸ್ಥೆಗಳಲ್ಲಿ, ಉದ್ಯೋಗಾವಕಾಶಗಳಲ್ಲಿ, ಬಂಡವಾಳ ಹೂಡಿಕೆಯಲ್ಲಿ ಅವರ ಸಂಖ್ಯಾಪ್ರಮಾಣಕ್ಕೆ ತಕ್ಕ ಸಹಾಭಾಗಿತ್ವವನ್ನು ಕೊಡಲಾಗುವುದಿಲ್ಲವೋ ಅಲ್ಲಿಯವರೆಗೆ ಜನಾಂಗೀಯ ಆಧಾರಿತ ಸಂಘರ್ಷಗಳೂ ಅವರನ್ನು ಕಾಡಿಸದೆ ಬಿಡುವುದಿಲ್ಲ.

ಭಾರತದ ಸಂವಿಧಾನ ಧರ್ಮ, ಜಾತಿ, ಲಿಂಗ ಅಥವಾ ಜನ್ಮಸ್ಥಳಗಳ ಆಧಾರದ ಮೇಲೆ ತಾರತಮ್ಯ ಮಾಡುವುದನ್ನು ನಿಷೇಧಿಸಿದೆ. ಎಲ್ಲ ನಾಗರಿಕರಿಗೆ ಯಾವುದೇ ವೃತ್ತಿ ವ್ಯಾಪಾರ ಅಥವಾ ವ್ಯವಹಾರ ಮಾಡುವ ಹಕ್ಕು ಸಮಾನವಾಗಿದೆ.

ದಲಿತರು ಮತ್ತು ಹಿಂದುಳಿದ ವರ್ಗಗಳು ಆರ್ಥಿಕವಾಗಿ ದುರ್ಬಲರಾಗಿರುವುದರ ಜೊತೆಗೆ ಅವರು ಗ್ರಾಮೀಣ ಪರಿಸರದಿಂದ ಬಂದವರಾಗಿರುತ್ತಾರೆ. ಅವರ ಮಕ್ಕಳಿಗೆ ಪ್ರೇರಣೆ ಮತ್ತು ತರಬೇತಿ ಮುಂದುವರಿದವರ ಮಕ್ಕಳಿಗೆ ದೊರೆಯುವಂತೆ ದೊರೆಯುವುದಿಲ್ಲ. ಆದ್ದರಿಂದ ಅವರು ಮುಂದುವರಿದವರ ಮಕ್ಕಳೊಡನೆ ಸ್ಪರ್ಧಿಸಲು ಸಿದ್ಧರಾಗಿರುವುದಿಲ್ಲ. ಗ್ರಾಮೀಣ ಮಕ್ಕಳಲ್ಲಿ ಕೆಲವರು ಮಾತ್ರ ಪ್ರಾಥಮಿಕ ಶಾಲೆಗಳನ್ನು ಸೇರುತ್ತಾರೆ. ಅವರಲ್ಲಿ ಕೆಲವರು ಮಾತ್ರ ಪ್ರೌಢಶಾಲೆಗಳಲ್ಲಿ ಪ್ರವೇಶ ಪಡೆಯುತ್ತಾರೆ. ಅವರಲ್ಲಿ ಎಲ್ಲೋ ಕೆಲವೇ ಕೆಲವರು ಕಾಲೇಜುಗಳನ್ನು ಸೇರುತ್ತಾರೆ. ಅಥವಾ ಇಲ್ಲವೆ ಇಲ್ಲ. ಅವರು ಮುಂದೆ ಖಾಸಗಿ ಕ್ಷೇತ್ರಗಳಲ್ಲಿ ನೇಮಕ ಪಡೆಯುವ ಸಾಧ್ಯತೆಗಳಿರುವುದಿಲ್ಲ. ಏಕೆಂದರೆ ಅವರ ವಿರುದ್ಧ ಅಲ್ಲಿ ತಾರತಮ್ಯ ತೋರಿಸಲಾಗುತ್ತಿದೆ. ಮುಂದುವರಿದ ಜನರ ಹಿಡಿತದಲ್ಲಿರುವ ಖಾಸಗಿ ವಲಯ ತಮ್ಮ ಜನರನ್ನೇ ಅಲ್ಲಿ ನೇಮಕ ಮಾಡಿಕೊಳ್ಳಲು ತವಕದಿಂದಿರುತ್ತದೆ. ಗ್ರಾಮೀಣ ಮಕ್ಕಳು ಶಾಲೆಯಿಂದ ಹೊರಗೆ ಬರುತ್ತಿದ್ದ ಹಾಗೆ ಅವರಿಗೆ ವಿವಾಹ ಮಾಡಿ ತಮ್ಮ ಕುಲಕಸುಬುಗಳಲ್ಲಿ ಮುಂದುವರಿಯುವಂತೆ ಪ್ರೇರೇಪಿಸಲಾಗುತ್ತಿದೆ.

ನಮ್ಮ ಸಂವಿಧಾನ ಜಾತಿಮೂಲವಾದ ಅನಾನುಕೂಲಗಳನ್ನು ಇಲ್ಲದಂತೆ ಮಾಡಿ ಎಲ್ಲ ಜಾತಿಯವರನ್ನೂ ಸಮಾನವಾಗಿ ಕಾಣಲು ನಿರ್ದೇಶಿಸುತ್ತದೆ. ಆದರೆ ಜಾತಿಗಳನ್ನೇ ಇಲ್ಲದಂತೆ ಮಾಡುವುದು ಅದರ ಗುರಿಯಲ್ಲ. ಸಂವಿಧಾನ ಜಾತಿ ಆಧಾರಿತ ತಾರತಮ್ಯವನ್ನು ನಿರ್ಮೂಲ ಮಾಡಲು ಯತ್ನಿಸಿದ್ದರೂ ಶಿಕ್ಷಣ ಮತ್ತು ಉದ್ಯೋಗ ವಲಯಗಳಲ್ಲಿ ಮೇಲ್ಜಾತಿಯವರು ಅಧಿಕ ಪ್ರಾತಿನಿಧ್ಯವನ್ನು ಪಡೆದು ದಲಿತರು ಮತ್ತು ಹಿಂದುಳಿದವರು ತಮ್ಮ ಸಂಖ್ಯಾಪ್ರಮಾಣಕ್ಕೆ ಅನುಗುಣ ವಾದ ರೀತಿಯಲ್ಲಿ ಪ್ರಾತಿನಿಧ್ಯ ಪಡೆಯಲಾಗಿಲ್ಲ.

ಗ್ರಂಥ ಋಣ

೧. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂ.೭, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮.

೨. ಕುಮಾರ ಕಕ್ಕಯ್ಯ ಪೋಳ, ಚಾತುರ್ವರ್ಣ ಧರ್ಮದರ್ಶನ, ಲೋಹಿಯಾ ಪ್ರಕಾಶನ, ಬಳ್ಳಾರಿ, ೧೯೯೭.

೩. ವೀರಭದ್ರಪ್ಪ ಬಿ.ವಿ., ವೇದಾಂತ ರೆಜಿಮೆಂಟ್, ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೫.

೪. ವೀರಭದ್ರಪ್ಪ ಬಿ.ವಿ., ವೇದಗಳಲ್ಲಿ ಜನಸಾಮಾನ್ಯರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೫. ವೀರಭದ್ರಪ್ಪ ಬಿ.ವಿ., ಧರ್ಮ ಮತ್ತು ವೈಚಾರಿಕತೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೧.

6. Chandra Bhan Prasad, Bill Gates Merits Attention, Ambedkar's Website.

7. Chandra Bhan Prasad, Blacks in U.S. Media Blackouts in India, Ambedkar Web site.

8. Chandra Bhan Prasad, Broken People, Caste Violence Against India's Untouchable, Ambedkar Website.

9. Chandra Bhan Prasad, Democracyat Harvard Varnacracy at Delhi University, Ambedkar's Website.

10. Chandra Bhan Prasad, Dronacharya and Arjun. Hero's or Villains?, Ambedkar's Website.

11. Chandra Bhan Prasad, Delhi University, Hindustan's other Nathdwara, Ambedkar's Website

12. Chandra Bhan Prasad, Hollywood and our Varnawood, Ambedkar's Website.

13. Chandra Bhan Prasad, Righting wrongs: the American way, Ambedkar's Website.

14. Gail Omvedt, Infosys and Microsoft, Ambedkar's Website

15. Gail Omvedt, Reservation in the Corporate Sector, Ambedkar's Website.

ಮಹಿಳೆ

ಬದಲಾಗುತ್ತಿರುವ ಭಾರತೀಯ ಸಮಾಜದಲ್ಲಿ ಮಹಿಳೆ

ಹೆಣ್ಣನ್ನು ಭೂಮಿ-ಆಕಾಶಗಳಿಗೆ ಹೋಲಿಸಿ ಶಬ್ದಾಡಂಬರ ಮೆರೆವ ಭಾರತೀಯ ಸಮಾಜ ಲಿಂಗತಾರತಮ್ಯ ಮತ್ತು ಶಾಸ್ತ್ರಪುರಾಣಗಳ ಹೆಸರಿನಲ್ಲಿ ಇನ್ನಿಲ್ಲದಂತೆ ಅವಳನ್ನು ಹಿಂಸಿಸುತ್ತಿರುವುದು ಕಡು ವಾಸ್ತವ. ಅದೂ ಸಾಲದೆಂಬಂತೆ ಆಧುನಿಕತೆಯ ನೆಪದಲ್ಲಿ ಅಸ್ತಿತ್ವಕ್ಕೆ ಬಂದ ಮಾಧ್ಯಮಗಳಲ್ಲೂ ಕೂಡ ಮಹಿಳೆಯರನ್ನು ಶೋಷಿಸುತ್ತಿರುವ ಪರಿಯನ್ನು ಲೇಖಕರು ಇಲ್ಲಿ ವಿವರಿಸಿದ್ದಾರೆ.

○ ರಂಜಾನ್ ದರ್ಗಾ

ಇಂದಿನ ಜಾಹೀರಾತು ಯುಗದಲ್ಲಿ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕು ತೀವ್ರಗತಿಯಲ್ಲಿ ಬದಲಾಗುತ್ತಿದೆ. ಸಮೂಹ ಮಾಧ್ಯಮಗಳಿಗೆ ಜಾಹೀರಾತುಗಳೇ ಜೀವಾಳವಾಗಿವೆ. ಜನಸಮುದಾಯಕ್ಕೆ ದೂರದರ್ಶನದಂಥ ಸಮೂಹ ಮಾಧ್ಯಮಗಳೇ 'ಸುಖಜೀವನ'ದ ಆಧಾರಗಳಾಗಿವೆ.

ಹೊಸ ಆರ್ಥಿಕ ನೀತಿಯ ಸಹಾಯದೊಂದಿಗೆ ಭಾರತದಲ್ಲಿ ತಮ್ಮ ಹಿರಿಮೆಯನ್ನು ಮೆರೆಯಬಯಸುವ ಮುಕ್ತ ಮಾರುಕಟ್ಟೆಯ ದೊರೆಗಳು, ಬಹುರಾಷ್ಟ್ರೀಯ ಕಂಪನಿಗಳು ಮತ್ತು ಸುಲಿಗೆ ವ್ಯವಸ್ಥೆಯ ತಂತ್ರಜ್ಞಾನಿಗಳು ಈ ಜನಕ್ಕೆ ಹೊಸ ಅಭಿರುಚಿ ಸೃಷ್ಟಿಸುವಲ್ಲಿ ತಲ್ಲೀನರಾಗಿದ್ದಾರೆ. ಅದಕ್ಕಾಗಿ ಅವರು ಮುಖ್ಯವಾಗಿ ಬಳಸುವುದು ಲೈಂಗಿಕ ಪ್ರಚೋದನೆಗೆ ಪೂರಕವಾಗಿರುವ ಭಂಗಿಗಳಲ್ಲಿ ಪೋಜು ಕೊಡುವ ಹೆಣ್ಣುಗಳನ್ನು. ಅವರ ವಿವಿಧ ಪ್ರಕಾರದ ಜಾಹೀರಾತುಗಳಲ್ಲಿ ಹೆಣ್ಣಿನ ಅರೆನಗ್ನದ ದೇಹಗಳು ಅನಿವಾರ್ಯವಾಗಿವೆ. ಹೀಗೆ ಹೆಣ್ಣು ತನಗರಿಯದಂತೆಯೇ ಬೃಹತ್ ಮಾರಾಟ ವ್ಯವಸ್ಥೆಗೆ ಪೂರಕವಾದ ಮಾರಾಟದ ವಸ್ತುವಾಗುತ್ತಿದ್ದಾಳೆ. ಆಧುನಿಕ ವ್ಯಾಪಾರಿ ಜಗತ್ತು ಹೆಣ್ಣಿನ ಅಂಗಾಂಗಗಳನ್ನೆಲ್ಲ ಶೋಧಿಸುತ್ತ ಹೆಣ್ಣಿಗೇ ಗೊತ್ತಿರದ ಮಾದಕತೆಯ ತಾಣಗಳನ್ನು ಗುರುತಿಸಿ ಅದಕ್ಕೆ ಪ್ರಾಮುಖ್ಯ ನೀಡಿ ಜಗತ್ತಿಗೆ ತೋರಿಸಿಕೊಡುವಲ್ಲಿ ಯಶಸ್ವಿಯಾಗುತ್ತಿದೆ.

ಶೃಂಗಾರ ಸಾಧನಗಳು, ಫ್ಯಾಷನ್ ಬಟ್ಟೆಗಳು, ಗೃಹೋಪಯೋಗಿ ಉಪಕರಣಗಳು...ಅಷ್ಟೇ ಅಲ್ಲದೆ ಬ್ಲೇಡು ಮತ್ತು ಸಿಗರೇಟುಗಳ ಜಾಹೀರಾತುಗಳಲ್ಲಿ ಕೂಡ ಮೋಹಕ ಮೈಮಾಟ ಪ್ರದರ್ಶಿಸುವ ಹೆಣ್ಣೇ ಬೇಕು. ಬುದ್ಧಿಮತ್ತೆಯ 'ನಾಟಕ'ದಿಂದ ಕೂಡಿದ ಸೌಂದರ್ಯ ಸ್ಪರ್ಧೆಗಳು ಹೆಣ್ಣನ್ನು ಭೋಗವಸ್ತುವಾಗಿ ಮಾರ್ಪಡಿಸುವಲ್ಲಿ ಯಶಸ್ವಿಯಾಗುತ್ತ ಸಾಮ್ರಾಜ್ಯಶಾಹಿಗಳಿಗೆ ತೃಪ್ತಿ ನೀಡುತ್ತಿವೆ.

ತೃತೀಯ ಜಗತ್ತಿನ ರಾಷ್ಟ್ರಗಳ ಬಾಲೆಯರು ವಿಶ್ವಸುಂದರಿಯರಾಗಿ ಮತ್ತು ಲೋಕಸುಂದರಿಯಾಗಿ ಆಯ್ಕೆಯಾಗುತ್ತಿರುವುದರಲ್ಲಿ ಹೊಸ ವಸಾಹತುಶಾಹಿ ನೀತಿ ಎಷ್ಟರ ಮಟ್ಟಿಗೆ ಪೂರಕವಾಗಿದೆ ಎಂಬುದನ್ನು ಅರಿತುಕೊಳ್ಳುವುದು ಅವಶ್ಯವಾಗಿದೆ.

ಅಸಹನೀಯವಾದ ಬದುಕಿನ ವಿರುದ್ಧ ಹೋರಾಡಲು ಮಾನವನಿಗೆ ಹೊಸ ಬದುಕಿನ ಕನಸು ಕಾಣುವ ಪ್ರಜ್ಞೆ ಬೇಕು. ನಂತರ ಹೋರಾಟಕ್ಕಾಗಿ ಸಂಘಶಕ್ತಿಯ ಸೃಷ್ಟಿ ಯಾಗಬೇಕು. ಆದರೆ ಇದೆಲ್ಲ ಭಾರೀ ಶ್ರಮದಾಯಕ ಕೆಲಸ ಎಂದು ಭಾವಿಸುವವರು ಭ್ರಮೆಗಳನ್ನು ಸೃಷ್ಟಿಸಿ ಕೊಂಡು 'ಸುಖ' ಪಡೆಯಬಯಸುತ್ತಾರೆ. ಎಲೆಕ್ಟ್ರಾನಿಕ್ ಸಮೂಹ ಮಾಧ್ಯಮಗಳು ಭ್ರಮೆಗಳನ್ನು ಸೃಷ್ಟಿಸುವ ಕಾರ್ಖಾನೆಗಳಂತೆ ಕೆಲಸ ಮಾಡುತ್ತಿವೆ. ಈ ಭ್ರಮೆಗಳ ಮರುಭೂಮಿಯಲ್ಲಿ ಸೃಜನಶೀಲತೆ ಓಯಸಿಸ್ ಹಾಗೆ ಗೋಚರಿಸುವುದು ಟಿ.ವಿ. ಮತ್ತು ಸಿನಿಮಾ ಮಂದಿ ಭ್ರಮೆಗಳನ್ನು ಸೃಷ್ಟಿಸಿ ದಣಿದಿದ್ದಾರೆ, ಹೀಗಾಗಿ ಎಲ್ಲೆಂದರಲ್ಲಿ ಏಕತಾನತೆ ಕಾಣಿಸುತ್ತಿದೆ. ಹಾಡು, ಕುಣಿತ, ಸಂಭಾಷಣೆ ಮತ್ತು ನಟನೆಯಲ್ಲಿ ಯಾವುದೇ ಹೊಸತನ ಕಾಣದಿದ್ದರೂ ಜನ ಸಹಿಸಿಕೊಳ್ಳುತ್ತಾರೆ. ಈ ಏಕತಾನತೆಗೆ ಸೆಕ್ಸ್ ಮತ್ತು ಕ್ರೈಂನ ಲೇಪವಿರುವುದು ಮುಖ್ಯ ಕಾರಣವಾಗಿದೆ.

ಹಣ ಮತ್ತು ಅಧಿಕಾರಕ್ಕೆ ಪೂರಕವಾಗಿ ಸೆಕ್ಸ್ ಮತ್ತು ಕ್ರೈಂ ಬರುತ್ತವೆ. ಇವೆಲ್ಲವುಗಳಿಗೆ ಕೇಂದ್ರ ಬಿಂದುವಾಗಿ ಹೆಣ್ಣು ಕಾಣಿಸಿಕೊಳ್ಳುತ್ತಾಳೆ. ರತಿಕ್ರೀಡೆಗೆ ಪೂರ್ವಭಾವಿಯಾದ ಎಲ್ಲ ಅಂಗಚೇಷ್ಟೆಗಳನ್ನು ಒಳಗೊಂಡ ಸಿನಿಮಾ ಹಾಡುಗಳನ್ನು ಮತ್ತು ಜಾಹೀರಾತುಗಳನ್ನು ಇಂದು ಟಿ.ವಿ. ಮೂಲಕ ಮನೆ ಮನೆಗೆ ತಲುಪಿಸಲಾಗುತ್ತಿದೆ. ನಟಿಯರು ಹೆಚ್ಚು ಹೆಚ್ಚು 'ರಂಗೀಲಾ'ಗಳಾದಷ್ಟು ನಿರ್ಮಾಪಕರು, ನಿರ್ದೇಶಕರು ಹೆಚ್ಚು ಹೆಚ್ಚು ಖ್ಯಾತರಾಗತೊಡಗುತ್ತಾರೆ.

ಹೆಣ್ಣಿನ ಸಹಕಾರದೊಂದಿಗೆ ಜಾಹೀರಾತುಗಳ ಮೂಲಕ ತೋರಿಸುವ ಸೀರೆಗಳು, ಮ್ಯಾಕ್ಸಿಗಳು, ಬ್ರಾಗಳು, ಪ್ಯಾಂಟಿಗಳು, ಪ್ಯಾಂಟುಗಳು, ಷರ್ಟುಗಳು, ಲಿಪ್‌ಸ್ಟಿಕ್, ಶಾಂಪೂ, ಸೋಪು, ಬ್ಲೇಡುಗಳು, ಆಫ್ಟರ್‌ಷೇವ್ ಲೋಶನ್, ವಿವಿಧ ಗೃಹೋಪಯೋಗಿ ಮತ್ತು ಐಷರಾಮಿ ವಸ್ತುಗಳು ಇಲ್ಲದೆ ಮಾನವ ಜನ್ಮಕ್ಕೆ ಮುಕ್ತಿ ಇಲ್ಲ ಎಂಬ ಭಾವನೆ ಮೂಡಿದೆ. ಪ್ರತಿಯೊಬ್ಬ ಮನುಷ್ಯನನ್ನು ಗ್ರಾಹಕನನ್ನಾಗಿ ಪರಿವರ್ತಿಸುವ ತಮ್ಮ ಪ್ರತಿ ವಸ್ತುವಿಗೂ ಬೃಹತ್ ಮಾರುಕಟ್ಟೆ ಸೃಷ್ಟಿಸಿಕೊಳ್ಳುವ ಉದ್ದಿಮೆಪತಿಗಳು ವ್ಯಾಪಾರೀಭಾವದೊಂದಿಗೆ ಹೆಣ್ಣಿನ ಮಹತ್ವ ಅರಿತದ್ದು ಅಚ್ಚರಿ ಹುಟ್ಟಿಸುವಂತಿದೆ.

ಹೆಣ್ಣನ್ನು ಅರೆಬೆತ್ತಲೆಗೊಳಿಸಿದ ಬಟ್ಟೆಯೊಂದರ ಜಾಹೀರಾತಿನ ಕೆಳಗೆ ಹೀಗೆ ಬರೆದಿದೆ: 'ಬಹುರಾಷ್ಟ್ರೀಯರನ್ನು ಸ್ವಾಗತಿಸಲು ಈ ಬಟ್ಟೆ ಅವಶ್ಯ'.

ವಿದೇಶಿ ಕಂಪನಿಗಳ ಮತ್ತು ಭಾರೀ ಉದ್ದಿಮೆಗಳ ವಿಶಿಷ್ಟ ಹುದ್ದೆಯಲ್ಲಿ ಕೆಲಸ ಮಾಡುವ ತರುಣಿಯರು ತಮ್ಮ ಕಂಪನಿ ಜೊತೆ ಭಾರೀ ವ್ಯವಹಾರ ಕುದುರಿಸಲು ಬರುವ ಗಣ್ಯ ವ್ಯಕ್ತಿಗಳ ಜೊತೆ ಇದ್ದು ಅವರನ್ನು 'ಖುಷಿ' ಪಡಿಸುವುದು ನೌಕರಿಯ ಒಂದು ಭಾಗವಾಗುತ್ತಿದೆ. ಬಂಡವಾಳಶಾಹಿ ವ್ಯವಸ್ಥೆ ಹೆಣ್ಣಿಗೆ ಸ್ವಾತಂತ್ರ್ಯ ಕೊಡುವ ರೀತಿ ಮತ್ತು ಕಸಿದುಕೊಳ್ಳುವ ಕ್ರಮಗಳನ್ನು ಎಚ್ಚರಿಕೆಯಿಂದ ಗಮನಿಸುವುದು ಅವಶ್ಯವಾಗಿದೆ.

ಭಾರತೀಯ ಸಮಾಜ ಹಸಿವಿನಿಂದ ಮತ್ತು ಕಾಮದ ಹಸಿವಿನಿಂದ ಬಳಲುತ್ತಿದೆ. ಹುಡುಗ ಹುಡುಗಿಯರು ಇಂದಿಗೂ ಮೈಮರೆತು ತಿರುಗುವ ಪರಿಸ್ಥಿತಿ ಇಲ್ಲ. ಎಲ್ಲ 'ಸಾತ್ವಿಕರು' ಅವರತ್ತ ಕಣ್ಣು ಪಿಳುಕಿಸುವವರೇ ಆಗಿದ್ದಾರೆ. ಆದರೆ ಟಿ.ವಿ. ಮತ್ತು ಸಿನಿಮಾಗಳಲ್ಲಿನ ಪಾತ್ರಗಳು ಚೆನ್ನಾಗಿ ಉಂಡುಟ್ಟು ಹಾಯಾಗಿ ಹಾಡುತ್ತ ಮರ ಸುತ್ತಲು ಸಾಧ್ಯ. ಈ ದೃಶ್ಯಗಳು ನೋಡುವವನ ಮನದಾಳದಲ್ಲಿ ಹುದುಗಿಕೊಂಡಿರುವ ಭಾವನೆಗಳು ಅವರು ಕುಳಿತಲ್ಲೇ ಕ್ರಿಯಾಶೀಲ ವಾಗಿ ಕೆಥಾರ್ಸಿಸ್ ಅನುಭವ ನೀಡುತ್ತವೆ. ವಾಸ್ತವದ ಜಾಗವನ್ನು ಭ್ರಮೆಗಳು ತುಂಬಿಕೊಳ್ಳುತ್ತವೆ.

ಹೆಣ್ಣಿನ ಸ್ವಾತಂತ್ರ್ಯದ ಕನಸು ಮತ್ತು ಗಂಡಿಗೆ ಭೋಗದ ಕನಸುಗಳು ಸಮೂಹ ಮಾಧ್ಯಮದಲ್ಲಿ ಒಂದುಗೂಡಿ ದಂಥ ಭ್ರಮೆಗಳನ್ನು ಸೃಷ್ಟಿಸಲಾಗುತ್ತಿದೆ. ಈ ಭ್ರಮೆ ಜನಸಮುದಾಯದ ಎಲ್ಲ ರೀತಿಯ ಹೋರಾಟದ ಕನಸುಗಳನ್ನು ಕಳೆದುಕೊಳ್ಳುವಂತೆ ಮಾಡಿದೆ. ಇಂದಿನ ಭ್ರಮಾತ್ಮಕ ವಾತಾವರಣದಲ್ಲಿ ಮನುಷ್ಯರು ಮನೆಯಲ್ಲೇ ಪರ ಕೀಯರಾಗುತ್ತಿದ್ದಾರೆ, ಟಿ.ವಿ. ಧಾರಾವಾಹಿಗಳ ಪಾತ್ರಗಳ ಜೊತೆ ಸಂಬಂಧ ಬೆಳೆಸಿಕೊಳ್ಳುತ್ತಿದ್ದಾರೆ.

ಈ ವಾಸ್ತವದ ಅರಿವಿನೊಂದಿಗೆ ಹೆಣ್ಣು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳೆದು ಬಂದ ರೀತಿಯನ್ನು ಗಮನಿಸುವುದು ಅವಶ್ಯವಾಗಿದೆ.

ನನಗೆ ನನ್ನ ಬಾಲ್ಯದ ದಿನಗಳು ನೆನಪಾಗುತ್ತಿವೆ. ನಮ್ಮ ಸಮಾಜ ಹೆಣ್ಣಿಗೆ ಕೊಟ್ಟಿದ್ದ ಅತಿ ದೊಡ್ಡ ಸ್ವಾತಂತ್ರ್ಯವೆಂದರೆ ತವರೂರಿನಲ್ಲಿ ನಾಗರಪಂಚಮಿಯ ದಿನ ಗೆಳತಿಯರ ಜೊತೆ ಜೋಕಾಲಿ ಆಡುವುದು.

ಹೆಣ್ಣಿನ ಸ್ವಾತಂತ್ರ್ಯ ಮತ್ತು ಸೂಳೆಗಾರಿಕೆಯನ್ನು ಒಂದೇ ತೆರನಾಗಿ ಕಾಣುವ ಸಂದರ್ಭ ಕೇವಲ ನಾಲ್ಕು ದಶಕಗಳ ಹಿಂದೆ ಇತ್ತು. ಬಹುತೇಕ ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದರೆ. ನಟಿಯೊಬ್ಬಳು ಕಾಣಿಸಿಕೊಂಡರೇ ಭೋಗದ ವಸ್ತುವೊಂದರ ಸೃಷ್ಟಿಯಾಯಿತೆಂದೇ ಧನಮದವುಳ್ಳ ವಿಷಯ ಲಂಪಟರ ಅನಿಸಿಕೆಯಾಗಿತ್ತು. ಹೀಗೆ ಮಹಿಳೆಯರ ವಿಕಸನಕ್ಕೆ ಸಾವಿರ ಅಡೆತಡೆಗಳಿದ್ದವು. ವಿವಿಧ ರೀತಿಯಲ್ಲಿ ಇಂದಿಗೂ ಅಡೆತಡೆಗಳು ಮುಂದುವರಿದಿವೆ.

ಅವಳಲ್ಲಿ ನಿಜವಾದ ಸ್ವಾತಂತ್ರ್ಯ ಮೊಳಕೆಯೊಡೆದದ್ದು ಅಕ್ಷರ ಕಲಿಯಲು ಪ್ರಾರಂಭಿಸಿದಾಗ. ಒರಿಸ್ಸಾದ ಗ್ರಾಮವೊಂದರಲ್ಲಿ ಬಾಲಕಿಯೊಬ್ಬಳು ಅಕ್ಷರ ಕಲಿಯಲು ಪ್ರಾರಂಭಿಸಿದ ಸಂದರ್ಭದಲ್ಲಿ ಪ್ಲೇಗು ಬಂದಿತು. ಆ ಬಾಲಕಿ ಅಕ್ಷರ ಕಲಿಯಲು ಪ್ರಾರಂಭಿಸಿದ್ದೇ, ಘಟನೆಯನ್ನು ಒರಿಸ್ಸಾ ಸಾಹಿತ್ಯದ ಸಣ್ಣಕತೆಗಳ ಪಿತಾಮಹ ಫಕೀರ್ ಮೋಹನ್ ಸೇನಾಪತಿ ಅವರು ತಮ್ಮ ವಿಶ್ವವಿಖ್ಯಾತ 'ರೇವತಿ' ಕಥೆಯಲ್ಲಿ ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ.

ಹೆಣ್ಣು ಸೀರೆಯೊಳಗೆ ಲಂಗ ಮತ್ತು ರವಿಕೆಯೊಳಗೆ ಬ್ರಾ ತೊಡುವುದಕ್ಕಾಗಿ ಕೂಡ ಬಾರಿ ಮೌನ ಹೋರಾಟ ಮಾಡಿದ್ದಾಳೆ. (ಅಮೇರಿಕದಲ್ಲಿ ವಾಸಿಸುವ ಅಂಬಟ್ಟಿ ಕುಟುಂಬ 'ಚಡ್ಡಿ' ಧರಿಸುವುದನ್ನು ವಿರೋಧಿಸಿದ್ದು ಇನ್ನೂ ಹಸಿರಾಗಿದೆ.)

ಅರವತ್ತರ ದಶಕದಲ್ಲಿ ಭಾರತದಲ್ಲಿ ಒಂದು ಕ್ರಾಂತಿಯೇ ನಡೆದುಹೋಯಿತು. ಅದೇ ಸ್ಕರ್ಟ್ ಕ್ರಾಂತಿ. ಹುಡುಗಿಯರು ಸ್ಕರ್ಟ್‌ಅನ್ನು ಎಷ್ಟು ಪ್ರೀತಿಸಿದರೆಂದರೆ ಅದಕ್ಕಾಗಿ ಸಾಯಲೂ ಸಿದ್ಧರಿದ್ದರು. ಎಸ್ಸೆಸ್ಸೆಲ್ಸಿಯಲ್ಲಿ ತನ್ನ ಜೊತೆ ಓದುತ್ತಿದ್ದ ಹುಡುಗಿಯೊಬ್ಬಳು ಎರಡು ದಿನ ಊಟ ಮಾಡದೆ ಹಟ ಹಿಡಿದು ಸ್ಕರ್ಟ್ ಕೊಂಡ ಘಟನೆ ಇಂದಿಗೂ ನೆನಪಿದೆ.

ಕಾಲೇಜು ಹುಡುಗಿಯರು ಸ್ಕರ್ಟ್ ಧರಿಸಿ ಕ್ಲಾಸಿಗೆ ಬರುವುದು ದೊಡ್ಡ ಸಾಹಸವೇ ಆಗಿತ್ತು. ೧೯೭೦ರಲ್ಲಿ ವಿಜಾಪುರ ಕಾಲೇಜೊಂದರಲ್ಲಿ ಇಂಗ್ಲೀಷ್ ವಿಭಾಗದ ವಿದ್ಯಾರ್ಥಿನಿಯಾಗಿದ್ದ ಗಂಗಾ ಸ್ಕರ್ಟ್ ಧರಿಸಿ ಕ್ಲಾಸಿಗೆ ಬಂದಾಗ ಇಂಗ್ಲೀಷ್ ಪ್ರಾಧ್ಯಾಪಕರು ವಿರೋಧಿಸಿದರು. ವಿರೋಧವನ್ನು ಲೆಕ್ಕಿಸದೆ ಸ್ಕರ್ಟ್ ಧರಿಸಿ ಕಾಲೇಜಿಗೆ ಬರುವುದರ ಮೂಲಕ ಆಕೆ ಇತಿಹಾಸ ಸೃಷ್ಟಿಸಿದಳು.

ಈ ರೀತಿ ಕೊಳೆತು ನಾರುವ ಸಮಾಜದಲ್ಲಿ ನಾರಿಯರು ಒಂದೊಂದು ಅಂಗುಲ ಮೇಲೆ ಬರುವುದಕ್ಕಾಗಿ ಭಾರೀ ಮೌನ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸಂಘಟನಾತ್ಮಕವಾಗಿ ಬೆಳೆಯುವುದರ ಮೂಲಕ ಪ್ರಶ್ನಿಸುವ ಶಕ್ತಿ ಪಡೆದಿದ್ದಾರೆ.

ಹೊಡೆಯುವುದು, ಹೀಯಾಳಿಸುವುದು ಮತ್ತು ಶಿಕ್ಷೆ ವಿಧಿಸುವುದು ಗಂಡಸರ ಹಕ್ಕು ಎಂಬ ಭಾವನೆ ದಟ್ಟವಾಗಿದ್ದ ಸಂದರ್ಭದಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ

ಹಳ್ಳಿಗಾಡಿನಲ್ಲಿ ಗಂಡಸು ಬಯಸಿದಾಗ ಬಯಲು ಕಡೆ (ಮಲವಿಸರ್ಜನೆ)ಗೆ ಹೋಗಬಹುದು. ಆದರೆ ಮಹಿಳೆಯರು ಹಾಗೆ ಬಯಲಲ್ಲಿ ಬಯಲುಕಡೆಗೆ ಹೋಗಲಿಕ್ಕಾಗದು. ಅವರು ನಸುಕಿನಲ್ಲಿ ಮಲವಿಸರ್ಜನೆಗೆ ಹೋಗಬೇಕು. ಆಕಸ್ಮಿಕವಾಗಿ ಏಳುವುದು ತಡವಾದರೆ ರಾತ್ರಿಯಾಗುವವರೆಗೆ ಮಲ ಹಿಡಿದುಕೊಂಡಿರಬೇಕು! ಎದುರು ಮನೆಯ ಯುವತಿಗೆ ಮಧ್ಯಾಹ್ನದ ಮಲ ವಿಸರ್ಜನೆಗೆ ಬಯಕೆ ತೀವ್ರವಾದಾಗ ತಾಳಿಕೊಳ್ಳಲಾಗದೆ ಹಿತ್ತಲಕ್ಕೆ ಹೋದಳು. ಅದೇ ವೇಳೆಗೆ ಮನೆಗೆ ಬಂದ ಗಂಡ ಉಗ್ರಾವತಾರ ತಾಳಿದ. ದನ ಬಡಿದ ಹಾಗೆ ಬಡಿದ. ಮಲವಿಸರ್ಜನೆ ಮಾಡಿದ ತಪ್ಪಿಗಾಗಿ ಅಡಿಕೆ ಗಾತ್ರದಷ್ಟು ಮಲ ತಿನ್ನಲು ಅಜ್ಞಾಪಿಸಿದ. ಆ ಅಸಹಾಯಕ ಯುವತಿ ಮಲ ತಿಂದೇಬಿಟ್ಟಳು!

ದಾಖಲಿಸುವುದು ಅವಶ್ಯವಾಗಿದೆ. ಆಗ ನಾನಿನ್ನೂ ೪ ವರ್ಷದ ಬಾಲಕ. ನನ್ನ ತಾಯಿಯ ತವರೂರಾದ ವಿಜಾಪುರ ಜಿಲ್ಲೆಯ ಅಲಿಯಾಬಾದ್‌ನಲ್ಲಿ ಅಜ್ಜಿಯ ಜೊತೆ ಇದ್ದೆ. ಎದುರಿಗೆ ಮನೆಯಲ್ಲಿ ಹೊಸದಾಗಿ ಮದುವೆಯಾದ ದಂಪತಿ ಇದ್ದರು...

ಹಳ್ಳಿಗಾಡಿನಲ್ಲಿ ಗಂಡಸು ಬಯಸಿದಾಗ ಬಯಲು ಕಡೆ (ಮಲವಿಸರ್ಜನೆ)ಗೆ ಹೋಗಬಹುದು. ಆದರೆ ಮಹಿಳೆಯರು ಹಾಗೆ ಬಯಲಲ್ಲಿ ಬಯಲುಕಡೆಗೆ ಹೋಗಲಿಕ್ಕಾಗದು. ಅವರು ನಸುಕಿನಲ್ಲಿ ಮಲವಿಸರ್ಜನೆಗೆ ಹೋಗಬೇಕು. ಆಕಸ್ಮಿಕವಾಗಿ ಏಳುವುದು ತಡವಾದರೆ ರಾತ್ರಿಯಾಗುವವರೆಗೆ ಮಲ ಹಿಡಿದುಕೊಂಡಿರಬೇಕು!

ಎದುರು ಮನೆಯ ಯುವತಿಗೆ ಮಧ್ಯಾಹ್ನದ ಮಲ ವಿಸರ್ಜನೆಗೆ ಬಯಕೆ ತೀವ್ರವಾದಾಗ ತಾಳಿಕೊಳ್ಳಲಾಗದೆ ಹಿತ್ತಲಕ್ಕೆ ಹೋದಳು. ಅದೇ ವೇಳೆಗೆ ಮನೆಗೆ ಬಂದ ಗಂಡ ಉಗ್ರಾವತಾರ ತಾಳಿದ. ದನ ಬಡಿದ ಹಾಗೆ ಬಡಿದ. ಮಲವಿಸರ್ಜನೆ ಮಾಡಿದ ತಪ್ಪಿಗಾಗಿ ಅಡಿಕೆ ಗಾತ್ರದಷ್ಟು ಮಲ ತಿನ್ನಲು ಅಜ್ಞಾಪಿಸಿದ. ಆ ಅಸಹಾಯಕ ಯುವತಿ ಮಲ ತಿಂದೇಬಿಟ್ಟಳು!

ಈ ಸುದ್ದಿ ಹಳ್ಳಿಯ ತುಂಬ ಹಬ್ಬಿತು. ಯಾವುದೇ ಮದುವೆ ಮತ್ತು ಧಾರ್ಮಿಕ ಮುಂತಾದ ಕಾರ್ಯಕ್ರಮಗಳ ಸಹಭೋಜನಕ್ಕೆ ಆತನನ್ನು ಕರೆಯಬಾರದೆಂದು ಸಮಾಜದ ಹಿರಿಯರು ಆದೇಶ ಹೊರಡಿಸಿದರು. ಹಂದಿಯ ಜೊತೆ ಬಾಳುವೆ ಮಾಡುವವನ ಕೂಡ ಅದು ಹೇಗೆ ಊಟ ಮಾಡುವುದು ಎಂಬುದು ಅವರ ವಾದವಾಗಿತ್ತು. ಕೊನೆಗೆ ತನ್ನ ಸಮಾಜ ಸೇರುವುದಕ್ಕಾಗಿ ಆತ ಹೆಂಡತಿಯನ್ನು ಬಿಟ್ಟ ಇಂಥ ಅರಣ್ಯ ನ್ಯಾಯಕ್ಕೆ ಮಾನಿನಿಯರು ಒಂದಿಲ್ಲೊಂದು ರೀತಿಯಲ್ಲಿ ಬಲಿಯಾಗುತ್ತಲೇ ಬಂದಿದ್ದಾರೆ.

ನಮ್ಮ ಕಾವ್ಯದ ಅಷ್ಟಾದಶ ವರ್ಣನೆಗಳಲ್ಲಿ ಸೂಳೆಗೇರಿಯ ವರ್ಣನೆಯೂ ಒಂದಾಗಿದೆ. ಎಲ್ಲ ವೀರರೂ ದೇವರುಗಳೂ ಸೂಳೆಗೇರಿಗೆ ಹೋಗಲೇಬೇಕು. ಯುದ್ಧದಲ್ಲಿ ಸತ್ತ ವೀರರಿಗೆ ಸ್ವರ್ಗ ಗ್ಯಾರಂಟಿ. ಅಲ್ಲಿ ಮೊದಲಿಗೇ ಸಿಗುವವರೇ ಸುಂದರಾಂಗನೆಯರು. ಯುದ್ಧ ಮುಂತಾದ ಸಂದರ್ಭಗಳಲ್ಲಿ ಅವರಿಗೆ ತಾತ್ಕಾಲಿಕವಾಗಿ ಸೂಳೆಯರನ್ನು ಪೂರೈಸಲಾಗುತ್ತಿತ್ತು. ಕನ್ನಡ ಸಂಸ್ಕೃತಿಯ ಭಾಗವಾಗಿರುವ ವಿಜಯನಗರದಲ್ಲಿ-ಪಂಪಾ ಕ್ಷೇತ್ರದಲ್ಲಿ-ಸೂಳೆಬಜಾರ್ ಕೂಡ ಇದ್ದ ದಾಖಲೆಗಳಿವೆ. ಆ ಪ್ರದೇಶ ಇನ್ನೂ ಹಂಪೆಯಲ್ಲಿದೆ.

ರಾಜರು ಮತ್ತು ಶ್ರೀಮಂತರು ಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳಿಸುವಾಗ ಬಳುವಳಿಯಾಗಿ ಗಣಿಕೆಯರನ್ನು ಕೂಡ ಕಳಿಸುತ್ತಿದ್ದರು. ಅಳಿಯದೇವರು ಗಣಿಕೆಯರ ಜೊತೆ ಸುಖಿಸುವ ಹಕ್ಕನ್ನು ಹೊಂದಿದ್ದನು.

ನಮ್ಮ ದೇಶದಲ್ಲಿನ ಪಾಂಚಾಲಿ ಸಂಸ್ಕೃತಿ ಗಂಡನ ಮನೆಯ ಆಸ್ತಿಯನ್ನು ಇಬ್ಬಾಗವಾಗದಂತೆ ನೋಡಿಕೊಳ್ಳುವ ಸಂಸ್ಕೃತಿಯಾಗಿತ್ತು.

ಅನೇಕ ಬುಡಕಟ್ಟುಗಳಲ್ಲಿ ಅಣ್ಣ ತಮ್ಮಂದಿರಿಗೆಲ್ಲ ಒಬ್ಬಳೇ ಹೆಂಡತಿ ಇರುವ ಸಂಪ್ರದಾಯ ಇನ್ನೂ ಪ್ರಪಂಚದಲ್ಲಿದೆ. ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರಲ್ಲಿ ಯುವಕರು ಮದುವೆಯಾಗುವವರೆಗೆ ಅಣ್ಣನ ಹೆಂಡತಿಯ ಜೊತೆ ಲೈಂಗಿಕ ಸಂಬಂಧ ಬೆಳೆಸುವ ಸಂಪ್ರದಾಯ ಇತ್ತೀಚಿನ ದಶಕಗಳವರೆಗೆ ಇತ್ತು. ಇಂಥ ಅವಸ್ಥೆಗೆ ಹೇಸಿಕೊಂಡ ಹೆಣ್ಣೊಬ್ಬಳ ಭಾವನೆಗಳು ಹಾಲಕ್ಕಿಗಳ ಜನಪದ ಕಾವ್ಯದಲ್ಲಿ ಸುಂದರವಾಗಿ ಮೂಡಿಬಂದಿದೆ.

ಮೈದುನ ಶಬ್ದ ಸೃಷ್ಟಿಯಾದುದೇ ಮೈಥುನದಿಂದ. ನಂತರ ಸಮಾಜ ಬೆಳವಣಿಗೆ ಹೊಂದಿದಾಗ ಅತ್ತಿಗೆ ವಹ್ನಿ (ಬೆಂಕಿ)ಯಾದಳು. ಹೀಗೆ ಹೆಣ್ಣನ್ನು ಒಂದಿಲ್ಲೊಂದು ರೀತಿಯಲ್ಲಿ ಭೋಗದ ವಸ್ತುವಾಗಿ ಪರಿಗಣಿಸುತ್ತ ಬರಲಾಗಿದೆ. ಮಾತೃಪ್ರಧಾನ ಕುಟುಂಬ ಸಂಸ್ಕೃತಿಯ ದಾಳಿಯಿಂದಾಗಿ ಹಾಳಾಗಿಹೋಯಿತು.

ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯ ಲಭಿಸುವವರೆಗೆ ವಿಮೋಚನೆ ಸಾಧ್ಯವಿಲ್ಲ ಎಂಬ ಮಾತು ಸತ್ಯವಾಗಿದ್ದರೂ ಆಕೆ ಆರ್ಥಿಕ ವ್ಯವಸ್ಥೆಯ ಪಂಜರದಲ್ಲೇ ಹಾರಾಡುವಂಥ ವಾತಾವರಣ ಸೃಷ್ಟಿಯಾಗುತ್ತಿದೆ. ಎಲ್ಲ ರೀತಿಯ ಸ್ವಾತಂತ್ರ್ಯಗಳು ತನ್ನ ವ್ಯಕ್ತಿತ್ವವನ್ನು ಉಳಿಸಿ, ಬೆಳೆಸುವುದಕ್ಕಾಗಿ ಎಂಬುದನ್ನು ಮಹಿಳೆ ಅರಿತುಕೊಳ್ಳುವುದು ಅವಶ್ಯವಾಗಿದೆ.

ಪ್ರವಾಸೋದ್ಯಮ ಮತ್ತು ಮೈ ಮಾರಾಟಗಳು ಬಹಳ ಸಂದರ್ಭಗಳಲ್ಲಿ ಜೊತೆ ಜೊತೆಯಾಗಿ ಸಾಗುತ್ತವೆ. ಯಾವುದೇ ದೇಶ ಇದಕ್ಕೆ ಹೊರತಾಗಿಲ್ಲ. ೧೪ ವರ್ಷಗಳ ಹಿಂದೆ ಒಂದು ರಾತ್ರಿ ಲೆನಿನ್‌ಗ್ರಾಡ್‌ನಲ್ಲಿ ಕಾಲೇಜು ಹುಡುಗಿಯರಂತೆ ಕಾಣುತ್ತಿದ್ದ ಮೂವರು ಕರೆವೆಣ್ಣುಗಳನ್ನು ಕಂಡು ಖಿನ್ನಮನಸ್ಕನಾಗಿದ್ದ. ತ್ಯಾಗ, ಬಲಿದಾನಗಳಿಂದ ಸೃಷ್ಟಿಯಾಗಿದ್ದ ಲೆನಿನ್ನರ ನಾಡಿನಲ್ಲಿ ಮೈ ಮಾರಾಟದ ಸಂಗತಿ ನನ್ನನ್ನು ದಂಗುಬಡಿಸಿತು.

ಅಂದಿನ ಸೋವಿಯತ್ ದೇಶದ ಇನ್‌ಟೂರಿಸ್ಟ್ ಪ್ರವಾಸೋದ್ಯಮ ಇಲಾಖೆ ಪ್ರವಾಸಿಗರಿಗೆ ಅನುಕೂಲ ಕಲ್ಪಿಸಿತ್ತು. ಐರೋಪ್ಯ ದೇಶಗಳ ಪ್ರವಾಸಿಗರು ಮಾಸ್ಕೋದಲ್ಲಿ ಇಳಿದು ಸುತ್ತಾಡಿ ಮುಂದೆ ಪ್ರಯಾಣ ಬೆಳೆಸುವುದಕ್ಕೆ ಅನುಕೂಲತೆಗಳಿದ್ದವು. ಎಲ್ಲ ರೀತಿಯಿಂದಲೂ ಸ್ವಯಂ ಪರಿಪೂರ್ಣವಾದ ಸೋವಿಯತ್ ಸಮಾಜದ ಯುವ ಜನಾಂಗಕ್ಕೆ ವಿದೇಶಿಗಳ ಜೀನ್ಸ್ ಪ್ಯಾಂಟುಗಳು, ಗಾಗಲ್‌ಗಳು, ಕ್ಯಾಮರಾಗಳು, ಇನ್ನಿತರ ಮೋಜಿನ ವಸ್ತುಗಳು ಆಕರ್ಷಕವಾಗಿ ಕಂಡವು. ಆ ವಸ್ತುಗಳನ್ನು ರೂಬಲ್ ಕೊಟ್ಟುಕೊಳ್ಳಲಿಕ್ಕಾಗುತ್ತಿರಲಿಲ್ಲ. ಮಾಸ್ಕೋ ಮುಂತಾದ ನಗರಗಳಲ್ಲಿ ಡಾಲರ್ ಶಾಪ್‌ಗಳಲ್ಲಿ ಡಾಲರ್ ಕೊಟ್ಟರೆ ಸಿಗುತ್ತಿದ್ದವು. ಕೆಲ ಯುವತಿಯರು ವಸ್ತುಗಳ ಮೋಹಕ್ಕೆ ಒಳಗಾಗಿ ಅವುಗಳನ್ನು ಪಡೆಯಲೆಂದು ಡಾಲರ್ ಸಂಪಾದಿಸತೊಡಗಿದರು. ಡಾಲರ್ ಸಂಪಾದಿಸಲು ಅವರ ಮುಂದೆ ಒಂದೇ ಮಾರ್ಗವಿತ್ತು- ೫೦ ಡಾಲರ್ ಕೊಡಲು ಸಿದ್ಧರಿರುವ ವಿದೇಶಿಯರಿಗೆ ಲೈಂಗಿಕ ಸುಖ ನೀಡುವುದು.

ಸೋವಿಯತ್ ದೇಶದ ಪತನದ ನಂತರ ಅನೇಕ ರಷ್ಯನ್ ಬಾಲೆಯರು ಊಟ ಬಟ್ಟೆಗಳಿಗಾಗಿ ಬೆಲೆವೆಣ್ಣುಗಳಾದುದು ಇತಿಹಾಸದ ವಿಪರ್ಯಾಸವಾಗಿದೆ.

ಇಂದು ಆಯ್ಕೆಯ ಸ್ವಾತಂತ್ರ್ಯವೇ ಹೆಣ್ಣಿಗೆ ಬಹುಮುಖ್ಯ ಸ್ವಾತಂತ್ರ್ಯವಾಗಿದೆ. ಲೈಂಗಿಕ ಸ್ವಾತಂತ್ರ್ಯ ಸ್ವೇಚ್ಛಾಚಾರ ಅಲ್ಲ ಎಂಬುದು ಗೊಡ್ಡು ಸಂಪ್ರದಾಯದ ಜನ ಅರಿತುಕೊಳ್ಳಬೇಕಿದೆ. ಕಾಯಾ ವಾಚಾ ಮನಸಾ ಸಂಬಂಧ ಹೊಂದಿದಾತನ ಜೊತೆ ಬದುಕುವ ಸ್ವಾತಂತ್ರ್ಯವನ್ನು ಒಂದು ಹೆಣ್ಣು ಬಯಸಿದಾಗ ಐಹಿಕ ಆಸೆಗಳು ಗೌಣವಾಗುತ್ತವೆ ಎಂಬುದು ಬಹು ಮುಖ್ಯವಾದ ವಿಚಾರವಾಗಿದೆ. ಆರ್ಥಿಕ ಸ್ವಾತಂತ್ರ್ಯ ಎಂಬುದು ರಕ್ಷಣಾತ್ಮಕವಾದ ಅಂಶವೆ ಹೊರತು ಹೆಣ್ಣಿನ ಕೊನೆಯ ಆಸೆಯಲ್ಲ. ಆಕೆಗೆ ತನ್ನ ಇಚ್ಛಾನುಸಾರ ಜವಾಬ್ದಾರಿಯುತವಾಗಿ ಬದುಕುವುದರ ಮೂಲಕ ಸ್ವಾತಂತ್ರ್ಯ ಅನುಭವಿಸಬೇಕಾಗಿದೆ.

ಆರ್ಥಿಕ ಸ್ವಾತಂತ್ರ್ಯ ಐಹಿಕ ಬದುಕಿಗೆ ಬಹುಮುಖ್ಯವಾದ ಅಂಶವಾಗಿರುವುದರಿಂದ ಹೆಣ್ಣಿಗೆ ಆಸ್ತಿಯಲ್ಲಿ ಪಾಲು ನೀಡುವುದರ ಬಗ್ಗೆ ಮತ್ತು ಆಕೆ ಆರ್ಥಿಕ ಸಂಕಟಕ್ಕಿಡಾಗದಂತೆ ನೋಡಿಕೊಳ್ಳಲು ಪೈಗಂಬರ್ ಪ್ರಯತ್ನಿಸಿದರು. ಬಸವಣ್ಣನವರು ಮಹಿಳೆಗೆ ಸಾಮಾಜಿಕ ಮನ್ನಣೆ ದೊರೆಯುವಂತೆ ಮಾಡುವಲ್ಲಿ ಶ್ರಮಿಸಿದರು. ಬಾಬಾ ಸಾಹೇಬ್ ಅಂಬೇಡ್ಕರರು ಕಾನೂನು ಸಚಿವರಾಗಿದ್ದಾಗ ಹಿಂದೂ ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕು ಸಿಗುವಂಥ ಕಾನೂನು ತರಲು ಪ್ರಯತ್ನಿಸಿದ್ದರು. ಸವರ್ಣೀಯ ನಾಯಕರು ಈ ಮಹಾತ್ಕಾರ್ಯಕ್ಕೆ ವಿರೋಧ ವ್ಯಕ್ತ ಪಡಿಸಿದಾಗ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ನೆಹರೂ ಸಂಪುಟದಿಂದ ಹೊರಬಿದ್ದರು.

ಇತ್ತೀಚಿನ ವರ್ಷಗಳಲ್ಲಿ ಮಹಿಳೆ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಾಕಷ್ಟು ಮನ್ನಣೆ ಗಳಿಸಿದ್ದಾರೆ. ಸಂಘ ಸಂಸ್ಥೆಗಳ ಮತ್ತು ಪಂಚಾಯತ್ ಚುನಾವಣೆಗಳಲ್ಲಿ ಲಭಿಸಿದ ಮೀಸಲಾತಿ ಆಕೆಯ ಮೇಲೆ ಜವಾಬ್ದಾರಿಗಳನ್ನು ಹೇರಿದೆ. ಈ ಜವಾಬ್ದಾರಿ ನಿಭಾಯಿಸುವಲ್ಲಿ ತಾನು ಸಮರ್ಥ ಎಂಬುದನ್ನು ಆಕೆ ಈಗಾಗಲೇ ತೋರಿಸಿಕೊಟ್ಟಿದ್ದಾಳೆ.

ರಾಜಕೀಯ ಸ್ಥಾನಮಾನಗಳ ಮೂಲಕ ಸಾಮಾಜಿಕ ಮತ್ತು ಆರ್ಥಿಕ ವಲಯದಲ್ಲಿ ಬದಲಾವಣೆ ತರಲು ಲಭ್ಯವಾಗಿರುವ ಅಲ್ಪ ಸ್ವಲ್ಪ ಅವಕಾಶಗಳನ್ನು ಆಕೆ ಬಳಸಿ ಕೊಳ್ಳುವುದು ಅವಶ್ಯವಾಗಿದೆ. ಸಾಂಸ್ಕೃತಿಕ ವಲಯದಲ್ಲಿ ಹೆಚ್ಚು ಹೆಚ್ಚು ಸಂಘಟಿತವಾಗಿ ಬೆಳೆಯುತ್ತ 'ಮಹಿಳಾ ಸ್ವಾತಂತ್ರ್ಯ ಎಂಬುದು ಇಡೀ ಸಮಾಜವನ್ನು ಬಿಡುಗಡೆ ಗೊಳಿಸುವ ಬಯಕೆಯ ಸಂಕೇತ' ಎಂಬುದನ್ನು ಸಾಧಿಸಿ ತೋರಿಸಬೇಕಿದೆ.

ಅಭಿವೃದ್ಧಿಶೀಲ ದೇಶಗಳಾದ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕಾಗಳಲ್ಲಿ ಸ್ತ್ರೀಯರು ದೇಶದ ಚುಕ್ಕಾಣಿ ಹಿಡಿಯಲು ಸಾಧ್ಯ ಎಂಬುದನ್ನು ತೋರಿಸಿಕೊಡಲಾಗಿದೆ. ಈ ರೀತಿಯಾಗಿ ಮಹಿಳೆ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಮುಂದೆ ಬರುತ್ತಿದ್ದರೂ ವಿಚಿತ್ರವಾದ ಸಾಂಸ್ಕೃತಿಕ ಸನ್ನಿವೇಶದಲ್ಲಿ ಸಿಲುಕಿದ್ದಾಳೆ; ನ: ಸ್ತ್ರೀ ಸ್ವಾತಂತ್ರ್ಯ ಮರ್ಹತಿ: ಎಂದು ಹೇಳುವ ಸಂಸ್ಕೃತಿಯಿಂದ ಹೆಣ್ಣು ಲೈಂಗಿಕ ಉದ್ದಿಮೆಯ ಸಂಪನ್ಮೂಲ ಎಂಬ ಭಾವನೆ ಬರುವ ಸಂಸ್ಕೃತಿಯ ಬೀಜಗಳು ಕಾಣಿಸಿಕೊಳ್ಳುತ್ತಿರುವಂಥ ವ್ಯವಸ್ಥೆಯನ್ನು ತಲುಪುತ್ತಿದ್ದೇವೆ. ನಾಗರೀಕತೆಯ ನಡುವೆ ರೂಪುಗೊಂಡ ಮದುವೆ ಎಂಬ ಸಂಸ್ಥೆ ನಿಧಾನ ಗತಿಯಲ್ಲಿ ಶಿಥಿಲಗೊಳ್ಳುತ್ತಿದೆ. ಮಧ್ಯದಲ್ಲಿ ಉದ್ಭವವಾದ ಈ ಸಂಸ್ಥೆ ಮಧ್ಯದಲ್ಲೇ ಮಾಯವಾಗುವ ಸಾಧ್ಯತೆಗಳಿವೆ. ಇಂದಿನ ಅವಸ್ಥೆಯ ಗಂಭೀರತೆಯನ್ನು ಪರಿಗಣಿಸಿದರೆ ಈ ಸಂಸ್ಥೆಗೆ ಕನಿಷ್ಠ 200 ವರ್ಷಗಳ ಭವಿಷ್ಯವಾದರೂ ಇದೆಯೊ ಇಲ್ಲವೊ ಎಂಬ ಸಂಶಯ ಬರುತ್ತದೆ.

ಗಂಡಿಗಿಂತಲೂ ಹೆಚ್ಚಿನ ಜವಾಬ್ದಾರಿಗಳನ್ನು ಹೊರುವ ಹಾಗೂ ಗಂಡಿಗಿಂತಲೂ ಹೆಚ್ಚು ಕೆಲಸ ಮಾಡುವ (ಆಕೆ ನಿಭಾಯಿಸುವ ಅನೇಕ ಕರ್ತವ್ಯಗಳು ಗಣನೆಗೆ ಬಾರದ ತನಗಿರುವ ಜವಾಬ್ದಾರಿಗಳೊಂದಿಗೆ ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಹೆಚ್ಚು ಹೆಚ್ಚು ಸಂಘ ಶಕ್ತಿಯನ್ನು ಪಡೆದುಕೊಳ್ಳಬೇಕಾಗಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಜ್ಞಾವಲಯವನ್ನು ವಿಸ್ತರಿಸಿಕೊಳ್ಳಬೇಕಿದೆ.

ಈ ಎಲ್ಲ ಕ್ಷೇತ್ರಗಳಲ್ಲಿ ಹೆಣ್ಣು ಮುಂದೆ ಬರಲು ಸಾಕಷ್ಟು ಅವಕಾಶಗಳಿವೆ. ಆದರೆ ಆಕೆ ದೈನಂದಿನ ಬದುಕಿನಲ್ಲಿ ಏಳ್ಗೆ ಸಾಧಿಸುವುದೇ ಮುಖ್ಯ ಗುರಿಯಾಗಿ ಮಾಡಿಕೊಂಡರೆ ವ್ಯವಸ್ಥೆಗೆ ಬಲಿಯಾಗುತ್ತ ಮುಂದುವರಿಯುವುದು ತಪ್ಪದು.

ರಾಜಕೀಯ ಸ್ಥಾನಮಾನಗಳ ಮೂಲಕ ಸಾಮಾಜಿಕ ಮತ್ತು ಆರ್ಥಿಕ ವಲಯದಲ್ಲಿ ಬದಲಾವಣೆ ತರಲು ಲಭ್ಯವಾಗಿರುವ ಅಲ್ಪ ಸ್ವಲ್ಪ ಅವಕಾಶಗಳನ್ನು ಆಕೆ ಬಳಸಿಕೊಳ್ಳುವುದು ಅವಶ್ಯವಾಗಿದೆ. ಸಾಂಸ್ಕೃತಿಕ ವಲಯದಲ್ಲಿ ಹೆಚ್ಚು ಹೆಚ್ಚು ಸಂಘಟಿತವಾಗಿ ಬೆಳೆಯುತ್ತ 'ಮಹಿಳಾ ಸ್ವಾತಂತ್ರ್ಯ ಎಂಬುದು ಇಡೀ ಸಮಾಜವನ್ನು ಬಿಡುಗಡೆಗೊಳಿಸುವ ಬಯಕೆಯ ಸಂಕೇತ' ಎಂಬುದನ್ನು ಸಾಧಿಸಿ ತೋರಿಸಬೇಕಿದೆ.

ಮಹಿಳೆಯ ಸ್ವಾತಂತ್ರ್ಯ ಪುರುಷನ ಸ್ವಾತಂತ್ರ್ಯಕ್ಕೆ ಪೂರಕವಾಗಿದೆ. ಆತ ದುರಭಿಮಾನದಿಂದ ಕೂಡಿದ ಮೇಲರಿಮೆಯಿಂದಾಗಿ ನರಳುತ್ತಿರುವ ಕಾರಣ ಸ್ವಾತಂತ್ರ್ಯ ಪಡೆದ ನಂತರವೇ ಪುರುಷ ತನ್ನ ಅಹಂಕಾರದ ಬಂಧನದಿಂದ ಮುಕ್ತನಾಗುವನು. ಮಹಿಳೆಯನ್ನು ಗೌರವಿಸುವುದರ ಮೂಲಕ ಮಾತ್ರ ಆತ ಗೌರವಕ್ಕೆ ಅರ್ಹನಾಗುವನು.

ಈ ಹಿನ್ನೆಲೆಯಲ್ಲಿ ಮದುವೆ ಎಂಬುದು ಕೇವಲ ಸಂಪ್ರದಾಯದಿಂದ ಬಂದ ಬಳುವಳಿಯಾಗದೆ ಎರಡು ಮನಸ್ಸುಗಳ ಸಮ್ಮಿಲನವಾಗಬೇಕು.

ನಾನು ಲೆನಿನ್‌ಗ್ರಡ್‌ನಲ್ಲಿ ಸುತ್ತಾಡುವಾಗ ನನ್ನ ಗೈಡ್‌ಗೆ ಹೇಳಿದೆ: 'ಈ ಕಾರು ಚಾಲಕ ಎಷ್ಟೊಂದು ವಿನಯವಂತರಾಗಿದ್ದಾರೆ. ಇವರ ಗಾಂಭೀರ್ಯ, ಸರಳತೆ, ಸೇವಾ ಮನೋಭಾವ ನನ್ನ ಮನಸ್ಸನ್ನು ಸೂರೆಗೊಂಡಿದೆ. ಸುಂದರ ಕಾಯದ ಎತ್ತರದ ನಿಲುವಿನ ಆ ವಯೋವೃದ್ಧ ಶಾಂತಿ ಸಮಾಧಾನಗಳಿಂದ ಕೂಡಿದ ಮಹಾಪುರುಷನ ಹಾಗೆ ಕಾಣುತ್ತಾರೆ'. ಗೈಡ್ ಹೇಳಿದಳು: ಅವರು ಎರಡನೇ ಮಹಾಯುದ್ಧದಲ್ಲಿ ಈ ದೇಶದ ಅತ್ಯುನ್ನತ ವೀರಪ್ರಶಸ್ತಿ ಪಡೆದ ಸೈನಿಕ ಅಧಿಕಾರಿ ಆಗಿದ್ದರು. ನಿವೃತ್ತಿಯ ನಂತರ ಕಾರು ಚಾಲಕ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ನಾನು ಆ ಡ್ರೈವರ್‌ಗೆ ಹೇಳಿದೆ: ನೀವು ಸುಖಿಪುರುಷನ ಹಾಗೆ ಕಾಣುತ್ತಿರಿ. ಗೈಡ್ ನನ್ನ ಇಂಗ್ಲೀಷ್ ಹೇಳಿಕೆಯನ್ನು ರಷ್ಯನ್ ಭಾಷೆಗೆ ಅನುವಾದಿಸಿದಳು. ಆತ ನಗುತ ಹೇಳಿದ: ನಾನು ನಿಜವಾಗಿಯೂ ಸುಖಿ ಪುರುಷ. ಇದಕ್ಕೆರಡು ಕಾರಣಗಳಿವೆ. ಮೊದಲನೆಯದಾಗಿ ಕಳೆದ 40 ವರ್ಷಗಳಿಂದ ನಾನು ಮತ್ತು ನನ್ನ ಹೆಂಡತಿ ಅನ್ಯೋನ್ಯವಾಗಿ ಬದುಕುತ್ತಿದ್ದೇವೆ. ನನಗೆ ಮಗಳು ಮತ್ತು ಮೊಮ್ಮಗಳು ಇದ್ದಾರೆ. ನಾವೆಲ್ಲ ಅನ್ಯೋನ್ಯವಾಗಿ ಇದ್ದೇವೆ. ಈ ಎರಡು ಕಾರಣಗಳಿಂದ ನಾನು ಸುಖಿ ಪುರುಷ!

ವಿಶ್ವದಲ್ಲೇ ಅತಿ ದೊಡ್ಡ ವಿವಾಹ ವಿಚ್ಛೇದನವಾಗುವ ದೇಶದಲ್ಲಿ ಮದುವೆಯಾಗದೆ ಮಕ್ಕಳನ್ನು ಪಡೆಯುವುದಕ್ಕೆ ಸಾಮಾಜಿಕ ಮನ್ನಣೆ ದೊರೆತ ದೇಶದಲ್ಲಿ, ಇಂಥ ಒಂದು ಸುಂದರ ಕುಟುಂಬ ಸ್ತ್ರೀ ಮತ್ತು ಪುರುಷ ಸ್ವಾತಂತ್ರ್ಯಕ್ಕೆ ದಾರಿ ತೋರಿಸಬಹುದಲ್ಲವೆ? ●

೧೦ ನಿಮಿಷಕ್ಕೊಂದು ವರದಕ್ಷಿಣೆ ಸಾವು, ೫೪ ನಿಮಿಷಕ್ಕೊಂದು ಅತ್ಯಾಚಾರ

ಪ್ರತಿ ೧೦ ನಿಮಿಷಕ್ಕೆ ವರದಕ್ಷಿಣೆ ಕಿರುಕುಳಕ್ಕೆ ಒಬ್ಬ ಮಹಿಳೆ ಬಲಿ, ಪ್ರತಿ ೫೪ ನಿಮಿಷಕ್ಕೆ ಒಬ್ಬ ಮಹಿಳೆ ಮೇಲೆ ಅತ್ಯಾಚಾರ, ೪೨ ನಿಮಿಷಕ್ಕೊಬ್ಬರ ಮೇಲೆ ಲೈಂಗಿಕ ಕಿರುಕುಳ, ೨೬ ನಿಮಿಷಕ್ಕೊಬ್ಬರ ಮೇಲೆ ಲೈಂಗಿಕ ದುರ್ವರ್ತನೆ ಇದು ಭಾರತದ ಮಹಿಳೆಯರ ಸ್ಥಿತಿ-ಗತಿ.

ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮಿಂಚುತ್ತಿದ್ದಾಳೆ. ಅವಳು ಹಕ್ಕಿಯಂತೆ ಹಾರುತ್ತಿದ್ದಾಳೆ. ಮೀನಿನಂತೆ ಈಜುತ್ತಿದ್ದಾಳೆ. ಅವಳ ಸಾಧನೆಗಳಿಗೆ ಇದೀಗ ಯಾವುದೇ ಲಕ್ಷ್ಮಣ ರೇಖೆಗಳಿಲ್ಲ. ಇತ್ಯಾದಿ ವರ್ಣರಂಜಿತ ಹೇಳಿಕೆಗಳಿಗೆ ತಲೆಬುಡವಿಲ್ಲ ಎಂಬುದನ್ನು ಈ ಅಂಕಿ ಅಂಶಗಳು ಸಾರಿ ಹೇಳುತ್ತವೆ. 'ಪುರುಷ ಮಾಯೆ' ಸ್ತ್ರೀಯರ ಹಾದಿಗೆ ನಿರಂತರವಾಗಿ ತೊಡರುಗಾಲು ಒಡ್ಡುತ್ತಲೆ ಬಂದಿದೆ. ಪುರುಷಾನುಕೂಲಿಯಾದ ಸಾಮಾಜಿಕ ವ್ಯವಸ್ಥೆಯ ಅಡಿಪಾಯಕ್ಕೆ ಕೈ ಇಟ್ಟರೆ ಅಪಾಯಗಳ ಸರಮಾಲೆಯನ್ನು ಎದುರಿಸಬೇಕಾಗುತ್ತದೆ. ರಾಷ್ಟ್ರೀಯ ಮಹಿಳಾ ಆಯೋಗ ಹೊರಗೆಡವಿರುವ ಮೇಲ್ಕಂಡ ಅಂಕಿ ಅಂಶಗಳು ಬದಲಾವಣೆಯ ಒಡಲಲ್ಲಿ ಅಡಗಿರುವ ಆತಂಕಗಳನ್ನು ಬಯಲು ಮಾಡುತ್ತದೆ. ಇಲ್ಲಿನ ಪುರುಷಶಾಹಿ ಕೌಟುಂಬಿಕ ವ್ಯವಸ್ಥೆಯಲ್ಲಿ ಯಥಾಸ್ಥಿತಿವಾದಿಯಾಗಿ, ಗೃಹವಾದಿನಿಯಾಗಿ ಮಹಿಳೆ ಇದ್ದುಬಿಟ್ಟರೆ ಯಾವ ಅಪಾಯವೂ ಇರುವುದಿಲ್ಲ ಎಂದು ಹೇಳಲಾಗುವುದಿಲ್ಲ. ಚಂಚಲ ಪುರುಷ ಒಡ್ಡುವ ಸವಾಲುಗಳು ಯಾವ ಘಳಿಗೆಯಲ್ಲಿ ಹೇಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಹೀಗಾಗಿ ಆತಂಕದ ಕುದಿ ಬಿಂದುವಿನಲ್ಲಿ ಬೇಯುವ ಪಾಡು ಮಹಿಳೆಯರಿಗೆ ತಪ್ಪಿದ್ದಲ್ಲ.

ವಿವಿಧ ರೀತಿಯ ದೌರ್ಜನ್ಯಕ್ಕೊಳಗಾದ ಮಹಿಳೆಯರು ತಮ್ಮ ಕರ್ಮವನ್ನು ಹಳಿದುಕೊಂಡು ಸುಮ್ಮನಾಗಿಬಿಡುತ್ತಾರೆ. ಅನ್ಯಾಯದ ವಿರುದ್ಧ ಹೋರಾಟಕ್ಕೆ ಇಳಿದರೆ ಮತ್ತಷ್ಟು ಅನ್ಯಾಯಕ್ಕೆ ಬಲಿಯಾಗಬೇಕಾದ ಜಟಿಲ ಪರಿಸ್ಥಿತಿ ಇಲ್ಲಿಯದು. ಅತ್ಯಾಚಾರಕ್ಕೆ ಒಳಗಾದ ಮಹಿಳೆ ನ್ಯಾಯಾಕ್ಕಾಗಿ ಪೊಲೀಸರ ಮೊರೆ ಹೋದರೆ, ಆರಕ್ಷಕರು ಅವಳ ಮೇಲೆ ಗುಮಾನಿ ಪಡುವುದು ಸಾಮಾನ್ಯ. ಮಾನ ಹಾನಿಗೆ ಪ್ರಚೋದಿಸಿದ್ದು ಮಹಿಳೆ ಎಂಬ ತೀರ್ಮಾನ ಅವರ ತಲೆಯಲ್ಲಿ ಬೇರು ಬಿಟ್ಟಿರುತ್ತದೆ. ಹೀಗಾಗಿ ಪೊಲೀಸರು ಸಂತ್ರಸ್ಥ ಮಹಿಳೆಯರ ಆತ್ಮಸ್ಥೈರ್ಯವನ್ನೇ ತಿಂದು ಹಾಕುತ್ತಾರೆ ಎಂಬುದು ದೆಹಲಿಯ ಸಾಮಾಜಿಕ ಸಂಶೋಧನಾ ಕೇಂದ್ರದ ನಿರ್ದೇಶಕಿ ಡಾ. ರಂಜನಾ ಕುಮಾರಿ ಅವರ ಪ್ರತಿಪಾದನೆ.

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಪೊಲೀಸರು ನೀಡುವ 'ಆತಿಥ್ಯ' ಕುರಿತು ಇತ್ತೀಚೆಗೆ ನಡೆದ ಸಮೀಕ್ಷೆಯ ವಿವರಗಳು: ನ್ಯಾಯಾ ಕೇಳಲು ಹೋದ ತಮಗೆ ತನಿಖಾಧಿಕಾರಿಗಳು ಮಾತಿನ ಪೆಟ್ಟುಕೊಟ್ಟರು ಎಂದು ಶೇ. ೩೧ ಮಹಿಳೆಯರು ಹೇಳಿದರು. ತಮಗಿಷ್ಟವಿಲ್ಲದಿದ್ದರೂ ಅಪರಾಧಿಗಳ ಜತೆ ರಾಜಿಗೆ ದೂಡಿದರು ಎಂದು ಶೇ. ೧೫ ಅಬಲೆಯರು ತಮ್ಮ ಅಸಹಾಯಕತೆ ವ್ಯಕ್ತ ಪಡಿಸಿದರು.

ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮಿಂಚುತ್ತಿದ್ದಾಳೆ. ಅವಳು ಹಕ್ಕಿಯಂತೆ ಹಾರುತ್ತಿದ್ದಾಳೆ. ಮೀನಿನಂತೆ ಈಜುತ್ತಿದ್ದಾಳೆ. ಅವಳ ಸಾಧನೆಗಳಿಗೆ ಇದೀಗ ಯಾವುದೇ ಲಕ್ಷ್ಮಣ ರೇಖೆಗಳಿಲ್ಲ. ಇತ್ಯಾದಿ ವರ್ಣರಂಜಿತ ಹೇಳಿಕೆಗಳಿಗೆ ತಲೆಬುಡವಿಲ್ಲ ಎಂಬುದನ್ನು ಈ ಅಂಕಿ ಅಂಶಗಳು ಸಾರಿ ಹೇಳುತ್ತವೆ. 'ಪುರುಷ ಮಾಯೆ' ಸ್ತ್ರೀಯರ ಹಾದಿಗೆ ನಿರಂತರವಾಗಿ ತೊಡರುಗಾಲು ಒಡ್ಡುತ್ತಲೆ ಬಂದಿದೆ. ಪುರುಷಾನುಕೂಲಿಯಾದ ಸಾಮಾಜಿಕ ವ್ಯವಸ್ಥೆಯ ಅಡಿಪಾಯಕ್ಕೆ ಕೈ ಇಟ್ಟರೆ ಅಪಾಯಗಳನ್ನು ಎದುರಿಸಬೇಕಾಗುತ್ತದೆ. ರಾಷ್ಟ್ರೀಯ ಮಹಿಳಾ ಆಯೋಗ ಹೊರಗೆಡವಿರುವ ಮೇಲ್ಕಂಡ ಅಂಕಿ ಅಂಶಗಳು ಬದಲಾವಣೆಯ ಒಡಲಲ್ಲಿ ಅಡಗಿರುವ ಆತಂಕಗಳನ್ನು ಬಯಲು ಮಾಡುತ್ತದೆ.

ಪೊಲೀಸರು ಅಪರಾಧಿಗಳ ಬೆಂಗಾವಲಾಗಿ ನಿಂತು ಬಿಟ್ಟರು ಎಂದು ಶೇ. ೧೭ ಮಹಿಳೆಯರು ಗೋಳಿಟ್ಟರು. ಅತ್ಯಾಚಾರದಿಂದ ನಲುಗಿ ಆಸ್ಪತ್ರೆಗೆ ಹೋಗಿ ಐದು ಗಂಟೆ ಕಾದ ನಂತರ ವೈದ್ಯರು ಕಣ್ಣುಬಿಟ್ಟರು ಎಂದು ಶೇ. ೧೬ರಷ್ಟು ಮಹಿಳೆಯರು ರೋದಿಸಿದರು. ಇದು ನ್ಯಾಯದ ಹಾದಿಯಲ್ಲಿರುವ ಕಲ್ಲುಮುಳ್ಳುಗಳು.

'ಆಗಿದ್ದು ಆಗಿ ಹೋಯ್ತು, ಎಲ್ಲಾ ನಮ್ಮ ಹಣೆಬರಹ, ಹೋದ ಪ್ರಾಣ ಮತ್ತೆ ಬರುತ್ತಾ, ಕೆಟ್ಟದ್ದು ಮಾಡಿದವರಿಗೆ ದೇವರು ಶಿಕ್ಷೆ ಕೊಟ್ಟೇ ಕೊಡುತ್ತಾನೆ' ಎಂಬ 'ವೇದಾಂತ' ನ್ಯಾಯದ ಹಾದಿಯಲ್ಲಿ ಇಟ್ಟ ಹೆಜ್ಜೆಯನ್ನು ವಾಪಸ್ ತೆಗೆಯುವಂತೆ ಮಾಡುತ್ತದೆ.

ಮಹಿಳೆಯರ ಹಕ್ಕುಗಳ ದಮನ ದಿನೇ ದಿನೇ ಹೆಚ್ಚಾಗುತ್ತಿದ್ದರೂ ಈಗಲೂ ಈ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ಎಂಬುದರ ಕುರಿತು ವ್ಯವಸ್ಥಿತ ಕಾರ್ಯಸೂಚಿ ಇಲ್ಲ.

ಲಿಂಗಾಧಾರಿತ ಸಾಮಾಜಿಕ ಮತ್ತು ಸಾಂಸ್ಕೃತಿಕ ತಾರತಮ್ಯವನ್ನು ಗುರುತಿಸುವ, ವಿಶ್ಲೇಷಿಸುವ ಹಾಗೂ ಅವುಗಳನ್ನು ಹೋಗಲಾಡಿಸುವ ಪ್ರಯತ್ನಗಳೂ ಇನ್ನೂ ಶೈಶವಾವಸ್ಥೆಯಲ್ಲಿದೆ ಎನ್ನುತ್ತಾರೆ ಜೆಂಡರ್ ಟ್ರೈನಿಂಗ್ ಇನ್ಸಿಟ್ಯೂಟ್ ನಿರ್ದೇಶಕಿ ಡಾ. ಮಧುಮಿತಾ ಸರ್ಕಾರ್. ಲಿಂಗತಾರತಮ್ಯ ನಿವಾರಿಸಲು ಈ ಸಂಸ್ಥೆ ವಿವಿಧ ಇಲಾಖೆಗಳ ಸರ್ಕಾರಿ ಅಧಿಕಾರಿಗಳಿಗೆ ತರಬೇತಿ ನೀಡುತ್ತದೆ. ಇದುವರೆಗೆ ೨೩೬ ತರಬೇತಿ ಕಾರ್ಯಾಗಾರಗಳನ್ನು ನಡೆಸಿದ್ದೇವೆ. ೮ ಸಾವಿರ ಜನರಿಗೆ ಅರಿವು ಮೂಡಿಸಿದ್ದೇವೆ. ಇದು ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಅಷ್ಟೆ

ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೂ ತರಬೇತಿ ನೀಡಿದ್ದೇವೆ. ಕೆಲ ಪೂರ್ವಸಿದ್ಧ ದೃಷ್ಟಿಕೋನಗಳು ಎಲ್ಲೆಡೆ ಮನೆಮಾಡಿದೆ. ಇವುಗಳನ್ನು ಧ್ವಂಸಗೊಳಿಸುವುದು ಅಷ್ಟು ಸುಲಭವಲ್ಲ. ವಿದ್ಯಾವಂತರೆಂದೆನಿಸಿ ಕೊಂಡವರೇ ವಸ್ತು ಸಂಗತಿಗಳನ್ನು ಮುಕ್ತವಾಗಿ ನೋಡುವ, ಪರಿಭಾವಿಸುವ ಗೋಜಿಗೇ ಹೋಗುವುದಿಲ್ಲ. ಪೊಲೀಸರೂ ಸೇರಿದಂತೆ ಬಹುಜನರೊಡನೆ ವ್ಯವಹರಿಸಬೇಕಾದ ಸರ್ಕಾರಿ ಅಧಿಕಾರಿಗಳು ಲಿಂಗ ಸಂವೇದನೆ ಕಳೆದುಕೊಂಡರೆ ಅದು ಅವರು ನಿರ್ವಹಿಸುವ ಮಹಿಳೆಯರ ದೌರ್ಜನ್ಯ ಪ್ರಕರಣಗಳ ನಿರ್ವಹಣೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಮಹಿಳಾ ಪೊಲೀಸ್ ಠಾಣೆಗಳ ಹೆಚ್ಚಳವನ್ನು ಒಂದು ಪರಿಹಾರವಾಗಿ ಸೂಚಿಸಲಾಗುತ್ತದೆ. ಆದರೆ ಎಷ್ಟೋ ಮಹಿಳೆಯರು ಪುರುಷರ ಅಪರಾವತಾರಗಳಂತೆ ಕಾಣುತ್ತಾರೆ. ಅವರ ಚಿಂತನೆಯಲ್ಲಿ ಪುರುಷ ಮಾದರಿ ಅಚ್ಚೊತ್ತಿರುತ್ತದೆ. ಇದನ್ನು ಅನ್ಯವಾಗಿ ನೋಡುವ ದೃಷ್ಟಿಯನ್ನು ಅವರು ಕಳೆದುಕೊಂಡಿರುತ್ತಾರೆ. ಇಂಥ ಸ್ತ್ರೀ ರೂಪಿ ಪುರುಷರಿಂದ ಏನು ನಿರೀಕ್ಷಿಸುತ್ತೀರಿ? ಇದಕ್ಕೆ ಮಹಿಳೆಯರನ್ನು ದೂಷಿಸಿ ಪ್ರಯೋಜನವಿಲ್ಲ. ಈ ಮಾದರಿಗಳನ್ನು ಅವರ ತಲೆಯಲ್ಲಿ ತುಂಬುವಂತೆ ಮಾಡಿರುವುದು ಪುರುಷಶಾಹಿ ವ್ಯವಸ್ಥೆಯಲ್ಲವೇ ಎಂದು ಸರ್ಕಾರ್ ಪ್ರಶ್ನಿಸುತ್ತಾರೆ.

ಮಹಿಳೆಯರ ಕಿರುಕುಳ, ಹಿಂಸೆ ಮತ್ತು ದೌರ್ಜನ್ಯ ಅನೇಕ ಮುಖವಾಗಿ ಬೆಳೆಯುತ್ತಿದೆ. ಆದರೆ ಅದಕ್ಕೆ ಕಡಿವಾಣ ಹಾಕುವ ವ್ಯವಸ್ಥೆಗಳು ಮಾತ್ರ ನಿದ್ರಾವಸ್ಥೆಯಲ್ಲಿವೆ. ನಿಮಿಷ, ಸೆಕೆಂಡ್‌ಗಳ ಲೆಕ್ಕದಲ್ಲಿ ಮಹಿಳೆಯರ ಆಕ್ರಂದನವನ್ನು ಅಳೆದು ಅದರ ತೀವ್ರತೆಯನ್ನು ಅನಾವರಣಗೊಳಿಸಲಾಗುತ್ತಿದೆ. ಇದರಿಂದ ಸಮಸ್ಯೆಗಳಿಗೆ ಮುಕ್ತಿ ಸಿಗುತ್ತದೆಯೇ? (ಸೌಜನ್ಯ : ಕನ್ನಡಪ್ರಭ)

ಬಸವ ಚಳವಳಿಯೊಳಗಿನ ದಲಿತ ಚಳವಳಿ

ಒಳನೋಟ

ಜಾತಿ-ಧರ್ಮ-ಲಿಂಗ ಮತ್ತು ವರ್ಗಗಳಲ್ಲಿ ಸಮಾನತೆಯನ್ನು ಕಾಯ್ದುಕೊಂಡು ದನಿ ಇಲ್ಲದೆ ದಮನಕ್ಕೆ ಒಳಗಾಗಿದ್ದ ದಲಿತರಲ್ಲಿ ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ ಕಲ್ಪನೆ ಮೂಡಿಸಿದ್ದು ಬಸವ ಚಳವಳಿ. ದಲಿತ ಚಳವಳಿಯ ಇಂದಿನ ಉಚ್ಛ್ರಾಯ ಸ್ಥಿತಿಗೂ ಈ ಚಳವಳಿಯೇ ಮೂಲ ಪ್ರೇರಣೆಯೆಂದರೆ ತಪ್ಪಾಗಲಾರದು. ಯಾವುದೇ ಪ್ರಗತಿಪರ ನಿಲುವಿಲ್ಲದೆ ಇಂದು ಕೆಲವೇ ಜಾತಿಗಳ ನಡುವಿನ ಬಿಕ್ಕಟ್ಟಾಗಿರುವ ಬಸವ ಚಳವಳಿ, ಹೇಗೆ ದಲಿತ ಸಂವೇದನೆಯನ್ನು ಪ್ರಬಲವಾಗಿ ಹೊಂದಿತ್ತು ಎಂಬ ಬಗ್ಗೆ ಲೇಖಕರು ವಿವರಿಸಿದ್ದಾರೆ.

ಡಾ|| ಬಸವರಾಜ ಸಬರದ

ವಚನ ಚಳವಳಿ ಬಹುಮುಖಿಯಾಗಿರುವುದರ ಜತೆಗೆ ಅನೇಕ ಪ್ರಮುಖ ಸಂವೇದನೆಗಳನ್ನೊಳಗೊಂಡಿದೆ. ಈ ಚಳವಳಿಯಲ್ಲಿದ್ದವರು ಬೇರೆ-ಬೇರೆ ಸಂಸ್ಕೃತಿಗಳಿಂದ, ಬೇರೆ-ಬೇರೆ ಜಾತಿ-ಮತಗಳಿಂದ ಬಂದವರು. ಹೀಗೆ ವಿವಿಧ ನೆಲೆಗಳಿಂದ ಬಂದ ವಚನಕಾರರು ಅಸಮಾನತೆಯ ವಿರುದ್ಧ ಹೋರಾಡಲು ಎಲ್ಲರಿಗೂ ಒಪ್ಪಿಗೆಯಾಗಬಹುದಾದ ಒಂದು ತಾತ್ವಿಕ ನೆಲೆಗಟ್ಟನ್ನು ರೂಪಿಸಿದರು. ಅವರು ಬಂದ ದಾರಿಗಳು ಬೇರೆ-ಬೇರೆಯಾಗಿದ್ದರೂ ಅವರು ಕೂಡಬೇಕೆಂದಿರುವ ತಾಣ, ಸೇರಬೇಕೆಂದಿರುವ ಸ್ಥಳ ಒಂದೇಯಾಗಿತ್ತು. ಹೀಗಾಗಿ ಅನೇಕ ವೈಚಾರಿಕ ಭಿನ್ನತೆಗಳ ನಡುವೆಯೂ ಅವರು ಒಂದುಗೂಡಿ ಹೋರಾಡಲು ಸಾಧ್ಯವಾಯಿತು. ಚಳವಳಿಯ ಮೂಲಕ ಬೆಳೆಯುವುದು ಅನಿವಾರ್ಯವಾಯಿತು.

ವಚನ ಚಳವಳಿಯ ಒಳಗಡೆಯೇ ಕೆಲವು ಉಪಚಳವಳಿಗಳಿವೆ. ಅವುಗಳನ್ನು ದಲಿತ ಚಳವಳಿ, ಕಾಯಕ ಜೀವಿಗಳ ಚಳವಳಿ, ಮಹಿಳಾ ಚಳವಳಿಗಳೆಂದು ವಿಂಗಡಿಸಬಹುದು. ಆದರೆ ಇಂದಿನ ಚಳವಳಿಗಳಿಗೂ, ವಚನ ಚಳವಳಿಯ ಒಳಗಡೆ ಇರುವ ಉಪಚಳವಳಿಗಳಿಗೂ ತಾತ್ವಿಕನೆಲೆಯಲ್ಲಿಹಾಗೂ ಸಂಘಟನಾತ್ಮಕ ನೆಲೆಯಲ್ಲಿ ಕೆಲವು ವ್ಯತ್ಯಾಸಗಳಿವೆ.

'ದಲಿತ' ಎಂಬ ಪದ ಇತ್ತೀಚೆಗೆ ಬಂದುದಾಗಿದೆ. 'ದಲಿತ' ಪದದ ಬಗೆಗೆ ಸ್ಪಷ್ಟವಾದ ವ್ಯಾಖ್ಯೆಗಳಿಲ್ಲ. ವಿಶಾಲ ಅರ್ಥದಲ್ಲಿ ದಲಿತರೆಂದರೆ ತುಳಿತಕ್ಕೊಳಗಾದವರು, ಶೋಷಿತರು, ಬಡವರು, ಅಸ್ಪೃಶ್ಯರು ಎಂದರ್ಥವಾಗುತ್ತದೆ. ಆದರೆ ಕರ್ನಾಟಕದ ಸಂದರ್ಭದಲ್ಲಿ 'ದಲಿತ' ಪದಕ್ಕೆ ಸೀಮಿತವಾದ ಅರ್ಥವಿದೆ. ಅಸ್ಪೃಶ್ಯರನ್ನು ಮಾತ್ರ ಇಲ್ಲಿ ದಲಿತರೆಂದು ಗುರುತಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ನಡೆದ ದಲಿತ ಪ್ಯಾಂಥರ್ಸ್ ಚಳವಳಿಯಲ್ಲಿ ಎಲ್ಲ ಜಾತಿಯ ಶೋಷಿತರೂ ಸೇರಿದ್ದರು. ಆದರೆ ಕರ್ನಾಟಕದ ದಲಿತ ಸಂಘಟನೆಗಳಲ್ಲಿ ಅಸ್ಪೃಶ್ಯರು ಮಾತ್ರ ಇದ್ದಾರೆ. ಹೀಗಾಗಿ ಇಂದಿನ ದಲಿತ ಸಂಘಟನೆಗಳ ಹೋರಾಟಕ್ಕೂ, ಹನ್ನೆರಡನೇ ಶತಮಾನದಲ್ಲಿ ನಡೆದ ವಚನ ಚಳವಳಿಯ ಆಶಯಕ್ಕೂ ಸಂಘಟನಾತ್ಮಕ ನೆಲೆಯಲ್ಲಿ ವ್ಯತ್ಯಾಸವಿದೆ.

ಹನ್ನೆರಡನೇ ಶತಮಾನದಲ್ಲಿ ನಡೆದ ವಚನ ಚಳವಳಿ ಅನೇಕ ಕಾರಣಗಳಿಂದ ವಿಶಿಷ್ಟವಾಗಿದೆ. ಇಂದಿನ ದಲಿತ ಚಳವಳಿಗಳು ದಲಿತರಿಂದ ಪ್ರಾರಂಭವಾಗಿದ್ದರೆ, ಅಂದಿನ ದಲಿತ ಚಳವಳಿ ದಲಿತೇತರ ವಚನಕಾರರಿಂದ ಪ್ರಾರಂಭವಾಗಿದೆ. ಇಂದಿನ ಮಹಿಳಾ ಚಳವಳಿಗಳು ಮಹಿಳೆಯರ ನೇತೃತ್ವದಲ್ಲಿ ಹುಟ್ಟಿದ್ದರೆ, ಅಂದಿನ ಮಹಿಳಾ ಚಳವಳಿ ಪುರುಷರಿಂದ ಹುಟ್ಟಿದೆ. ಹನ್ನೆರಡನೇ ಶತಮಾನದಲ್ಲಿ ಕಲ್ಯಾಣದಲ್ಲಿ ಸೇರಿದ ಶರಣರು ತಾವು ಬೇರೆ ಬೇರೆ ವರ್ಗ-ವರ್ಣ-ಜಾತಿ-ಪಂಥ-ಪ್ರದೇಶಗಳಿಂದ ಬಂದವರಾಗಿದ್ದರೂ, ಮಹಿಳೆ-ಪುರುಷ ಎಂಬ ಲಿಂಗಭೇದವನ್ನು ತೊರೆದವರಾಗಿದ್ದರು; ಮೇಲು-ಕೀಳು ಎಂಬ ಜಾತಿಭೇದವನ್ನು ಮರೆತವರಾಗಿದ್ದರು. ಅವರು ಬೇರೆ ಬೇರೆ ಜಾತಿಗಳಲ್ಲಿ ಹುಟ್ಟಿ ಬಂದವರಾಗಿದ್ದರೂ ತಮ್ಮ ಮೂಲ ಜಾತಿಯನ್ನು ಕಳೆದುಕೊಂಡು ಶರಣಜಾತಿಗೆ ಸೇರಿದರು. ಬೇರೆ-ಬೇರೆ ಲಿಂಗ-ಪ್ರದೇಶಗಳಿಂದ ಬಂದವರಾಗಿದ್ದರೂ ಆ ಎಲ್ಲ ಭೇದಗಳನ್ನು ಮರೆತು, ತಾವು ಶಿವಭಕ್ತರೆಂಬುದನ್ನು ಮಾತ್ರ ನೆನಪಿಟ್ಟುಕೊಂಡರು. ಹೀಗಾಗಿ ದಲಿತರ ಜಾತಿ ಹೋರಾಟಕ್ಕಾಗಿ ಎಲ್ಲರೂ ಕೂಡಿಯೇ ಹೋರಾಡಿದರು; ಮಹಿಳಾ ಸಮಾನತೆಗಾಗಿ ಎಲ್ಲರೂ ಒಟ್ಟಾಗಿಯೇ ಶ್ರಮಿಸಿದರು. ವಚನ ಚಳವಳಿಯಲ್ಲಿದ್ದ ಎಲ್ಲ ದಲಿತರು-ಶೋಷಿತರು-ಮಹಿಳೆಯರು ಕಾಯಕ ಜೀವಿಗಳೇ ಆಗಿದ್ದರಿಂದ ಆ ಚಳವಳಿಯನ್ನು ಕಾಯಕಜೀವಿಗಳ ಚಳವಳಿಯೆಂದು ಕರೆಯುವುದೇ ಹೆಚ್ಚು ಸೂಕ್ತವಾದುದಾಗಿದೆ. ಕಾಯಕ ಜೀವಿಗಳ ಚಳವಳಿಗೆ ಜಾತಿಭೇದವಿಲ್ಲ- ಲಿಂಗಭೇದವಿಲ್ಲ.

ಆದರೆ ಇಂದಿನ ಸಮಾಜವ್ಯವಸ್ಥೆಯೇ ಬೇರೆಯಾಗಿದೆ. ಇಂದೂ ಕೂಡ ಕಾಯಕಜೀವಿಗಳು-ಶ್ರಮಿಕರೂ ಇದ್ದಾರೆ. ಆದರೆ ಅವರು ಬೇರೆ ಬೇರೆ ಗುಂಪುಗಳಲ್ಲಿ ಹಂಚಿಹೋಗಿದ್ದಾರೆ. ಹೀಗಾಗಿ ದಲಿತರು ಜಾತಿವ್ಯವಸ್ಥೆಯ ವಿರುದ್ಧ ಚಳವಳಿ ಮಾಡುತ್ತಾರೆ, ಮಹಿಳೆಯರು ಲಿಂಗ ಅಸಮಾನತೆಯ ವಿರುದ್ಧ ಹೋರಾಡುತ್ತಿದ್ದಾರೆ. ವಿವಿಧ ಗುಂಪುಗಳಲ್ಲಿ ಇಂದಿನ ಶ್ರಮಿಕ ಸಮುದಾಯ ಹಂಚಿ ಹೋಗಿರುವುದರಿಂದ ಶ್ರಮಿಕರ ಹೋರಾಟ ತಣ್ಣಗಾಗಿ, ಆಯಾ ಗುಂಪುಗಳ ಹೋರಾಟಗಳೇ ಎದ್ದುಕಾಣುತ್ತವೆ. ಆದರೆ ಅಂದಿನ ಮಾದಾರ ಜನಾಂಗದ ಬಗೆಗೆ ಮಾದಾರ ಧೂಳಯ್ಯ ಹೋರಾಟಮಾಡಲಿಲ್ಲ, ಸ್ತ್ರೀ ಸಮಾನತೆಗಾಗಿ ಅಂದಿನ ವಚನಕಾರ್ತಿಯರು ಹೋರಾಡಲಿಲ್ಲ- ಇದೆಲ್ಲವನ್ನೂ ಮೈಮೇಲೆ ತೆಗೆದುಕೊಂಡು ಬಸವಣ್ಣ ಮೊದಲಾದ ವಚನಕಾರರು ಈ ಎಲ್ಲ ಅಸಮಾನತೆಯ ವಿರುದ್ಧ ಹೋರಾಡಿದರು.

ದಲಿತರ ನೋವು-ಶೋಷಣೆಯನ್ನು ಕುರಿತಂತೆ ಅಸ್ಪೃಶ್ಯ ಜನಾಂಗದಿಂದ ಬಂದ ವಚನಕಾರರು ದನಿಯೆತ್ತಿದ್ದಾರೆ. ಜಾತಿ ಅಸಮಾನತೆ ಹಾಗೂ ವರ್ಣಾಶ್ರಮ ಧರ್ಮದ ಸಾಂಪ್ರದಾಯಿಕ ನೆಲೆಗಳ ಬಗೆಗೆ ಅಸ್ಪೃಶ್ಯ ಜನಾಂಗದವರಿಗಿಂತ ಹೆಚ್ಚಾಗಿ ಇತರ ವರ್ಗಗಳಿಂದ ಬಂದ ವಚನಕಾರರೇ ನೇರನುಡಿಗಳನ್ನಾಡಿದ್ದಾರೆ. ಹೀಗಾಗಿ ದಲಿತ ಸಂವೇದನೆಯೆಂಬುದು ಎಲ್ಲ ವಚನಕಾರರ ಮುಖ್ಯ ಅಭಿವ್ಯಕ್ತಿಯಾಗಿದೆ. ವಚನ ಚಳವಳಿಯ ಪ್ರಮುಖ ಉದ್ದೇಶವೇ ಜಾತ್ಯಾತೀತ ಸಮಾಜ ರಚನೆಯಾದುದರಿಂದ, ಸಹಜವಾಗಿಯೇ ಪ್ರಮುಖ ವಚನಕಾರರೆಲ್ಲರೂ ವರ್ಣಾಶ್ರಮ ಪದ್ಧತಿಯನ್ನು, ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ್ದಾರೆ. ಸಮಾಜ ವ್ಯವಸ್ಥೆಯಲ್ಲಿ ಉಚ್ಚ-ನೀಚ ಭಾವನೆಗಳನ್ನು ಹುಟ್ಟು ಹಾಕಿದ್ದ ಜಾತಿವಾದವನ್ನು ಎಲ್ಲ ವಚನಕಾರರೂ ಪ್ರತಿಭಟಿಸಿದ್ದಾರೆ. ಕೆಳವರ್ಗಗಳಿಂದ ಬಂದ ಶ್ರಮಿಕ ಸಮುದಾಯವೇ, ವಚನ ಚಳವಳಿಯ ಕೇಂದ್ರಬಿಂದುವಾಗಿರುವುದರಿಂದ, ವಚನ ಸಂವೇದನೆಯೆಂದರೆ ಅದು ದಲಿತ ಸಂವೇದನೆಯೇ ಆಗಿದೆ.

ಬಸವಣ್ಣನ ವಚನಗಳಲ್ಲಿ ಅಭಿವ್ಯಕ್ತವಾಗಿರುವ ದಲಿತ ಸಂವೇದನೆ ಸಮಗ್ರ ದೃಷ್ಟಿಕೋನಗಳಿಂದ ಕೂಡಿದೆ. ಕುಲವನರಸುವವರನ್ನು ಕಂಡು ಬಸವಣ್ಣ ಖಾರವಾಗಿಯೇ ಹೇಳಿದ್ದಾನೆ:

'ಹೊಲೆಯೊಳಗೆ ಹುಟ್ಟಿ ಕುಲವನರಸುವೆ,
ಎಲವೊ, ಮಾತಂಗಿಯ ಮಗು ನೀನು.
ಸತ್ತುದನೆಳೆವನೆತ್ತಣ ಹೊಲೆಯ?
ಹೊತ್ತು ತಂದು ನೀವು ಕೊಲುವಿರಿ
ಶಾಸ್ತ್ರವೆಂಬುದು ಹೋಲೆಂಗೆಮಾರಿ,
ವೇದವೆಂಬುದು ನಿಮಗೆ ತಿಳಿಯದು...'

-(ಸ.ವ.ಸಂ. ೧, ಪು: ೧೪೩, ವ: ೫೩೬)

ಈ ವಚನದಲ್ಲಿ ಹೊತ್ತು ತಂದು ಕೊಲ್ಲುವವರು ಯಾರು? ಸತ್ತುದನೆಳೆವುವವರು ಯಾರು? ಎಂಬಂತಹ ಪ್ರಶ್ನೆಗಳನ್ನು ಸ್ಪಷ್ಟಪಡಿಸಿದ ಬಸವಣ್ಣ ಕುಲದ ಮಾತನಾಡುವವರಿಗೆ ತೀವ್ರವಾಗಿ ಖಂಡಿಸಿದ್ದಾನೆ. ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲವೆಂದು ಸ್ಪಷ್ಟಪಡಿಸಿದ್ದಾನೆ. ಕುಲಜನೆಂಬುದಕೆ ಯಾವುದು ದೃಷ್ಟ? ಎಂಬ ಮಹತ್ವದ

ಪ್ರಶ್ನೆಯನ್ನು ಮತ್ತೊಂದು ವಚನದಲ್ಲಿ ಕೇಳಿದ್ದಾನೆ. ಕಾಸಿ ಕಮ್ಮಾರನಾಗುವುದು, ಬೀಸಿ ಮಡಿವಾಳನಾಗುವುದು ಇವೆಲ್ಲಾ ಅವರವರು ಮಾಡುವ ಕಾಯಕಗಳೇ ಹೊರತು ಕುಲಗಳಲ್ಲವೆಂದು ವಿವರಿಸಿದ್ದಾನೆ. ತಾಯಿಯ ಉದರದಲ್ಲಿಯೆ ಎಲ್ಲರೂ ಜನಿಸುತ್ತಾರೆ. ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ಎಂಬಂತಹ ಮಹತ್ವದ ಪ್ರಶ್ನೆ ಎತ್ತುವುದರ ಮೂಲಕ ಜಾತಿ ಭೂತವನ್ನು ಬಸವಣ್ಣ ಬಿಡಿಸಿದ್ದಾನೆ. ಜಾತಿ ಹಿಡಿದು ಸೂತಕವನರಸುವುದೆಂದರೆ, ಜ್ಯೋತಿ ಹಿಡಿದು ಕತ್ತಲೆಯನರಸಿದಂತೆಂದು ಸ್ಪಷ್ಟೀಕರಿಸಿದ್ದಾನೆ.

ವ್ಯಾಸ ಬೋವಿತಿಯ ಮಗ, ಮಾರ್ಕಂಡೇಯ ಮಾತಂಗಿಯವ
ಮಂಡೋದರಿ ಕಪ್ಪೆಮಮಗಳು
ಕುಲವನರಸದಿರಿಂ ಭೋ! ಕುಲದಿಂದ ಮುನ್ನೇನಾದಿರಿಂ ಭೋಃ
ಸಾಕ್ಷಾತ್ ಅಗಸ್ತ್ಯಕಬ್ಬಿಲ, ದುರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ,
ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆನಾವಿದ ಕಾಣೆ!
ನಮ್ಮ ಕೂಡಲಸಂಗನ ವಚನವಿಂತೆಂದುದು;
ಶ್ವಪಚೋಪಿಯಾದಡೇನು, ಶಿವಭಕ್ತನೆ ಕುಲಜಂಭೋ!

-(ಸ.ವ.ಸಂ.೧, ಪು: ೧೪೩, ವ: ೨೮೯)

ಮಹಾಭಾರತ ರಚಿಸಿದ ವ್ಯಾಸಮುನಿಯಿಂದ ಹಿಡಿದು ಕೌಂಡಿನ್ಯ ಮುನಿಯವರೆಗೆ ಉದಾಹರಿಸಿ, ಇವರು ಶ್ವಪಚ ಜನಾಂಗದಲ್ಲಿ ಹುಟ್ಟಿದರೇನು, ಇವರೆಲ್ಲಾ ದೊಡ್ಡ ದೊಡ್ಡ ಸಾಧನೆಮಾಡಿದ್ದಾರೆ. ಆದ್ದರಿಂದ ಶಿವಭಕ್ತನೇ ನಿಜವಾದ ಕುಲಜನೆಂದು ಬಸವಣ್ಣ ಸ್ಪಷ್ಟಪಡಿಸಿದ್ದಾನೆ. ಮನುಷ್ಯ ಸಾಧನೆಯಿಂದ, ಪರಿಶ್ರಮದಿಂದ ಮುಂದೆ ಬರುತ್ತಾನೆಯೇ ಹೊರತು ಕುಲದಿಂದಲ್ಲವೆಂದು ತಿಳಿಸಿರುವ ಬಸವಣ್ಣ ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ವಚನಗಳನ್ನು ರಚಿಸಿದ್ದಾನೆ.

'ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ ?
ಅಪವಿತ್ರದ ನುಡಿಯ ನುಡಿವ ಸೂತಕವೆ ಪಾತಕ.
ನಿಷ್ಕಳಂಕ ನಿಜೈಕ್ಯ ತ್ರಿವಿಧನಿರ್ಣಯ,
ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದಿಲ್ಲ.'

-(ಸ.ವ.ಸಂ.೧, ಪು: ೧೯೬, ವ: ೩೩೦)

ಹೊಲೆತನದಲ್ಲಿ ಎರಡು ವಿಧ. ಜಾತಿವಾದಿಗಳು ಪರಿಗಣಿಸುವ ಹುಟ್ಟಿನಿಂದ ಬಂದ ಜಾತಿಯ ಹೊಲೆತನ ಒಂದು ರೀತಿಯದಾದರೆ; ಸ್ವಚ್ಛತೆಯಿಲ್ಲದ ಹೊಲೆತನ ಮತ್ತೊಂದು ರೀತಿಯದು. ಹೊಲೆ-ಕುಲ-ಎಂಜಲು ಇವುಗಳಿಂದ ದೂರವಿರಲು ಬಸವಣ್ಣ ಇಲ್ಲಿ ಲಿಂಗ-ಜಂಗಮ-ಪ್ರಸಾದಗಳನ್ನು ಪ್ರಸ್ತಾಪಿಸುತ್ತಾನೆ. ಲಿಂಗ ಧರಿಸಿ ಭಕ್ತನಾದವನಿಗೆ ಹೊಲೆತನವಿಲ್ಲವೆಂದು ಸ್ಪಷ್ಟಪಡಿಸುತ್ತಾನೆ. ಜಂಗಮವಿದ್ದಲ್ಲಿ ಕುಲವಿಲ್ಲವೆಂದು ತಿಳಿಸುತ್ತಾನೆ. ಪ್ರಸಾದದ ಪರಿಕಲ್ಪನೆಯನ್ನು ತಂದುಕೊಂಡಾಗ ಎಂಜಲು ಇರುವುದಿಲ್ಲವೆಂದು ಹೇಳುತ್ತಾನೆ. ಸೂತಕವೆಂಬುದು ಜಾತಿಯಿಂದ ಬಂದುದ್ದಲ್ಲವೆಂದು ಸ್ಪಷ್ಟಪಡಿಸಿದ ಬಸವಣ್ಣ ಅದು

ಹನ್ನೆರಡನೇ ಶತಮಾನದಲ್ಲಿ ರಚನೆಯಾಗಿರುವ ವಚನ ಸಾಹಿತ್ಯವನ್ನು ಅಭ್ಯಾಸಮಾಡಿದಾಗ ದಲಿತ ಸಂವೇದ ನೆಯೇ ಎಲ್ಲ ವಚನಕಾರರ ಪ್ರಮುಖ ನೆಲೆಯಾಗಿದೆ. ದಲಿತ ವಚನಕಾರರಿಗಿಂತಲೂ, ದಲಿತೇತರ ವಚನ ಕಾರರೇ ದಲಿತರ ನೋವು-ಸಂಕಟಗಳಿಗೆ ದನಿಕೊಟ್ಟಿದ್ದಾರೆ. ಹೀಗಾಗಿ ವಚನ ಸಾಹಿತ್ಯದಲ್ಲಿ ದಲಿತ ಸಂವೇದನೆ- ಮಹಿಳಾ ಸಂವೇದನೆಯೆಂಬಂತಹ ವರ್ಗೀಕರಣವೇ ನಿರುಪಯೋಗಿಯೆನಿಸುತ್ತದೆ. ದಲಿತರ-ಶೂದ್ರರ- ಮಹಿಳೆಯರ ಮುಖ್ಯಸಂವೇದನೆಯೇ ವಚನ ಚಳವಳಿ ಯಾಗಿದೆ. ಹೀಗಾಗಿ ಇಲ್ಲಿ ದಲಿತರದೇ ಒಂದು ಪ್ರತ್ಯೇಕ ಗುಂಪಾಗಿ ಕಾಣಿಸುವುದಿಲ್ಲ. ಇಂತಹ ಉದಾಹರಣೆಗಳು ಭಾರತದ ಚರಿತ್ರೆಯಲ್ಲಿ ತುಂಬ ವಿರಳವೆಂದೇ ಹೇಳಬಹುದಾಗಿದೆ.

ಅಪವಿತ್ರ ನುಡಿಯನ್ನು ನುಡಿಯವುದರೊಂದಿಗೆ ಬರುತ್ತದೆಂದು ವಿವರಿಸುತ್ತಾನೆ.

'ನೆಲನೊಂದೆ: ಹೊಲಗೇರಿ ಶಿವಾಲಯಕ್ಕೆ,
ಜಲವೊಂದೆ: ಶೌಚಾಚಮನಕ್ಕೆ,
ಕುಲವೊಂದೆ ತನ್ನ ತಾನರಿದವಂಗೆ...'

-(ಸ.ವ.ಸಂ.೧, ಪು: ೨೨೯, ವ: ೮೩೯)

ಒಂದೇ ನೆಲದಲ್ಲಿ ಹೊಲಗೇರಿಯೂ ಇದೆ, ಶಿವಾಲಯವೂ ಇದೆ. ಒಂದೇ ಜಲವನ್ನು ಸ್ನಾನಕ್ಕೂ ಬಳಸುತ್ತಾರೆ, ಪೂಜೆಗೂ ಬಳಸುತ್ತಾರೆ. ಹೀಗಿರುವಾಗ ಒಂದೇ ರೀತಿಯಾಗಿರುವ ಮನುಷ್ಯರಲ್ಲಿ ಏಕೆ ಭೇದ? ತನ್ನ ತಾನರಿತಾಗ ಕುಲವೊಂದೇಯಾಗುತ್ತದೆಂದು ಇಲ್ಲಿ ಹೇಳಿದ್ದಾನೆ. ಬಸವಣ್ಣನ ಅನೇಕ ವಚನಗಳಲ್ಲಿ ಜಾತಿಯನ್ನು ಅಲ್ಲಗಳೆಯುವ, ಕುಲಮದವನ್ನು ವಿರೋಧಿಸುವ, ಮಡಿವಂತಿಕೆಯನ್ನು ತಿರಸ್ಕರಿಸುವ ವಿಚಾರಗಳು ಸ್ಪಷ್ಟವಾಗಿವೆ.

'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ.'

ಎಂದು ಹೇಳಿದ ಬಸವಣ್ಣ ಮೇಲು-ಕೀಳು ಎಂದು ಭೇದ ಮಾಡುವವರಿಗೆ ನಿದರ್ಶನಗಳೊಂದಿಗೆ ವಿವರಿಸಿದ್ದಾನೆ.

'ಗೋತ್ರವಾವುದೆಂದರೆ ಮಾದಾರ ಚೆನ್ನಯ್ಯನ ಗೋತ್ರವೆಂದು ಹೇಳಿರಯ್ಯಾ'-ಎನ್ನುವ ಬಸವಣ್ಣ ದಲಿತ ಸಂವೇದನೆಯ ಸಾಕಾರಮೂರ್ತಿಯೇ ಆಗಿದ್ದಾನೆ. ಮಾದಾರ ಚೆನ್ನಯ್ಯನನ್ನು ಕುರಿತು ಅನೇಕ ವಚನಗಳಲ್ಲಿ ಪ್ರಸ್ತಾಪಿಸಿದ್ದಾನೆ.

'ಅಪ್ಪನು ನಮ್ಮ ಮಾದಾರ ಚೆನ್ನಯ್ಯ
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ'

-(ಸ.ವ.ಸಂ.೧, ಪು: ೮೪, ಮ: ೩೪೯)

ಎಂದು ಹೇಳುತ್ತ ಜಾತಿ ವ್ಯವಸ್ಥೆಯ ಪೊಳ್ಳುತನವನ್ನು ತಿರಸ್ಕರಿಸಿದ್ದಾನೆ.

'ಹಿರಿಯಯ್ಯ ಶ್ವಪಚಯ್ಯ
ಕಿರಿಯಯ್ಯ ಡೋಹರಕಕ್ಕಯ್ಯ
ಅಯ್ಯಗಳಯ್ಯ ನಮ್ಮ ಮಾದಾರ ಚೆನ್ನಯ್ಯ'

ಎಂದು ಹೇಳುವ ಬಸವಣ್ಣನ ಈ ವಚನಗಳಲ್ಲಿ ದಲಿತ ವರ್ಗದ ಶರಣರನ್ನು ತುಂಬಾ ಗೌರವದಿಂದ ಕಾಣಲಾಗಿದೆ.

'ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರ ಹೊಲದಲಿ ಬೆರಣೆಗೆ ಹೋಗಿ ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು'

-(ಸ.ವ.ಸಂ. ವ: ೩೪೬)

ಎಂದು ಹೇಳುವ ಬಸವಣ್ಣನ ಈ ವಚನಗಳಲ್ಲಿ ದಲಿತ ಕಾಳಜಿಯೆಂತಹದೆಂಬುದು ಸ್ಪಷ್ಟವಾಗುತ್ತದೆ.

ವಚನ ಚಳವಳಿ ಮತ್ತು ದಲಿತರು:

ಭಾರತದ ಚರಿತ್ರೆಯಲ್ಲಿಯೇ ವಚನ ಚಳವಳಿಯ ಸಂದರ್ಭ ತುಂಬ ವಿಶಿಷ್ಟವಾದುದ್ದಾಗಿದೆ. ಹನ್ನೆರಡನೇ ಶತಮಾನದಲ್ಲಿ ರಚನೆಯಾದ ವಿವಿಧ ಭಾಷೆಗಳ ಸಾಹಿತ್ಯ ಕೃತಿಗಳಲ್ಲಿ, ವಚನ ಸಾಹಿತ್ಯದಲ್ಲಿ ಪ್ರಕಟವಾದ ಸಾಮಾಜಿಕ ಕಾಳಜಿ ಹಾಗೂ ದಲಿತ ಸಂವೇದನೆಯಂತಹ ವಿಷಯಗಳು ಕಾಣಿಸುವುದಿಲ್ಲ. ಎಂಟು ನೂರು ವರ್ಷಗಳ ಹಿಂದೆಯೇ ಸಾಮಾಜಿಕ ನ್ಯಾಯದ ಬಗೆಗೆ ಮಾತನಾಡಿದ ಶರಣರು ಅದಕ್ಕಾಗಿ ಚಳವಳಿಯನ್ನೇ ಹೂಡಿದ್ದು ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿಯೇ ತುಂಬ ವಿನೂತನವಾದುದು.

ಭಾರತದಂತಹ ದೇಶದಲ್ಲಿ ಭಕ್ತಿ ಪರಂಪರೆಗೆ ದೀರ್ಘವಾದ ಇತಿಹಾಸವಿದೆ. ಆದರೆ ಭಕ್ತಿ ಪಂಥವೊಂದು ಸಾಮಾಜಿಕ ಹಾಗೂ ಸಾಹಿತ್ಯಕ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಮಾಡಿದ್ದು ಹನ್ನೆರಡನೇ ಶತಮಾನದ ಶಿವಶರಣರ ಸಂದರ್ಭದಲ್ಲೆಂಬುದನ್ನು ನೆನಪಿಸಿಕೊಂಡರೆ ನಮ್ಮ ಶರಣರ ಬಗೆಗೆ ಅಪಾರ ಗೌರವಭಾವವುಂಟಾಗುತ್ತದೆ.

ಶತಮಾನಗಳಿಂದ ತುಳಿತಕ್ಕೊಳಗಾಗಿದ್ದ ದಲಿತರು-ಶೂದ್ರರು-ಮಹಿಳೆಯರು ವಚನಚಳವಳಿಯ ಸಂದರ್ಭದಲ್ಲಿ ಮನಬಿಚ್ಚಿ ಮಾತನಾಡಿದ್ದಾರೆ, ಅಸಮಾನತೆಯನ್ನು ಖಂಡಿಸಿದ್ದಾರೆ, ಜಾತೀಯತೆಯ ವಿರುದ್ಧ ಬಂಡೆದ್ದಿದ್ದಾರೆ. ಹನ್ನೆರಡನೇ ಶತಮಾನದ ಶರಣ ಚಳವಳಿಯಲ್ಲಿ ಭಾಗ ವಹಿಸಿದ್ದ ಅನೇಕ ದಲಿತರು ಭಾರತೀಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಮೊದಲಿಗರಾಗಿದ್ದಾರೆ. ಈ ಕಾರಣದಿಂದ ವಚನ ಚಳವಳಿಗೂ-ಕನ್ನಡ ಸಾಹಿತ್ಯಕ್ಕೂ-ದಲಿತ ಚರಿತ್ರೆಗೂ ಮಹತ್ವದ ಸಂಬಂಧವಿದೆ.

ಚಾತುರ್ವರ್ಣ ವ್ಯವಸ್ಥೆಯನ್ನು ತಿರಸ್ಕರಿಸಿದ ಶರಣರು ಜನಸಂಸ್ಕೃತಿಗೆ ಪ್ರಾಮುಖ್ಯತೆ ನೀಡಿದರು. ವರ್ಣ ವ್ಯವಸ್ಥೆಯಲ್ಲಿ ಸ್ಥಾನವನ್ನೇ ಪಡೆಯದಿದ್ದ ದಲಿತರನ್ನು ಗೋತ್ರ ಪುರುಷರೆಂದು ಗೌರವಿಸಿದರು. ಅಪ್ಪ-ಬೊಪ್ಪಯೆಂದು ಅಪ್ಪಿಕೊಂಡರು. ಇಂತಹ ಸಂದರ್ಭ ಜಾಗತಿಕ ಸಾಹಿತ್ಯದಲ್ಲಿಯೇ ತುಂಬ ವಿರಳವೆನ್ನಬಹುದು.

ಹನ್ನೆರಡನೇ ಶತಮಾನದಲ್ಲಿ ರಚನೆಯಾಗಿರುವ ವಚನ ಸಾಹಿತ್ಯವನ್ನು ಅಭ್ಯಾಸಮಾಡಿದಾಗ ದಲಿತ ಸಂವೇದನೆಯೇ ಎಲ್ಲ ವಚನಕಾರರ ಪ್ರಮುಖ ನೆಲೆಯಾಗಿದೆ. ದಲಿತ ವಚನಕಾರರಿಗಿಂತಲೂ, ದಲಿತೇತರ ವಚನಕಾರರೇ ದಲಿತರ ನೋವು-ಸಂಕಟಗಳಿಗೆ ದನಿಕೊಟ್ಟಿದ್ದಾರೆ. ಹೀಗಾಗಿ ವಚನ ಸಾಹಿತ್ಯದಲ್ಲಿ ದಲಿತ ಸಂವೇದನೆ-ಮಹಿಳಾ ಸಂವೇದನೆಯೆಂಬಂತಹ ವರ್ಗೀಕರಣವೇ ನಿರುಪಯೋಗಿಯೆನಿಸುತ್ತದೆ. ದಲಿತರ-ಶೂದ್ರರ-ಮಹಿಳೆಯರ ಮುಖ್ಯಸಂವೇದನೆಯೇ ವಚನ ಚಳವಳಿಯಾಗಿದೆ. ಹೀಗಾಗಿ ಇಲ್ಲಿ ದಲಿತರದೇ ಒಂದು ಪ್ರತ್ಯೇಕ ಗುಂಪಾಗಿ ಕಾಣಿಸುವುದಿಲ್ಲ. ಇಂತಹ ಉದಾಹರಣೆಗಳು ಭಾರತದ ಚರಿತ್ರೆಯಲ್ಲಿ ತುಂಬ ವಿರಳವೆಂದೇ ಹೇಳಬಹುದಾಗಿದೆ.

ಹನ್ನೆರಡನೇ ಶತಮಾನದ ವಚನಚಳವಳಿಯಲ್ಲಿ ಭಾಗವಹಿಸಿದ್ದ ಅನೇಕ ದಲಿತ ಶರಣರಲ್ಲಿ ಕೆಲವರು ಮಾತ್ರ ವಚನ ರಚನೆ ಮಾಡಿದ್ದಾರೆ. ಅನೇಕ ದಲಿತ ಶರಣರು ವಚನ ರಚಿಸಿಲ್ಲ, ರಚಿಸಿದ್ದರೂ ಅವುಗಳು ಉಪಲಬ್ಧವಾಗಿಲ್ಲ. ಅಂತಹ ಶರಣರಲ್ಲಿ ಸಮಗಾರ ಹರಳಯ್ಯನೂ ಒಬ್ಬ. ಸಮಗಾರ ಹರಳಯ್ಯನ ಮಗ, ಬ್ರಾಹ್ಮಣ ಮಧುವರಸನ ಮಗಳೊಂದಿಗೆ ಅಂತರ್ಜಾತಿಯ ವಿವಾಹವಾದಾಗ ಕಲ್ಯಾಣದಲ್ಲಿ ಅಲ್ಲೋಲ ಕಲ್ಲೋಲವಾಗಿ, ಹಿಂಸೆ ಉಲ್ಬಣಿಸಿ, ಮತೀಯ ಶಕ್ತಿಗಳು ಚಳವಳಿಯನ್ನೇ ನಾಶಪಡಿಸಿದ್ದು ಈಗ ಕೇವಲ ಇತಿಹಾಸ ಮಾತ್ರ. ವಸ್ತುಸ್ಥಿತಿ ಹೀಗಿರುವಾಗ ದಲಿತ ಶರಣರನ್ನು ಕುರಿತು ಮೌಖಿಕವಾಗಿ ಉಳಿದುಕೊಂಡು ಬಂದಿರುವ ಆಚರಣೆ-ಐತಿಹ್ಯಗಳಲ್ಲಿ ಮಹತ್ವದ ದಲಿತ-ಸಂವೇದನೆಗಳು ದೊರೆಯುತ್ತವೆ. ಇಂತಹ ಅಮೂಲ್ಯ ಸಂವೇದನೆಗಳು ಭಾರತೀಯ ದಲಿತ ಸಂಸ್ಕೃತಿಯನ್ನು ಕಟ್ಟಿ ನಿಲ್ಲಿಸಲು ಸಹಾಯಕವಾಗುತ್ತವೆ. ವರ್ಣವ್ಯವಸ್ಥೆಯ ವಿಕಾರ ರೂಪಗಳನ್ನು ಅಳಿಸಿಹಾಕಿದ ವಚನ ಚಳವಳಿ, ಭಾರತೀಯ ಚರಿತ್ರೆಯಲ್ಲಿ ಅದುವರೆಗೆ ದಾಖಲಾಗದೇ ಇದ್ದ ದಲಿತ ಬದುಕಿನ ಬಹುಮುಖಿ ಸಂಸ್ಕೃತಿಯನ್ನು ಎತ್ತಿ ಹಿಡಿದದ್ದು ಬಹುಮುಖ್ಯ ಸಂಗತಿಯಾಗುತ್ತದೆ.

ಹನ್ನೆರಡನೇ ಶತಮಾನದಲ್ಲಿ ಗೋತ್ರ ಪುರುಷರಾಗಿ ಕಂಡ ದಲಿತರು, ಇಂದೇಕೆ ಲಿಂಗಾಯತ ಸಮುದಾಯ ದಿಂದ ದೂರವಾಗಿದ್ದಾರೆ? ಮಾತು-ಮಾತಿಗೆ ಬಸವಣ್ಣನ ವಚನಗಳನ್ನು ಉಲ್ಲೇಖಿಸುವ ಇಂದಿನ ಲಿಂಗಾಯತರು ಎಷ್ಟು ಅಂತರ್ಜಾತಿ ವಿವಾಹ ನಡೆಸಲು ಕಾರಣರಾಗಿದ್ದಾರೆ? ಈ ಎರಡೂ ಪ್ರಶ್ನೆಗಳನ್ನು ಇಂದಿನ ದಲಿತರು ಹಾಗೂ ಲಿಂಗಾಯತರು ಕೂಡಿಯೇ ಕೇಳಿಕೊಂಡಾಗ ಹೊಸ ಚರ್ಚೆ ಪ್ರಾರಂಭವಾಗಲು ಸಾಧ್ಯವಾಗುತ್ತದೆ. ಇಂತಹ ಮುಕ್ತ ಚರ್ಚೆಗಳ ಮೂಲಕವೇ ಶರಣರ ಸಿದ್ಧಾಂತಗಳನ್ನು ಮತ್ತೆ ಜಾರಿಗೆ ತರಲು ಸಾಧ್ಯವಾಗುತ್ತದೆ. ಮಠ ವ್ಯವಸ್ಥೆಯನ್ನು ನಿರಾಕರಿಸುವುದರ ಮೂಲಕ, ಜಗದ್ಗುರುಗಳ ಮೆರವಣಿಗೆಯನ್ನು ನಿಲ್ಲಿಸುವುದರ ಮೂಲಕ, ಅಂತರ್ಜಾತಿ ವಿವಾಹಗಳನ್ನು ಜಾರಿಗೆ ತರುವುದರ ಮೂಲಕ ಶರಣರ ವಿಚಾರಧಾರೆಯನ್ನು ಮತ್ತೆ ಈ ನೆಲದಲ್ಲಿ ಹುಟ್ಟುಹಾಕಲು ಸಾಧ್ಯವಿದೆ.

ಅಸ್ಪೃಶ್ಯ ಜನಾಂಗದಲ್ಲಿಯೂ ಕೂಡ ಅನೇಕ ಉಪಜಾತಿಗಳಿವೆ. ಅವುಗಳಲ್ಲಿ ಹೊಲೆಯ-ಮಾದಿಗ- ಸಮಗಾರ ಅಥವಾ ಡೋಹರ ಈ ಮುಂತಾದವುಗಳನ್ನು ಉಲ್ಲೇಖಿಸಬಹುದು. ಈ ಉಪಜಾತಿಗಳೂ ಕೂಡ ವೃತ್ತಿಗಳಿಂದಲೇ ಬಂದವುಗಳಾಗಿವೆ. ಹನ್ನೆರಡನೇ ಶತಮಾನದಲ್ಲಿಯೂ ಈ ಉಪಜಾತಿಗಳಿದ್ದವೆಂಬುದಕ್ಕೆ ದಲಿತ ಶರಣರೇ ಸಾಕ್ಷಿಯಾಗಿದ್ದಾರೆ. ಹೊಲೆಯರ ಶಿವನಾಗಮಯ್ಯ, ಮಾದಾರ ಚೆನ್ನಯ್ಯ, ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ ಈ ಮುಂತಾದ ದಲಿತ ವರ್ಗದ ಶರಣರು ತಮ್ಮ ವೃತ್ತಿ ಪ್ರತಿಮೆಗಳ ಮೂಲಕವೇ ಸಂವಹನ ಕ್ರಿಯೆಯಲ್ಲಿ ತೊಡಗಿದ್ದನ್ನು ಅವರ ವಚನಗಳಿಂದಲೇ ಕಂಡುಕೊಳ್ಳಬಹುದಾಗಿದೆ.

ಒಂದೇ ನೆಲದಲ್ಲಿ ಹೊಲಗೇರಿಯೂ ಇದೆ, ಶಿವಾಲಯವೂ ಇದೆ. ಒಂದೇ ಜಲವನ್ನು ಸ್ನಾನಕ್ಕೂ ಬಳಸುತ್ತಾರೆ, ಪೂಜೆಗೂ ಬಳಸುತ್ತಾರೆ. ಹೀಗಿರುವಾಗ ಒಂದೇ ರೀತಿಯಾಗಿರುವ ಮನುಷ್ಯರಲ್ಲಿ ಏಕೆ ಭೇದ? ತನ್ನ ತಾನರಿತಾಗ ಕುಲವೊಂದೇಯಾಗುತ್ತದೆಂದು ಇಲ್ಲಿ ಹೇಳಿದ್ದಾನೆ. ಬಸವಣ್ಣನ ಅನೇಕ ವಚನಗಳಲ್ಲಿ ಜಾತಿಯನ್ನು ಅಲ್ಲಗಳೆಯುವ, ಕುಲಮದವನ್ನು ವಿರೋಧಿಸುವ, ಮಡಿವಂತಿಕೆಯನ್ನು ತಿರಸ್ಕರಿಸುವ ವಿಚಾರಗಳು ಸ್ಪಷ್ಟವಾಗಿವೆ.

ಹನ್ನೆರಡನೇ ಶತಮಾನದ ಶರಣ ಚಳವಳಿ ಈ ಜಾತಿ-ಉಪಜಾತಿಗಳನ್ನು ಅಳಿಸಿ ಹಾಕಿ ಮಾನವ ಜಾತಿಯೊಂದೇ ಎಂದು ಸಾರಿತು. ಆದರೆ ಶರಣರ ನಂತರ ಮತ್ತೆ ಯಥಾಸ್ಥಿತಿ ಮುಂದುವರಿಯಿತು. ಸಮಾಜ ವ್ಯವಸ್ಥೆಯಲ್ಲಿ ಚಲನಶೀಲತೆಯನ್ನು ತಂದ ಶಿವಶರಣರು ಮಠವ್ಯವಸ್ಥೆಯನ್ನು ತಿರಸ್ಕರಿಸಿದ್ದರು. ಅವರು ಹೋದ ನಂತರ ಮತ್ತೆ ಮಠ ವ್ಯವಸ್ಥೆ ಗಟ್ಟಿಯಾಗಿ ಬೇರೂರಿತು. ಇಂದು ಒಂದೊಂದು ಜಾತಿ-ಉಪಜಾತಿಗಳಿಗೂ ಒಬ್ಬೊಬ್ಬ ಜಗದ್ಗುರುಗಳಿದ್ದಾರೆ. ಆಯಾ ಜಾತಿ-ಉಪ ಜಾತಿಗಳಲ್ಲಿರುವ ಸಾಮಾನ್ಯ ಜನರು ಭಕ್ತಿಯ ಹೆಸರಿನಲ್ಲಿ ತಮ್ಮ ತಮ್ಮ ಮಠ-ಮಾನ್ಯಗಳನ್ನು ಬೆಳೆಸುತ್ತಿದ್ದಾರೆ. ಹೀಗಾಗಿ ಇಂದು ಜಾತಿ ಸಂಘಟನೆಗಳು-ಜಾತಿ ಸಮ್ಮೇಳನಗಳು ಎದ್ದುಕಾಣುತ್ತಲಿವೆ.

ಶರಣರ ಜಾತಿವಿನಾಶದ ಪರಿಕಲ್ಪನೆಯನ್ನೇ ಕೈಬಿಟ್ಟ ಮಠ ವ್ಯವಸ್ಥೆ ಇಂದು ಶರಣರ ಹೆಸರಿನಲ್ಲಿ ತನ್ನ ಆಸ್ತಿ-ಅಂತಸ್ತುಗಳನ್ನು ಹೆಚ್ಚಿಸಿಕೊಳ್ಳತೊಡಗಿದೆ. ಹೀಗಾಗಿ ದಲಿತರು-ಶೂದ್ರರು ಮುಖ್ಯವಾಹಿನಿಯಲ್ಲಿ ಬರಲಾರದೆ ದೂರವೇ ಉಳಿದಿದ್ದಾರೆ. ಶರಣರ ನಾಡಿನಲ್ಲಿ; ಶರಣರ ಹೆಸರಿನಲ್ಲಿ ನಡೆದಿರುವ ದುರಂತವಿದು.

ಹನ್ನೆರಡನೇ ಶತಮಾನದಲ್ಲಿ ಗೋತ್ರ ಪುರುಷರಾಗಿ ಕಂಡ ದಲಿತರು, ಇಂದೇಕೆ ಲಿಂಗಾಯತ ಸಮುದಾಯದಿಂದ ದೂರವಾಗಿದ್ದಾರೆ? ಮಾತು-ಮಾತಿಗೆ ಬಸವಣ್ಣನ ವಚನಗಳನ್ನು ಉಲ್ಲೇಖಿಸುವ ಇಂದಿನ ಲಿಂಗಾಯತರು ಎಷ್ಟು ಅಂತರ್ಜಾತಿ ವಿವಾಹ ನಡೆಸಲು ಕಾರಣರಾಗಿದ್ದಾರೆ? ಈ ಎರಡೂ ಪ್ರಶ್ನೆಗಳನ್ನು ಇಂದಿನ ದಲಿತರು ಹಾಗೂ ಲಿಂಗಾಯತರು ಕೂಡಿಯೇ ಕೇಳಿಕೊಂಡಾಗ ಹೊಸ ಚರ್ಚೆ ಪ್ರಾರಂಭವಾಗಲು ಸಾಧ್ಯವಾಗುತ್ತದೆ. ಇಂತಹ ಮುಕ್ತ ಚರ್ಚೆಗಳ ಮೂಲಕವೇ ಶರಣರ ಸಿದ್ಧಾಂತಗಳನ್ನು ಮತ್ತೆ ಜಾರಿಗೆ ತರಲು ಸಾಧ್ಯವಾಗುತ್ತದೆ. ಮಠ ವ್ಯವಸ್ಥೆಯನ್ನು ನಿರಾಕರಿಸುವುದರ ಮೂಲಕ, ಜಗದ್ಗುರುಗಳ ಮೆರವಣಿಗೆಯನ್ನು ನಿಲ್ಲಿಸುವುದರ ಮೂಲಕ, ಅಂತರ್ಜಾತಿ ವಿವಾಹಗಳನ್ನು ಜಾರಿಗೆ ತರುವುದರ ಮೂಲಕ ಶರಣರ ವಿಚಾರಧಾರೆಯನ್ನು ಮತ್ತೆ ಈ ನೆಲದಲ್ಲಿ ಹುಟ್ಟುಹಾಕಲು ಸಾಧ್ಯವಿದೆ.

'ನಮ್ಮ ಶರಣರು ಶ್ರೇಷ್ಠರಾಗಿದ್ದರು, ನಮ್ಮ ಪರಂಪರೆ ದೊಡ್ಡದು' ಎಂದು ವೈಭವೀಕರಿಸಿಕೊಳ್ಳುತ್ತ ಶರಣರ ವಿಚಾರಗಳನ್ನು ಆಚರಣೆಗೆ ತರದಿದ್ದರೆ ಶರಣರ ಹೆಸರು ಹೇಳುವ ನೈತಿಕ ಹಕ್ಕು ಕೂಡಾ ನಮ್ಮದಾಗುವುದಿಲ್ಲ. ಆದುದರಿಂದ ಇಂದು ಚರಿತ್ರೆಯ ವೈಭವೀಕರಣವನ್ನು ಕೈಬಿಟ್ಟು ಹೊಸ ಚರಿತ್ರೆಯ ಪುನರ್‌ಸೃಷ್ಟಿಗೆ ದಲಿತರು ಮತ್ತು ದಲಿತೇತರರು ಎಲ್ಲರೂ ಕೂಡಿಯೇ ಮುಂದೆ ಬರಬೇಕಾಗಿದೆ. ಇತಿಹಾಸದ ಬೆಳಕಿನಲ್ಲಿ ವಾಸ್ತವದ ಸತ್ಯಗಳನ್ನು ಕಂಡುಕೊಳ್ಳಬೇಕಾಗಿದೆ. ಹೀಗಾದಾಗ ಮಾತ್ರ ಭವಿಷ್ಯತ್ತಿನ ಬಗೆಗೆ ಚಿಂತನೆ ಸಾಧ್ಯವಾಗುತ್ತದೆ. ಇತಿಹಾಸದ ವೈಭವೀಕರಣದಿಂದ ವರ್ತಮಾನ ಬೆಳೆಯಲಾರದೆಂಬ ಸತ್ಯವನ್ನು ಕಂಡುಕೊಂಡಾಗ ಮಾತ್ರ ಹೊಸ ಆಲೋಚನೆ ಪ್ರಾರಂಭವಾಗುತ್ತದೆ. ಇಂತಹ ಹೊಸ ಚಿಂತನೆಯ ಸಾಧ್ಯತೆಗಳಿಗೆ ಶರಣ ಸಂಸ್ಕೃತಿಯೇ ತಾಯಿ ಬೇರಾಗಿದೆ. ●

ಝೆನ್ ಝಲಕ್

ಝೆನ್

ಅವಲೋಕನ
ಕಥೆ ಪ್ರಸಂಗ
ಸಂವಾದ
ಒಗಟು
ಮುಂಡಿಗೆಗಳು

ಕೆ.ವಿ. ಸುಬ್ಬಣ್ಣ



ಅಯ್ಯೋ-ಹೀಗೆ



ಸೆಕ್ಕ್ಯೋ, ತನ್ನ ಹತ್ತಿರವಿದ್ದ ಸಾಧಕನಾದ ಒಬ್ಬ ಭಿಕ್ಷುವನ್ನು ಕುರಿತು, 'ಶೂನ್ಯವನ್ನು ಗ್ರಹಿಸಿ ಹಿಡಿಯಬಲ್ಲೆಯಾ?' ಎಂದು ಕೇಳಿದ.

'ಪ್ರಯತ್ನಿಸುತ್ತೇನೆ' ಎಂದ, ಆ ಭಿಕ್ಷು. ಅನಂತರ, ತನ್ನ ಕೈಯನ್ನು ಬಟ್ಟಲು ಮಾಡಿ ಗಾಳಿಗೊಡ್ಡಿ ಎತ್ತಿ ತೋರಿಸಿದ.

'ಊಹುಂ, ಕೈಯಲ್ಲಿ ಏನೂ ಬಂದೆ ಇಲ್ಲವಲ್ಲ' ಎಂದ, ಸೆಕ್ಕ್ಯೋ.

'ಸರಿ, ಗುರುವೇ, ನೀವೇ ತೋರಿಸಿ' ಎಂದ ಭಿಕ್ಷು.

ಸೆಕ್ಕ್ಯೋ, ತಟ್ಟನೆ ಭಿಕ್ಷುವಿನ ಮೂಗು ಹಿಡಿದು, ಕೆನ್ನೆಗೆ ಬಲವಾಗಿ ಏಟು ಕೊಟ್ಟ. ಭಿಕ್ಷು ನೋವಿನಿಂದ ಅಯ್ಯೋ ಎಂದು ಅರಚಿಕೊಂಡ.

ಸೆಕ್ಕ್ಯೋ, ಗಹಗಹಿಸಿ ಹೇಳಿದ-'ಶೂನ್ಯವನ್ನು ಹಿಡಿಯುವುದು ಹೀಗೆ?'

ದಾಟಿದ ನೀವು

ಗುರು ತೊಸೊತ್ಸು ಮೂರು ಮಹಾದ್ವಾರಗಳನ್ನು ನಿರ್ಮಾಣ ಮಾಡಿದ. ಭಿಕ್ಷುಗಳೆಲ್ಲ ಆ ಮೂರು ಮಹಾದ್ವಾರಗಳನ್ನು ದಾಟಿ ಹೋಗಬೇಕಿತ್ತು.

ಝೆನ್ ಅಭ್ಯಾಸ ಮೊದಲನೆಯ ಮಹಾದ್ವಾರ. ಝೆನ್ ಅಭ್ಯಾಸ ಮಾಡುವುದರಿಂದ ನಿಮಗೆ ನಿಮ್ಮ ಸತ್ಯಸ್ವರೂಪ ಯಾವುದೆಂಬುದರ ದರ್ಶನವಾಗುತ್ತದೆ. ಹೌದು, ಆದರೆ, ಆ ಸತ್ಯಸ್ವರೂಪ ಇರುವುದೆಲ್ಲಿ?

ಎರಡನೆಯ ಮಹಾದ್ವಾರ ದಾಟುವಾಗ, ಹುಟ್ಟುಸಾವು ಗಳೆಂಬ ಎರಡು ಅವಸ್ಥೆಗಳಿಂದ ಮುಕ್ತಿ ದೊರಕುತ್ತದೆ. ನಿಜ, ಆದರೆ, ನೀವು ಕೇವಲ ಕಲೇವರವಾದಾಗ ನಿಮ್ಮನ್ನು ಮುಕ್ತಗೊಳಿಸಿಕೊಳ್ಳುತ್ತೀರಿ ಎನ್ನುವುದಾದರೂ ಹೇಗೆ?

ಮೂರನೆಯ ಮಹಾದ್ವಾರ ಹಾದುಹೋದರೆ, ನಿಮ್ಮ ಶರೀರ ಖಿಲವಾಗಿ ಚತುರ್ಭೂತಗಳ ಮೂಲದ್ರವ್ಯ ಉಳಿದುಹೋಗುತ್ತದೆ. ಸಂದೇಹವಿಲ್ಲ. ಆದರೆ, ನೀವು ಎಲ್ಲಿ?

ತರ್ಕಿಸದ ಏಟು



ಗುರು ಒಬಕು, ದೇವಾಲಯದಲ್ಲಿದ್ದ ಬುದ್ಧಪ್ರತಿಮೆಗೆ ಪೂಜೆ ಸಲ್ಲಿಸಿ ನಮಸ್ಕರಿಸುತ್ತಿದ್ದಾಗ ಆತನ ಶಿಷ್ಯನೊಬ್ಬ ಅಲ್ಲಿ ಬಂದ. 'ಗುರುವೇ, ಬುದ್ಧನಿಂದಾಗಲಿ, ಸಂಘದಿಂದಾಗಲಿ, ಧರ್ಮದಿಂದಾಗಲಿ ಝೆನ್ ಪ್ರಾಪ್ತವಾಗಲಾರದು, ಅಲ್ಲವೇ? ಮತ್ತೇಕೆ ಈ ಪೂಜೆ ಪುನಸ್ಕಾರಗಳು?' ಎಂದು ಪ್ರಶ್ನೆ ಮಾಡಿದ.

'ಝೆನ್ ಪ್ರಾಪ್ತಿಯಾಗಲಿ ಅಂತ ಮಾಡುತ್ತಿಲ್ಲ, ಪೂಜೆ ಮಾಡಬೇಕೆಂತಲೇ ಮಾಡುತ್ತೇನೆ' ಎಂದ ಗುರು.

'ಹಾಗಿದ್ದರೆ ಇವೆಲ್ಲವೂ ಬರೀ ಪೂಜೆಪಾವಿತ್ರ್ಯಗಳ ಬೂಟಾಟಿಕೆಯಲ್ಲವೆ?' ಎಂದು ಪ್ರಶ್ನೆ ಮಾಡಿದ, ಶಿಷ್ಯ.

ಒಬಕು, ತಟ್ಟನೆ ಶಿಷ್ಯನ ಕೆನ್ನೆಗೆ ಬಲವಾಗಿ ಏಟು ಬಾರಿಸಿದ. ಶಿಷ್ಯ, ನೋವು ತಡೆಯಲಿಕ್ಕಾಗದೇ, 'ಎಂಥ ರೂಕ್ಷತೆ ಇದು' ಎಂದು ಗೊಣಗಿದ.

ಒಬಕು ಗುಡುಗಿದ-

'ಬಾಯಿ ಮುಚ್ಚು. ಈ ದೇವಾಲಯಲ್ಲಿ ನಿಂತು, ನಿನಗೋಸ್ಕರವಾಗಿ ರೂಕ್ಷತೆ ಯಾವುದು ಮಾರ್ದವ ಯಾವುದು ಅಂತ ತರ್ಕಿಸುತ್ತ ಕಾಲಕಳೆಯಲಿಕ್ಕೆ ನನಗೆ ವ್ಯವಧಾನವಿಲ್ಲ' ಹಾಗೆಂದವನೇ ಶಿಷ್ಯನ ಕೆನ್ನೆಗೆ ಬಲವಾಗಿ ಇನ್ನೊಂದು ಏಟು ಬಿಗಿದು, 'ಕಂಡೆಯಾ' ಎಂದ.

ಗಂಟೆ

ಟೊಯೊ, ಇನ್ನೂ ಚಿಕ್ಕವನು. ಹನ್ನೆರಡು ವರ್ಷ, ಅಷ್ಟೇ. ಆಗಲೇ ಆತ, ಅಭ್ಯಾಸಕ್ಕಾಗಿ ಕೆನ್ನಿನ್ ದೇವಾಲಯಕ್ಕೆ ಬಂದು ಸೇರಿಕೊಂಡಿದ್ದ. ಅಲ್ಲಿ ಇವನನ್ನು ಬಿಟ್ಟರೆ ಉಳಿದವರೆಲ್ಲ ಹೆಚ್ಚಾಗಿ ಪ್ರೌಢ ವಿದ್ಯಾರ್ಥಿಗಳು. ಅವರಿಗೆಲ್ಲ ಚಿಂತನಕ್ಕಾಗಿ ಒಂದೊಂದು ಮುಂಡಿಗೆ (ಒಗಟು)ಯನ್ನು ಕೊಡುತ್ತಿದ್ದರು. ತನಗೂ ಹಾಗೆ ಚಿಂತನಕ್ಕಾಗಿ ಒಂದು ಮುಂಡಿಗೆ ಕೊಡಲಿ ಎಂಬುದು ಈತನ ಆಸೆ. ಅದಕ್ಕಾಗಿ ಆತ, ಒಂದು ದಿನ ಸಾಯಂಕಾಲದ ಹೊತ್ತಿನಲ್ಲಿ, ಗುರು ಮೊಕೊರಯ್‌ನ ಕೋಣೆಯ ಬಳಿಗೆ ಹೋದ. ತಾನು ಬಂದಿದ್ದೇನೆನ್ನುವುದನ್ನು ತಿಳಿಸಲಿಕ್ಕಾಗಿ ಮೃದುವಾಗಿ ಗಂಟೆ ಬಾರಿಸಿದ. ಗುರುವಿಗೆ ನಮಸ್ಕಾರ ಮಾಡಿ, ಆತನ ಎದುರು ಗೌರವದಿಂದ ಮೌನವಾಗಿ ಕೂತುಕೊಂಡ.

ಸ್ವಲ್ಪ ಹೊತ್ತು ಕಳೆದಮೇಲೆ, ಗುರುವೇ ಈತನ ಕಡೆಗೆ ತಿರುಗಿ ಪ್ರಶ್ನೆ ಮಾಡಿದ. 'ಟೊಯೊ, ಎರಡೂ ಕೈಗಳನ್ನು ಬಡಿದರೆ ಉಂಟಾಗುವ ಚಪ್ಪಾಳೆಯ ಸದ್ದನ್ನು ತೋರಿಸು' ಎಂದ.

ಟೊಯೊ, ಎರಡು ಕೈಗಳಿಂದ ಚಪ್ಪಾಳೆ ತಟ್ಟಿ ತೋರಿಸಿದ.

'ಸರಿ, ಎಲ್ಲಿ, ಈಗ ಒಂದೇ ಕೈಯಿಂದ ಚಪ್ಪಾಳೆ ತಟ್ಟುವ ಸದ್ದು ತೋರಿಸು' ಎಂದ, ಗುರು.

ಟೊಯೊ, ಮೌನವಾದ. ಕಡೆಯಲ್ಲಿ ಗುರುವಿಗೆ ಬಾಗಿ ನಮಸ್ಕರಿಸಿ ಹೊರಟ. ಈ ಸಮಸ್ಯೆಯ ಬಗ್ಗೆ ಚಿಂತಿಸಲಿಕ್ಕಾಗಿ.

ಮಾರನೆಯ ಸಂಜೆ ಆತ ಮರಳಿ ಗುರುವಿನ ಬಳಿಗೆ ಬಂದ. ಒಂದೇ ಕೈಯಲ್ಲಿ ಮೃದುವಾಗಿ ಗಂಟೆ ಬಾರಿಸಿದ, ಗುರುವಿನ ಕಡೆ ನೋಡಿದ. 'ಸರಿಯಲ್ಲ' ಎಂದ, ಗುರು. ಅದರ ಮಾರನೆಯ ಸಂಜೆ. ಟೊಯೊ ಮತ್ತೆ ಅಲ್ಲಿಗೆ ಬಂದ. ಒಂದೇ ಕೈಯಲ್ಲಿ ಗೆಶಾ ಸಂಗೀತ ನುಡಿಸಿ ತೋರಿಸಿದ. 'ಸರಿಯಲ್ಲ' ಎಂದ ಗುರು, ಮತ್ತೆ. ಅದಕ್ಕೆ ಮುಂದಿನ ಸಂಜೆಯೂ ಟೊಯೊ ಹಾಜರಾದ. ನೀರು ತೊಟ್ಟಿಕ್ಕುವ ಸದ್ದು ಹೊರಡಿಸಿ ತೋರಿಸಿದ. 'ಊಹುಂ, ಸರಿಯಲ್ಲ' ಎಂದ ಗುರು. ಆ ಮುಂದಿನ ಸಂಜೆಯೂ ಟೊಯೊ ಬಂದ. ಮಿಡತೆ ಕಾಲುಗೀರಿ ಸಪ್ಪಳ ಹೊರಡಿಸುತ್ತದಲ್ಲ, ಅದನ್ನು ಅನುಕರಿಸಿ ತೋರಿಸಿದ. 'ಇದೂ ಸರಿಯಲ್ಲ' ಎಂದುಬಿಟ್ಟ ಗುರು.

ಹೀಗೇ, ಮುಂದೆ ಹತ್ತು ದಿನಗಳ ಕಾಲ ಪ್ರತಿ ಸಂಜೆಯೂ ಬಂದು ಹೊಸಹೊಸ ಸದ್ದುಗಳನ್ನು ತೋರಿಸಿದ. ಕಡೆಗೆ, ಗುರುವಿನ ಹತ್ತಿರ ಬರುವುದನ್ನೇ ಬಿಟ್ಟುಬಿಟ್ಟ. ಒಂದು ವರ್ಷ ಕಾಲ ಆತ, ತಾನು ಕೇಳಿದ ಎಲ್ಲ ಸದ್ದುಗಳನ್ನೂ ಒಂದೊಂದಾಗಿಯೇ ನೆನೆದುಕೊಂಡ; ಒಂದೊಂದಾಗಿ ಪರಿಶೀಲಿಸುತ್ತ ಅದು ಸರಿಯಲ್ಲವೆನ್ನುತ್ತ ಎಲ್ಲವನ್ನೂ ನಿರಾಕರಿಸಿದ. ಹಾಗೇ, ಕಡೆಗೊಂದು ದಿನ ಆತನಿಗೆ ಜ್ಞಾನೋದಯವಾಯ್ತು.

ಆನಂತರ ಆತ, ಪುನಃ ಸಾಯಂಕಾಲದ ಹೊತ್ತಿನಲ್ಲಿ ಗುರುವಿನ ಬಳಿಗೆ ಬಂದ. ಗಂಟೆ ಬಾರಿಸದೆ ನೇರ ಗುರುವಿನ ಎದುರು ಹೋಗಿ ನಮಸ್ಕರಿಸಿ ಕೂತ. 'ನಾನು ನಿಃಶಬ್ದವಾದ ಶಬ್ದವನ್ನು ಕೇಳಿದೆ, ಗುರುವೆ' ಎಂದ.

ಧರ್ಮಗಳ ಮೂಲ ಹುಡುಕುತ್ತಾ...

ವಿವೇಕಾನಂದರ ವಿಚಾರಗಳು

ಅಸ್ತಿತ್ವದಲ್ಲಿರುವ ಎಲ್ಲಾ ಧರ್ಮಗಳ ಮೂಲ ಆಶಯವೂ, ಮಾನವ-ಮಾನವರ ನಡುವೆ ಸಮಾನತೆ-ಪ್ರೀತಿ ಸೋದರತೆಗಳಂತಹ ಮಾನವೀಯ ಮೌಲ್ಯಗಳನ್ನು ಭಿತ್ತಿ ಬೆಳೆಯುವುದೇ ಆಗಿದೆ. ಆದ್ದರಿಂದಲೇ ಬಸವಣ್ಣನವರು 'ದಯವೇ ಧರ್ಮದ ಮೂಲವಯ್ಯ' ಎಂದಿದ್ದು. ಆದರೆ ಇತ್ತೀಚೆಗೆ ಮತೀಯವಾದಿಗಳು ಸೃಷ್ಟಿಸುತ್ತಿರುವ ಗೊಂದಲ ಮತ್ತು ಹುಟ್ಟುಹಾಕುತ್ತಿರುವ ಅಮಾನವೀಯ ಕೃತ್ಯಗಳಿಗೆ ವಿವೇಕಾನಂದರು ಶತಮಾನಗಳ ಹಿಂದೆಯೇ ಪರಿಹಾರ ನೀಡಿದ್ದರು. ಅವರು ಎಲ್ಲ ಧರ್ಮಗಳ ಸಾರವನ್ನು ಇಲ್ಲಿ ವಿಶ್ಲೇಷಿಸಿದ್ದಾರೆ.

ಸಂಗ್ರಹ :
ಜ.ಹೊ.ನಾರಾಯಣಸ್ವಾಮಿ

ಸ್ವರ್ಗ-ನರಕ:

ಸ್ವರ್ಗವೆಂಬುದು ನಮ್ಮ ಕಾಮನೆಗಳಿಂದ ಉದಿಸಿದ ಒಂದು ಮೂಢನಂಬಿಕೆ, ಅಷ್ಟೆ. ಹಲವು ಬಗೆಯ ಸ್ವರ್ಗದ ಆದರ್ಶಗಳಲ್ಲೆಲ್ಲಾ ಮನೋದೌರ್ಬಲ್ಯವಿದೆ. ಅನೇಕ ವೇಳೆ ಅರೇಬಿಯಾ ದೇಶದ ಕವನಗಳಲ್ಲಿ, ಸ್ವರ್ಗವನ್ನು ನದಿಗಳು ತುಂಬಿ ಹರಿಯುತ್ತಿರುವ ಸುಂದರ ತೋಟವೆಂದು ಚಿತ್ರಿಸುವರು. ನೀರಿನ ಸಮೃದ್ಧಿಯಿರುವ ದೇಶದಲ್ಲಿ ನಾನು ಜೀವನದ ಬಹುಭಾಗವನ್ನು ಕಳೆದೆ. ಅಲ್ಲಿ ಪ್ರತಿವರುಷ ನೀರಿನಿಂದ ಹಲವು ಹಳ್ಳಿಗಳು ಕೊಚ್ಚಿಕೊಂಡು ಹೋಗುವುವು. ಸಾವಿರಾರು ಪ್ರಾಣಿಗಳ ಆಹುತಿಯಾಗುತ್ತಿರುವುದು. ಆದ ಕಾರಣ ನನ್ನ ಸ್ವರ್ಗದಲ್ಲಿ ನದಿಗಳಿಂದ ಕೂಡಿದ ಉದ್ಯಾನವನವಿರುವುದಿಲ್ಲ, ಬಹಳ ಕಡಿಮೆ ಮಳೆಬೀಳುವ ದೇಶವನ್ನು ನಾನು ಆಶಿಸುತ್ತೇನೆ. ನಮ್ಮ ಸುಖ ಕೂಡ ಯಾವಾಗಲೂ ಬದಲಾಯಿಸುತ್ತಿರುವುದು. ಯುವಕ ಸ್ವರ್ಗವನ್ನು ಕಲ್ಪಿಸಿಕೊಂಡರೆ, ಅದರಲ್ಲಿ ಸುಂದರ ಯುವತಿಯಾದ ಹೆಂಡತಿಯನ್ನು ಕಲ್ಪಿಸಿಕೊಳ್ಳುತ್ತಾನೆ. ಇದೇ ಮನುಷ್ಯ ವೃದ್ಧನಾದರೆ ಅವನಿಗೆ ಬೇಡ. ನಮ್ಮ ಅವಶ್ಯಕತೆಯೇ ನಮ್ಮ ಸ್ವರ್ಗಕ್ಕೆ ಕಾರಣ. ನಮ್ಮ ಅವಶ್ಯಕತೆ ಬದಲಾಯಿಸಿದಂತೆ ನಮ್ಮ ಸ್ವರ್ಗವೂ ಬದಲಾಯಿಸುವುದು. ಸ್ವರ್ಗ, ನರಕ, ಅವತಾರ ಇವೆಲ್ಲ ಭ್ರಾಂತಿ. ಬಾಹ್ಯ ಸ್ವರ್ಗ ಅಥವಾ ಸತ್ಯಯುಗವಿರುವುದು ಮನುಷ್ಯನ ಭ್ರಾಂತಿಯಲ್ಲಿ.

ಪೂಜಾರಿಗಳು ಮಾತ್ರ ಭರವಸೆ ಕೊಡುತ್ತಾರೆ. ಅವರು ಹೇಳಿದಂತೆ ನಡೆದರೆ, ಅವರ ನಿಂದೆಯನ್ನೆಲ್ಲಾ ಸಾವಧಾನವಾಗಿ ಕೇಳಿದರೆ, ನಮಗೆ ಅವರು ತೋರುವ ದಾರಿಯಲ್ಲಿ ನಡೆದರೆ, ನಾವು ಕಾಲವಾದ ಮೇಲೆ, ದೇವರನ್ನು ಪ್ರತ್ಯಕ್ಷ ಕಾಣುವಂತೆ ಮಾಡುವ ಒಂದು ಅಪ್ಪಣೆ ಚೀಟಿಯನ್ನು ಕೊಡುತ್ತಾರೆ! ಇಂತಹ ಸ್ವರ್ಗದ ಕಟ್ಟು ಕಥೆಗಳೆಲ್ಲ ಕೆಲಸಕ್ಕೆ ಬಾರದ ಪೂಜಾರಿಯ ಕಲ್ಪನೆಯಲ್ಲದೇ ಮತ್ತೇನು? ನಿರಾಕಾರ ಭಾವನೆ ಧ್ವಂಸಕಾರಿಯೇನೋ ನಿಜ. ಇದು ಪೂಜಾರಿ, ಚರ್ಚು, ಗುಡಿ ಇವರ ಕೈಯಿಂದ ವ್ಯಾಪಾರವೆಲ್ಲವನ್ನು ಕಸಿದುಕೊಳ್ಳುವುದು, ಭರತ ಖಂಡದಲ್ಲಿ ಈಗ ಕ್ಷಾಮಗಾಲ. ಆದರೆ ಅಲ್ಲಿ ಕೆಲವು ಗುಡಿಗಳಲ್ಲಿ ರಾಜನನ್ನು ಸೆರೆಯಿಂದ ಬಿಡಿಸಿಕೊಳ್ಳುವಷ್ಟು ಬೆಲೆ ಬಾಳುವ ಒಡವೆಗಳಿವೆ! ಜನರಿಗೆ ಈ ನಿರಾಕಾರ ಬೋಧನೆಯನ್ನು ಪೂಜಾರಿಗಳು ಬೋಧಿಸಿದರೆ, ಅವರ ಕಸುಬಿಗೆ ಆತಂಕ ಬರುವುದು. ಆದರೂ ಕೂಡ ನಾವು ಪೂಜಾರಿಗಳ ಸಂಪರ್ಕವಿಲ್ಲದೆ ನಿಃಸ್ವಾರ್ಥತೆಯಿಂದ ಈ ಭಾವನೆಗಳನ್ನು ಬೋಧಿಸಬೇಕು. ನೀನೂ ದೇವರು ನಾನೂ ದೇವರು. ಯಾರು ಯಾರ ಅಣತಿಯನ್ನು ಪಾಲಿಸಬೇಕು? ಯಾರು ಯಾರನ್ನು ಪೂಜಿಸಬೇಕು? ದೇವರ ಅತ್ಯುತ್ತಮ ದೇಗುಲ ನೀನು. ಬೇರಾವ ಗುಡಿಯನ್ನೋ, ವಿಗ್ರಹವನ್ನೋ, ಗ್ರಂಥವನ್ನೋ ಪೂಜಿಸುವ ಬದಲು ನಾನು ನಿನ್ನನ್ನು ಪೂಜಿಸುತ್ತೇನೆ. ಜೀವಂತವಾಗಿರುವ ದೇವರು ನಿಮ್ಮಲ್ಲಿರುವನು. ಆದರೂ ಕೆಲಸಕ್ಕೆ ಬಾರದ ಕಟ್ಟುಕಥೆಗಳನ್ನು ನಂಬಿ ಚರ್ಚು, ಗುಡಿ, ಮಸೀದಿ, ಇವನ್ನು ಕಟ್ಟುತ್ತಿರುವಿರಿ... ಮಾನವ ದೇಹ ಗುಡಿಗಳಲ್ಲಿ ತಾಜ್‌ಮಹಲ್ ಇದ್ದಂತೆ, ಆದರಲ್ಲಿ ನನಗೆ ಪೂಜಿಸಲು ಆಗದೆ ಇದ್ದರೆ ಉಳಿದ ಎಂತಹ ದೇವಸ್ಥಾನಗಳಿಂದಲೂ ಪ್ರಯೋಜನವಿಲ್ಲ.

ನರಕ ಲೋಕದ ಭಾವನೆ ಕೂಡ ನಾವು ಹುಟ್ಟು ದಂಗೆ ಕೋರರು ಎಂಬ ಅದ್ಭುತ ಸತ್ಯವನ್ನು ಸಾರುವುದು. ವೇದ ದಲ್ಲಿ ನರಕದ ಮಾತೇ ಇಲ್ಲ, ಅನಂತರ ಬಂದ ಪುರಾಣಗಳು ನರಕವಿಲ್ಲದೇ ಇದ್ದರೆ ಧರ್ಮವೇ ಪೂರ್ಣವಾಗುವುದಿಲ್ಲವೆಂದು ಹಲವು ನರಕ ಲೋಕಗಳನ್ನು ಸೃಷ್ಟಿಸಿದವು.

ಸಮಾಜ ಎಲ್ಲಿಂದ ಬೇಕಾದರೂ ತನ್ನ ಬೆಳವಣಿಗೆಗೆ ವಸ್ತುಗಳನ್ನು ಸಂಗ್ರಹಿಸಬಹುದು. ಆದರೆ ಅದು ತನ್ನ ರೀತಿಯಲ್ಲೇ ಬೆಳೆಯಬೇಕು. ಹೊಸ ಆಚಾರಕ್ಕೆ ಅಂಜುವುದೇ ಮೌಢ್ಯತೆಗೆ ಮೂಲ. ಇದೇ ನರಕಕ್ಕೆ ಹಾದಿ. ಇದರಿಂದಲೇ ಮತಭ್ರಾಂತಿ ಹುಟ್ಟುವುದು. ಸತ್ಯವೇ ಸ್ವರ್ಗ, ಮತ ಭ್ರಾಂತಿಯೆ ನರಕ.

ಇಸ್ಲಾಂ

ಪ್ರತಿಯೊಬ್ಬರೂ ತಮ್ಮ ದೇವದೂತನೊಬ್ಬನೇ ನಿಜವಾದ ದೇವದೂತನೆಂದರೆ ಅದು ಸರಿಯಲ್ಲ. ಅಂಥವರಿಗೆ ಧರ್ಮದ ತಿಳುವಳಿಕೆಯೇ ಇಲ್ಲ... ಈ ದೃಷ್ಟಿಯಲ್ಲಿ ಮಹಮ್ಮದೀಯರು ಇನ್ನೂ ಹಿಂದುಳಿದಿರುವರು. ಸ್ವಮತಾಭಿಲಾಷೆ ಹೆಚ್ಚು ಅವರಲ್ಲಿ. ಅವರ ಪಲ್ಲವಿಯೇ 'ದೇವನೊಬ್ಬನೇ, ಅವನು 'ಅಲ್ಲಾ', ಅವನ ದೂತನೇ ಮಹಮ್ಮದ' ಎಂಬುದು. ಇದರಾಚೆ ಇರುವುದು ಕೆಟ್ಟದ್ದು ಮಾತ್ರವಲ್ಲ, ತಕ್ಷಣ ಅದನ್ನು ನಾಶಮಾಡಬೇಕೆಂದು ಅವರು ಭಾವಿಸುವರು. ಸ್ತ್ರೀ ಪುರುಷರು ಯಾರಾದರಾಗಲಿ, ಯಾರು ತಮ್ಮಂತೆ ನಂಬುವುದಿಲ್ಲವೋ ಅವರನ್ನೆಲ್ಲಾ ಈ ಕ್ಷಣವೇ ಕೊಲ್ಲಬೇಕು. ಈ ಧರ್ಮಕ್ಕೆ ಸೇರದೆ ಇರುವುದನ್ನೆಲ್ಲಾ ಧ್ವಂಸ ಮಾಡಬೇಕು. ಈ ಧರ್ಮವನ್ನಲ್ಲದೇ ಬೇರೆ ಧರ್ಮವನ್ನು ಬೋಧಿಸುವ ಗ್ರಂಥಗಳನ್ನೆಲ್ಲಾ ದಹಿಸಬೇಕು. ಪೆಸಿಫಿಕ್ ಸಾಗರದಿಂದ ಅಟ್ಲಾಂಟಿಕ್ ಸಾಗರದವರೆಗೆ ಐದು ನೂರು ವರ್ಷಗಳ ಕಾಲ ರಕ್ತದ ಕಾಲುವೆ ಹರಿಸಿದರು. ಇದೇ ಇಸ್ಲಾಂ ಮತ. ಆದರೂ ಈ ಮಹಮ್ಮದೀಯರಲ್ಲಿಯೂ ಎಲ್ಲಿಯಾದರೂ ಒಬ್ಬ ತತ್ವಜ್ಞಾನಿ ಇದ್ದರೆ ಅವನು ನಿಜವಾಗಿ ಭೀಕರ ಕೃತ್ಯವನ್ನು ಖಂಡಿಸುತ್ತಿದ್ದನು.

ಮಹಮ್ಮದೀಯರು ಪ್ರತಿಯೊಂದು ಹೆಜ್ಜೆಯನ್ನು ಕತ್ತಿಯ ಬಲದ ಮೇಲೆ ಇಟ್ಟರು. ಒಂದು ಕೈಯಲ್ಲಿ ಖುರಾನ್, ಇನ್ನೊಂದು ಕೈಯಲ್ಲಿ ಕತ್ತಿ ಹಿಡಿದೇ ನಡೆದರು. 'ಖುರಾನನ್ನು ಸ್ವೀಕರಿಸಬೇಕು, ಇಲ್ಲವೇ ಮೃತ್ಯುವಶರಾಗಬೇಕು, ಬೇರೆ ಮಾರ್ಗವೇ ಇಲ್ಲ!' ಎಷ್ಟು ಬೇಗ ಅವರು ವ್ಯಾಪಿಸಿದರೆಂಬುದು ಚರಿತ್ರೆಯ ಮೂಲಕ ನಿಮಗೆ ಗೊತ್ತಾಗುವುದು, ಆರುನೂರು ವರ್ಷಗಳವರೆಗೆ ಯಾವುದೂ ಅವರನ್ನು ತಡೆಗಟ್ಟುವಂತೆ ಇರಲಿಲ್ಲ, ಅನಂತರ ಅವರು ನಿಲ್ಲಬೇಕಾದ ಸಮಯ ಬಂತು. ಇತರ ಧರ್ಮಗಳು ಕೂಡ ಇದೇ ಮಾರ್ಗವನ್ನು ಅನುಸರಿಸಿದರೆ ಹೀಗೆಯೇ ಆಗಬೇಕಾಗುತ್ತದೆ.

ಇಂಡಿಯಾ ದೇಶದ ಮಹಮ್ಮದೀಯ ಧರ್ಮ ಇತರ ದೇಶದ ಮಹಮ್ಮದೀಯ ಧರ್ಮದಂತೆ ಅಲ್ಲ, ಹೊರಗಿನಿಂದ ಬಂದ ಮಹಮ್ಮದೀಯರು ಇಲ್ಲಿರುವವರಿಗೆ ಇತರ ಧರ್ಮದೊಡನೆ ಹಾಗೆ ಸೌಹಾರ್ದದಿಂದ ಇರಬೇಡಿ ಎಂದಾಗಲೇ ಮಹಮ್ಮದೀಯರ ಗುಂಪು ಧರ್ಮದ ಅಮಲಿನಲ್ಲಿ ಹುಚ್ಚರಾಗಿ ಹೋರಾಡುವುದು.

ಇಸ್ಲಾಂ ಧರ್ಮ ತಮ್ಮ ಧರ್ಮಕ್ಕೆ ಸೇರದವರನ್ನೆಲ್ಲಾ ಕೊಲ್ಲುವುದಕ್ಕೆ ಒಪ್ಪುತ್ತದೆ. 'ನಾಸ್ತಿಕರು ಮಹಮ್ಮದೀಯರಾಗದೆ ಇದ್ದರೆ ಅವರನ್ನು ಕೊಲ್ಲಿ' ಎಂದು ಖುರಾನಿನಲ್ಲೆ ಸ್ಪಷ್ಟವಾಗಿ ಹೇಳಿದೆ. ಅವರನ್ನು ಕತ್ತಿಗೆ ಬಲಿಕೊಡಬೇಕು,' ಬೆಂಕಿಗೆ ಹಾಕಬೇಕು. ಮಹಮ್ಮದೀಯನಿಗೆ ಇದು ಸರಿಯಲ್ಲವೆಂದರೆ ಅವನು, 'ಅದು ನಿಮಗೆ ಹೇಗೆ ಗೊತ್ತು? ಅದು ಒಳ್ಳೆಯದಲ್ಲವೆಂದು ನಿಮಗೆ ಹೇಗೆ ಗೊತ್ತು? ತನ್ನ ಗ್ರಂಥ ಅದು ಪರಮ ಪವಿತ್ರವೆಂದು ಸಾರುತ್ತದೆ' ಎನ್ನುತ್ತಾನೆ. ನೀವು ಖುರಾನನ್ನು ಓದಿದರೆ, ಬಹಳ ಪ್ರಖ್ಯಾತವಾದ ಸತ್ಯವಾಣಿಗಳು ಮೂಢ

ಕ್ರೈಸ್ತರು ಮಹಮ್ಮದೀಯರನ್ನು ದ್ವೇಷಿಸುವಷ್ಟು ಮತ್ತಾರನ್ನೂ ದ್ವೇಷಿಸುವುದಿಲ್ಲ. ಅವರಷ್ಟು ಹೀನ ಯಾರೂ ಇಲ್ಲವೆಂದು ತಿಳಿಯುವರು. ಒಬ್ಬನು ಮಹಮ್ಮದೀಯನಾದ ತಕ್ಷಣ, ಇಡೀ ಇಸ್ಲಾಂ ಪ್ರಪಂಚ ಅವನನ್ನು ತಮ್ಮ ಸಹೋದರನಂತೆ ಯಾವ ವ್ಯತ್ಯಾಸವನ್ನೂ ಮಾಡದೆ ಸ್ವೀಕರಿಸುವುದು. ಮತ್ತ್ಯಾವ ಧರ್ಮವೂ ಹೀಗೆ ಮಾಡಲಾರದು. ಒಬ್ಬ ಅಮೆರಿಕಾ ಇಂಡಿಯನ್ನನು ಮಹಮ್ಮದೀಯನಾದರೆ ತುರ್ಕಿಯ ಸುಲ್ತಾನ ಅವನೊಂದಿಗೆ ಊಟ ಮಾಡುವುದಕ್ಕೆ ಯಾವ ಆಕ್ಷೇಪಣೆಯೂ ಇರುವುದಿಲ್ಲ. ಅವನಿಗೆ ಸಾಕಷ್ಟು ಬುದ್ಧಿ ಇದ್ದರೆ ಯಾವ ಅಧಿಕಾರವನ್ನು ಪಡೆಯುವುದಕ್ಕೂ ಆತಂಕವಿಲ್ಲ.

ಯೊಂದಿಗೆ ಬೆರೆತಿರುವುದು ಕಾಣುತ್ತದೆ. ಇವುಗಳನ್ನು ನೀವು ಹೇಗೆ ವಿವರಿಸುತ್ತೀರಿ? ನಿಸ್ಸಂಶಯವಾಗಿಯೂ ಆತನು(ಮಹಮ್ಮದನು) ಪಳಗಿದ ಯೋಗಿಯಾಗಿರಲಿಲ್ಲ. ಆದಕಾರಣವೆ ತಾನು ಮಾಡುತ್ತಿರುವುದಕ್ಕೆ ಕಾರಣ ಗೊತ್ತಿರಲಿಲ್ಲ. ಮಹಮ್ಮದನು ಪ್ರಪಂಚಕ್ಕೆ ಮಾಡಿದ ಒಳ್ಳೆಯದನ್ನು ಆಲೋಚಿಸಿ, ಮತ್ತು ಅವನ ಮತಾಂಧತೆಯಿಂದ ಆದ ಮಹಾನಷ್ಟವನ್ನೂ ಕುರಿತು ಆಲೋಚಿಸಿ! ಅವನ ಬೋಧನೆಯ ಪರಿಣಾಮವಾಗಿ ಲಕ್ಷಾಂತರ ಜನರು ಕೊಲ್ಲಲ್ಪಟ್ಟರು. ಸಾವಿರಾರು ತಾಯಂದಿರಿಗೆ ಮಕ್ಕಳ ವಿಯೋಗವಾಯಿತು. ಶಿಶುಗಳು ತಬ್ಬಲಿಗಳಾದರು, ದೇಶವೇ ಸರ್ವನಾಶವಾಯಿತು. ಲಕ್ಷಾಂತರ ಜನರು ಕೊಲೆ ಮಾಡಲ್ಪಟ್ಟರು. ಆದಕಾರಣವೆ ಮಹಮ್ಮದ್ ಮುಂತಾದ ಪ್ರಖ್ಯಾತ ಬೋಧಕರ ಜೀವನವನ್ನು ವಿಮರ್ಶಿಸಿದರೆ ನಿಮಗೆ ಈ ಅಪಾಯ ತೋರುತ್ತದೆ. ತಮ್ಮ ಭಾವವನ್ನು ಉದ್ರೇಕಗೊಳಿಸುವುದರ ಮೂಲಕ ಎಂದಾದರೂ ಈ 'ಸಂದೇಶಕರು ಅತೀಂದ್ರಿಯಾವಸ್ಥೆಗೆ ಸೇರಿ ಅಲ್ಲಿಂದ ಅವರು ಜಗತ್ತಿನ ಕಲ್ಯಾಣಕ್ಕಾಗಿ ಬರುವಾಗ ಸತ್ಯವನ್ನು ಮಾತ್ರ ತರಲಿಲ್ಲ. ಜೊತೆಗೆ ಹಾನಿಕರವಾದ ಸ್ವಲ್ಪ ಮೂಢನಂಬಿಕೆಗಳನ್ನು ಅವರು ತಂದರು.

ಅನ್ಯ ಧರ್ಮಕ್ಕೆ ಸೇರಿದ ಎಲ್ಲಾ ಬಗೆಯ ಆಚಾರ, ಆಕಾರ, ವಿಗ್ರಹ, ಪೂಜೆ, ಪಾಪಮಯವೆಂದು ಭಾವಿಸುವ ಮಹಮ್ಮದೀಯನು, ಕಾಬಾದಲ್ಲಿರುವ ತನ್ನ ಮಸೀದಿಗೆ ಬಂದಾಗ, ಅದನ್ನು ಪಾಪವೆಂದು ಪರಿಗಣಿಸುವುದಿಲ್ಲ.. ಅಲ್ಲಿಗೆ ಅವನು ಯಾತ್ರೆಗೆ ಹೋದಾಗ ಮಸೀದಿಯ ಗೋಡೆಯ ಮೇಲೆ ಇರುವ ಕಪ್ಪು ಕಲ್ಲನ್ನು ಚುಂಬಿಸಬೇಕು.

ಕ್ರೈಸ್ತರು ಮಹಮ್ಮದೀಯರನ್ನು ದ್ವೇಷಿಸುವಷ್ಟು ಮತ್ತಾರನ್ನೂ ದ್ವೇಷಿಸುವುದಿಲ್ಲ. ಅವರಷ್ಟು ಹೀನ ಯಾರೂ ಇಲ್ಲವೆಂದು ತಿಳಿಯುವರು. ಒಬ್ಬನು ಮಹಮ್ಮದೀಯನಾದ ತಕ್ಷಣ, ಇಡೀ ಇಸ್ಲಾಂ ಪ್ರಪಂಚ ಅವನನ್ನು ತಮ್ಮ ಸಹೋದರನಂತೆ ಯಾವ ವ್ಯತ್ಯಾಸವನ್ನೂ ಮಾಡದೆ ಸ್ವೀಕರಿಸುವುದು. ಮತ್ತಾವ ಧರ್ಮವೂ ಹೀಗೆ ಮಾಡಲಾರದು. ಒಬ್ಬ ಅಮೆರಿಕಾ ಇಂಡಿಯನ್ನನು ಮಹಮ್ಮದೀಯನಾದರೆ ತುರ್ಕಿಯ ಸುಲ್ತಾನ ಅವನೊಂದಿಗೆ ಊಟ ಮಾಡುವುದಕ್ಕೆ ಯಾವ ಆಕ್ಷೇಪಣೆಯೂ ಇರುವುದಿಲ್ಲ. ಅವನಿಗೆ ಸಾಕಷ್ಟು ಬುದ್ಧಿ ಇದ್ದರೆ ಯಾವ ಅಧಿಕಾರವನ್ನು ಪಡೆಯುವುದಕ್ಕೂ ಆತಂಕವಿಲ್ಲ. ಈ ದೇಶದಲ್ಲಿ (ಅಮೆರಿಕಾ) ಬಿಳಿ ಮತ್ತು ಕಪ್ಪು ಮನುಷ್ಯರಿಬ್ಬರೂ ಒಟ್ಟಿಗೆ ಪ್ರಾರ್ಥನೆಗಾಗಿ ಸೇರುವುದನ್ನು ನಾನು ಇನ್ನೂ ಯಾವ ಚರ್ಚಿನಲ್ಲಿಯೂ ನೋಡಿಲ್ಲ. ಇದನ್ನು ಆಲೋಚಿಸಿ ನೋಡಿ. ಇಸ್ಲಾಂ ತನ್ನ ಮತಾನುಯಾಯಿಗಳನ್ನೆಲ್ಲಾ ಸಮ ದೃಷ್ಟಿಯಿಂದ ನೋಡುವುದು. ಇದೇ ಮಹಮ್ಮದೀಯರ ವಿಶೇಷ ಒಳ್ಳೆಯ ಗುಣ. ಹಲವು ಕಡೆ ಖುರಾನಿನಲ್ಲಿ ಕೇವಲ ಇಂದ್ರಿಯ ಸುಖದ ಆದರ್ಶವನ್ನು ನೋಡುವಿರಿ. ಇದನ್ನು ಲೆಕ್ಕಿಸಬೇಕಾಗಿಲ್ಲ. ಮಹಮ್ಮದೀಯ ಧರ್ಮ ಬಂದುದು ತಮ್ಮ ಮತಾನುಯಾಯಿಗಳಲ್ಲಿ ಅನುಷ್ಠಾನ ಸಾಧ್ಯವಾದ ಒಂದು ಸೋದರ ಭಾವನೆಯನ್ನು ಸಾರುವುದಕ್ಕೆ, ಇದೇ ಮಹಮ್ಮದೀಯರ ಧರ್ಮದ ತಿರುಳು. ಸ್ವರ್ಗ ಮುಂತಾದವುಗಳಿಗೆ ಸಂಬಂಧಿಸಿದ ಭಾಗಗಳಾವುವೂ ಮಹಮ್ಮದೀಯ ಧರ್ಮವಲ್ಲ.

ಮಹಮ್ಮದೀಯರಲ್ಲಿ ಸಂಪೂರ್ಣ ಸಮತ್ವವಿರಬೇಕು, ಸಹೋದರ ಭಾವ ಇರಬೇಕು ಎಂಬುದನ್ನು ಮಹಮ್ಮದ ತನ್ನ ಜೀವನದಲ್ಲಿ ತೋರಿದ. ಅಲ್ಲಿ ಜನಾಂಗ, ಜಾತಿ, ಬಣ್ಣ ಲಿಂಗ ಇವುಗಳ ವ್ಯತ್ಯಾಸವೇ ಇಲ್ಲ. ಟರ್ಕಿಯ ಸುಲ್ತಾನ ಆಫ್ರಿಕಾ ಸಂತೆಯಲ್ಲಿ ಒಬ್ಬನನ್ನು ಗುಲಾಮನನ್ನಾಗಿ ಕೊಂಡುಕೊಂಡು ಅವನಿಗೆ ಸರಪಳಿಯನ್ನು ಬಿಗಿದು ಟರ್ಕಿಗೆ ತರಬಹುದು. ಆದರೆ ಅವನು ಮಹಮ್ಮದೀಯನಾದರೆ, ಅವನಲ್ಲಿ ಸಾಕಷ್ಟು ವಿದ್ಯಾ ಬುದ್ಧಿಗಳಿದ್ದರೆ, ಸುಲ್ತಾನನ ಮಗಳನ್ನೇ ಬೇಕಾದರೆ ಮದುವೆಯಾಗಬಹುದು.. ಮಹಮ್ಮದೀಯರಲ್ಲಿ ನೋಡಿ.. ಅವರು ಯಾವ ಜನಾಂಗಕ್ಕೇ ಸೇರಿರಲಿ; ಅವರಲ್ಲಿರುವ ಸಮತ್ವವನ್ನು ನೋಡಿ. ಮತ್ತಾವ ಜನಾಂಗದಲ್ಲಿಯೂ ಅದು ಕಾಣಿಸದು.

(ಈ ವಿಚಾರ ಲಹರಿಗಳನ್ನು ಮೈಸೂರಿನ ಶ್ರೀ ರಾಮಕೃಷ್ಣಾಶ್ರಮ ಪ್ರಕಟಿಸಿದ 'ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ'ಯ ಹತ್ತು ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ.)



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, ' ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೩೨೮ ೧೬೬೭

ಕವಲು ದಾರಿಯಲ್ಲಿ ಬಿಎಸ್‌ಪಿ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಮಾಯಾವತಿಜೀ ಯವರು ನಾಲ್ಕನೇ ಬಾರಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗುತ್ತಾರೆಯೇ? ಬುದ್ಧಿಜೀವಿ ದಲಿತರು ಇದರ ಬಗ್ಗೆ ಬಹುವಾಗಿ ಮುಜುಗರಕ್ಕೊಳಗಾಗಿದ್ದಾರೆ. ಎದ್ದು ಕಾಣುವಂತ ಅತ್ಯಧಿಕ ನಿರಾಶೆಯಿದ್ದು, ನಾಲ್ಕನೆ ಬಾರಿಗೆ ಮಾಯಾವತಿ ಯವರು ಮುಖ್ಯಮಂತ್ರಿ ಆದಲ್ಲಿ ದಲಿತ ರಾಜಕಾರಣವು ಬಹುವಾಗಿ ಸಂಕಷ್ಟಕ್ಕೀಡಾಗಲಿದೆ. ಅಂದರೆ ಅದು ತನ್ನನ್ನು ಮರುವ್ಯಾಖ್ಯಾನಿಸಿ ಕೊಳ್ಳುವಲ್ಲಿ ಸೋಲುತ್ತದೆ. ಅಲ್ಲದೆ ಸಮುದಾಯದ ವಿಸ್ತೃತ ಸಾಮಾಜಿಕ ಚೌಕಟ್ಟಿನಲ್ಲಿ ವಿವರಿಸಿಕೊಳ್ಳಲಾಗುವುದಿಲ್ಲ. ಮಾಯಾವತಿಯವರ ಬೀಳುವಿಕೆಯು ತನ್ನೊಳಗಿನ ಬಿಕ್ಕಟ್ಟಿನಿಂದಲೇ ಆದುದಾಗಿತ್ತು. ಅಂದರೆ ದಲಿತ ರಾಜಕಾರಣವು ತನ್ನ ಸಾಮಾಜಿಕ ನೆಲೆಯ ಬಗ್ಗೆ ಗೊಂದಲದಲ್ಲಿತ್ತು. ಹೀಗೆ ದಲಿತ ರಾಜಕಾರಣ 'ಪೂರ್ಣ ಅಧಿಕಾರ' ಅಥವಾ 'ಅಧಿಕಾರದಲ್ಲಿ ಪಾಲು' ಈ ಇಕ್ಕಟ್ಟಿನ ಬಗ್ಗೆ ವಿಶ್ಲೇಷಿಸಿಕೊಳ್ಳುವಲ್ಲಿ ವಿಫಲವಾಗುತ್ತದೆ.

ಉತ್ತರ ಪ್ರದೇಶದಲ್ಲಿ ನಾವು ಸಾರ್ವಭೌಮ ಅಧಿಕಾರ ಪಡೆಯುತ್ತೇವೆಯೇ ಹೊರತು, ಬೇರೆಯವರ ಅಧಿಕಾರದಲ್ಲಿ ಪಾಲುದಾರರಾಗಿ ಭಾಗವಹಿಸುವುದಿಲ್ಲ ಎಂಬುದು ಬಿಎಸ್‌ಪಿಯ ಸಾಮುದಾಯಿಕ ನಂಬಿಕೆ. ಆದರೆ ಬಿಜೆಪಿಯು 'ಉತ್ತರ ಪ್ರದೇಶ ತೆಗೆದುಕೊಳ್ಳಿ ಮತ್ತು ದೆಹಲಿಯನ್ನು ನಮಗೆ ಬಿಟ್ಟು ಕೊಡಿ' ಎಂಬ ಅಭಿಪ್ರಾಯದೊಂದಿಗೆ ರಾಜೀ ಮಾಡಿಕೊಳ್ಳುವಲ್ಲಿ ವಿಫಲವಾಗಿದೆ. ಇತಿಹಾಸದಿಂದ ಬಂದಂಥ ಬಿಜೆಪಿಯ ದುರಹಂಕಾರವು ನಾಶವಾಗುತ್ತಿಲ್ಲ. ಬಿಎಸ್‌ಪಿ ಮತ್ತು ಬಿಜೆಪಿಗಳೆರಡು ಒಂದಾಗುವ ಪ್ರಕ್ರಿಯೆಯನ್ನೇ ನಾಶಪಡಿಸಿಕೊಂಡಿದೆ. ಅಷ್ಟೇ ಅಲ್ಲ ಒಂದಾಗುವ ನಿಲುವುಗಳನ್ನೂ ಕಳೆದುಕೊಂಡಿದೆ. ಡಿ.ಶ್ಯಾಮಬಾಬು ಮತ್ತು ನಾನು ರಚಿಸಿದ ದಲಿತ ಅಜೆಂಡಾಕ್ಕೆ ಸಹಿ ಹಾಕಿರುವ ಚಾರಿತ್ರಿಕ ಭೂಪಾಲ್ ಸಮ್ಮೇಳನವು ಜನವರಿ ೧೨, ೨೦೦೨ರಂದು ಮುಕ್ತಾಯವಾಯಿತು. ಹಿಂದಿ ದೈನಿಕ 'ರಾಷ್ಟ್ರೀಯ ಸಹಾರ'ವು ತನ್ನ ವಿಶಿಷ್ಟವಾದ ವಾರಪತ್ರಿಕೆ 'ಹಸ್ತಕ್ಷೇಪ್'ವನ್ನು ದಲಿತ ಅಜೆಂಡಾಕ್ಕಾಗಿ ಮೀಸಲಿಟ್ಟಿತು.

ವಾರಪತ್ರಿಕೆಯ ಸಂಪಾದಕ ಅರುಣ್ ಪಾಂಡೆ, ಭೂಪಾಲ್ ದಾಖಲೆಯ ಬಗ್ಗೆ ವ್ಯಾಖ್ಯಾನಿಸಲು ಬುದ್ಧಿಜೀವಿಗಳನ್ನು ಆಹ್ವಾನಿಸಿದ್ದರು ಮತ್ತು ಲಿಖಿತ ಪ್ರಶ್ನಾವಳಿಯನ್ನು ನನಗೆ ಕಳುಹಿಸಿಕೊಟ್ಟಿದ್ದರು. ಇದರ ಬಗ್ಗೆ ಗೊಂದಲ ಇದ್ದರೆ ದಲಿತ ರಾಜಕೀಯದ ಬಗ್ಗೆ ನನ್ನ ತೀರ್ಮಾನವನ್ನು ಲಿಖಿತವಾಗಿ ನೀಡಲು ಕೇಳಿದ್ದರು. ನನ್ನ ಲಿಖಿತ ಸಂದರ್ಶನವನ್ನು ಜನವರಿ ೨೬, ೨೦೦೨ರ ಪತ್ರಿಕೆಯ ಮುಖಪುಟದಲ್ಲಿ 'ಸಂಪೂರ್ಣ ಅಧಿಕಾರವಲ್ಲ, ರಾಜಕೀಯ ಅಧಿಕಾರದಲ್ಲಿ ಪಾಲು' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಲಾಗಿತ್ತು. ನನ್ನ ಸಂದರ್ಶನವನ್ನು ಒಂದು ವಾರ ನನ್ನ ದಲಿತ ಓದುಗರಿಗೆ ದಲಿತರು ರಾಜ್ಯಾಧಿಕಾರದಲ್ಲಿ ಪಾಲು ಪಡೆಯುವುದನ್ನು ಒತ್ತಾಯಿಸುವ ಬದಲಿಗೆ 'ಸಂಪೂರ್ಣ ಅಧಿಕಾರ'ವನ್ನು ಏಕೆ ಕೇಳಬಾರದು ಎಂಬುದನ್ನು ವಿವರಿಸುವ ಸಂಕಷ್ಟದಲ್ಲಿದ್ದೆ. ನನ್ನ ನಿರ್ಧಾರದಲ್ಲಿ ದಲಿತರು ತಾವಾಗಿ ಸಂಸತ್ತಿನಲ್ಲಿ ಅಥವಾ ರಾಜ್ಯ ವಿಧಾನಸಭೆಗಳಲ್ಲಿ ಬಹುಮತ ಪಡೆಯುವುದು ಅಸಂಭವ. ದಲಿತರು 'ಸಂಪೂರ್ಣ ಅಧಿಕಾರ'ಕ್ಕೆ ಒತ್ತಾಯಿಸಿದಲ್ಲಿ, ರಾಜ್ಯಾಧಿಕಾರದಲ್ಲಿ ಅವರು 'ಸಂಪೂರ್ಣ ಅಧಿಕಾರ'ವನ್ನು ಪಡೆಯುವುದೂ ಇಲ್ಲ ಮತ್ತು 'ಪಾಲುದಾರರೂ' ಆಗುವುದಿಲ್ಲ ಎಂಬುದು ನನ್ನ ತರ್ಕವಾಗಿದೆ.

ಸೈದ್ಧಾಂತಿಕವಾಗಿ, ಎಸ್‌ಸಿ/ಎಸ್‌ಟಿಗಳು ಇಬ್ಬರೂ ದಲಿತರಾಗಿದ್ದು ವರ್ಣವ್ಯವಸ್ಥೆಯ ಹೊರಗಿರುವವರು. ಇಬ್ಬರೂ ಒಬ್ಬರೇ ಮೂಲ ಪುರುಷರನ್ನು ಹೊಂದಿರುತ್ತಾರೆ. ಇಬ್ಬರೂ ವರ್ಣವ್ಯವಸ್ಥೆಯ ಬಲಿಪಶುಗಳಾಗಿದ್ದಾರೆ. ಭಾರತದಲ್ಲಿ ಇಬ್ಬರ ಜನಸಂಖ್ಯೆಯಲ್ಲಿ ಶೇ. ೨೪.೫೬ ಇದ್ದಾರೆ. ಆದರೆ ವಾಸ್ತವದಲ್ಲಿ ದಲಿತ ರಾಜಕಾರಣವು ಶೇ. ೧೬.೪೮ ಅಸ್ಪೃಶ್ಯರ ಸುತ್ತ ತಿರುಗುತ್ತಿದೆ. ದಲಿತ ಚಳವಳಿಗಳು ಆದಿವಾಸಿಗಳನ್ನು ತಲುಪುತ್ತಿಲ್ಲ. ಶೇ. ೧೬.೪೮ರ ಬಲದಲ್ಲಿ ಅರ್ಧದಷ್ಟು ಜನರು ಭೂರಹಿತ ಕೃಷಿ ಕಾರ್ಮಿಕರಾಗಿದ್ದು ಬಹುಸಂಖ್ಯಾತರು ಅನಕ್ಷರಸ್ಥರಾಗಿದ್ದಾರೆ. ಇದು 'ನಾವೇ ಭಾರತವನ್ನು ಆಳುತ್ತೇವೆ' ಎಂಬ ಕನಸನ್ನು ವಿಕ್ರಯಿಸುವ ಮೂರ್ಖತನವಾಗುತ್ತದೆ.

'ಓಬಿಸಿಗಳು ಮತ್ತು ಅಲ್ಪಸಂಖ್ಯಾತ'ರೊಂದಿಗೆ ಸೇರಿ 'ನಾವು ಬಹುಮತ ಸಾಧಿಸುತ್ತೇವೆ' ಎಂಬ ಬಿಎಸ್‌ಪಿಯ ಸೈದ್ಧಾಂತಿಕತೆಯು ಬರೀ ಹುಚ್ಚುತನದ್ದಾಗಿದೆ. ಈ ಹುಚ್ಚುತನವನ್ನು ನಮ್ಮ ರಾಜಕೀಯ ಅಭಿಪ್ರಾಯ ನಿಯಂತ್ರಿಸಲು ಅಂಗೀಕರಿಸಿದರೆ, ಆಗ ನಾವು ನಮ್ಮ ಸ್ವಂತದವರಾದ ಮಾಯಾವತಿಯನ್ನು ಬದಲಾಯಿಸಿದ ಮುಲಾಯಂ ಸಿಂಗ್ ಯಾದವರ ಬಗ್ಗೆ ಸಂತೋಷಪಡಬೇಕು. ಬಹುಜನದ ಹುಚ್ಚುತನವೆಂದರೆ ಹೆಚ್ಚಿನ ಭಾರತೀಯ ರಾಜ್ಯಗಳು ಬಹುಜನ ಸಮಾಜದ ಸದಸ್ಯರಿಂದ ಆಳಲ್ಪಟ್ಟಿದೆ. ಚರಣ್‌ಸಿಂಗ್ ಮತ್ತು ದೇವೇಗೌಡ ಇಬ್ಬರೂ ಪ್ರಧಾನಮಂತ್ರಿಗಳಾಗಿದ್ದರು. ಎಲ್.ಕೆ. ಅಡ್ವಾಣಿಯವರು ಬಹುಜನರಿಗೆ ತುಂಬಾ ಹತ್ತಿರದವರಾಗುತ್ತಾರೆ. ಹೀಗೆ ಎಣಿಸಿದಲ್ಲಿ ನಮ್ಮ ಕೆಲಸವು ಮುಗಿದಂತೆ. ಈ ಸಂದಿಗ್ಧತೆಯು ನಾಲ್ಕು ಉತ್ತರ ಭಾರತ ರಾಜ್ಯಗಳಲ್ಲಿ ಮತದಾನಕ್ಕೆ ಹೋಗುವ ಮಾಯಾವತಿಯ ಕೆಲಸವನ್ನು ಕಷ್ಟಕ್ಕೀಡುಮಾಡಿದೆ.

ಬಿಎಸ್‌ಪಿಯ ಮೇಲೆ ಹೇಳಿದ ರಾಜಕೀಯ ಉದ್ದೇಶವು ಬಿಜೆಪಿಗೆ ಪಾಠ ಕಲಿಸುವುದಾಗಿದೆ ಮತ್ತು ಈ ಮೂಲಕ ಎಲ್ಲ ನಾಲ್ಕು ರಾಜ್ಯಗಳಲ್ಲಿ ಅದನ್ನು ಸೋಲಿಸುವುದಾಗಿದೆ. ಈ ಆಯ್ಕೆಯಿಂದ ಕಾಂಗ್ರೆಸ್‌ಗೆ ಜಯವು ಕಟ್ಟಿಟ್ಟ ಬುತ್ತಿ. ಮಧ್ಯಪ್ರದೇಶ ಮತ್ತು ಛತ್ತೀಸ್‌ಘರ್‌ದಲ್ಲಿ ಬಿಎಸ್‌ಪಿಯು ಗಣನೀಯ ಪ್ರಮಾಣದಲ್ಲಿದೆ. ಛತ್ತೀಸ್‌ಘರ್‌ನ ೯೦ ಸದಸ್ಯರ ವಿಧಾನಸಭೆಯಲ್ಲಿ ಒಂದು ಡಜನ್ ಸ್ಥಾನಗಳು ಬ್ಯಾಲೆನ್ಸ್‌ನ್ನು ಯಾವ ಕಡೆ ಬೇಕಾದರೂ ವಾಲಿಸಬಹುದು. ೧೯೯೮ರ ಚುನಾವಣೆಯಲ್ಲಿ ಬಿಎಸ್‌ಪಿಯು ಹನ್ನೊಂದು ಸ್ಥಾನಗಳಲ್ಲಿ ಹದಿನೈದು ಸಾವಿರಕ್ಕಿಂತಲೂ ಹೆಚ್ಚು ಮತಗಳನ್ನು ಪಡೆದಿದೆ. ಬಿಎಸ್‌ಪಿ ಮೂರು ಸ್ಥಾನಗಳನ್ನು ಪಡೆದರೆ, ಕಾಂಗ್ರೆಸ್ ಎರಡು ಸ್ಥಾನಗಳಲ್ಲಿ ಮಾತ್ರ ಜಯಗಳಿಸಿತ್ತು, ಬಿಜೆಪಿ ಏಳು ಸ್ಥಾನಗಳಲ್ಲಿ ಜಯಗಳಿಸಿತ್ತು. ಎಂದರೆ ಈ ಹನ್ನೊಂದು ಸ್ಥಾನಗಳಲ್ಲಿ ಬಿಜೆಪಿಯ ಯಶಸ್ವಿಯ ಪ್ರಮಾಣ ಶೇ. ೬೩.೬೩ರಷ್ಟಿದ್ದರೆ, ಇದಕ್ಕೆ ಪ್ರತಿಯಾಗಿ ಇಡೀ ಛತ್ತೀಸ್‌ಘರ್‌ನಲ್ಲಿ ಇದರ ಪ್ರಮಾಣವು ಶೇ. ೪೦ ಅಷ್ಟೇ.

ಬಿಎಸ್‌ಪಿಯು ಈ ಎಲ್ಲ ಹನ್ನೊಂದು ಸ್ಥಾನಗಳಿಗೆ ಸ್ಪರ್ಧಿಸಿದರೆ ೧೯೯೮ರಲ್ಲಿ ಸ್ಪರ್ಧಿಸಿದ್ದುದಕ್ಕಿಂತ ಹೆಚ್ಚಾಗುತ್ತದೆ. ಅದೇ ರೀತಿಯಲ್ಲಿ ಮಧ್ಯಪ್ರದೇಶದ ೩೬ ಸ್ಥಾನಗಳಲ್ಲಿ ಬಿಎಸ್‌ಪಿ ಹದಿನೈದು ಸಾವಿರ ಮತಗಳಿಗಿಂತ ಹೆಚ್ಚು ಪಡೆದಿತ್ತು. ಬಿಎಸ್‌ಪಿ ಎಂಟು, ಕಾಂಗ್ರೆಸ್ ಎಂಟು

ದಲಿತ್ ಡೈರಿ

ಉತ್ತರ ಪ್ರದೇಶದಲ್ಲಿ ನಾವು ಸಾರ್ವಭೌಮ ಅಧಿಕಾರ ಪಡೆಯುತ್ತೇವೆಯೇ ಹೊರತು, ಬೇರೆಯವರ ಅಧಿಕಾರದಲ್ಲಿ ಪಾಲುದಾರರಾಗಿ ಭಾಗವಹಿಸುವುದಿಲ್ಲ ಎಂಬುದು ಬಿಎಸ್‌ಪಿಯ ಸಾಮುದಾಯಿಕ ನಂಬಿಕೆ. ಆದರೆ ಬಿಜೆಪಿಯು 'ಉತ್ತರ ಪ್ರದೇಶ ತೆಗೆದುಕೊಳ್ಳಿ ಮತ್ತು ದೆಹಲಿಯನ್ನು ನಮಗೆ ಬಿಟ್ಟು ಕೊಡಿ' ಎಂಬ ಅಭಿಪ್ರಾಯದೊಂದಿಗೆ ರಾಜೀ ಮಾಡಿಕೊಳ್ಳುವಲ್ಲಿ ವಿಫಲವಾಗಿದೆ. ಇತಿಹಾಸದಿಂದ ಬಂದಂಥ ಬಿಜೆಪಿಯ ದುರಹಂಕಾರವು ನಾಶವಾಗುತ್ತಿಲ್ಲ. ಬಿಎಸ್‌ಪಿ ಮತ್ತು ಬಿಜೆಪಿಗಳೆರಡು ಒಂದಾಗುವ ಪ್ರಕ್ರಿಯೆಯನ್ನೇ ನಾಶಪಡಿಸಿಕೊಂಡಿದೆ.

ಅನು : ಕೆ.ವಿ.ರೈ

ಮತ್ತು ಬಿಜೆಪಿ ಹದಿನೆಂಟು ಸ್ಥಾನಗಳಲ್ಲಿ ಜಯ ಗಳಿಸಿತ್ತು. ಗೆಲುವಿನ ಪ್ರಮಾಣವು ಶೇ. ೧೮ ಆಗಿದ್ದರೆ, ಇದಕ್ಕೆ ಪ್ರತಿಯಾಗಿ ಇಡೀ ಮಧ್ಯಪ್ರದೇಶದಲ್ಲಿ ಗೆಲುವಿನ ಪ್ರಮಾಣ ಶೇ. ೩೬.೦೮. ಬಿಎಸ್‌ಪಿ ಈ ಎಲ್ಲ ಸ್ಥಾನಗಳಿಗೆ ಸ್ಪರ್ಧಿಸಿದರೆ, ೧೯೯೮ರಲ್ಲಿ ಸ್ಪರ್ಧಿಸಿದ್ದುದಕ್ಕಿಂತ ಹೆಚ್ಚಾಗುತ್ತದೆ. ರಾಜಾಸ್ತಾನದ ಆರು ಸ್ಥಾನಗಳಲ್ಲಿ ಬಿಎಸ್‌ಪಿ ಹದಿನೈದು ಸಾವಿರಕ್ಕಿಂತ ಹೆಚ್ಚು ಮತಗಳನ್ನು ಪಡೆದಿದೆ. ಬಿಎಸ್‌ಪಿ, ಕಾಂಗ್ರೆಸ್, ಬಿಜೆಪಿ ತಲಾ ಎರಡು ಸ್ಥಾನಗಳಲ್ಲಿ ಜಯ ಗಳಿಸಿತ್ತು. ಈ ಎಲ್ಲ ಸ್ಥಾನಗಳಲ್ಲಿ ಬಿಜೆಪಿಯ ಗೆಲುವಿನ ಪ್ರಮಾಣ ಶೇ. ೩೩.೩೩ ಆಗಿದ್ದು, ಇದಕ್ಕೆ ಪ್ರತಿಯಾಗಿ ಇಡೀ ರಾಜಾಸ್ತಾನದ ಗೆಲುವಿನ ಪ್ರಮಾಣ ಶೇ. ೧೬.೫೮ಆಗಿದೆ. ದೆಹಲಿಯಲ್ಲಿ ಬಿಎಸ್‌ಪಿಯ ಇರುವಿಕೆಯಿಂದ ಬಿಜೆಪಿಗೆ ಲಾಭವಾಗಲಿದೆ.

ಈ ವಿಧಾನಸಭಾ ಚುನಾವಣೆಗಳಲ್ಲಿ ಬಿಎಸ್‌ಪಿಯು 'ಬಿಜೆಪಿಗೆ ಪಾಠ ಕಲಿಸುತ್ತೇವೆ' ಎಂದು ಹೇಳಿದ ಉದ್ದೇಶದಿಂದ ತೀವ್ರ ವೈರುದ್ಧವುಂಟಾಗಲಿದೆ.

ಮಾತನಾಡಲು ಆಹ್ವಾನಿಸಲಾಗಿತ್ತು. ಬಡತನ ಮತ್ತು ಬಡತನದ ಸಾವಿಗೆ ರೈತರೇ ಹೊಣೆ ಎಂಬ ಅಂಶವನ್ನು ಎತ್ತಿದಾಗ, ಪ್ರಾಯಶಃ ಅನೇಕರು ಈ ವಾದಕ್ಕೆ ತಯಾರಾಗಿರಲಿಲ್ಲ. ನನ್ನ ಮಾತನ್ನು ಮುಕ್ತಾಯಗೊಳಿಸುವಷ್ಟರಲ್ಲಿ ಪಾಲ್ಗೊಂಡ ಅನೇಕರು ನಾನು ಪ್ರಾಸ್ತಾಪಿಸಿದ ಸಾಲುಗಳ ಬಗ್ಗೆ ಹೊಸ ಸಂವಾದವನ್ನು ನಡೆಸಬೇಕೆಂದು ಒತ್ತಾಯಿಸುತ್ತಾ ಬದಲಾದರು. ಇದನ್ನು ನಾನು ಊಟದ ಅವಧಿಯಲ್ಲಿ ಮನಗಂಡೆ. ರೈತರೆಂದರೆ, ಹೆಚ್ಚುವರಿ ಜಮೀನನ್ನು ಹೊಂದಿ ಉತ್ಪನ್ನವನ್ನು ಸರ್ಕಾರಿ ಉಗ್ರಾಣ ಕೇಂದ್ರಗಳಿಗೆ ತೆಗೆದುಕೊಂಡು ಹೋಗಲು ಟ್ರಕ್‌ಗಳನ್ನು ಸಾಕಷ್ಟು ತುಂಬಿಸುವ ರೈತರು ಎಂದರ್ಥ. ಈ ರೈತರು ಟ್ರ್ಯಾಕ್ಟರ್‌ಗಳನ್ನು, ಗನ್‌ಗಳನ್ನು, ಕಾರಿಲ್ಲದಿದ್ದರೆ ದ್ವಿಚಕ್ರ ವಾಹನಗಳನ್ನು ಹೊಂದಿರುತ್ತಾರೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ನಡೆಸುತ್ತಾರೆ. ಭಾರತದ ಅರ್ಧದಷ್ಟು ಬಜೆಟ್ ಪ್ರತೀ ವರ್ಷವು ಗ್ರಾಮೀಣ ಭಾರತಕ್ಕೆ ಮೀಸಲಾಗಿರುತ್ತದೆ. ಅದರಲ್ಲೂ ಕೃಷಿಗೆ ಇರುವಾಗ, ಸರ್ಕಾರವು ನಿರ್ದಿಷ್ಟಪಡಿಸಿದ ಕನಿಷ್ಟ ಮಜೂರಿಯನ್ನು ನೀಡುತ್ತಿಲ್ಲ. ಇದು ವಾರ್ಷಿಕವಾಗಿ ಐದುಸಾವಿರವನ್ನು ಮೀರುತ್ತಿಲ್ಲ. ರೈತರ ಲಾಬಿಯು ತನ್ನ ಕ್ರೌರ್ಯಯುತವಾದ ರಾಜಕೀಯ ಬಲದ ಮೂಲಕ ಆಹಾರಧಾನ್ಯಗಳು ಬಡವರಿಗೆ ತಲುಪದಂತೆ ಮಾಡುತ್ತದೆ. ಮೊದಲೇ ಹೇಳಿದಂತೆ, ಆಹಾರ ಧಾನ್ಯಗಳ ಬೆಲೆಗಳನ್ನು ನಿಯಂತ್ರಿಸಲು ಮಾರುಕಟ್ಟೆಗೆ ಅನುಮತಿ ನೀಡಿದರೆ, ಗೋಧಿಯು ಕಿಲೋವೊಂದಕ್ಕೆ ನಾಲ್ಕು ರೂಪಾಯಿಗಳಿಗೆ ದೊರೆಯುತ್ತದೆ. ಆದರೆ, ಎರಡು ದಶಕಗಳಿಂದಲೂ ಕೇಂದ್ರ ಸರ್ಕಾರವು ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಹೆಚ್ಚಾಗಿ ಆಹಾರಧಾನ್ಯಗಳನ್ನು ಖರೀದಿಸುವಂತೆ ರೈತಲಾಬಿಯು ಒತ್ತಾಯಿಸುತ್ತಿದೆ. ಸರ್ಕಾರದ ಗೋದಾಮುಗಳಲ್ಲಿ ಸಂಗ್ರಹವು ಮಿತಿಮೀರಿದ್ದರೂ, ಸರ್ಕಾರವು ರೈತರಿಂದಲೇ ಹೆಚ್ಚು ಖರೀದಿಸಬೇಕು. ಗೋಧಿ ಮತ್ತು ಅಕ್ಕಿಯ ಬೆಲೆಯು ಕಿಲೋಗೆ ೪ ರೂಪಾಯಿ ಇದ್ದರೂ ಸರ್ಕಾರವು ಕಿಲೋಗೆ ೭ರೂಪಾಯಿಯಂತೆ ಖರೀದಿಸುತ್ತದೆ ಮತ್ತು ಅದು ಬಡವರಿಗೆ ಕಿಲೋಗೆ ಐದು ರೂಪಾಯಿಯಂತೆ ದೊರೆಯುತ್ತದೆ. ಇಲ್ಲ ದಿದ್ದರೆ ಅದೇ ಕೊಳೆಯುತ್ತಿರುವ ಗೋಧಿ/ಅಕ್ಕಿ ಮುಕ್ತ ಮಾರುಕಟ್ಟೆಯಲ್ಲಿ ಮೂರು ರೂಪಾಯಿಗೆ ಲಭ್ಯವಾಗುತ್ತದೆ.

ಬಡತನ ಮತ್ತು ಹಸಿವೆಗೆ ರೈತರು ಕಾರಣವೇ ?

ಸರ್ಕಾರದ ಉಗ್ರಾಣಗಳಲ್ಲಿ ಮಿಲಿಯಗಟ್ಟಲೆ ಟನ್ ಆಹಾರ ಧಾನ್ಯಗಳು ಕೊಳೆಯುತ್ತಿರುವಾಗ ಗ್ರಾಮೀಣ ಭಾರತದಲ್ಲಿ ಹಸಿವಿನಿಂದಾದ ಸಾವುಗಳ ಬಗ್ಗೆ ವರದಿಯಾಗುತ್ತಿದೆ. ಅನೇಕ ಬಾರಿ ದಲಿತರು ಸೇರಿದಂತೆ, ಹಲವು ಮಿಲಿಯ ಬಡವರು ಕಡಿಮೆ ಗುಣ ಮಟ್ಟದ ಆಹಾರದಿಂದ ಬದುಕುತ್ತಾ ದಿನಕ್ಕೆ ಮೂರು ಹೊತ್ತಿನ ಊಟವನ್ನು ಒದಗಿಸಿಕೊಳ್ಳಲು ಶಕ್ತರಿಲ್ಲದೆ ನಿಧಾನವಾಗಿ ಸಾವಿಗೆ ಈಡಾಗುತ್ತಿದ್ದಾರೆ. ಪ್ರೊಟೀನ್‌ಯುಕ್ತ ಆಹಾರ, ಡೈರಿ ಉತ್ಪನ್ನಗಳು ಬಡವರ ಕೈಗೆಟಕುತ್ತಿಲ್ಲ. ಶಿಕ್ಷಣತಜ್ಞರು, ಯೋಜನಕಾರರು, ರಾಜಕೀಯ ವ್ಯಕ್ತಿಗಳು ಮತ್ತು ಕಾರ್ಯಕರ್ತರು ಭಾರತದಲ್ಲಿನ ಬಡತನದ ವಿದ್ಯಮಾನಕ್ಕೆ ರಾಜ್ಯಾಂಗವೇ ನೇರ ಹೊಣೆಯೆಂದಿದ್ದಾರೆ. ಪ್ರತಿಯೊಬ್ಬ ಭಾರತೀಯ ನಾಗರಿಕನು ಹಸಿವಿನಿಂದ ನಿದ್ದೆಮಾಡಿದರೆ ಅದರ ಜವಾಬ್ದಾರಿ ರಾಜ್ಯಾಂಗದ್ದೇ ಎಂದು ಅವರು ಹೇಳಿದುದರಲ್ಲಿ ಸ್ವಲ್ಪ ಮಟ್ಟಿಗೆ ಅರ್ಥವಿದೆ. ಪ್ರತೀ ದಿನ ಮಿಲಿಯಗಟ್ಟಲೆ ಜನರು ಹಸಿವಿಗೆ ಈಡಾಗುತ್ತಿರುವ, ಇಂಥ ವಿಷಮಸ್ಥಿತಿಯಲ್ಲಿ ಸರ್ಕಾರವೊಂದೇ ಈ ಪರಿಸ್ಥಿತಿಯನ್ನು ನಿಭಾಯಿಸಬೇಕೆ? ಅನೇಕರು ತಿನ್ನಲಿಕ್ಕೆ ಏನೂ ಸಿಗದ ಕಾರಣಕ್ಕೆ ಮಾತ್ರ ಸಾಯುತ್ತಿದ್ದಾರೆಯೇ? ಬಡತನ ಮತ್ತು ಹಸಿವಿನಿಂದ ಕೂಡಿದ ಮರಣಗಳಿಗೆ ಸಮಾಜವು ಕೂಡಾ ಜವಾಬ್ದಾರಿಯಾಗಬಲ್ಲುದೇ?

ಎರಡು ವಾರಗಳ ಹಿಂದೆ ಯುವ ಸಮಾಜಶಾಸ್ತ್ರಜ್ಞರಾದ ಡಾ॥ ವಿವೇಕ್‌ಕುಮಾರ್ ಅವರು ಈ ವಿಷಯವಾಗಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು. ರಾಜಧಾನಿಯಲ್ಲಿರುವ ಜವಾಹರ್ ಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ನಡೆದ ಬಹುಮಟ್ಟಿಗೆ ಯಶಸ್ವಿಯಾದ ಈ ಚರ್ಚಾಕೂಟವು ಅನೇಕ ಪ್ರಮುಖ ಅರ್ಥಶಾಸ್ತ್ರಜ್ಞರನ್ನು, ಸಮಾಜಶಾಸ್ತ್ರಜ್ಞರನ್ನು ಹಾಗೂ ಸಂಶೋಧಕರನ್ನು ತನ್ನಡೆ ಆಕರ್ಷಿಸಿತ್ತು. ನನ್ನನ್ನು ಕೂಡಾ ಈ ವಿಷಯದ ಬಗ್ಗೆ ಮಾತನಾಡಲು ...

ಈ ರೀತಿಯಾಗಿ ರೈತಲಾಬಿಯು ಬಡವರಿಗೆ ಆಹಾರ ತಲುಪದಂತೆ ಮಾಡುತ್ತಿದೆ. ಆದ್ದರಿಂದ ಸರ್ಕಾರವು ತುಂಬಾ ಹಣವನ್ನು ಬಲವಂತವಾಗಿ ರೈತರಿಗೆ ವಿತರಿಸುತ್ತಿದೆ ಮತ್ತು ವಾರ್ಷಿಕ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಹಂಚಬೇಕಾದ ಸಾವಿರಗಟ್ಟಲೆ ಕೋಟಿಗೆ ತಡೆಯುಂಟಾಗುತ್ತದೆ. ಕಾಲೇಜು ಉಪನ್ಯಾಸಕನಿಗೆ ಸಮಾನವಾದ ಮಾಸಿಕ ಆದಾಯವನ್ನು ಪಡೆಯುವ ರೈತನು ಸ್ನಾನದ ಸಾಬೂನು, ಟೂಥ್‌ಬ್ರಷ್, ಪೇಸ್ಟ್ ಕೊಳ್ಳುವುದನ್ನು ಅಥವಾ ಶೂಗಳಿಗೆ ಪಾಲಿಷ್ ಮಾಡುವುದನ್ನು ನಿರಾಕರಿಸುತ್ತಾನೆ. ರೈತನು ಗ್ರಾಹಕ ವಸ್ತುಗಳಿಗೆ ಕನಿಷ್ಠ ಹಣವನ್ನು ಖರ್ಚು ಮಾಡುತ್ತಾನೆ. ಅಲ್ಲದೆ, ಪತ್ರಿಕೆಯನ್ನು ಕೊಂಡುಕೊಳ್ಳುವುದಿಲ್ಲ. ರೈತನು ಟಾಯಿಲೆಟ್‌ಗಳಿಲ್ಲದ ದೊಡ್ಡ ಮನೆಯನ್ನು ಹೊಂದಿರುತ್ತಾನೆ. ಅಪರೂಪವಾಗಿ ತನ್ನ ಬಟ್ಟೆಗಳಿಗೆ ಇಸ್ತ್ರಿ ಮಾಡಿಕೊಳ್ಳುತ್ತಾನೆ. ತಾನು ಸಂಪಾದಿಸಿದ ಹಣವು ಆತನ ಮನೆಯಲ್ಲೇ ಉಳಿದುಬಿಡುತ್ತದೆ.

ಆಹಾರಧಾನ್ಯಗಳ ಬೆಲೆಗಳನ್ನು ನಿಯಂತ್ರಿಸಲು ಮಾರುಕಟ್ಟೆಗೆ ಅನುಮತಿ ನೀಡಿದರೆ, ಗೋಧಿಯು ಕಿಲೋವೊಂದಕ್ಕೆ ನಾಲ್ಕು ರೂಪಾಯಿಗಳಿಗೆ ದೊರೆಯುತ್ತದೆ. ಆದರೆ, ಎರಡು ದಶಕಗಳಿಂದಲೂ ಕೇಂದ್ರ ಸರ್ಕಾರವು ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಹೆಚ್ಚಾಗಿ ಆಹಾರಧಾನ್ಯಗಳನ್ನು ಖರೀದಿಸುವಂತೆ ರೈತಲಾಬಿಯು ಒತ್ತಾಯಿಸುತ್ತಿದೆ. ಸರ್ಕಾರದ ಗೋದಾಮುಗಳಲ್ಲಿ ಸಂಗ್ರಹವು ಮಿತಿಮೀರಿದ್ದರೂ, ಸರ್ಕಾರವು ರೈತರಿಂದಲೇ ಹೆಚ್ಚು ಖರೀದಿಸಬೇಕು. ಗೋಧಿ ಮತ್ತು ಅಕ್ಕಿಯ ಬೆಲೆಯು ಕಿಲೋಗೆ ೪ರೂಪಾಯಿ ಇದ್ದರೂ ಸರ್ಕಾರವು ಕಿಲೋಗೆ ೭ರೂಪಾಯಿಯಂತೆ ಖರೀದಿಸುತ್ತದೆ ಮತ್ತು ಅದು ಬಡವರಿಗೆ ಕಿಲೋಗೆ ಐದು ರೂಪಾಯಿಯಂತೆ ದೊರೆಯುತ್ತದೆ. ಇಲ್ಲದಿದ್ದರೆ ಅದೇ ಕೊಳೆಯುತ್ತಿರುವ ಗೋಧಿ/ಅಕ್ಕಿ ಮುಕ್ತ ಮಾರುಕಟ್ಟೆಯಲ್ಲಿ ಮೂರು ರೂಪಾಯಿಗೆ ಲಭ್ಯವಾಗುತ್ತದೆ.

ಅವನು ಮೇಲೆ ಹೇಳಿದ ವಸ್ತುಗಳಿಗೆ ಖರ್ಚು ಮಾಡಿದರೆ, ಗ್ರಾಮೀಣ ಭಾಗದಲ್ಲಿ ಆರ್ಥಿಕ ಚಟುವಟಿಕೆಗಳು ವಿಸ್ತರಿಸುತ್ತದೆ. ಕೃಷಿ ಕ್ಷೇತ್ರದಲ್ಲಿ ಮಿಲಿಯಗಟ್ಟಲೆ ಉದ್ಯೋಗಗಳನ್ನು ಸೃಷ್ಟಿಸುವುದರಿಂದ ಇದು ಆರ್ಥಿಕತೆಯ ಉತ್ಕರ್ಷಕ್ಕೆ ಕೀಲಿಯಾಗುತ್ತದೆ. ಈ ರೀತಿ ಆಗುತ್ತಿಲ್ಲ. ಇದರಿಂದಾಗಿ ಗ್ರಾಮೀಣ ಪ್ರದೇಶವು ಬಂಡವಾಳವಿಲ್ಲದೆ ನರಳುತ್ತಿದೆ. ಭಾರತೀಯ ಆರ್ಥಿಕತೆಯ ಜಡತೆಗೆ ಕಾರಣವಾಗಿ ಭಾರತದಲ್ಲಿ ಬಂಡವಾಳ ರೂಪುಗೊಳ್ಳಲು ರೈತರು ಒಂದು ದೊಡ್ಡ ತಡಿಕೆಯಾಗಿದ್ದಾರೆ. ರೈತರು ಹಣದ ಚಲಾವಣೆಯನ್ನು ತಡೆಯುವುದರಿಂದ ಬಡವರಿಗೆ ನಗದು ರೂಪದಲ್ಲಿ ಹಣ ಸಂದಾಯವಾಗುವ ಕೆಲಸ ದೊರೆಯುತ್ತಿಲ್ಲ. ಆದ್ದರಿಂದ ಅಭಾವದ ಸಂದರ್ಭದಲ್ಲಿ ಬಡವರು ಆಹಾರಧಾನ್ಯವನ್ನು ಹೇಗೆ ಕೊಂಡುಕೊಳ್ಳುವುದು? ಅವರು ಸಾಯುವುದೊಂದೇ ಮಾರ್ಗ.

ಗ್ರಾಹಕ ಸಂಸ್ಕೃತಿಯು ಬಡತನ, ಹಸಿವೆಯನ್ನು ಕೊನೆಗಾಣಿಸುತ್ತಿದೆಯೇ?

ಇಬ್ಬರು ಜಾಟ್ ಸಹೋದರರಾದ ಗ್ಯಾನ್‌ಸಿಂಗ್ ಮತ್ತು ಧ್ಯಾನ್‌ಸಿಂಗ್, ಒಂದು ತುಂಡು ಭೂಮಿಗೆ ಯುದ್ಧವನ್ನು ಮಾಡುತ್ತಿದ್ದರು. ಇಬ್ಬರು ರೈತರಾಗಿದ್ದು ಹೆಚ್ಚು ಜಮೀನು, ಒಂದೊಂದು ಟ್ರ್ಯಾಕ್ಟರ್ ಮತ್ತು ಲೈಸನ್ಸ್ ಪಡೆದ

ಗನ್‌ಗಳನ್ನು ಹೊಂದಿದ್ದರು. ತೀರ್ಪು ದಿನದ ಕೊನೆಯಲ್ಲಿ ಬರಬೇಕಾಗಿತ್ತು. ದೊಡ್ಡವನಾದ ಗ್ಯಾನ್, ಧ್ಯಾನನ್ನು ತಾವು ಮನೆಗಳಿಂದ ತಂದಿರುವ ಊಟವನ್ನು ಮಾಡುವುದಕ್ಕೆ ಕರೆದ. ಧ್ಯಾನ್ ಒಪ್ಪಿಕೊಂಡು 'ನೀನು ಏನು ತಂದಿದ್ದೀಯಾ' ಎಂದು ಕೇಳಿದ. 'ರೊಟ್ಟಿ ಉಪ್ಪುಮತ್ತು ಈರುಳ್ಳಿ' ಎಂದುತ್ತರಿಸಿದ ಗ್ಯಾನ್. 'ನೀನೇನು ತಂದಿದ್ದೀಯಾ' ಎಂದು ಅವನು ತಿರುಗಿ ಕೇಳಿದ. 'ರೊಟ್ಟಿ ಈರುಳ್ಳಿ ಮತ್ತು ಮಾವಿನಕಾಯಿ ಚಟ್ನಿ' ಎಂದು ಉತ್ತರಿಸಿದ ಧ್ಯಾನ್. ಆಘಾತಕ್ಕೊಳಗಾದ ಗ್ಯಾನ್ ತನ್ನ ಕಿರಿಯ ರಕ್ತಸಂಬಂಧಿಗೆ ಜೋರು ಮಾಡುತ್ತಾ, 'ಒಂದು ವೇಳೆ ನಾನು ಈ ಕೇಸನ್ನು ಸೋತರೂ ನಾನೇನೂ ನಾಶವಾಗುವುದಿಲ್ಲ ಆದರೆ ನೀನು ಆದಷ್ಟು ಬೇಗ ದಿವಾಳಿಯಾಗುತ್ತೀಯಾ ಎಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ'. ಕಂಗೆಟ್ಟ ಧ್ಯಾನ್ ಕಾರಣಗಳನ್ನು ತಿಳಿಯಲು ಬಯಸುತ್ತಾನೆ. 'ನೀನು ಇಂಥ ವಿವಿಧ ತರಕಾರಿಯನ್ನು ನಿನ್ನ ಊಟದಲ್ಲಿ ಬಳಸಿದರೆ, ದಿವಾಳಿಯಾಗದೆ ಇರುತ್ತೀಯಾ' ಎಂದು ಗ್ಯಾನ್ (ಭ್ರಾತೃ) ಸೋದರ ಕಾಳಜಿಯಿಂದ ಗದರಿದ. ಈ ಇಬ್ಬರು ಜಾಟ್ ಸೋದರರ ಕಥೆಯೂ ಬಹುತೇಕ ಭಾರತೀಯರ ವರ್ತನೆಗೆ ಕನ್ನಡಿ ಹಿಡಿದಂತಿದೆ.

ಬಹುತೇಕ ಭಾರತೀಯರು ಜೀವನದ ಬಗ್ಗೆ ಬಡತನದ ಅಭಿರುಚಿಯನ್ನು ಹೊಂದಿದ್ದು, ಜಿಪುಣರು, ದುರಾಸೆಯುಳ್ಳವರು ಆಗಿರುತ್ತಾರೆ. ಬಡವರು ತಿನ್ನಲು ಆಹಾರವಿಲ್ಲದವರು; ಶ್ರೀಮಂತರು ಖರ್ಚುಮಾಡದವರು. ಹಳ್ಳಿಗಳಲ್ಲಿ ಸಾವಿರಗಟ್ಟಲೆ ಕೋಟಿ ಹಣವು ಚಲಾವಣೆಯಾಗದೆ, ಹಳ್ಳಿಗಳಲ್ಲಿ ಮಾರುಕಟ್ಟೆ ವಿಸ್ತರಣೆಯನ್ನು ತಡೆಯುತ್ತದೆ. ಟ್ರ್ಯಾಕ್ಟರ್ ಮತ್ತು ಗನ್‌ನ್ನು ಖರೀದಿಸುವುದಕ್ಕೆ ಸಾಮರ್ಥ್ಯವಿರುವ ರೈತನು ಟೂಥ್‌ಪೇಸ್ಟ್‌ನ್ನು ಕೊಳ್ಳಲು ಶಕ್ತನಿರುತ್ತಾನೆ. ಆದರೆ ಅವನು ಗ್ರಾಹಕನಾಗಲು ನಿರಾಕರಿಸುತ್ತಾನೆ. ರೈತನ ಜೀವನಮಟ್ಟವು ಶಾಲಾ ಮಾಸ್ತರನಿಗಿಂತ ಕಡಿಮೆಯಿರುತ್ತದೆ. ಹಳ್ಳಿಗಳಲ್ಲಿ ಯಾವುದೇ ಸೇವಾಕ್ಷೇತ್ರ ಇಲ್ಲದಿರುವುದರಿಂದ ಬಡವರಿಗೆ ನಗದು ರೂಪದಲ್ಲಿ ಹಣ ಸಂದಾಯ ಮಾಡುವ ಕೆಲಸವು ದೊರಕುತ್ತಿಲ್ಲ. ಹಣವು ಚಲಾವಣೆಗೊಳ್ಳದ್ದರಿಂದ ಬಡವರು ಬಡವರಾಗಿಯೇ ಉಳಿದುಬಿಡುತ್ತಾರೆ.

ನಗರದ ಭಾರತೀಯರು ಗ್ಯಾನ್ ಮತ್ತು ಧ್ಯಾನ್‌ಗಿಂತ ಸ್ವಲ್ಪಮಟ್ಟಿಗೆ ಮಾತ್ರ ಭಿನ್ನರಾಗುತ್ತಾರೆ. ಎರಡು ವರ್ಷಗಳಿಗಿಂತ ಹೆಚ್ಚು ಕಾಲದಿಂದ ನಾನು ನನ್ನ ನೆರೆಹೊರೆಯವರು ಖರ್ಚುಮಾಡುವ ರೀತಿಯನ್ನು ಗಮನಿಸುತ್ತಿದ್ದೇನೆ. ನಾನು ಕಿರಾಣಿ ಸಾಮಾನುಗಳನ್ನು ಖರೀದಿಸುವ ಕಿರಾಣಿ ಅಂಗಡಿಯಲ್ಲಿ ಸ್ವಲ್ಪ ಸಮಯ ಕಳೆಯುತ್ತೇನೆ. ದೆಹಲಿಯಲ್ಲಿ ನಾನು ವಾಸಿಸುವ ಸ್ಥಳವು ಮಧ್ಯಮ ವರ್ಗದವರು ವಾಸಿಸುವ ಸ್ಥಳ. ಇದರಲ್ಲಿ ಹೆಚ್ಚಿನ ಮನೆಯವರು ಕನಿಷ್ಠ ಒಂದು ಕಾರನ್ನು ಹೊಂದಿರುತ್ತಾರೆ. ಮತ್ತೊಂದು ದಿನ ಸೌಂದರ್ಯ ಸಾಮಗ್ರಿಗಳನ್ನು ಮಾರುವ ಸ್ಥಳೀಯ ಅಂಗಡಿ ಮಾಲೀಕನೊಂದಿಗೆ ಸ್ವಲ್ಪ ಸಮಯ ಕಳೆದೆ. ಅವನಿಗೆ ೪೦೦ ಜನ ಖಾಯಂ ಗ್ರಾಹಕರಿದ್ದಾರೆ. ನಾನು ಅವರು ಖರ್ಚುಮಾಡುವ ರೀತಿಯ ಬಗ್ಗೆ ಕೇಳಿದೆ. ಶೇ. ಐದಕ್ಕಿಂತ ಕಡಿಮೆ ಜನ ಟಾಯಿಲೆಟ್ ಕಾಗದಗಳನ್ನು ಕೊಳ್ಳುತ್ತಾರೆ. ಎಲ್ಲ ನಾಲ್ಕುನೂರು ಜನರು ಫ್ಲ್ಯಾಟ್‌ಗಳಲ್ಲಿ ಜೀವಿಸುತ್ತಾರೆ. ಮುಖ್ಯ ಬೆಡ್‌ರೂಂಗಳಲ್ಲಿ ಇಂಗ್ಲೀಷ್ ಮಾದರಿಯ ಟಾಯಿಲೆಟ್‌ಗಳಿರುತ್ತವೆ.

ಬಹುತೇಕ ಭಾರತೀಯರು ಜೀವನದ ಬಗ್ಗೆ ಬಡತನದ ಅಭಿರುಚಿಯನ್ನು ಹೊಂದಿದ್ದು, ಜಿಪುಣರು, ದುರಾಸೆಯುಳ್ಳವರು ಆಗಿರುತ್ತಾರೆ. ಬಡವರು ತಿನ್ನಲು ಆಹಾರವಿಲ್ಲದವರು; ಶ್ರೀಮಂತರು ಖರ್ಚುಮಾಡದವರು. ಹಳ್ಳಿ ಗಳಲ್ಲಿ ಸಾವಿರಗಟ್ಟಲೆ ಕೋಟಿ ಹಣವು ಚಲಾವಣೆಯಾಗದೆ, ಹಳ್ಳಿಗಳಲ್ಲಿ ಮಾರುಕಟ್ಟೆ ವಿಸ್ತರಣೆಯನ್ನು ತಡೆಯುತ್ತದೆ. ಟ್ರ್ಯಾಕ್ಟರ್ ಮತ್ತು ಗನ್‌ನ್ನು ಖರೀದಿಸುವುದಕ್ಕೆ ಸಾಮರ್ಥ್ಯವಿರುವ ರೈತನು ಟೂಥ್‌ಪೇಸ್ಟ್‌ನ್ನು ಕೊಳ್ಳಲು ಶಕ್ತನಿರುತ್ತಾನೆ. ಆದರೆ ಅವನು ಗ್ರಾಹಕನಾಗಲು ನಿರಾಕರಿಸುತ್ತಾನೆ. ರೈತನ ಜೀವನಮಟ್ಟವು ಶಾಲಾ ಮಾಸ್ತರನಿಗಿಂತ ಕಡಿಮೆಯಿರುತ್ತದೆ. ಹಳ್ಳಿಗಳಲ್ಲಿ ಯಾವುದೇ ಸೇವಾಕ್ಷೇತ್ರ ಇಲ್ಲದಿರುವುದರಿಂದ ಬಡವರಿಗೆ ನಗದು ರೂಪದಲ್ಲಿ ಹಣ ಸಂದಾಯ ಮಾಡುವ ಕೆಲಸವು ದೊರಕುತ್ತಿಲ್ಲ. ಹಣವು ಚಲಾವಣೆಗೊಳ್ಳದ್ದರಿಂದ ಬಡವರು ಬಡವರಾಗಿಯೇ ಉಳಿದುಬಿಡುತ್ತಾರೆ.

ಫ್ಲ್ಯಾಟ್‌ಗಳಲ್ಲಿ ಜೀವಿಸುತ್ತಿರುವ ಪ್ರತಿಯೊಂದು ಕುಟುಂಬವು ಟಾಯಿಲೆಟ್ ಪೇಪರಗಳನ್ನು ಬಳಸಿದಲ್ಲಿ ಟಾಯಿಲೆಟ್ ಪೇಪರ್ ಉದ್ಯಮವು ವೇಗವಾಗಿ ಮತ್ತು ಎಲ್ಲೆ ಮೀರಿ ಬೆಳೆಯುತ್ತದೆ, ಮಿಲಿಯಗಟ್ಟಲೆ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತದೆ. ಕಾರ್ಖಾನೆ ಕೆಲಸಗಾರರು, ಇಂಜಿನಿಯರುಗಳು, ವ್ಯವಸ್ಥಾಪಕರು, ಮಾರುಕಟ್ಟೆ ಏಜೆಂಟರು, ಸರಬರಾಜುದಾರರು, ಚಿಲ್ಲರೆ ವ್ಯಾಪಾರಿಗಳು ಇತ್ಯಾದಿ. ಅಲ್ಲದೆ ನಾಲ್ಕುನೂರು ಖಾಯಂ ಗ್ರಾಹಕರಲ್ಲಿ ಪ್ರತಿ ತಿಂಗಳು ಹಲ್ಲುಜ್ಜುವ ಬ್ರಷ್‌ನ್ನು ಬದಲಾಯಿಸುವವರು ಶೇ. ಎರಡಕ್ಕಿಂತ ಕಡಿಮೆ ಇದ್ದಾರೆ. ಶೇ. ೫೦ಕ್ಕಿಂತ ಹೆಚ್ಚು ಜನರು ಆರು ತಿಂಗಳುಗಳಿಗೂ ಹೆಚ್ಚು ಕಾಲ ಬ್ರಷ್‌ನ್ನು ಉಪಯೋಗಿಸುತ್ತಾರೆ. ಭಾರತದ ಮಧ್ಯಮ ವರ್ಗಗಳ ಸದಸ್ಯರು ಪ್ರತಿ ತಿಂಗಳು ತಮ್ಮ ಹಲ್ಲುಜ್ಜುವ ಬ್ರಷ್‌ನ್ನು ಬದಲಾಯಿಸಲು ಆರಂಭಿಸಿದರೆ, ಮಿಲಿಯಗಟ್ಟಲೆ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತದೆ ಮತ್ತು ಪರಿಶೀಲಿಸಿದಾಗ ನಾಲ್ಕು ನೂರು ಜನರಲ್ಲಿ ಕೆಲವರು ಮಾತ್ರ ತಮ್ಮ ಮನೆಗಳಲ್ಲಿ ತಂಪು ಪಾನೀಯ/ಮಿನರಲ್ (ಖನಿಜಯುಕ್ತ) ನೀರನ್ನು ಅತಿಥಿಗಳಿಗಾಗಿ ಮನೆಯಲ್ಲಿ ಶೇಖರಿಸುತ್ತಾರೆ. ಇವತ್ತು ಭಾರತೀಯ ಮಧ್ಯಮ ವರ್ಗದ ಅನೇಕ ಸದಸ್ಯರು ತಂಪುಪಾನೀಯ/ ಮಿನರಲ್ ನೀರನ್ನು ಅತಿಥಿಗಳಿಗೆ ನೀಡಲು ಶುರು ಮಾಡಿದರೆ, ಎಷ್ಟು ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿ ಯಾಗುತ್ತದೆ ಎಂದು ಊಹಿಸಿಕೊಳ್ಳಿ.

ನಾನು ಸಿಗರೇಟ್ ಪ್ಯಾಕೆಟ್‌ಗಳನ್ನು ಖರೀದಿಸುವ ಪಾನ್ ಅಂಗಡಿಯಲ್ಲಿ ಕೆಲವು ಹೊತ್ತು ಕಳೆಯುತ್ತೇನೆ. ಇಪ್ಪತ್ತರ ಪ್ಯಾಕೆಟ್‌ಗೆ ೫೯ ರೂಪಾಯಿಯಂತೆ ವಿಲ್ಸ್‌ಕ್ಲಾಸಿಕ್ ಸಿಗರೇಟ್‌ನ ಕನಿಷ್ಠ ಒಂದು ಡಜನ್ ಗ್ರಾಹಕರನ್ನು ಗುರುತಿಸುತ್ತೇನೆ. ನನ್ನ ತಪಾಸಣೆಯಲ್ಲಿ, ಅನೇಕರು ತಮ್ಮ ಶೂಗಳನ್ನು ಬದಲಾಯಿಸಿಕೊಳ್ಳುವುದಿಲ್ಲ. ಇವರಲ್ಲಿ ಕೆಲವರು ಪ್ರತೀದಿನ ತಮ್ಮ ಶೂಗಳಿಗೆ ಪಾಲಿಷ್ ಹಾಕುತ್ತಾರೆ. ಸಿಗರೇಟಿಗೆ ೫೯ ರೂಪಾಯಿಯನ್ನು ಖರ್ಚುಮಾಡುವ ಒಬ್ಬ ಗ್ರಾಹಕ, ಒಂದು ಡಜನ್ ಶೂಗಳನ್ನು ಮತ್ತು ಪ್ರತೀ ದಿನ ಪಾಲಿಷ್ ಮಾಡಲು ಶಕ್ತನಿರುತ್ತಾನೆ.

ಇಂದು ಭಾರತೀಯ ಮಧ್ಯಮವರ್ಗಗಳ ಪ್ರತಿಯೊಬ್ಬ ಸದಸ್ಯನು ಒಂದು ಡಜನ್ ಶೂಗಳನ್ನು ಇಟ್ಟುಕೊಳ್ಳಲು ಮತ್ತು ಅದಕ್ಕೆ ಕ್ರಮಬದ್ಧವಾಗಿ ಪಾಲಿಷ್ ಮಾಡಲು ಶುರುಮಾಡಿದರೆ, ಚರ್ಮ/ಬೂಟ್ ಪಾಲಿಷ್ ಕೈಗಾರಿಕೆಯ ವಿಸ್ತರಣೆಯನ್ನು ಮತ್ತು ಮಿಲಿಯಗಟ್ಟಲೆ ಹೊಸ ಉದ್ಯೋಗಗಳು ಸೃಷ್ಟಿ ಯಾಗುವುದನ್ನು ಊಹಿಸಿಕೊಳ್ಳಿ.

ಈಗ ನಾನು ಅಪಾರ್ಟ್‌ಮೆಂಟ್‌ಗಳ ಬಗ್ಗೆ ಕಣ್ಣಾಡಿಸುತ್ತೇನೆ. ಎಲ್ಲವು ಏರ್‌ಕಂಡೀಷನನ್ನು ಹೊಂದಿರದಿದ್ದರೂ, ಕೆಲವು ಎರಡೆರಡು ಏರ್‌ಕಂಡೀಷನ್‌ಗಳನ್ನು ಹೊಂದಿದೆ. ಪ್ರತೀ ಮಧ್ಯಮವರ್ಗದ ಮನೆಯು ಎ.ಸಿ.ಯನ್ನು ಹೊಂದಿದ್ದರೆ, ಹೊಸ ಉದ್ಯೋಗಗಳು ಸೃಷ್ಟಿಯಾಗುವ ಬಗ್ಗೆ ಯೋಚಿಸಿ. ನಾನು ನಾಲ್ಕು ದಿನಗಳ ಹಿಂದೆ ಒಬ್ಬ ಹೋಟೆಲ್ ಮಾಲೀಕನೊಂದಿಗೆ ಮಾತನಾಡಿದೆ. ಅನೇಕ ಗ್ರಾಹಕರು ಮನೆಗೆ ಆಹಾರ ತಂದುಕೊಡುವುದನ್ನು ಕೋರುವುದಿಲ್ಲ. ಭಾರತದ ಮಧ್ಯಮವರ್ಗದ ಸದಸ್ಯರು ಕನಿಷ್ಠ ತಿಂಗಳಿಗೆರಡು ಸಲ ಮನೆಗೆ ತಂದುಕೊಡಬೇಕೆಂದು ಕೋರಿದರೆ, ಬೇಕಾದ ವಿಲೇವಾರಿ ಹುಡುಗರ ಸಂಖ್ಯೆಯ ಬಗ್ಗೆ ಯೋಚಿಸಿ.

ಭಾರತದ ಗ್ರಾಮೀಣ ಅಥವಾ ನಗರದ ಶ್ರೀಮಂತರು ಸ್ವಲ್ಪವನ್ನಾದರೂ ಸೇವೆಗಳಿಗೆ ಖರ್ಚುಮಾಡಬೇಕು. ಸ್ಥಿರಸ್ವತ್ತಿನ ಮೇಲೆ ಹೂಡುವ ಬದಲು ಮತ್ತು ಹಣವನ್ನು ಗುಡ್ಡೆ ಹಾಕಿ ಸಾಯುವ ಬದಲು, ಬಡವರು ಸ್ವಲ್ಪವಾದರೂ ಮಾರುಕಟ್ಟೆಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಮಾಡಿಕೊಡಬೇಕು. ಶ್ರೀಮಂತರು ಜಿಪುಣರಾಗಿ ಉಳಿದು ಸೇವಾವಲಯದ ವಿಸ್ತರಣೆಗೆ ಹಾನಿಮಾಡುವುದರಿಂದ, ಬಡತನವು ನಿರಂತರವಾಗಿರುತ್ತದೆ. ಸೆಪ್ಟೆಂಬರ್ ೧೧ರ ನಂತರ, ಅಮೇರಿಕನ್ ಆರ್ಥಿಕತೆಯು ಸಂಕಷ್ಟಕ್ಕೆ ಈಡಾಗಿದೆ. ಅಧ್ಯಕ್ಷ ಬುಷ್ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಅಮೇರಿಕನ್ನರು 'ವ್ಯಾಪಾರ'ಕ್ಕೆ (ಶಾಪಿಂಗಿಗೆ) ಹೋಗಬೇಕೆಂದು ಪ್ರೋತ್ಸಾಹಿಸಿದ್ದಾರೆ. ಪಶ್ಚಿಮದ ಹಾಗೂ ಈಗ ದೂರದ ಪೂರ್ವದ ಆರ್ಥಿಕತೆಗಳ ರಹಸ್ಯವು ಗ್ರಾಹಕ ಸಂಸ್ಕೃತಿಯಲ್ಲಿದೆ. ಗ್ರಾಹಕ ಸಂಸ್ಕೃತಿಯು ಬಡತನದ ವಿರುದ್ಧದ ದೊಡ್ಡ ವಿರುದ್ಧವಾಗಿದೆ.

ಚಾರು ವಸಂತ

ಲೇ. : ಹಂಪನಾ

ಬೆಲೆ : ರೂ. 100/-

ಕನ್ನಡ ಭಾಷೆಗೆ ವಿವಿಧ ಭಾಷೆ ಮತ್ತು ಧರ್ಮಗಳ ಅಮೂಲ್ಯ ಸಂಗತಿ-ಸಂದೇಶಗಳನ್ನು ತಂದಿತ್ತು ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ ಹಿರಿಯ ಸಾಹಿತಿ ಹಂಪನಾ ಅವರ ಮಹತ್ವದ ಕೃತಿ ಚಾರುವಸಂತ. ಇದು ಅರಮನೆ ಕುರಿತ ಕಾವ್ಯವಲ್ಲ, ಯುದ್ಧಮುಖಿ ಕಥನವೂ ಅಲ್ಲ, ಮಹೋನ್ನತ ಮಾನವೀಯ ಮೌಲ್ಯಗಳಿಂದ ಕೂಡಿದ ಜನಮುಖಿ ಹಾಗೂ ಸಮಾಜಮುಖಿ ಕಾವ್ಯ.

ಪ್ರಕಾಶಕರು : ಲಕ್ಷ್ಮಿ ಮುದ್ರಣಾಲಯ,
5ನೇ ಮುಖ್ಯರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮

ನನ್ನ ಜೀವನದ ದೃಷ್ಟಿ

ಲೇ. : ವಿ.ಕೃ ಗೋಕಾಕ

ಬೆಲೆ : ರೂ. 120/-

ತಮ್ಮ ಮೌಲಿಕ ಸಾಹಿತ್ಯ ಸೇವೆ ಮೂಲಕ ಕನ್ನಡ ಭಾಷೆಗೆ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟ ಸಾಹಿತಿಗಳಲ್ಲಿ ವಿ.ಕೃ.ಗೋಕಾಕ್ ಕೂಡ ಒಬ್ಬರು.

ಗೋಕಾಕರ ಜನ್ಮದಿನಾಚರಣೆಯ ಸಂದರ್ಭಕ್ಕಾಗಿ ಹೊರತರಲಾಗಿರುವ ಈ ಕೃತಿಯು ಅವರ ಬಿಡಿ-ಬಿಡಿ ಲೇಖನಗಳೊಂದಿಗೆ, ಸಮಗ್ರ ಜೀವದರ್ಶನ ಮಾಡಿಸುತ್ತದೆ. ಗೋಕಾಕರ ಸಾಹಿತ್ಯ ಅಧ್ಯಯನಾಸಕ್ತರಿಗೆ ಈ ಕೃತಿ ಉಪಯುಕ್ತ.

ಪ್ರಕಾಶಕರು : ಸಾಹಿತ್ಯ ಪ್ರಕಾಶನ,
ಕೊಪ್ಪೀಕರ್ ಬೀದಿ,
ಹುಬ್ಬಳ್ಳಿ - ೫೮೦ ೦೨೦



ಹೊಸ ಪುಸ್ತಕ

ಭಾವಕೋಶ

ಲೇ. : ಎಸ್. ಮಾಲತಿ

ಬೆಲೆ : ರೂ. ೫೫/-

ಹೆಣ್ಣಿನ ತಲ್ಲಣ-ತಳಮಳಗಳು, ಅನುಮಾನ, ಆತಂಕಗಳ ಜತೆಗೆ ತನ್ನ ಸಮಕಾಲೀನ ಸಮಸ್ಯೆಗಳಿಗೆ ತಾನೇ ಪರಿಹಾರ ಕಂಡುಕೊಳ್ಳಬೇಕೆಂಬ ಆಶಯ ಈ ಕವನ ಸಂಕಲನದ್ದು. ಕಾವ್ಯದ ಹದ ಮತ್ತು ಪ್ರಬಂಧದ ಧನಿ ಎರಡಕ್ಕೂ ವಿಶಿಷ್ಟ ಮೆರಗುನೀಡಿರುವ ಲೇಖಕಿ ಆ ಸಾಹಸದಲ್ಲಿ ಯಶಸ್ವಿಯಾಗಿದ್ದಾರೆ. ಸ್ವಭಾವೋಕ್ತಿಯನ್ನು ಕಾವ್ಯವಾಗಿಸುವ ನಿಟ್ಟಿನಲ್ಲಿ ಮಾಲತಿಯವರ ಪ್ರಯತ್ನ ನಿಜಕ್ಕೂ ಕುತೂಹಲ ಮೂಡಿಸುತ್ತದೆ.

ಪ್ರಕಾಶಕರು : ಶುಭದ ಪ್ರಕಾಶನ,
ಜರಗನಹಳ್ಳಿ, ಜೆ.ಪಿ.ನಗರ ಅಂಚೆ,
ಬೆಂಗಳೂರು-೫೬೦ ೦೭೮



ಮಹಿಳೆ ಬಿಡುಗಡೆಯ ಹಾದಿಯಲ್ಲಿ

ಲೇ. : ಎನ್ ಗಾಯತ್ರಿ

ಬೆಲೆ : ರೂ. 55/-

ಹೆಣ್ಣು ಭೂಮಿ-ಬಾನು-ಪ್ರಕೃತಿ ಎಂದೆಲ್ಲಾ ಹೊಗಳಿ ಶಬ್ದಾಡಂಬರದಲ್ಲಿ ಸ್ತುತಿಸುವ ಭಾರತೀಯ ಸಮಾಜ, ವಾಸ್ತವದಲ್ಲಿ ಶಾಸ್ತ್ರ ಪುರಾಣಗಳು ಮತ್ತು ಲಿಂಗತಾರತಮ್ಯದ ಹೆಸರಿನಲ್ಲಿ ಇನ್ನಿಲ್ಲದಂತೆ ಶೋಷಿಸಿ, ಹಿಂಸಿಸುತ್ತಿದೆ. ಈ ಕೃತಿಯು ಅನೇಕ ಸಮಸ್ಯೆಗಳ ಸಂಕೋಲೆಯಲ್ಲಿ ಬಂಧಿಯಾಗಿರುವ ಮಹಿಳೆಯರ ಸಮಸ್ಯೆಗಳು, ಅವುಗಳ ಉಗಮ, ಕಾರಣಗಳನ್ನು ತಿಳಿಸುವ ಜತೆಗೆ ಪರಿಹಾರಗಳನ್ನು ಸೂಚಿಸಿ, ವಿರೋಧಿಸುವ ಧೈರ್ಯವನ್ನೂ ನೀಡುವ ಪ್ರಯತ್ನ ಮಾಡಿದೆ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ,
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು-೫೬೦ ೦೦೧

ವಾಸ್ತು ಎಷ್ಟು ವಾಸ್ತವ

ಲೇ. : ಬಿ.ವಿ.ವೀರಭದ್ರಪ್ಪ

ಬೆಲೆ : ರೂ. ೨೫/-

ತೀವ್ರಗತಿಯಲ್ಲಿ ಬೆಳೆಯುತ್ತಿರುವ ವೈಜ್ಞಾನಿಕತೆಯ ಜತೆ ಜತೆಗೇ ಮನುಷ್ಯನ ಅಂಧಶ್ರದ್ಧೆಯೂ ಹೆಚ್ಚಾಗುತ್ತಿರುವುದು ಆಧುನಿಕ ಜಗತ್ತಿನ ವ್ಯಂಗ್ಯವೇ ಸರಿ. ಇತ್ತೀಚೆಗೆ ವಿದ್ಯಾವಂತ, ಅವಿದ್ಯಾವಂತರೆಲ್ಲರನ್ನೂ ಇಡಿಯಾಗಿ ನಿಯಂತ್ರಿಸುತ್ತಿರುವ ಅಂಧಶ್ರದ್ಧೆಯ ನಂಬಿಕೆಯೆಂದರೆ 'ವಾಸ್ತು'. ಮನೆ ಕಟ್ಟುವಾಗ ಅರ್ಥವಿಲ್ಲದ ಸಲಹೆಗಳಿಗೆ ಕಿವಿಗೊಡದೆ ವಿವೇಚನೆಗೆ ಮಾತ್ರ ಆದ್ಯತೆ ನೀಡಿ ಎಂದು ಲೇಖಕರು ಓದುಗರಿಗೆ ಕಿವಿಮಾತು ನೀಡುತ್ತಾರೆ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ,
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು-೫೬೦ ೦೦೧



ನೆನಪೆಲ್ಲಾ ಕಲ್ಲು ಸಕ್ಕರೆ

ಲೇ. : ಎನ್ಕೆ

ಬೆಲೆ : ರೂ. ೮೦/-

ಅಪರೂಪದ ಸಾಹಿತ್ಯ ಬರವಣಿಗೆ ಮತ್ತು ವಿಶಿಷ್ಟ ವ್ಯಕ್ತಿತ್ವದ ಹಳೆ ತಲೆಮಾರಿನ ಕನ್ನಡ ಸಾಹಿತಿಗಳಲ್ಲಿ ಎನ್.ಕೆ. ಕುಲಕರ್ಣಿ ಒಬ್ಬರು. ಎನ್ಕೆಯವರ ಬದುಕಿನ ಅಮೂಲ್ಯ ಅನುಭವಗಳನ್ನು ಸಂಕಲಿಸಿ, ಈ ಕೃತಿಯನ್ನು ಹೊರತರಲಾಗಿದೆ. ಎಲ್ಲರ ಬದುಕಿನಲ್ಲೂ ಕಲ್ಲು ಸಕ್ಕರೆಯ ಸವಿ ಇರುವ ನೆನಪುಗಳೇ ಹಾಸು ಹೊಕ್ಕಾಗಿರಲಿ ಎಂದು ಆಶಿಸುವ ಕೃತಿ ಓದುಗರ ಗಮನ ಸೆಳೆಯುತ್ತದೆ.

ಪ್ರಕಾಶಕರು : ಸಾಹಿತ್ಯ ಪ್ರಕಾಶನ,
ಕೊಪ್ಪೀಕರ್ ಬೀದಿ,
ಹುಬ್ಬಳ್ಳಿ - ೫೮೦ ೦೨೦



ಬ್ರಾಹ್ಮಣಶಾಹಿ ಸಿದ್ಧಾಂತಗಳು, ಮನಃಶಾಸ್ತ್ರ ಕಲ್ಪನೆಗಳನ್ನು ಭೇದಿಸಬಲ್ಲವೆ ?

(೨೧ನೇ ಪುಟದಿಂದ)

ಭಾಷೆಯನ್ನಾಧರಿಸಿದ ಭಾರತದಂತಹ ಸಮಾಜದಲ್ಲಿ ಆತ್ಮಗೌರವದ ಕಲ್ಪನೆಯೇ ಅಸಾಧ್ಯವಾಗಿ, ಸಂಪೂರ್ಣ ಶರಣಾಗತಿಯೇ ಮೌಲ್ಯವಾಗಿ ವ್ಯಕ್ತಿಯನ್ನು ಏನೂ ಅಲ್ಲವೆಂಬಂತೆ ನಿಕೃಷ್ಟ ಮಾಡಲಾಗುತ್ತದೆ.

ಗುರು ಅವರ ಪ್ರಕಾರ ಜಾತಿಯಧಾರಿತ ಸಮಾಜಗಳಲ್ಲಿ ಅಪಮಾನವೆಂಬುದು ಎಷ್ಟು ಅಸಂಗತವೆಂದರೆ ಅದಕ್ಕೆ ವಸ್ತುವೆಂಬುದೇ ಬೇಕಾಗುವುದಿಲ್ಲ, ಪಾಶ್ಚಾತ್ಯ ದೇಶಗಳಲ್ಲಿ ವಸ್ತುವಿರಲೇಬೇಕು (ಉದಾ.ಗೆ ಬೆವರಿನ ಮೈ). ಭಾರತದಲ್ಲಿ ಅವಮಾನವೂ ಪೂರ್ವನಿರ್ಧಾರಿತವೆಂಬುದನ್ನು ತೋರಿಸಲು ಸಫಾಯಿ ಕರ್ಮಚಾರಿಯೊಬ್ಬಳ ಉದಾಹರಣೆ ನೀಡಿದರು (ಸ್ವಚ್ಛತೆಯ ಕೆಲಸಮಾಡುವವರೆಲ್ಲ ದಲಿತರ). ಸಫಾಯಿ ಕರ್ಮಚಾರಿಯ ಮಗಳು, ಆ ಕೆಲಸವನ್ನು ಮಾಡದಿದ್ದರೂ ಸಹ ಸಫಾಯಿ ಕರ್ಮಚಾರಿ ಎಂದೇ ಅವಮಾನಿಸಲಾಯಿತು. ಈ ವ್ಯಕ್ತಿಯು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲ್ಪಡುವುದರಿಂದ ಅವಮಾನವು ಕಾಲ, ಸ್ಥಳವೆನ್ನದೆ ಮುಂದುವರೆಯಿತು. ಇದು ಜನಾಂಗೀಯ ಪ್ರತ್ಯೇಕತೆ ಇರುವ ಸ್ಥಳಗಳನ್ನು ಬಿಟ್ಟರೆ ಪಶ್ಚಿಮದ ಬಹುಪಾಲು ಸಮಾಜಗಳಲ್ಲಿ ಜಾರಿಯಲ್ಲಿಲ್ಲ. ಮುಂದುವರೆಯುತ್ತಾ ಗುರುರವರು ಅವಮಾನಕ್ಕೆ ಶೋಷಣೆ-ಶೋಷಿತ ಮತ್ತು ನೋಡುಗನೊಬ್ಬನನ್ನೊಳಗೊಂಡ ರಚನೆಯ ಅಗತ್ಯವಿದೆ. ಶೋಷಕ, ಜನಾಂಗ/ಜಾತಿ/ವರ್ಗ/ರಾಜ್ಯ/ಲಿಂಗ ಇವುಗಳ ಮೂಲಕ ಅಧಿಕಾರ ಹೊಂದಿರುತ್ತಾನೆ. ಆ ಅಧಿಕಾರದ ಮೂಲಕ ಶೋಷಿತನನ್ನು ಅವಮಾನಿಸುತ್ತಾನೆ. ನೋಡುಗನೊಬ್ಬನಿಲ್ಲದೆ ಅವಮಾನದ ಕ್ರಿಯೆ ಸಂಪೂರ್ಣವಾಗುವುದಿಲ್ಲ.

ಮೀರುವಿಕೆಯ ಕುರಿತಂತೆ ಮಾತನಾಡುವಾಗ ಗುರುರವರು ತಂತಾನೆ ಸತ್ವವುಳ್ಳ, ವರ್ಗಾವಣೆಯಾಗದ, ವಿನಿಮಯವಾಗದ ಮನುಷ್ಯ ಅರ್ಹತೆಯನ್ನು ಗುರುತಿಸಿದಾಗ ಮಾತ್ರ ಅವಮಾನವನ್ನು ಮೀರಲು ಸಾಧ್ಯವೆಂದು ಹೇಳಿದರು.

ಭಾರತದ ಜಾತಿ ಸಮಾಜದಲ್ಲಿ ಪ್ರಾಮಾಣಿಕವಾದ ಮನುಷ್ಯ ಅರ್ಹತೆಯನ್ನು ಗೌರವಿಸುವಂತಹ ವಾತಾವರಣದ ಕೊರತೆಯಿದೆ. ಉದಾಹರಣೆಗೆ ಕೊಲ್ಲಾಪುರಿ ಚರ್ಮದ ಚಪ್ಪಲಿ ಮತ್ತು ಕ್ರಿಕೆಟ್ ಚೆಂಡನ್ನು ತೆಗೆದುಕೊಳ್ಳಬಹುದು. ಚಪ್ಪಲಿ ಮತ್ತು ಚೆಂಡಿಗಿರುವ ಮೌಲ್ಯ ಅದನ್ನು ಮಾಡುವವರಿಗೆ (ಆ ಜನ ದನದ ಚರ್ಮದೊಂದಿಗೆ ಕೆಲಸ ಮಾಡುವುದರಿಂದ) ಇಲ್ಲ. ವಸ್ತುವಿನ ಕಲಾತ್ಮಕತೆಗೆ ಬೆಲೆ ಕಟ್ಟಲಾಗುತ್ತದೆಯೆ ಹೊರತು ಅದಕ್ಕೆ ಕಾರಣನಾದ ವ್ಯಕ್ತಿಗೆ ನಿಜ ಅರ್ಥದಲ್ಲಿ ಆ ಸಮುದಾಯಕ್ಕೆ ಬೆಲೆ ನೀಡುವುದಿಲ್ಲ, ಬದಲಿಗೆ ಆ ಸಮುದಾಯ ಅವಮಾನದ ಸಂಕಟವನ್ನು ಅನುಭವಿಸುತ್ತದೆ. ದಲಿತ ಮಾಡಿದ ವಸ್ತುವಿಗೆ ಬೆಲೆ ಕಟ್ಟಿ ಮಾಡಿದವನಿಗೆ ಅವಮಾನ ಮಾಡುವುದು ಅಸಂಬದ್ಧ.

ದಲಿತ ವ್ಯಕ್ತಿಯೇ ಅವಮಾನ ಮಾಡುವುದನ್ನ ಅವಮಾನದ ಎರಡನೇ ಹಂತವಾಗಿ ನೋಡಬಹುದು. ಲೈಂಗಿಕ ಕಿರುಕುಳದಂತಹ ಸಂದರ್ಭದಲ್ಲಿ ಶೋಷಿತನೇ ಶೋಷಕನಾಗುವುದನ್ನು ಕಾಣಬಹುದೆಂದು ಗುರುರವರು ಹೇಳಿದರು. ಬ್ರಾಹ್ಮಣ ವ್ಯಕ್ತಿಯನ್ನು ಅವಮಾನಿಸಲು ಸಾಧ್ಯವೆ? ಎಂಬ ಪ್ರಶ್ನೆಯನ್ನು ಭಾರ್ಗವಿ ದವರ್‌ರವರು ಬ್ರಾಹ್ಮಣರು ಮತ್ತು ಅವಮಾನ ಎಂಬ ಚರ್ಚೆಯತ್ತ ಒಯ್ದರು. ಬ್ರಾಹ್ಮಣರು ನಾಚಿಕೆ ಇಲ್ಲದವರೆ? ಎಂದಾಗ ಉತ್ತರವಾಗಿ ಭಾಗವಹಿಸಿದವರೊಬ್ಬರು 'ಬ್ರಾಹ್ಮಣರು ಸಾರ್ವಜನಿಕವಾಗಿ ಅವಮಾನವನ್ನು ಒಪ್ಪಿಕೊಳ್ಳುವುದಿಲ್ಲ' (ಖಾಸಗಿ/ ವೈಯಕ್ತಿಕ ಅರ್ಥದಲ್ಲಿ ಅವಮಾನವನ್ನು ನೋಡುವುದು) ವೆಂದು ಹೇಳಿದರು. ಶೋಷಕರ ಕುರಿತು ಸರಿಯಾದ ಅಧ್ಯಯನವೇ ನಡೆದಿಲ್ಲವಾದ್ದರಿಂದ ಬ್ರಾಹ್ಮಣರಿಂದ ಸಮಂಜಸವಾದ ಉತ್ತರಗಳು ಬರಲಿಲ್ಲ. ಗುರುರವರು ಹೆಗಲನ್ನ‌ನ ಮಾಲೀಕ-ಗುಲಾಮ ಸಂದರ್ಭದಲ್ಲಿ ಗುಲಾಮನಿಗಿರುವ ಕೌಶಲ್ಯವಿಲ್ಲದಿರುವುದರಿಂದ ಮಾಲೀಕರನ್ನು ಅವಮಾನಿಸಬಹುದು ಎಂಬುದರತ್ತ ಗಮನ ಸೆಳೆದರು. ಇಲ್ಲಿ ವಿ.ಡಿ.ಸಾವರ್ಕರ್ ಮತ್ತು ಬಿ.ಜಿ.ತಿಲಕ್‌ರವರು ಬ್ರಿಟಿಷ್‌ರಿಂದ ಅವಮಾನಿತರಾದುದನ್ನು ಗಮನಿಸಬೇಕು. ಇಲ್ಲಿ ಅವಮಾನಗೊಂಡ ವ್ಯಕ್ತಿಗೆ ತಾನು ಶ್ರೇಷ್ಠನಾದರೂ ಅವಮಾನಿತನಾದೆನೆಂಬ ಭಾವವಿರುತ್ತದೆ. ಶ್ರೇಣೀಕೃತ ವ್ಯವಸ್ಥೆಯಲ್ಲಿ ತನಗಿಂತ ಕೆಳಗಿನವರು ಅವಮಾನಿಸಿದರೆ ತಾವು ಅವಮಾನಕ್ಕಿಂತ ಎತ್ತರದವರೆಂದು ಬ್ರಾಹ್ಮಣರು ಭಾವಿಸಿಕೊಳ್ಳುತ್ತಾರೆ. ತಮ್ಮನ್ನೆ ಪ್ರತಿ ಪಾದಿಸಿಕೊಳ್ಳುವ ಬ್ರಾಹ್ಮಣ ವ್ಯಕ್ತಿಯು ಎಂದೂ ತನ್ನನ್ನೆ ಸ್ವವಿಮರ್ಶೆಗೊಳಪಡಿಸಿಕೊಳ್ಳುವುದಿಲ್ಲ. ತಮ್ಮನ್ನು ಎಲ್ಲರಿಗಿಂತ ಮೇಲೆಂದು ತಿಳಿಯುತ್ತಾರೆ. ಶಂಕರಾಚಾರ್ಯರಂತೆ ಬುದ್ಧಿ ಮತ್ತೆಯ ದುರಹಂಕಾರವನ್ನು ಕಾಣಬಹುದು.

ಮುಂದಿನ ಸಭೆಯಲ್ಲಿ ಅವಮಾನವನ್ನು ಆಚರಿಸುವ ಬ್ರಾಹ್ಮಣ-ದಲಿತೇತರ, ಬ್ರಾಹ್ಮಣೇತರ ಮನಸ್ಸುಗಳನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಹೊಸ ಸದಸ್ಯರುಗಳ ಗುಂಪನ್ನು ಒಟ್ಟಿಗೆ ತರುವ ಬಗ್ಗೆ ಜಾದವ್ ಮತ್ತು ಭಾರ್ಗವಿಯವರು ಭರವಸೆ ಹೊಂದಿದ್ದಾರೆ. ನೋವು, ಯಾತನೆಗಳು ತುಂಬಿರುವ ದಲಿತರ ಅನುಭವದ ಕಥನಗಳು ಮುದ್ರಣಾಲಯಗಳಿಗೆ, ಅಕೆಡಮಿಕ್‌ಗಳಿಗೆ ಲಾಭದಾಯಕವಾಗಿದ್ದರೆ, ದಲಿತೇತರರಿಗೆ ಸುಲಭವಾಗಿ ಕಬಳಿಸಬಹುದಾಗಿದೆ. ಜಾತೀಯತೆಯನ್ನು ಆಚರಿಸುವವರು ತಮ್ಮೊಳಗನ್ನೆ ತಾವು ನೋಡಿಕೊಳ್ಳಬೇಕಾಗಿದೆ ಎಂದು ಒತ್ತಾಯಿಸುವ ಸಮಯ ಬಂದಿದೆ. ●

ಬುದ್ಧಿಮತ್ತೆಯ ಏಕಸ್ವಾಮ್ಯ ಭಾರತದ ಅಧೋಗತಿಗೆ ಕಾರಣ

(೧೧ನೇ ಪುಟದಿಂದ)

ದುರ್ಬಲ ವರ್ಗಗಳವರನ್ನು ಅವರ ನಿರ್ಗತಿಕ ಸ್ಥಿತಿ ಹಾಗೂ ಅಸಮಾನತೆಯಿಂದ ಮೇಲೆತ್ತಿ ನಾಗರಿಕ ಜನರಿಗೆ ಹಾಗೂ ಸಾಮಾನ್ಯ ಪ್ರಜೆಗಳಿಗೆ ಇರುವ ಹಕ್ಕುಗಳನ್ನು ಅವರಿಗೂ ಒದಗಿಸಲು, ಖಾಸಗಿ ಕ್ಷೇತ್ರವೂ ಕೂಡ ಪುರೋಗಾಮಿಯಾದ ಮತ್ತು ಸಮಾನತೆ ತರುವ ಸಾಮಾಜಿಕ ಧೋರಣೆಯನ್ನು ಅನುಸರಿಸುವುದು ಸದ್ಯದ ಹಾಗೂ ಭವಿಷ್ಯದ ಆರ್ಥಿಕ ಪದ್ಧತಿಯಲ್ಲಿ ಅಗತ್ಯವಾಗಿದೆ. ಇದು ಖಾಸಗಿ ಕ್ಷೇತ್ರವೂ ಸಮಾಜವಾದವನ್ನು ಒಪ್ಪಿಕೊಳ್ಳಬೇಕೆಂದು ಕೇಳಿದಂತಲ್ಲ; ಅಮೆರಿಕಾ ಸಂಯುಕ್ತ ಸಂಸ್ಥಾನದಂಥ ಬಂಡವಾಳಶಾಹಿ ರಾಷ್ಟ್ರವೂ ಮಾನ್ಯ ಮಾಡಿ ಅನುಷ್ಠಾನಗೊಳಿಸುತ್ತಿರುವ ವೈವಿಧ್ಯಕ್ಕೆ ಸಂಬಂಧಿಸಿದ ಡೈವರ್ಸಿಟಿ ಮಸೂದೆ ಹಾಗೂ ರಚನಾತ್ಮಕ ಕ್ರಿಯೆಯಂತಹದನ್ನು ಖಾಸಗಿ ಕ್ಷೇತ್ರ ಮಾಡಬೇಕೆಂದು ಕೇಳಿದಂತಾಗುತ್ತದೆ.

ನನ್ನ ಸಹಪ್ರಜೆಗಳೇ, ನಮ್ಮ ಮಹಾನ್ ಪ್ರಜಾಪ್ರಭುತ್ವವು ತನ್ನ ಮಹತ್ವವನ್ನು ಉಳಿಸಿಕೊಂಡು ಸಾಮಾನ್ಯ ಜನತೆಯ ಸಮಸ್ಯೆಗಳಿಗೆ ಪ್ರಸ್ತುತವಾಗಿ ಇರಬೇಕೆಂದರೆ, ಈ ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಗೆ ನಾವು ಗಮನ ಕೊಡಲೇಬೇಕಾಗಿರುವುದರಿಂದ ಈ ವಿಷಯಗಳನ್ನು ನಿಮ್ಮೊಡನೆ ಪ್ರಸ್ತಾಪಿಸಿದ್ದೇನೆ. ನಮ್ಮ ಜನಸಾಮಾನ್ಯರಿಗೆ ಸಂಬಂಧಿಸಿರುವ ಈ ಸಮಸ್ಯೆಗಳಿಗೆ ಈ ರೀತಿ ಗಮನಕೊಟ್ಟಲ್ಲಿ, ಜಗತ್ತಿನಲ್ಲಿ -ವಿಶೇಷವಾಗಿ ಈ ಉಪಖಂಡದಲ್ಲಿ ಹಾಗೂ ಏಷ್ಯಾದಲ್ಲಿ-ನಮ್ಮ ನೆರೆ ರಾಷ್ಟ್ರಗಳೊಡನೆ ನಾವು ಶಾಂತಿ ಮತ್ತು ಸಹಬಾಳ್ವೆಯ ಧೋರಣೆಯನ್ನು ಮುಂದುವರೆಸಿದಲ್ಲಿ, ದೇಶವು ಶಕ್ತಿಯುತವೂ ಬಲಿಷ್ಠವೂ ಆಗುತ್ತದೆ. ಭಾರತದಲ್ಲಿ ನಾವು-ಮತ್ತು ಸಾಮಾನ್ಯವಾಗಿ ಇಡೀ ಪ್ರಪಂಚವೇ ಇಂದು ಎದುರಿಸುತ್ತಿರುವ ಭಯೋತ್ಪಾದನೆಯ ಅನಿಷ್ಟ ವಿದ್ಯಮಾನಕ್ಕೆ ನಾವು ಪ್ರಜಾಸತ್ತಾತ್ಮಕವಾಗಿಯೇ ಪ್ರತ್ಯುತ್ತರ ನೀಡಬೇಕಾಗುತ್ತದೆ. ಜೊತೆ ಜೊತೆಗೇ ನಾವು ನಮ್ಮ ದೇಶದ ಆರ್ಥಿಕ ಶಕ್ತಿಯನ್ನೂ, ರಕ್ಷಣಾ ಸಾಮರ್ಥ್ಯವನ್ನೂ ಗರಿಷ್ಠ ಪ್ರಮಾಣದಲ್ಲಿ ರೂಪಿಸಿಕೊಳ್ಳಬೇಕಾಗುತ್ತದೆ.

ಮತ್ತೊಮ್ಮೆ ತಮಗೆಲ್ಲರಿಗೂ ಗಣತಂತ್ರ ದಿನದ ಶುಭಾಶಯಗಳನ್ನು ಅರ್ಪಿಸುತ್ತೇನೆ.

ಜೈಹಿಂದ್ ●

ಮನುಷ್ಯನ ಹುಟ್ಟು, ಪುನರ್ಜನ್ಮ ಇತ್ಯಾದಿ

೧) ಪುನರ್ಜನ್ಮದ ಬಗ್ಗೆ ನೀವು ಸಾಕಷ್ಟು ಹೇಳಿದ್ದೀರಿ. ಆದರೆ ಸತ್ತ ಮೇಲೆ ನಾವು ಹುಟ್ಟುತ್ತೇವೆಂಬುದಕ್ಕೆ ಏನಾದರೂ ಆಧಾರಗಳಿವೆಯೇ?

ಬೌದ್ಧರು ನಂಬುವ ಪುನರ್ಜನ್ಮ ಸಿದ್ಧಾಂತವನ್ನು ಸಾಬೀತುಗೊಳಿಸಲು ವೈಜ್ಞಾನಿಕ ಪುರಾವೆಗಳಿರುವುದು ಮಾತ್ರವಲ್ಲ, ಅದೊಂದೇ ಜನ್ಮಾಂತರ ಸಿದ್ಧಾಂತಕ್ಕೆ ಪುರಾವೆಯಿರುವುದು. ಸ್ವರ್ಗವು ಇದೆ ಎಂಬುದಕ್ಕೆ ಒಂದು ಚೂರಾದರೂ ಆಧಾರವಿಲ್ಲ. ತಮ್ಮ ಪೂರ್ವ ಜನ್ಮದ ಘಟನೆಗಳ ಸ್ಪಷ್ಟ ನೆನಪುಗಳ ಬಗೆಗಿನ ವರದಿಗಳನ್ನು ಕುರಿತು ಕಳೆದ ಮೂವತ್ತು ವರ್ಷಗಳಿಂದ ಪರಾಮನೋವಿಜ್ಞಾನಿಗಳು ಅಧ್ಯಯನ ನಡೆಸುತ್ತಿದ್ದಾರೆ. ನಿದರ್ಶನಕ್ಕೆ, ಇಂಗ್ಲೆಂಡಿನಲ್ಲಿ, ಐದು ವರ್ಷದ ಒಬ್ಬ ಹುಡುಗಿಯು ತನ್ನ 'ಮತ್ತೊಬ್ಬ ತಾಯಿ ಹಾಗೂ ತಂದೆ'ಯರ ಬಗ್ಗೆ ನೆನಪಿದೆಯೆಂದು ಹೇಳಿದಳು. ಅವಳು ತನ್ನ ಹಿಂದಿನ ಜನ್ಮದ ಘಟನೆಗಳ ಬಗ್ಗೆ ಆಡಿದ ಮಾತುಗಳು ನಂಬುವಂತಹವಾಗಿದ್ದವು. ಪರಾವಿಜ್ಞಾನಿಗಳು ಅವಳನ್ನು ಭೇಟಿ ಮಾಡಿ ಕೇಳಿದ ನೂರಾರು ಪ್ರಶ್ನೆಗಳಿಗೆ ಆ ಹುಡುಗಿಯು ಸಮರ್ಪಕ ಉತ್ತರಗಳನ್ನು ನೀಡಿದಳು. ಸ್ಪೈನಿನಲ್ಲಿದ್ದ ಹಾಗೆ ತೋರಿದ ಒಂದು ಹಳ್ಳಿಯಲ್ಲಿ ತಾನು ಜೀವಿಸುತ್ತಿದ್ದಂತೆ ನೀಡಿದ ಮಾಹಿತಿಯಲ್ಲಿ ಊರಿನ ಹೆಸರು, ತಾನು ವಾಸವಾಗಿದ್ದ ಬೀದಿಯ ಹೆಸರು, ತನ್ನ ನೆರೆಹೊರೆಯವರ ಹೆಸರುಗಳು ಹಾಗೂ ತನ್ನ ದಿನನಿತ್ಯದ ಬದುಕಿನ ಬಗ್ಗೆ ಹೇಳಿದ ವಿವರಗಳು ಸೇರಿದ್ದವು. ತನಗೆ ಒಂದು ಕಾರು ಡಿಕ್ಕಿ ಹೊಡೆದ ಪರಿಣಾಮವಾಗಿ ಉಂಟಾದ ಗಾಯಗಳಿಂದ ಎರಡು ದಿನಗಳ ನಂತರ ತಾನು ಸತ್ತ ವಿಷಯವನ್ನು ಅವಳು ಅಳುತ್ತ ತಿಳಿಸಿದಳು. ಈ ವಿವರಗಳನ್ನು ತಾಳೆ ನೋಡಿದಾಗ ಅವು ಕರಾರುವಾಕ್ಕಾಗಿದ್ದುದು ಕಂಡು ಬಂದವು. ಹುಡುಗಿ ಹೇಳಿದ ಹೆಸರಿನ ಬೀದಿಯಲ್ಲಿ ಅವಳು ವರ್ಣಿಸಿದಂತಹ ಮನೆಯೊಂದೂ ಆ ಊರಲ್ಲಿತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಐದು ವರ್ಷಗಳ ಹಿಂದೆ ಆ ಮನೆಯಲ್ಲಿ ವಾಸಿಸುತ್ತಿದ್ದ ೨೩ ವರ್ಷದ ಯುವತಿಯೊಬ್ಬಳು ಕಾರ್ ಅಪಘಾತದಲ್ಲಿ ಸತ್ತಿದ್ದ ವಿಷಯವೂ ತಿಳಿದು ಬಂತು. ಇಂಗ್ಲೆಂಡಿನಲ್ಲಿ ಹುಟ್ಟಿ ಎಂದೂ ಸ್ಪೈನನ್ನು ನೋಡದ ಐದು ವರ್ಷದ ಹುಡುಗಿಯೊಬ್ಬಳು ಈ ಎಲ್ಲ ವಿವರಗಳನ್ನು ನೀಡಲು ಸಾಧ್ಯವಾದದ್ದು ಹೇಗೆ? ಇಂತಹುದು ಇದೊಂದೇ ಅಲ್ಲ. ಇಂತಹ ಹತ್ತಾರು ಘಟನೆಗಳ ಬಗ್ಗೆ ವರ್ಜೀನಿಯ ವಿಶ್ವವಿದ್ಯಾಲಯ ಮನೋವಿಜ್ಞಾನ ವಿಭಾಗದ ಪ್ರೊಫೆಸರ್ ಅಯಾನ್ ಸ್ಟೀವನ್‌ಸನ್ ಅವರು ತಮ್ಮ ಪುಸ್ತಕಗಳಲ್ಲಿ ವಿವರವಾಗಿ ಪ್ರಸ್ತಾಪಿಸಿದ್ದಾರೆ. ಅವರು ಪ್ರಖ್ಯಾತ ವಿಜ್ಞಾನಿಗಳು; ಹಿಂದಿನ ಜನ್ಮಗಳ ಬಗ್ಗೆ ಅನೇಕ ಮಂದಿ ನೀಡಿರುವ ವಿವರಗಳನ್ನು ಕುರಿತು 25 ವರ್ಷಗಳಷ್ಟು ದೀರ್ಘ ಕಾಲ ನಡೆಸಿದ ಅವರ ಅಧ್ಯಯನವು ಬೌದ್ಧ ಮತದ ಪುನರ್ಜನ್ಮ ಸಿದ್ಧಾಂತವನ್ನು ಬಲಪಡಿಸುತ್ತದೆ. (ನೋಡಿ; 'ಟ್ವೆಂಟಿ ಕೇಸಸ್ ಸಜೆಸ್ಟಿವ್ ಆಫ್ ರೀಇನ್‌ಕಾರ್ನೇಷನ್ ಅಂಡ್ ಕೇಸಸ್ ಆಫ್ ರೀಇನ್‌ಕಾರ್ನೇಷನ್ ಟೈಪ್' ಎಂಬ ಪುಸ್ತಕ; ಪ್ರಕಾಶಕರು, ಯೂನಿವರ್ಸಿಟಿ ಪ್ರೆಸ್ ಆಫ್ ವರ್ಜೀನಿಯ, ಶಾರ್ಲಟ್‌ವಿಲ್, ಯುಎಸ್ಎ).

೨) ತಮ್ಮ ಹಿಂದಿನ ಜನ್ಮಗಳ ಬಗೆಗಿನ ನೆನಪುಗಳೆಂಬವು ದೆವ್ವಗಳ ಕೃತ್ಯವೆಂದು ಕೆಲವರು ಹೇಳುವರಲ್ಲ?

ನಿಮ್ಮ ನಂಬಿಕೆಗೆ ಅನುಗುಣವಾಗಿಲ್ಲವೆಂಬ ಒಂದೇ ಕಾರಣಕ್ಕಾಗಿ ಎಲ್ಲವನ್ನೂ ದೆವ್ವದ ಕೃತ್ಯವೆಂದು ತಳ್ಳಿಹಾಕುವುದು ಸರಿಯಲ್ಲ. ಒಂದು ವಿಷಯವನ್ನು ಸಮರ್ಥಿಸುವ ಗಟ್ಟಿಯಾದ ಪುರಾವೆಗಳನ್ನು ಒದಗಿಸಿದಾಗ, ಅವುಗಳನ್ನು ಅಲ್ಲಗಳೆಯಬೇಕಾದರೆ ನೀವು ತಾರ್ಕಿಕವೂ ಸಕಾರಣವೂ ಆದ ವಾದವಿಧಾನವನ್ನು ಅನುಸರಿಸಬೇಕೇ ಹೊರತು, ಕಾರಣರಹಿತವೂ ಮೂಢನಂಬಿಕೆಯಿಂದ ಕೂಡಿರುವುದೂ ಆದ ದೆವ್ವಗಳ ಮಾತಾಡುವುದು ಸರಿಯಲ್ಲ.

೩) ದೆವ್ವಗಳ ಬಗ್ಗೆ ಮಾತಾಡುವುದು ಮೂಢನಂಬಿಕೆ ಎಂದು ನೀವು ಹೇಳುತ್ತೀರಿ. ಹಾಗೆಯೇ ಪುನರ್ಜನ್ಮದ ಬಗ್ಗೆ ಮಾತಾಡುವುದೂ ಮೌಢ್ಯವಲ್ಲವೇ?

ನಿಘಂಟಿನ ಪ್ರಕಾರ, 'ಮೂಢ ನಂಬಿಕೆ' ಎಂದರೆ 'ಕಾರಣ ಅಥವಾ ವಸ್ತುಸ್ಥಿತಿಯ ಆಧಾರವಿಲ್ಲದೆ ಕೆಲವು ಭಾವನೆಗಳಿಗೆ ಸಂಬಂಧಿಸಿದ ನಂಬಿಕೆ. ಉದಾಹರಣೆಗೆ ಮಂತ್ರತಂತ್ರ'. ಯಾರಾದರೂ ಒಬ್ಬ ವಿಜ್ಞಾನಿಯು ಎಚ್ಚರಿಕೆಯಿಂದ ಅಧ್ಯಯನ ಮಾಡಿ ದೆವ್ವದ ಅಸ್ತಿತ್ವದ ಬಗ್ಗೆ ಹೇಳಿದ್ದನ್ನು ತೋರಿಸಿಕೊಟ್ಟರೆ, ಆಗ ನಾನು ದೆವ್ವವನ್ನು ನಂಬುವುದು ಮೂಢನಂಬಿಕೆಯಲ್ಲ ಎಂದು ಒಪ್ಪುತ್ತೇನೆ. ಆದರೆ ಯಾರೂ ದೆವ್ವದ ಬಗ್ಗೆ ಸಂಶೋಧನೆ ನಡೆಸಿರುವುದನ್ನು ನಾನು ಕಾಣೆ. ವಿಜ್ಞಾನಿಗಳು ಅಂಥವುಗಳ ಬಗ್ಗೆ ಅಧ್ಯಯನ ಮಾಡಲು ಆಲೋಚಿಸುವುದಿಲ್ಲ. ಹಾಗಾಗಿ ದೆವ್ವಗಳು ಇವೆ ಎಂಬುದನ್ನು ನಾನು ಒಪ್ಪುವುದಿಲ್ಲ. ಆದರೆ ಈಗಷ್ಟೇ ನಾವು ಪರಿಶೀಲಿಸಿರುವಂತೆ, ಪುನರ್ಜನ್ಮ ಇದೆ ಎಂಬುದಕ್ಕೆ ಸಾಕಷ್ಟು ಆಧಾರವಿದೆ ಎಂಬುದು ಸೂಚಿತವಾಗುತ್ತದೆ. ಪುನರ್ಜನ್ಮದ ಬಗೆಗಿನ ನಂಬಿಕೆಯು ಕೆಲವಾದರೂ ಪುರಾವೆಗಳನ್ನು ಆಧರಿಸಿರುವುದಾದರೆ, ಅದನ್ನು ಮೂಢ ನಂಬಿಕೆಯೆಂದು ತಳ್ಳಿಹಾಕುವುದು ಸರಿಯಲ್ಲ.

೪) ಸರಿ. ಪುನರ್ಜನ್ಮದಲ್ಲಿ ನಂಬಿಕೆ ಇರುವ ಯಾರಾದರೂ ವಿಜ್ಞಾನಿಗಳಿದ್ದಾರೆಯೇ?

ಇದ್ದಾರೆ, ೧೯ನೆಯ ಶತಮಾನದಲ್ಲಿ ಬ್ರಿಟಿಷ್ ಶಾಲಾ ಪಠ್ಯಕ್ರಮದಲ್ಲಿ ವಿಜ್ಞಾನವನ್ನು ಅಳವಡಿಸಲು ಕಾರಣನಾದ ಹಾಗೂ ಡಾರ್ವಿನ್ನನ ವಿಕಾಸವಾದವನ್ನು ಮೊದಲು ಸಮರ್ಥಿಸಿದ ಥಾಮಸ್ ಹಕ್ಸ್‌ಲೇ, ಪುನರ್ಜನ್ಮವು ಸಂಭವನೀಯವೆಂದು ಕಾಣುತ್ತದೆಂದು ನಂಬಿದ್ದವನು. ಅವನ 'ಎವಲ್ಯೂಷನ್ ಅಂಡ್ ಎಥಿಕ್ಸ್ ಅಂಡ್ ಅದರ್ ಎಸ್ಸೇಸ್' ಎಂಬ ಪ್ರಸಿದ್ಧ ಗ್ರಂಥದಲ್ಲಿ ಹೀಗೆನ್ನುತ್ತಾನೆ:

'ಜನ್ಮಾಂತರ ಸಿದ್ಧಾಂತದ ಮೂಲ ಯಾವುದೇ ಆಗಿರಲಿ, ವೈದಿಕ ಹಾಗೂ ಬೌದ್ಧ ಮತಗಳು ಮೇಲು ನೋಟಕ್ಕೆ ಸರಿಯೆಂದು ಕಾಣುವ, ಮಾನವನ ವಿಷಯದಲ್ಲಿ ಬ್ರಹ್ಮಾಂಡವು ಅನುಸರಿಸುವ ಮಾರ್ಗದ ಬಗ್ಗೆ ಒಂದು ವಾದಸರಣಿಯನ್ನು ಕಂಡುಕೊಂಡವು. ..ಆದರೆ ಈ ಸಮರ್ಥನ ವಿಧಾನವೂ ಮಿಕ್ಕವಕ್ಕಿಂತ ಕಡಿಮೆ ಸಂಭವನೀಯವೇನಲ್ಲ; ಅದನ್ನು ಸಂಪೂರ್ಣ ಅಸಂಗತವೆಂದು ಆತುರ ಪ್ರವೃತ್ತಿಯ ಚಿಂತಕರು ಮಾತ್ರ ತಳ್ಳಿಹಾಕಬಹುದೇ ಹೊರತು ಅನ್ಯರಲ್ಲ. ವಿಕಾಸವಾದದ ಹಾಗೆಯೇ, ದೇಹಾಂತರ ಸಿದ್ಧಾಂತವು ವಸ್ತುಸ್ಥಿತಿಯನ್ನು ಆಧರಿಸಿದೆ; ಅದಕ್ಕೆ ದೃಷ್ಟಾಂತವನ್ನು ಒದಗಿಸಲು ಸಾಧ್ಯವಾಗುವ ಸಮರ್ಥನೆಯನ್ನು ಅದು ಬಳಸಿಕೊಳ್ಳಬಹುದು'.

ಆನಂತರ, ಪ್ರಸಿದ್ಧ ಸ್ವೀಡಿಶ್ ಖಗೋಳವಿಜ್ಞಾನಿ ಮತ್ತು ಭೌತ ವಿಜ್ಞಾನಿಯಾದ ಹಾಗೂ ಐನ್‌ಸ್ಟೈನ್ ಅವರ ಸ್ನೇಹಿತರಾದ ಪ್ರೊಫೆಸರ್ ಗುಸ್ತಾಫ್ ಸ್ಟ್ರಾಂಬರ್ಗ್ ಅವರಿಗೆ ಪುನರ್ಜನ್ಮ ಸಿದ್ಧಾಂತವು ಆಕರ್ಷಣೀಯವೆನ್ನಿಸಿತು.

'ಮಾನವರ ಆತ್ಮಗಳು ಭೂಮಿಯ ಮೇಲೆ ಮತ್ತೆ ಅವತರಿಸಬಹುದೇ ಎಂಬ ಬಗ್ಗೆ ಅಭಿಪ್ರಾಯ ಭೇದಗಳಿವೆ.

ಬೋಧಿವೃಕ್ಷ

ಪರಸ್ಪರ ಪ್ರೀತಿ-ಗೌರವ ಶಾಂತಿ-ಸಮಾನತೆ ಮುಂತಾದ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧಧಮ್ಮ ಜಗತ್ತಿನಲ್ಲೆಡೆ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ, ಅದರ ಮೂಲ ಸ್ವರೂಪ ಮತ್ತು ಆಚರಣೆಗಳನ್ನು ಕುರಿತ ತಿಳುವಳಿಕೆ ಕೂಡ ಅನಿವಾರ್ಯ. ಇದನ್ನು ಮನಗಂಡಿರುವ 'ಸಂವಾದ'ವು ಬುದ್ಧ ಜ್ಯೋತಿ ಪ್ರಕಾಶನ ಪ್ರಕಟಿಸಿರುವ ಪೂಜ್ಯ ಎಸ್. ಧಮ್ಮಿಕರವರ ಪುಸ್ತಕದ ಕನ್ನಡಾನುವಾದವನ್ನು ಓದುಗರಿಗಾಗಿ ನೀಡುತ್ತಿದೆ. ಅನುವಾದಿಸಿರುವವರು

ಡಾ|| ಪಿ.ವಿ. ನಾರಾಯಣ್

೧೯೩೬ರಲ್ಲಿ ಒಂದು ಕುತೂಹಲಕಾರೀ ಸನ್ನಿವೇಶದ ಬಗ್ಗೆ ಭಾರತ ಸರ್ಕಾರದ ಅಧಿಕಾರಿಗಳು ಆಮೂಲಾಗ್ರವಾಗಿ ಪರಿಶೀಲನೆ ನಡೆಸಿ ಒಂದು ವರದಿ ಯನ್ನು ಸಲ್ಲಿಸಿದರು. ಒಬ್ಬ ಹುಡುಗಿಯು (ದೆಹಲಿಯ ಶಾಂತಿ ದೇವಿ) ತನ್ನ ಹಿಂದಿನ ಜನ್ಮದ ಬಗ್ಗೆ ಹೇಳುತ್ತ (ದೆಹಲಿಯಿಂದ ನೂರು ಮೈಲಿ ದೂರವಿರುವ ಮೀರತ್‌ನಲ್ಲಿ) ತನ್ನ 'ಎರಡನೇ ಜನ್ಮ'ಕ್ಕೆ ಒಂದು ವರ್ಷದ ಹಿಂದೆ ತಾನು ಸತ್ತುದಾಗಿ ನುಡಿದಳು. ಅವಳು ತನ್ನ ಹಿಂದಿನ ಜನ್ಮದ ಗಂಡನ ಹಾಗೂ ಮಗುವಿನ ಹೆಸರು ಹೇಳಿದ್ದಲ್ಲದೆ, ತನ್ನ ಮನೆ ಮತ್ತು ಜೀವನ ಕತೆಯನ್ನೆಲ್ಲ ವಿವರಿಸಿದ್ದಳು. ಪರಿಶೀಲನಾ ಸಮಿತಿಯು ಅವಳನ್ನು ಅವಳ ಹಿಂದಿನ ಜನ್ಮದ ಸಂಬಂಧಿಕರ ಬಳಿ ಕರೆತಂದು ತಾಳೆ ನೋಡಿದಾಗ, ಅವಳು ಹೇಳಿದ್ದೆಲ್ಲ ನಿಜವಾಗಿತ್ತು. ಭಾರತದ ಜನರಲ್ಲಿ ಪುನರ್ಜನ್ಮದ ಬಗ್ಗೆ ನಂಬಿಕೆಯು ಸಾಮಾನ್ಯ ಸಂಗತಿ. ಈ ಸಂದರ್ಭದಲ್ಲಿ ಅವರಿಗೆ ಅಚ್ಚರಿಯನ್ನುಂಟುಮಾಡಿದ್ದೆಂದರೆ, ಆ ಹುಡುಗಿಯು ತನ್ನ ಹಿಂದಿನ ಜನ್ಮದ ಬಗ್ಗೆ ಹೊಂದಿದ್ದ ಅಗಾಧ ನೆನಪು. ಇದು ಮತ್ತು ಇಂತಹ ಸನ್ನಿವೇಶಗಳು ನೆನಪು ನಾಶವಾಗುವುದಿಲ್ಲ ಎಂಬ ಸಿದ್ಧಾಂತವನ್ನು ಬೆಂಬಲಿಸುವ ಪುರಾವೆಗಳೆಂದು ಭಾವಿಸಬಹುದು'.

ಪುನರ್ಜನ್ಮವು ವೈಜ್ಞಾನಿಕ ಚಿಂತನೆಗೆ ಅನುಗುಣವಾಗಿದೆ ಯೆಂದು ಯುನೆಸ್ಕೋ ಮಹಾ ನಿರ್ದೇಶಕರಾಗಿದ್ದ ಪ್ರಸಿದ್ಧ ವಿಜ್ಞಾನಿ ಪ್ರೊಫೆಸರ್ ಜೂಲಿಯನ್ ಹಕ್ಸ್‌ಲೇ ಅವರು ನಂಬಿದ್ದರು.

'ಸಾವಿನ ಸಂದರ್ಭದಲ್ಲಿ ಯಾವುದೋ ಬಗೆಯಲ್ಲಿ ತನ್ನತನವನ್ನು ಬಿಟ್ಟುಕೊಟ್ಟರೂ ಶಾಶ್ವತವಾಗಿ ಉಳಿಯುವ ಸತ್ವದ ಅಸ್ತಿತ್ವಕ್ಕೆ ವಿರೋಧವಾಗಿ ಏನೂ ಇಲ್ಲ. ಒಂದು ನಿರ್ದಿಷ್ಟ ರೀತಿಯಲ್ಲಿ ಕೆಲಸ ಮಾಡಿ ನಿಸ್ತಂತು(ವೈರ್‌ಲೆಸ್) ಸಂದೇಶವನ್ನು ಕಳಿಸುವ ಯಂತ್ರ ದಂತೆಯೇ ಇದು. ಆದರೆ ನಾವು ನೆನಪಿಡಬೇಕಾದದ್ದು, ನಿಸ್ತಂತು ಸಂದೇಶವು ಮತ್ತೆ ಸಂದೇಶವಾಗುವುದು ಮತ್ತೊಂದು ಯಂತ್ರದೊಡನೆ, ಅಂದರೆ ರಿಸೀವರ್ ನೊಡನೆ, ಸಂಪರ್ಕ ಸಾಧಿಸಿದಾಗ, ಮಾತ್ರ ಎಂಬುದನ್ನು. ಹೀಗೆಯೇ ಪ್ರಾಯಶಃ ನಮ್ಮ ಸತ್ವದ ಉಗಮವೂ. ಅದು...ಮತ್ತೆ ಯಾವುದಾದರೂ ರೀತಿ ಯಲ್ಲಿ ದೇಹಧಾರಣೆ ಮಾಡದಿದ್ದರೆ, ಆಲೋಚನೆ ಯಾಗಲೀ ಅನುಭವವಾಗಲೀ ಸಾಧ್ಯವಾಗುವುದಿಲ್ಲ. ನಮ್ಮ ವ್ಯಕ್ತಿತ್ವಗಳು ದೇಹವನ್ನು ಎಷ್ಟರಮಟ್ಟಿಗೆ ಅವಲಂಬಿಸಿವೆಯೆಂದರೆ, ದೇಹವಿಲ್ಲದೆ ನಿಜವಾದ ಅರ್ಥದಲ್ಲಿ ವೈಯುಕ್ತಿಕ ಬದುಕನ್ನು ಕುರಿತು ಆಲೋಚಿಸುವುದೂ ಅಸಾಧ್ಯವಾಗುತ್ತದೆ. ನಿಸ್ತಂತು ಸಂದೇಶ ಮತ್ತು ಪ್ರಸರಣ ಸಾಧನ ಇವುಗಳ ನಡುವೆ ಇರುವಂತಹ ಒಂದು ಸಂಬಂಧವು ಮನುಷ್ಯರು ಹಾಗೂ ಅದು ಬಿಟ್ಟುಕೊಡುವ ಯಾವುದೋ ವಸ್ತು ಇವುಗಳ ನಡುವೆಯೂ ಇರಬಹುದೆಂಬುದನ್ನು ನಾನು ಊಹಿಸಿಕೊಳ್ಳಬಲ್ಲೆ. ಇದು ಸರಿಯಾದರೆ, ಮನಸ್ಸು ರಿಸೀವರ್‌ನಂತಹ ಸಾಧನವೊಂದರ ಜೊತೆ ಸಂಪರ್ಕ ಸಾಧಿಸಿ ವಾಸ್ತವ ಪ್ರಜ್ಞೆಯಾಗಿ ಮರಳುವವರೆಗೂ,

'ಸಾವಿನ ಸಂದರ್ಭದಲ್ಲಿ ಯಾವುದೋ ಬಗೆಯಲ್ಲಿ ತನ್ನತನವನ್ನು ಬಿಟ್ಟುಕೊಟ್ಟರೂ ಶಾಶ್ವತವಾಗಿ ಉಳಿಯುವ ಸತ್ವದ ಅಸ್ತಿತ್ವಕ್ಕೆ ವಿರೋಧವಾಗಿ ಏನೂ ಇಲ್ಲ. ಒಂದು ನಿರ್ದಿಷ್ಟ ರೀತಿಯಲ್ಲಿ ಕೆಲಸ ಮಾಡಿ ನಿಸ್ತಂತು(ವೈರ್‌ಲೆಸ್) ಸಂದೇಶವನ್ನು ಕಳಿಸುವ ಯಂತ್ರದಂತೆಯೇ ಇದು. ಆದರೆ ನಾವು ನೆನಪಿಡಬೇಕಾದದ್ದು, ನಿಸ್ತಂತು ಸಂದೇಶವು ಮತ್ತೆ ಸಂದೇಶವಾಗುವುದು ಮತ್ತೊಂದು ಯಂತ್ರದೊಡನೆ, ಅಂದರೆ ರಿಸೀವರ್‌ನೊಡನೆ, ಸಂಪರ್ಕ ಸಾಧಿಸಿದಾಗ, ಮಾತ್ರ ಎಂಬುದನ್ನು.

ವ್ಯಕ್ತಿಯು ವಿಶ್ವದಲ್ಲಿ ಅಲೆದಾಡುತ್ತಿರುವ ವಿವಿಧ ಸ್ವರೂಪಗಳ ಕ್ಷೋಭೆಯಲ್ಲದೆ ಬೇರಲ್ಲ ಎಂದು ಯಾರಾದರೂ ಭಾವಿಸುವುದು ಸಹಜ'.

ಪಕ್ಕಾ ವ್ಯಾವಹಾರಿಕರೂ ವಾಸ್ತವವಾದಿಯೂ ಆದ ಅಮೇರಿಕದ ಉದ್ಯಮಿಯಾದ ಹೆನ್ರಿ ಫೋರ್ಡ್ ಅಂತಹ ವರು ಪುನರ್ಜನ್ಮದ ಸಿದ್ಧಾಂತವನ್ನು ಒಪ್ಪಿದ್ದರು. ಅವರು ಪುನರ್ಜನ್ಮ ಸಿದ್ಧಾಂತದಿಂದ ಆಕರ್ಷಿತರಾಗಲು ಕಾರಣ, ದೈವವಾದ ಅಥವಾ ಭೌತವಾದವಲ್ಲ, ಪುನರ್ಜನ್ಮದಿಂದ ಮತ್ತಷ್ಟು ಬೆಳವಣಿಗೆಯನ್ನು ಸಾಧಿಸುವ ಅವಕಾಶ ಎಂಬುದಕ್ಕಾಗಿ ಹೆನ್ರಿ ಫೋರ್ಡ್ ಹೇಳುತ್ತಾರೆ:

'ನನಗೆ ಇಪ್ಪತ್ತಾರು ವರ್ಷವಾಗಿದ್ದಾಗ ನಾನು ಪುನರ್ಜನ್ಮ ಸಿದ್ಧಾಂತವನ್ನು ಒಪ್ಪಿಕೊಂಡೆ. ಧರ್ಮವು ಈ ವಿಷಯದಲ್ಲಿ ನನಗೆ ಯಾವುದೇ ನೆರವು ನೀಡಲಿಲ್ಲ. ಕೆಲಸ ಕೂಡ ನನಗೆ ಸಂಪೂರ್ಣ ತೃಪ್ತಿಯನ್ನು ನೀಡಲಿಲ್ಲ. ಒಂದು ಜನ್ಮದಲ್ಲಿ ಪಡೆದ ಅನುಭವವನ್ನು ನಾವು ಮುಂದಿನದರಲ್ಲಿ ಬಳಸಿಕೊಳ್ಳಲು ಸಾಧ್ಯವಾಗ ದಿದ್ದರೆ ಕೆಲಸವೂ ನಿಷ್ಪ್ರಯೋಜಕವಾಗಿ ಬಿಡುತ್ತದೆ. ಪುನರ್ಜನ್ಮ ಸಿದ್ಧಾಂತದ ಬಗ್ಗೆ ಗೊತ್ತಾದ ಮೇಲೆ ಒಂದು ಸಾರ್ವತ್ರಿಕ ಯೋಜನೆಯೊಂದನ್ನು ನಾನು ಕಂಡು ಕೊಂಡಂತೆ ಭಾಸವಾಯಿತು. ನನ್ನ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರುವ ಸಾಧ್ಯತೆಯನ್ನು ಗುರುತಿಸಿದೆ. ಏಕೆಂದರೆ, ಅದರಿಂದಾಗಿ ಕಾಲಕ್ಕೆ ಎಲ್ಲೆ ಎಂಬುದಿರ ಲಿಲ್ಲ. ನಾನು ಮುಂದೆ ಗಡಿಯಾರದ ದಾಸನಾಗಿ ರಬೇಕಾದ ಪ್ರಮೇಯವಿರಲಿಲ್ಲ. ಅನುಭವವೇ ಪ್ರತಿಭೆ. ಕೆಲವರು ಅದನ್ನು ಕೊಡುಗೆ ಎಂದೋ ಶಕ್ತಿ ಎಂದೋ ಭಾವಿಸುತ್ತಾರೆ. ಅನೇಕ ಜನ್ಮಗಳಲ್ಲಿ ಪಡೆದುಕೊಂಡ ದೀರ್ಘ ಅನುಭವದ ಫಲವಾಗಿ ರುತ್ತದೆ ಅದು. ಕೆಲವರದು ಮಿಕ್ಕವರದಕ್ಕಿಂತ ಹಿರಿಯ ಆತ್ಮಗಳು, ಹಾಗಾಗಿ ಅವರ ತಿಳುವಳಿಕೆ ಹೆಚ್ಚು ..ಪುನರ್ಜನ್ಮದ ಸಿದ್ಧಾಂತವು ಗಮನಕ್ಕೆ ಬಂದದ್ದರಿಂದ ನನ್ನ ಮನಸ್ಸಿಗೆ ನೆಮ್ಮದಿಯುಂಟಾಯಿತು. ...ಈ ಸಂಭಾಷಣೆಯನ್ನು ನೀವೇನಾದರೂ ಉಳಿಸಿಕೊಳ್ಳು ವುದಾದರೆ, ಅದನ್ನು ಬರೆಯಿರಿ; ಅದರಿಂದ ಅನೇಕರಿಗೆ ನೆಮ್ಮದಿ ಸಿಕ್ಕಬಹುದು. ಜೀವನದ ಬಗ್ಗೆ ದೀರ್ಘ ನೋಟವನ್ನು ಹೊಂದುವುದರಿಂದುಂಟಾ ಗುವ ಶಾಂತಿಯ ಬಗ್ಗೆ ನಾನು ಇತರರಿಗೆ ಹೇಳ ಬೇಕೆನಿಸುತ್ತದೆ'.

ಅಂದರೆ, ಬೌದ್ಧರ ಪುನರ್ಜನ್ಮ ಸಿದ್ಧಾಂತಕ್ಕೆ ಸಾಕಷ್ಟು ವೈಜ್ಞಾನಿಕ ಪುರಾವೆಗಳ ಬೆಂಬಲವಿದೆ ಎಂದ ಹಾಗಾಯಿತು. ಅದು ತಾರ್ಕಿಕವಾಗಿಯೂ ಸಮಂಜಸವಾಗಿದೆ, ಅದ ರಿಂದಾಗಿ ದೈವವಾದ ಮತ್ತು ಭೌತವಾದಗಳು ನೀಡಲು ಸಾಧ್ಯವಾಗದ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡಲು ಸಹಾಯಕವಾಗುತ್ತದೆ. ಅಲ್ಲದೆ ಅದು ನಮಗೆ ಎಷ್ಟೋ ನೆಮ್ಮದಿಯನ್ನುಂಟುಮಾಡುತ್ತದೆ. ನಿಮಗೆ ಮತ್ತೊಂದು ಅವಕಾಶವನ್ನೇ ನೀಡದ ಜೀವನ ಸಿದ್ಧಾಂತದಿಂದ ಏನು ಪ್ರಯೋಜನ? ಅದರಿಂದ ಈ ಜನ್ಮದಲ್ಲಿ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳುವ ಅವಕಾಶ ಸಿಗುವುದಿಲ್ಲ. ಈ ಜನ್ಮದಲ್ಲಿ ಪೋಷಿಸಿಕೊಂಡು ಬಂದ ಕೌಶಲಗಳನ್ನು, ಸಾಮರ್ಥ್ಯಗಳನ್ನು ಉತ್ತಮಪಡಿಸಿಕೊಳ್ಳಲಾಗುವುದಿಲ್ಲ. ಬುದ್ಧನ ಪ್ರಕಾರ, ನಿಮಗೆ ಇದೇ ಜನ್ಮದಲ್ಲಿ ನಿರ್ವಾಣವು ದೊರೆಯದಿದ್ದರೆ, ಮುಂದಿನ ಜನ್ಮದಲ್ಲಿ ಅದಕ್ಕಾಗಿ ಪ್ರಯತ್ನ ಪಡುವ ಅವಕಾಶ ದೊರೆಯುತ್ತದೆ. ಈ ಜನ್ಮದಲ್ಲಿ ತಪ್ಪುಗಳನ್ನು ಮಾಡಿದ್ದರೆ, ಮುಂದಿನ ಜನ್ಮದಲ್ಲಿ ನೀವು ಅವುಗಳನ್ನು ತಿದ್ದಿಕೊಳ್ಳಬಹುದು. ಖಂಡಿತವಾಗಿ ತಪ್ಪು ಗಳಿಂದ ಪಾಠಗಳನ್ನು ಕಲಿಯಬಹುದು. ಈ ಜನ್ಮದಲ್ಲಿ ನೀವು ಸಾಧಿಸಲಾಗದುದನ್ನು ಮಾಡಲಾಗದುದನ್ನು ಮುಂದಿನ ಜನ್ಮದಲ್ಲಿ ಮಾಡಲು ಸಾಧ್ಯವಾಗಬಹುದು. ಎಂಥ ಅದ್ಭುತವಾದ ಉಪದೇಶ!

(ಮುಂದುವರಿಯುವುದು)

ಪುಸ್ತಕ ಬೇಕಾದಲ್ಲಿ :

ಬುದ್ಧ ಜ್ಯೋತಿ ಪ್ರಕಾಶನ
ನೆರೆಗ್ಯಾತನಹಳ್ಳಿ, ಟಿ.ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ.
ಇವರಿಗೆ ಬರೆದು ತರಿಸಿಕೊಳ್ಳಬಹುದು

ಯಾರು ನೀವು?

ಸತ್ತ ದನದ ಸುತ್ತ ತುತ್ತಿಗೆ ಕುಳಿತವರು
ಕತ್ತೆತ್ತಿ ಕೇಳುತಾರೆ ಯಾರು ನೀವು?
ವಿಷದನ್ನವ ತಿಂದು ಹಸಿವು ನೀಗಿಸಿಕೊಂಡು
ಹಾಲು ಜೇನು ಹರಿಸಿದವರು ಯಾರು ನೀವು?

ನೆಲ- ಜಲದಿ ಒಂದಾಗಿ ಬಿಲದ ಮೊಲದಂತಿದ್ದವರಿಗೆ
ಕುಲಗೋತ್ರಗಳಂಟಿಸಿ ಕೊಲೆಗಡುಕರನ್ನಾಗಿಸಿ
ಹಲಜನುಮಗಳವರೆಗೆ ಹಲುಬುವಂತೆ ಮಾಡಿ
ಧರ್ಮ ದೊರೆಗಳಾದವರು ಯಾರು ನೀವು?

ಹೆಣ್ಣು- ಬೆಣ್ಣೆಯ ಮೇಲೆ ಕಳ್ಳ ಕಣ್ಣಿಟ್ಟವನ
ಮೋಕ್ಷದಾತನ ಪಟ್ಟಕ್ಕೇರಿಸಿದವರು
ಕರುಳು ಬಳ್ಳಿಗಳಲ್ಲಿ ವಿಷದ ಮುಳ್ಳುಗಳಚ್ಚಿ
ರಕ್ತದ ಹೊಳೆಯರಿಸಿದ ಭಗವಂತನಿಂದ
ಗೀತೆಯ ಬೋಧಿಸಿದವರು ಯಾರು ನೀವು?

ಅಸುರ- ರಕ್ಕಸರ ಸಮೃದ್ಧ ನಾಡಿಗೆ
ಸುರೆಧಾರೆಯರಿಸಿ ಸುರಲೋಕ ಕಟ್ಟಿದಿರಿ
ದೇವ- ದಾನವರ ಗುದ್ದಾಟದ ಮಧ್ಯೆ ಯುದ್ಧಬೇಡೆಂದ
ಬುದ್ಧರ ಕೊಂದು ದಶಾವತಾರಗಳ ಸೃಷ್ಟಿಸಿದ
ಸನಾತನಿಗಳ ಸಾಲಲ್ಲಿ ಶಂಕರಾಚಾರ್ಯ, ಮೋದಿ
ಮತ್ತು ಯಾರು ನೀವು?

ಭೂತಾಯಿ ಮಡಿಲಲ್ಲಿ ಮಮತೆಯುಂಡ ಜನಕೆ
ಗೋತಾಯಿ ಹೆಸರೇಳಿ ಭೀತಿ ಹುಟ್ಟಿಸಿದಿರಿ
ಬಂಧುತ್ವದ ಬದುಕಲ್ಲಿ ಹಿಂದುತ್ವದ ಹುಳಿ ಹಿಂಡಿ
ಬಂಧು- ಬಾಂಧವರ ಮಧ್ಯೆ ಭುಗಿಲೆದ್ದ ಬೆಂಕಿಯಲ್ಲಿ
ಮೈಕಾಯಿಸಿಕೊಂಡ ಮುಂಡೆ- ಮಕ್ಕಳು ಯಾರು ನೀವು?

ಸಂದಿಗೊಂದು ಗುಡಿ ಕಟ್ಟಿ- ಹಸು ಕರುಗಳಿಗೂ ದೇವರೆಂದಿರಿ
ಹೇಲು ತಿನ್ನುವ ಹಂದಿ ನಾಯಿಗಳ
ಪಾದ ಮುಟ್ಟಿ ಮುತ್ತನಿಕ್ಕಿದಿರಿ
ಉತ್ತು ಬಿತ್ತು ತುತ್ತು ಕಾಣದೆ ಕತ್ತಲೆಯಲಿ
ಕಮರಿದವರಿಗೆ ಕರ್ಮಫಲದ ಕಥೆ ಹೇಳಿ
ಧರ್ಮ ಬೆಳೆಸಿದ ದುರುಳರು ಯಾರು ನೀವು?

ಜುಟ್ಟು ಜನಿವಾರಗಳಲ್ಲಿ ಕಟ್ಟಿ ಹಾಕಿರುವ ನಾಡಿಗೆ
ಬುದ್ಧನ ನೀತಿ ಸಾಕಾಗಲಿಲ್ಲ
ಬಸವಣ್ಣನ ಕ್ರಾಂತಿಗೆ ಬದಲಾಗಲಿಲ್ಲ
ಭಿತ್ತಿದಿರಿ ಮನು ಮನಸಿನ ವಿಷದಾವುಗಳನ್ನ
ಹುತ್ತಗಳೇ ಎದ್ದಿವೆ ನಾವೇಳುವ ಮುನ್ನ
ಅಲೆಮಾರಿಗಳೆಂದು ಆಸರೆ ನೀಡಿದರೆ
ನೆಲೆಯಿದ್ದ ನಮ್ಮವರ ಹೊಲೆ- ಮಾದಿಗರನು ಮಾಡಿ
ತಲೆಯಿಂದ ಹುಟ್ಟಿದವರೆಂದು ತರ್ಕಿಸುವ ತಿರುಳರು ಯಾರು ನೀವು?

ರಾಮನ ಹೆಸರಲ್ಲಿ ರಕ್ತ ಹರಿಸಿ
ರಾಜ್ಯವಾಳುವವರು ಯಾರು ನೀವು?
ಭೀಮನ ಆನೆಬಲ ಬಂದಿದೆ ನಮಗೆ
ತಡೆಯದಿರಿ ನಮ್ಮನ್ನು ಬಹುಜನರು ನಾವು!

○ ಹಿಂದಿನ್ಕೇರಿ ಕಾಶಿನಾಥ್

'SAMVADA' Kannada Monthly, DECEMBER - 2003 RNI-KAR KAN/2002/9246 CPMG/KA/BGW-706/2003-05



ಸಂವಾದ

ವಾರ್ಷಿಕ ವಿಶೇಷಾಂಕ

ಜನವರಿಯಲ್ಲಿ ನಿಮ್ಮ ಕೈಗೆ



ಸಹೃದಯರೆ,

ನಿಮ್ಮೆಲ್ಲರ ಪ್ರೀತಿ-ಅಭಿಮಾನ ಮತ್ತು ಸಹಕಾರದಿಂದಾಗಿ ತನ್ನೆಲ್ಲಾ ಅಡೆ-ತಡೆಗಳನ್ನು ಮೀರಿಯೂ ತಪ್ಪದೇ ತಮ್ಮ ಜತೆ ಸಂವಾದಿಸುತ್ತಿರುವ 'ಸಂವಾದ' ಮಾಸ ಪತ್ರಿಕೆಗೆ ಇದೀಗ ಒಂದು ವರ್ಷ ತುಂಬಿದ್ದು, ಮುಂದಿನ ತಿಂಗಳು 'ವಿಶೇಷಾಂಕ'ವಾಗಿ ನಿಮ್ಮ ಕೈ ಸೇರುತ್ತಿದೆ.

ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಮರೆಯಾಗುತ್ತಿರುವ ಜೀವನಕ್ರಮಗಳು, ತಲ್ಲಣಗೊಳ್ಳುತ್ತಿರುವ ಸಿದ್ಧಾಂತಗಳು, ಖಾಸಗೀಕರಣಗೊಂಡು ವ್ಯಕ್ತಿಸ್ವಾಮ್ಯಕ್ಕೆ ಒಳಪಡುತ್ತಿರುವ ಉದ್ಯಮಗಳು, ಅನುಕೂಲ ಸಿಂಧುಗಳಾಗುತ್ತಿರುವ ದಲಿತರು ಮತ್ತು ಶೂದ್ರರ ಮನಸ್ಸಿನಲ್ಲಿ ನಡೆಯುತ್ತಿರುವ ಚೌಕಾಸಿಗಳು, ಬಿಕ್ಕಟ್ಟಿಗೆ ಒಳಗಾಗುತ್ತಿರುವ ಬಹುಸಂಸ್ಕೃತಿಯ ಜತೆಗೆ ಈ ನಾಡಿನ ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವ ಜನರು, ಮಹಿಳೆಯರು, ಸಂಘ-ಸಂಸ್ಥೆಗಳು ಹಾಗೂ ಉದ್ಯೋಗಸ್ಥರು ಎದುರಿಸುತ್ತಿರುವ ಹೊಸ ಪರಿಕಲ್ಪನೆಗಳ ಸವಾಲುಗಳನ್ನು ಕುರಿತ ಲೇಖನಗಳು 'ವಿಶೇಷಾಂಕ'ದಲ್ಲಿ ಇವೆ.

ಖ್ಯಾತ ಲೇಖಕರ ಕಥೆ, ಕವನ, ವಿಶ್ಲೇಷಣೆಗಳನ್ನೊಳಗೊಂಡ 'ಸಂವಾದ ವಿಶೇಷಾಂಕ'ವನ್ನು ನಿಮ್ಮದಾಗಿಸಿಕೊಳ್ಳಿ.

ನಿಮ್ಮ ಪ್ರತಿಗಳಿಗಾಗಿ ಬರೆಯಿರಿ

ಸಂಪಾದಕರು, ಸಂವಾದ ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧

* * * * *